ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳು

(ಹೊಸಪೇಟೆ ತಾಲೂಕನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸುತ್ತಿರುವ ಸಂಪ್ರಬಂಧ

ಸಂಶೋಧಕ

ಸೋಮಶೇಖರ

ಮಾರ್ಗದರ್ಶಕರು

ಶ್ರೀ ಎ.ಎಸ್. ಪ್ರಭಾಕರ

ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೪ - ೦೫

109

109

109

ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳು

(ಹೊಸಪೇಟೆ ತಾಲೂಕನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ಸಂಪ್ರಬಂಧ

ಸಂಶೋಧಕ

ಸೋಮಶೇಖರ

ಮಾರ್ಗದರ್ಶಕರು

ಶ್ರೀ ಎ.ಎಸ್. ಪ್ರಭಾಕರ

ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೫

ಮಾರ್ಗದರ್ಶಕರ ಪ್ರಮಾಣ ಪತ್ರ

ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳು (ಹೊಸಪೇಟೆ ತಾಲೂಕನ್ನು ಪರಿಗಣಿಸಿ) ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಎಂ.ಫಿಲ್ ಪದವಿಗಾಗಿ ಸೋಮಶೇಖರ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 28.10.04

(ಸಹಿ) 28.10.2004

ಎ.ಎಸ್. ಪ್ರಭಾಕರ

ಅಧ್ಯಾಪಕರು ಹಾಗೂ ಮಾರ್ಗದರ್ಶಕರು

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕನ ಪ್ರಮಾಣ ಪತ್ರ

ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳು (ಹೊಸಪೇಟೆ ತಾಲೂಕನ್ನು ಪರಿಗಣಿಸಿ) ಎಂಬ ಸಂಪ್ರಬಂಧವನ್ನು ಎ.ಎಸ್. ಪ್ರಭಾಕರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 24/10/05

S. S. ...
ಸೋಮಶೇಖರ
ಸಂಶೋಧಕ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ ೧

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶಗಳು

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನಗಳು ಮತ್ತು ಸಾಧನಗಳು

೧.೫. ಅಧ್ಯಯನದ ಮಹತ್ವ

೧.೧ ಪೀಠಿಕೆ

ಪ್ರಸ್ತುತ ಅಧ್ಯಾಯದಲ್ಲಿ ಗಣಿಗಾರಿಕೆಯಿಂದಾಗಿ ಪರಿಸರದ ಹಲವು ಕ್ಷೇತ್ರಗಳ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಕುರಿತು ಚರ್ಚಿಸಲಾಗಿದೆ. ಈ ಚರ್ಚೆಯು ಮುಖ್ಯವಾಗಿ ಕ್ಷೇತ್ರಕಾರ್ಯದಿಂದ ನಾವು ಪಡೆದ ಮಾಹಿತಿ ಮತ್ತು ಅಂಕಿಸಂಖ್ಯೆಗಳನ್ನು ಒಳಗೊಂಡಿರುತ್ತದೆ. ಸ್ವಾತಂತ್ರ್ಯನಂತರ ಭಾರತ ಎಂಬ ದೇಶವು ಕಂಡುಕೊಂಡ ಅಭಿವೃದ್ಧಿ ನೀತಿಯು ಕೇವಲ ಬಂಡವಾಳವನ್ನು ಮರು ಉತ್ಪಾದಿಸುವ ಒಂದು ತಂತ್ರವಾಗಿ ಮಾತ್ರ ಬಳಕೆಯಾಯಿತು ಎಂದು ಹೇಳಲು ಯಾವುದೇ ಪುರಾವೆಗಳ ಅಗತ್ಯವಿಲ್ಲ. ಸಮಾಜವಾದಿ ಸಮಾಜದ ಕನಸುಗಳನ್ನು ಕಂಡ ಭಾರತದ ಅಂದಿನ ಹಿರೀಕರ ನಡೆಗಳಲ್ಲೇ ಅನೇಕ ಸಮಸ್ಯೆಗಳಿದ್ದವು. ಸೈದ್ಧಾಂತಿಕವಾಗಿ ಅವರಿಗೆ ರಷ್ಯಾ ಮಾದರಿ ಹೆಚ್ಚು ಪ್ರಿಯವಾಗಿದೆ. ಸ್ವಾತಂತ್ರ್ಯಾನಂತರ ಅಭಿವೃದ್ಧಿಯ ಮಾದರಿಯನ್ನು ಯಥಾವತ್ತಾಗಿ ಯುರೋಪಿನಿಂದ ಪಡೆಯಲಾಯ್ತು. ಸ್ವಾತಂತ್ರ್ಯಾನಂತರ ಭಾರತ ಸರಕಾರ ಯುರೋಪನ್ನು ಅಭಿವೃದ್ಧಿಯ ಮಾದರಿಯನ್ನಾಗಿ ಸ್ವೀಕರಿಸಿದ್ದು ಮಹತ್ವದ ತಪ್ಪುರಾಜಕಾರಣದ ನಡೆಯಾಗಿತ್ತು. ಯುರೋಪಿನ ಅಭಿವೃದ್ಧಿ ನೀತಿಯೆಂದರೆ 'ಬಂಡವಾಳದಿಂದ ಬಂಡವಾಳವನ್ನು ಉತ್ಪಾದಿಸುವುದು.' ಮಾನವ ಶಕ್ತಿಯನ್ನು, ಪರಿಸರವನ್ನು ಈ ಭೂಮಿಯ ಆಳದಲ್ಲಿರುವ ಅಮೂಲ್ಯ ಖನಿಜ ಸಂಪತ್ತನ್ನು ನಿರ್ದಯತೆಯಿಂದ ಬಳಸಿ ಬಂಡವಾಳವನ್ನು ಇನ್ನು ದ್ವಿಗುಣಗೊಳಿಸುವುದು. ಅಭಿವೃದ್ಧಿಯೆಂದರೆ ಯುರೋಪಿನ ರಾಷ್ಟ್ರಗಳಿಗೆ ಬಂಡವಾಳದ ವಿಸ್ತರಣೆಯೇ ಆಗಿದೆ. ಹೀಗಾಗಿ ಯುರೋಪಿನ ವಸಾಹತುಶಾಹಿ ರಾಷ್ಟ್ರಗಳು ತಮ್ಮ ವಸಾಹತುಗಳನ್ನು ಕೇವಲ ಬಂಡವಾಳವನ್ನು ಮರುಉತ್ಪಾದಿಸಲು ತಾವು ನಡೆಸುವ ಕಸರತ್ತುಗಳಿಗೆ ವೇದಿಕೆಗಳನ್ನಾಗಿ ಬಳಸಿಕೊಂಡವು. ತಾವು ನಿರ್ಮಿಸಿಕೊಂಡ ಮೂರನೇ ಜಗತ್ತಿನ ಎಲ್ಲ ದೇಶಗಳು ಅವರಿಗೆ ಯುದ್ಧ ಶಿಬಿರಗಳು ಮಾತ್ರ. ಅದಕ್ಕಾಗಿ ವಸಾಹತುಶಾಹಿಯು ತಾನು ಆಕ್ರಮಿಸಿಕೊಂಡ ದೇಶವನ್ನು ಕೇವಲ ಉಪಯೋಗವಾದಿ ನೆಲೆಯಲ್ಲಿ ಮಾತ್ರ ನಡೆಸಿಕೊಂಡಿತು. ತಮ್ಮ ವಸಾಹತುಗಳ ಮೇಲೆ ಅವರಿಗೆ ಮಾನವೀಯತೆಯ ಹಂತದಲ್ಲೊಂದು ಮಮಕಾರದ ಭಾವನೆಯೂ ಇರಲಿಲ್ಲ.

ಇದರಿಂದಾಗಿ ಯುರೋಪಿನ ದೇಶಗಳ ಅಭಿವದ್ಧಿಯ ಚಿಂತನೆಗಳಲ್ಲೂ ಸಹ ಉಪಯೋಗವಾದ ಸಹಜವಾಗಿಯೇ ಮೂಲ ಸಿದ್ಧಾಂತವಾಗಿದೆ. ಕೈಗೆ ಸಿಕ್ಕ ಮಾನವ ಸಂಪನ್ಮೂಲವನ್ನಾಗಲಿ, ನಿಸರ್ಗದ ಸಂಪನ್ಮೂಲವನ್ನಾಗಲಿ ನಿರ್ದಯದಿಂದ ಬಳಸುವುದು ಈ ಉಪಯೋಗವಾದಿ ಸಿದ್ಧಾಂತದ ಮೂಲಭೂತ ಪ್ರವೃತ್ತಿ. ಅದಕ್ಕೆ ಬಹುದೊಡ್ಡ ಉದಾಹರಣೆಯೆಂದರೆ ಆಫ್ರಿಕಾ ಎಂಬ ಸಂಪದ್ಭರಿತ ಖಂಡ. ಯುರೋಪಿನ

ಜನ ಅಲ್ಲಿನ ಮೂಲನಿವಾಸಿಗಳನ್ನು ಪಶುಗಳ ತರಹ ಬಂಧಿಸಿ ತಂದು ತಮ್ಮ ಹೊಲಗದ್ದೆಗಳಲ್ಲಿ, ಗಣಿಗಾರಿಕೆಗಳಲ್ಲಿ ದುಡಿಸಿಕೊಂಡರು. ಇಷ್ಟೇ ಅಲ್ಲದೆ ಅಲ್ಲಿನ ಬಲಿಷ್ಠ ನಿಗ್ರೋ ಜನರನ್ನು ಗುಲಾಮರನ್ನಾಗಿಟ್ಟುಕೊಂಡು ಮಾರಾಟದ ವಸ್ತುವನ್ನಾಗಿಸಿಕೊಂಡರು. ನಿಗ್ರೋಗಳನ್ನು ಆಫ್ರಿಕಾದಿಂದ ಹಡಗುಗಳಲ್ಲಿ ಹೊತ್ತು ತಂದು ತಾವು ಆಕ್ರಮಿಸುತ್ತಿದ್ದ ರಾಷ್ಟ್ರಗಳಲ್ಲಿ ದುಡಿಯಲು ಹಚ್ಚುತ್ತಿದ್ದರು. ಯುರೋಪಿನ ಅಭಿವೃದ್ಧಿ ನೀತಿಗೆ ಜಗತ್ತಿನ ಮಾನವೀಯುತೆಯ ಬಗ್ಗೆ, ನಿಸರ್ಗದ ಬಗ್ಗೆ ಯಾವತ್ತೂ ನೈತಿಕ ಪ್ರಶ್ನೆಗಳು ಮುಖ್ಯವಾಗಲಿಲ್ಲ. ಈ ಕಾರಣದಿಂದಾಗಿಯೇ ಯುರೋಪ್ ಬಂಡವಾಳವಾದಿ ಅಭಿವೃದ್ಧಿ ನೀತಿಯನ್ನು ರೂಪಿಸಿಕೊಂಡಿತು. ಮತ್ತು ಈ ಅಭಿವೃದ್ಧಿ ನೀತಿಯನ್ನು ತನ್ನೆಲ್ಲ ವಸಾಹತು ರಾಷ್ಟ್ರಗಳು ಪೋಷಿಸಿಬಿಡುವ ಅನಿವಾರ್ಯತೆಯನ್ನು ಸೃಷ್ಟಿಮಾಡಿತು. ಹೀಗಾಗಿ ಸ್ವಾತಂತ್ರ್ಯನಂತರ ಭಾರತವು ಬ್ರಿಟಿಷರು ಬಿಟ್ಟು ಹೋದ, ಬ್ರಿಟಿಷ್ ಅಧೀನದಲ್ಲಿದ್ದ ಅವರ ಉದ್ಯಮಗಳನ್ನು ಅನಿವಾರ್ಯವಾಗಿ ಸೂಪರ್‌ವೈಸ್ ಮಾಡುವ ಕೆಲಸ ಮಾಡಬೇಕಾಯಿತು. ಹೀಗಾಗಿ ಇಂಗ್ಲೆಂಡ್‌ನ ಯುನಿಲಿವರ್ ಕಂಪನಿಯು ಇಡೀ ಭಾರತದ ಆರ್ಥಿಕ ಚಲನೆಗಳನ್ನು ನಿಯಂತ್ರಿಸುವ ಏಕೈಕ ಉದ್ಯಮವಾಗಿ ಬೆಳೆದು ನಿಂತಿತು. ಈವತ್ತು ಅದು ಭಾರತದಲ್ಲಿ ಅತ್ಯಂತ ಶಕ್ತಿಶಾಲಿ ಉದ್ಯಮವಾಗಿ ಅಸ್ತಿತ್ವದಲ್ಲಿದೆ.

ಯುರೋಪನ್ನು ಸೈದ್ಧಾಂತಿಕವಾಗಿ ನಿರಾಕರಿಸುವುದನ್ನು ಬಿಟ್ಟರೆ, ಭಾರತವು ಉತ್ಪಾದನಾ ವಿಧಾನವನ್ನು ಮತ್ತು ಅಭಿವೃದ್ಧಿ ನೀತಿಯನ್ನು ಅಲ್ಲಿಂದಲೇ ಎರವಲು ಪಡೆಯಿತು. ಹೀಗಾಗಿ ಯುರೋಪ್ ಭಾರತದ ಆರ್ಥಿಕತೆಯ ಮೇಲೆ ಪರೋಕ್ಷ ಹಿಡಿತವನ್ನು ಯಾವತ್ತು ಬಿಗಿಮಾಡುತ್ತಲೇ ಬಂದಿದೆ. ಹೀಗಾಗಿ ಭಾರತ ಒಂದು ಸರ್ವಶಕ್ತ ರಾಷ್ಟ್ರವಾಗಿ ತನ್ನ ಬಹುತ್ವ ಮತ್ತು ನಿಸರ್ಗದ ಸಂಪತ್ತನ್ನು ಒಂದು ಜನತಾಂತ್ರಿಕ ರಾಜಕಾರಣದ ಹಿನ್ನೆಲೆಯಲ್ಲಿ ಬಳಸುವಲ್ಲಿ ವಿಫಲವಾಗುತ್ತಲೇ ಬಂದಿದೆ. ಜೊತೆಗೆ ಭಾರತದ ಪಾರಂಪರಿಕ ವಿಷಮ ಸಾಮಾಜಿಕಾರ್ಥಿಕ ವ್ಯವಸ್ಥೆಯನ್ನು ನಾಶ ಮಾಡಲಾರದ ಷಂಡತನವನ್ನು ಅನುಭವಿಸುತ್ತಲೇ ಬಂದಿದೆ. ಸೃಷ್ಟಿಸಲಾರದವನಿಗೆ ನಾಶ ಮಾಡುವ ಶಕ್ತಿಯೂ ಇರುವುದಿಲ್ಲ ಎಂಬುದಕ್ಕೆ ಭಾರತದ ಅಭಿವೃದ್ಧಿ ನೀತಿಯನ್ನು ಉದಾಹರಿಸಬಹುದು. ಯರೋಪಿನ ಅಭಿವೃದ್ಧಿಯ ಚರ್ಚೆಗಳಿಗೆ ಹಣ ಅಥವಾ ಬಂಡವಾಳ ಕೇಂದ್ರವಸ್ತು. ಸಹಜವಾಗಿಯೇ ಬಂಡವಾಳವನ್ನು ದ್ವಿಗುಣಗೊಳಿಸುವ ಸಾಮ್ರಾಜ್ಯಶಾಹಿ ಪ್ರವೃತ್ತಿ ಈ ಅಮಾನವೀಯ ಹಂಬಲಗಳ ಹಿಂದೆ ಕೆಲಸ ಮಾಡುತ್ತಲೇ ಇರುತ್ತದೆ. ಈವತ್ತಿನ ಜಾಗತೀಕರಣದ ಹಿಂದೆಯೂ ಯುರೋಪ್ ದೇಶಗಳ ಬಂಡವಾಳವನ್ನು ವಿಸ್ತರಿಸುವ ರಾಕ್ಷಸಿ ತರಹದ ಕೆಲಸ ಮಾಡುತ್ತಲೇ ಇದೆ.

ಭಾರತದಂತಹ ದೇಶದಲ್ಲಿ ಈ ಬಗೆಯ ಅಭಿವೃದ್ಧಿ ನೀತಿಯು ಯಾವ ಕಾಲಕ್ಕೂ ಯಶಸ್ಸು ಕಾಣಲಾರದೆಂಬುದಕ್ಕೆ ಸತತ ೫೭ ವರ್ಷಗಳಿಂದ ನಮ್ಮ ದೇಶದಲ್ಲಿ ಜೀವಂತವಾಗಿಟ್ಟುಕೊಂಡು ಬಂದಿರುವ ಸಾಮಾಜಿಕಾರ್ಥಿಕ ಬಿಕ್ಕಟ್ಟುಗಳೇ ಸಾಕ್ಷಿ. ಜೊತೆಗೆ ಈ ದೇಶದ ನಿಸರ್ಗ ಮತ್ತು ಪರಿಸರಗಳು ಸಹ ಯುರೋಪ್ ಪ್ರಣೀತ ಅಭಿವೃದ್ಧಿ ನೀತಿಗೆ ಇನ್ನಿಲ್ಲದಂತೆ ಬಲಿಯಾಗಿವೆ. ಅದರಲ್ಲೂ ಗಣಿಗಾರಿಕೆಯಿಂದಾಗಿ ಉಂಟಾಗಿರುವ ಪರಿಣಾಮಗಳು ಹಲವು ವರ್ಷಗಳ ಕಾಲ ಈ ದೇಶವನ್ನು ಕಾಡಬಲ್ಲಷ್ಟು ಭೀಕರವಾಗಿವೆ.

ಅಲ್ಲದೇ ಗಣಿಗಾರಿಕೆಗೆ ಸಂಬಂಧಿಸಿದಂತೆ ಸರಕಾರದ ನಿಲುವುಗಳು ಮತ್ತು ಸಂಬಂಧಪಟ್ಟ ಕಾನೂನುಗಳಲ್ಲೂ ಸಹ ಹಲವು ಲೋಪಗಳಿವೆ. ಹೀಗಾಗಿ ಭಾರತದ ಎಲ್ಲೆಡೆ ಅರಣ್ಯಗಳಲ್ಲಿ ಮತ್ತು ಬಯಲು ಸೀಮೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆಯು ಮನುಷ್ಯನ ಜೀವದಾಯಕ ಪರಿಸರವನ್ನು ಘೋರವಾಗಿ ನಿರ್ಲಕ್ಷಿಸುವ ಪ್ರವೃತ್ತಿಯನ್ನು ಸಹಜವಾಗಿಯೇ ಮೈಗೂಡಿಸಿಕೊಂಡಿದೆ. ಗಣಿಗಾರಿಕೆಯಿಂದ ಮನುಷ್ಯ ಪರಿಸರದ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಅಧ್ಯಯನ ಮಾಡುವುದು ಈವತ್ತು ಅತ್ಯಂತ ಮಹತ್ವದ ಸಂಗತಿಯೆಂದು ಭಾವಿಸಿದ್ದೇನೆ. ಈ ಕಾರಣಕ್ಕಾಗಿ ಹೊಸಪೇಟೆ ತಾಲ್ಲೂಕಿನಲ್ಲಿ ನಡೆಯುವ ಗಣಿಗಾರಿಕೆಯ ವಿಶಾಲ ಪ್ರದೇಶವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ.

ಈ ಅಧ್ಯಯನಕ್ಕೆ ಮಾಹಿತಿ ಪಡೆಯಲು ಆಯ್ಕೆ ಮಾಡಿಕೊಂಡ ಸಮುದಾಯಗಳು ಈ ಕೆಳಗಿನಂತಿವೆ.

೧. ರೈತರು

೨. ಗಣಿಕಾರ್ಮಿಕರು

೩. ಗಣಿಕಾರ್ಮಿಕರಾಗಿ ಬೇರೆಡೆಯಿಂದ ಬಂದು ನೆಲೆಸಿರುವ ವಲಸಿಗರು.

ಮುಖ್ಯವಾಗಿ ಈ ಸಂಪ್ರಬಂಧದಲ್ಲಿ ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುತ್ತಿರುವ ಪರಿಣಾಮಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಈ ಕಾರಣಕ್ಕಾಗಿ ನನ್ನ ಅಧ್ಯಯನದ ಕೇಂದ್ರ ರೈತರೇ ಆಗಿದ್ದಾರೆ. ರೈತರ ಜೊತೆಗೆ ಇನ್ನು ಎರಡು ಸಮುದಾಯಗಳನ್ನು ಇಲ್ಲಿ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. 'ಗಣಿಕಾರ್ಮಿಕರು ಮತ್ತು ವಲಸಿಗರನ್ನು' ಈ ಅಧ್ಯಯನದ ಆಶಯಗಳಿಗೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಗಣಿ ಕಾರ್ಮಿಕರು ಈ ಹಿಂದೆ ಇದೇ ಗಣಿಗಾರಿಕೆಯ ಪ್ರದೇಶದಲ್ಲಿ ಕೃಷಿಕರಾಗಿದ್ದವರು. ಈ ಕೃಷಿಕರು ಅನೇಕ ಕಾರಣಗಳಿಗಾಗಿ ಅವರೀಗ ಗಣಿಕಾರ್ಮಿಕರಾಗಿ ರೂಪಾಂತರಗೊಂಡಿದ್ದಾರೆ. ಗಣಿಕಾರ್ಮಿಕರಾಗಿ ರೂಪಾಂತರಗೊಂಡ ಈ ಕೃಷಿಕರ ಬದಲಾವಣೆಯ ಹಿಂದೆ ಯಾವ ಒತ್ತಡಗಳು ಕೆಲಸ ಮಾಡಿವೆ? ಹೀಗೆ ರೂಪಾಂತರಗೊಳ್ಳಲು ಕಾರಣಗಳೇನು? ಎಂಬುದನ್ನು ಈ ಸಂಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ. ಜೊತೆಗೆ ಬಳ್ಳಾರಿ, ಕೊಪ್ಪಳ ಮತ್ತು ಇತರೆ ದೂರದ ತಾಲೂಕುಗಳಿಂದ ವಲಸೆ ಬಂದು ಗಣಿಕಾರ್ಮಿಕರಾಗಿ ಗಣಿಗಳಲ್ಲಿ ದುಡಿಯುತ್ತಿರುವವರೂ ಸಹ ಅವರವರ ಗ್ರಾಮಗಳಲ್ಲಿ ಕೃಷಿಕರಾಗಿದ್ದವರು. ಈ ವಲಸಿಗ ಸಮುದಾಯ ಗಣಿಗಾರಿಕೆಯಲ್ಲಿನ ಚಟುವಟಿಕೆಗಳನ್ನು ಹತ್ತಿರದಿಂದ ಬಲ್ಲವರಾದ್ದರಿಂದ ವಲಸಿಗರ ಅಭಿಪ್ರಾಯಗಳನ್ನೂ ನಿರ್ಣಾಯಕವೆಂದು ಈ ಅಧ್ಯಯನದಲ್ಲಿ ಭಾವಿಸಲಾಗಿದೆ. ಆದರೆ ಮುಖ್ಯವಾಗಿ ಗಣಿಗಾರಿಕೆಯ ನೇರ ಪರಿಣಾಮಗಳಿಗೆ ತುತ್ತಾಗಿರುವ ಈ ಭಾಗದ ರೈತರನ್ನು ಪ್ರಧಾನವಾಗಿ ಪರಿಗಣಿಸಲಾಗಿದ್ದರೆ, ಗಣಿಕಾರ್ಮಿಕರನ್ನು ಮತ್ತು ವಲಸಿಗರ ಅಭಿಪ್ರಾಯಗಳನ್ನು ಆನುಷಾಂಗಿಕವಾಗಿ ಬಳಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಈ ಎರಡು ಹೆಚ್ಚುವರಿ ಸಮುದಾಯಗಳ

ಅಭಿಪ್ರಾಯಗಳು ಅಧ್ಯಯನದ ಉದ್ದೇಶಗಳಿಗೆ ಪೂರಕವಾಗಿರುವುದರಿಂದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಣಿಕಾರ್ಮಿಕರನ್ನು ಮತ್ತು ವಲಸಿಗರನ್ನು ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಮೂರು ಸಮುದಾಯದ ವ್ಯಕ್ತಿಗಳಿಗೆ ಪ್ರತ್ಯೇಕ ಪ್ರಶ್ನಾವಳಿಯನ್ನು ರೂಪಿಸಿಕೊಳ್ಳಲಾಗಿತ್ತು. ಈ ಮೂರು ಗುಂಪಿನ ವ್ಯಕ್ತಿಗಳನ್ನು ನೇರ ಸಂದರ್ಶನದ ಮೂಲಕ ಸಂಪರ್ಕಿಸಿ ಆಮೂಲಾಗ್ರ ವಿವರಗಳನ್ನು ಪಡೆಯಲಾಯಿತು. ಇದಕ್ಕಾಗಿ ೧೦೦ ಜನ ರೈತರನ್ನು, ಇನ್ನುಳಿದ ಎರಡು ಗುಂಪಿನಿಂದ ತಲಾ ೨೫ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿತ್ತು. ಈ ಆಯ್ಕೆಯನ್ನು ಅಧ್ಯಯನದ ಉದ್ದೇಶಗಳನ್ನು ಮುಖ್ಯವಾಗಿಟ್ಟುಕೊಂಡು ಮಾಡಿಕೊಳ್ಳಲಾಗಿತ್ತು. ರೈತರ ೧೦೦ ಮತ್ತು ಇನ್ನುಳಿದ ಗುಂಪುಗಳಿಂದ ೨೫ ಜನರಲ್ಲದೇ ಪ್ರತಿ ಗುಂಪಿನ ಇನ್ನುಳಿದ ಅನೇಕ ಜನರನ್ನು ಮೌಖಿಕವಾಗಿ ಸಂದರ್ಶಿಸಿದ್ದಲ್ಲದೆ, ವೀಕ್ಷಣೆಯ ಮೂಲಕ ಅನೇಕ ಮಾಹಿತಿಗಳನ್ನು ಸಂಗ್ರಹಿಸಲಾಯಿತು.

೧.೨. ಅಧ್ಯಯನದ ಉದ್ದೇಶಗಳು

* ಗಣಿಗಾರಿಕೆಯಿಂದ ಕೃಷಿ ಸಮುದಾಯಗಳ ಮೇಲಾಗುತ್ತಿರುವ ಪರಿಣಾಮಗಳನ್ನು ಕುರಿತು ರೈತರ ಅಭಿಪ್ರಾಯಗಳ ಅಧ್ಯಯನ ಮಾಡುವುದು.
* ಗಣಿಗಾರಿಕೆ ಮತ್ತು ಕೃಷಿ ಸಮುದಾಯದ ನಡುವಿನ ಸಂಘರ್ಷ. ರೈತರ ಆರ್ಥಿಕ ಸ್ಥಿತಿ, ಕೃಷಿ ಸಮುದಾಯಕ್ಕಾಗುತ್ತಿರುವ ಶೋಷಣೆ ಮತ್ತು ಬೆಳೆಗಳ ಮೇಲಾಗುತ್ತಿರುವ ವೈಪರಿತ್ಯಗಳು.
* ರೈತರ ಸ್ಥಿತಿಗತಿ, ಕೃಷಿ ಭೂಮಿಯ ಅಪಬಳಕೆ ಮತ್ತು ಪರಿಸರದ ಮೇಲಾಗುವ ಪರಿಣಾಮಗಳನ್ನು ಅಧ್ಯಯನ ಮಾಡುವುದು.
* ಅಂತರ್ಜಲ ಮತ್ತು ಭೂ ಸವಕಳಿ, ಕೃಷಿ ಮತ್ತು ಕೃಷಿ ಪೂರಕ ಸಮುದಾಯದ ಮೇಲಾಗುವ ಪರಿಣಾಮಗಳು ಮತ್ತು ಗಣಿಗಾರಿಕೆಯಿಂದ ಕೃಷಿ ಸಮುದಾಯಕ್ಕಾಗುವ ಅನುಕೂಲ ಮತ್ತು ಅನಾನುಕೂಲಗಳನ್ನು ಅಧ್ಯಯನ ಮಾಡುವುದು.
* ಗಣಿಗಾರಿಕೆಯಿಂದ ಕೃಷಿಕರ ಮೇಲೆ, ಜಾನುವಾರಗಳ ಮೇಲೆ ಮಾನವ ಸಮಾಜದ ಮೇಲೆ ಮತ್ತು ಇತರೆ ಪ್ರಾಣಿ ಸಮುದಾಯಗಳ ಮೇಲಾಗುವ ಪರಿಣಾಮಗಳನ್ನು ತಿಳಿಯುವುದು.

೧.೩ ಅಧ್ಯಯನದ ವ್ಯಾಪ್ತಿ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುತ್ತಿರುವ ಪರಿಣಾಮಗಳು ಎನ್ನುವ ಅಧ್ಯಯನವನ್ನು ಕ್ಷೇತ್ರಕಾರ್ಯದ ಮೂಲಕ ಅಧ್ಯಯನಕ್ಕೊಳಪಡಿಸಲು ಉದ್ದೇಶಿಸಲಾಗಿದೆ. ಹೊಸಪೇಟೆ ತಾಲೂಕಿನ ವಿವಿದೆಡೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ವ್ಯಾಪ್ತಿಯೊಳಗೆ ಬರುವ ಪ್ರದೇಶವನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಇಡೀ ಹೊಸಪೇಟೆ ತಾಲ್ಲೂಕನ್ನು ತೆಗೆದುಕೊಳ್ಳದೆ ಗಣಿಗಾರಿಕೆ ನಡೆಯುತ್ತಿರುವ ಗ್ರಾಮಗಳನ್ನು ಮಾತ್ರ ಅಧ್ಯಯನಕ್ಕೆ

ಆಯ್ದುಕೊಳ್ಳಲಾಗಿದೆ. ಗಣಿಗಾರಿಕೆಯೆಂದರೆ ಕಬ್ಬಿಣದ ಅದಿರು, ಮ್ಯಾಂಗನೀಸ್ ಗಣಿಗಾರಿಕೆಯ ಜೊತೆಗೆ ಸುಣ್ಣದಕಲ್ಲು, ಕಲ್ಲಿನ ಕ್ವಾರೆ, ಮಣ್ಣಿನ ಇಟ್ಟಿಗೆ ಮತ್ತು ಸಿಮೆಂಟ್‌ನ ಇಟ್ಟಿಗೆ ಉದ್ಯಮಗಳನ್ನು ಗಣಿಗಾರಿಕೆಯೆಂದು ಪರಿಗಣಿಸಿ ಅಧ್ಯಯನಕ್ಕೊಳಪಡಿಸಲಾಗಿದೆ.

೧.೪ ಅಧ್ಯಯನದ ವಿಧಾನಗಳು ಮತ್ತು ಸಾಧನಗಳು

ವಿಧಾನಗಳು

೧. ಪ್ರಶ್ನಾವಳಿ

೨. ಅವಲೋಕನ

೩. ಸಂದರ್ಶನ

೪. ವ್ಯಾಪಕ ಕ್ಷೇತ್ರ ಸಮೀಕ್ಷೆ

೫. ದತ್ತಾಂಶ ಸಂಗ್ರಹಣೆ

೬. ನಮೂನೆ ವಿಧಾನ

೭. ಸಂಖ್ಯಾಶಾಸ್ತ್ರೀಯ ವಿಧಾನ

ಒಂದು ನಿಶ್ಚಿತ ಪ್ರಶ್ನಾವಳಿಯನ್ನು ನೇರ ಸಂದರ್ಶನಕ್ಕೆ ರೂಪಿಸಿಕೊಳ್ಳಲಾಗಿತ್ತು. ಈ ಪ್ರಶ್ನಾವಳಿಯನ್ನು ರೈತರಿಗೆ ೧೦೦, ಗಣಿಕಾರ್ಮಿಕರು, ವಲಸಿಗರು ಮತ್ತು ವೈದ್ಯರಿಂದ ತಲಾ ೨೫ ಆಯ್ದ ಜನರ ಮೂಲಕ ವಿವರಗಳನ್ನು ಪಡೆಯಲು ಬಳಸಲಾಗಿದೆ. ಅಧ್ಯಯನದ ಉದ್ದೇಶಕ್ಕೆ ತಕ್ಕಂತೆ ಬೇರೆ ಬೇರೆ ಸಮುದಾಯಗಳಿಗೆ ಬೇರೆ ಬೇರೆ ರೀತಿಯ ಪ್ರಶ್ನಾವಳಿಯನ್ನು ತಯಾರಿಸಲಾಗಿತ್ತು. ನೇರ ಸಂದರ್ಶನದ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ. ವೀಕ್ಷಣೆಯ ಸಂದರ್ಭದಲ್ಲಿ ಸಿಕ್ಕ ಸಂಬಂಧಪಟ್ಟ ವ್ಯಕ್ತಿಗಳನ್ನು ಅಧ್ಯಯನದ ಉದ್ದೇಶಗಳಿಗನು ಗುಣವಾಗಿ ಪ್ರಶ್ನಿಸಿ ಮಾಹಿತಿ ಪಡೆಯಲಾಗಿದೆ. ಜೊತೆಗೆ ಅಧ್ಯಯನಕ್ಕೆ ಉಪಯುಕ್ತ ಸಾಧನಗಳಾದ ಕ್ಯಾಮೆರಾ, ಟೇಪ್‌ರೆಕಾರ್ಡರ್ ಮತ್ತು ಕ್ಯಾಸೆಟ್ ಹಾಗೂ ಲಿಖಿತ ಮಾಹಿತಿಗಾಗಿ ಲೇಖನ ಸಾಮಗ್ರಿಗಳನ್ನು ಬಳಸಲಾಗಿದೆ.

ಹೊಸಪೇಟೆ ತಾಲೂಕಿನಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ಸುತ್ತಮುತ್ತಲಿನ ಗ್ರಾಮಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅವುಗಳೆಂದರೆ, ಕಾರಿಗನೂರು, ವಾಲ್ಮೀಕಿನಗರ, ಶಂಕರನಗರ, ಇಂಗಳಗಿ, ಪದ್ಮರಹಳ್ಳಿ, ಪಾಪಿನಾಯಕನಹಳ್ಳಿ, ಬೈಲುವದ್ದಿಗೇರಿ. ಈ ಗ್ರಾಮಗಳು ಹೊಸಪೇಟೆ ಬಳ್ಳಾರಿ ಮಾರ್ಗದಲ್ಲಿರುವವುಗಳಾಗಿವೆ. ಹೊಸಪೇಟೆ ಸಂಡೂರು ಮಾರ್ಗವಾಗಿ ಕಣವಿನರಾಯನಗುಡಿ, ರಾಜಾಪುರ ಮತ್ತು ಕಲ್ಲಹಳ್ಳಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅಲ್ಲದೆ ಹೊಸಪೇಟೆ ಮರಿಯಮ್ಮನಹಳ್ಳಿ ಮಾರ್ಗದಲ್ಲಿರುವ ವ್ಯಾಸನಕೆರೆ, ವ್ಯಾಸನಕೆರೆ ಸ್ಟೇಷನ್, ಗಾಳೆಮ್ಮನಗುಡಿ, ಹನುಮನಹಳ್ಳಿ, ಡಣಾಪುರ ಮತ್ತು ಮರಿಯಮ್ಮನಹಳ್ಳಿ ತಾಂಡಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಉಳಿದಂತೆ ಅನಂತಶಯನಗುಡಿ, ಕಮಲಾಪುರ, ರಾಮನಗರ, ವೆಂಕಟಾಪುರಕ್ಯಾಂಪ್, ಬುಕ್ಕಸಾಗರ ಮತ್ತು ಸಿದ್ದೇಶ್ವರನಗರಗಳನ್ನು ಅಧ್ಯಯನಕ್ಕೆ ಆಯ್ಕೆ

ಮಾಡಿಕೊಂಡು ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಈ ಗ್ರಾಮಗಳಲ್ಲಿ ನಡೆಯುವ ಇಟ್ಟಿಗೆ ತಯಾರಿಕೆ ಮತ್ತು ಕಲ್ಲಿನ ಕ್ವಾರೆಯ ಕೆಲಸದ ಬಗೆಗೆ ಕೆಲವೊಂದು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಗಣಿಗಾರಿಕೆಯಿಂದ ಕೃಷಿಯ ಮೇಲಾಗುವ ಪರಿಣಾಮ ಹಲವಾರು. ಅದೆಲ್ಲವನ್ನು "ಸಮಾಜ ವಿಜ್ಞಾನದ ವಿಧಾನ"ದಿಂದ ಯಶಸ್ವಿಯಾಗಿ ಅಧ್ಯಯನ ಮಾಡಿ ತೀರ್ಮಾನ / ನಿರ್ಣಯಗಳನ್ನು ಕಂಡುಕೊಳ್ಳಬಹುದು. ಏಕೆಂದರೆ ಸಮಾಜವಿಜ್ಞಾನವು ಸಾಮಾನ್ಯವಿಜ್ಞಾನದಂತೆಯೇ ಒಂದು ವಿಜ್ಞಾನವಾಗಿದೆ. ಸಾಮಾನ್ಯವಿಜ್ಞಾನವು ತನ್ನ ಸಂಶೋಧನೆಯಲ್ಲಿ ಬಳಸುವ ಅನೇಕ ವೈಜ್ಞಾನಿಕ ವಿಧಾನಗಳಲ್ಲಿ ಕೆಲವನ್ನು ಸಮಾಜವಿಜ್ಞಾನವು ಸಹ ಬಳಸಿಕೊಳ್ಳುತ್ತದೆ. ಉದಾಹರಣೆಗೆ ಪ್ರಾಯೋಗಿಕ ವಿಧಾನದಿಂದ ಪ್ರಯೋಗಾಲಯದಲ್ಲಿ ನಿರ್ದಿಷ್ಟ / ಸ್ಪಷ್ಟ ಉತ್ತರವನ್ನು ಸಾಮಾನ್ಯ ವಿಜ್ಞಾನವು ಕಂಡುಹಿಡಿದುಕೊಳ್ಳುತ್ತದೆ. ಆದರೆ ಈ ರೀತಿಯ ಸ್ಪಷ್ಟ ಉತ್ತರ ಸಮಾಜ ವಿಜ್ಞಾನಗಳ ವಿಧಾನಗಳಿಂದ ಆಗದೇ ಇದ್ದಾಗ, ವಸ್ತು ವಿಷಯಕ್ಕೆ ಸಂಬಧಿಸಿದ ಅನೇಕ ಮಾಹಿತಿಗಳಿಗೆ ಸಂಬಂಧಪಟ್ಟ ಪುಸ್ತಕ / ಕೃತಿ / ವಿಷಯ ತಜ್ಞರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಿಕೊಂಡಾಗ ಸಮಾಜವಿಜ್ಞಾನವು ಸಹ ಸ್ಪಷ್ಟ ನಿರ್ಣಯಗಳಿಗೆ ಬರಬಹುದು. ಈ ನಿಟ್ಟಿನಲ್ಲಿ ಗಣಿಗಾರಿಕೆಯಿಂದ ಕೃಷಿಯ ಮೇಲಾಗುವ ಪರಿಣಾಮಗಳನ್ನು ಕೇವಲ ಸಾಮಾನ್ಯ ಅಭಿಪ್ರಾಯಗಳಿಂದ ಪ್ರಸ್ತುತ ಪಡಿಸದೇ ಸಮಾಜ ವಿಜ್ಞಾನದ ವಿಧಾನಗಳಾದ ಅವಲೋಕನ ವಿಧಾನ, ಸಂದರ್ಶನ ವಿಧಾನ, ಪ್ರಶ್ನಾವಳಿ ವಿಧಾನಗಳೆಲ್ಲವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಲ್ಲದೇ ಪ್ರಾಯೋಗಿಕ ಅಭಿಪ್ರಾಯಗಳನ್ನು ಸಂಬಂಧಪಟ್ಟ ಕೃತಿಗಳಿಂದ, ಗ್ರಂಥಗಳಿಂದ ಮತ್ತು ಸಂಬಂಧಿಸಿದ ವಿಷಯ ತಜ್ಞರಿಂದ ಮಾಹಿತಿಯನ್ನು ಸಂಗ್ರಹಿಸಿ ವಿವರಿಸಲಾಗಿದೆ. ಭೂವಿಜ್ಞಾನಿಗಳ ತಜ್ಞ ವರದಿಯನ್ನು ಬಳಸಿಕೊಳ್ಳಲಾಗಿದೆ. ಆ ಪ್ರದೇಶದ ರೈತರು ಹೊಂದಿರುವ ಅಭಿಪ್ರಾಯವನ್ನು ಬಳಸಿಕೊಳ್ಳಲಾಗಿದೆ. ರೈತರ ಈ ಅಭಿಪ್ರಾಯಗಳು ಅವರ ಕೆಲವೊಂದು ಅನುಭವ ಮತ್ತು ಸಾಮಾನ್ಯ ಜ್ಞಾನವನ್ನು ಹೊಂದಿದೆ. ರೈತರ ಹೇಳಿಕೆಗಳಲ್ಲಿಯು ವಾಸ್ತವಾಂಶ ಇರುವುದನ್ನು ಮನಗಂಡು ಅಧ್ಯಯನಕ್ಕೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಕ್ಷೇತ್ರಕಾರ್ಯದ ಸಮಯದಲ್ಲಿ ಹೊಸಪೇಟೆ ತಾಲ್ಲೂಕಿನ ಗಣಿಗಾರಿಕೆಯ ಪ್ರದೇಶದ ಸುತ್ತಮುತ್ತಲಿನ ೧೦೦ ಜನ ರೈತರನ್ನು ಸಂದರ್ಶಿಸಲಾಗಿದೆ. ಇವರಲ್ಲಿ ೪ ಭಾಗಗಳಾಗಿ ವಿಂಗಡಿಸಿ ಅಧ್ಯಯನಕ್ಕೆ ಬಳಸಿ ಕೊಳ್ಳಲಾಗಿದೆ. ಈ ಕೆಳಗಿನಂತೆ ರೈತರನ್ನು ವಿಂಗಡಿಸಲಾಗಿದೆ.

೧. ಸಣ್ಣ ಹಿಡುವಳಿದಾರರು

೨. ಮಧ್ಯಮ ಹಿಡುವಳಿದಾರರು

೩. ದೊಡ್ಡ ಹಿಡುವಳಿದಾರರು ಮತ್ತು

೪. ರೂಪಾಂತರಗೊಳ್ಳುತ್ತಿರುವ ಕೃಷಿಕರು.

ಗಣಿಗಾರಿಕೆಯು ಬಂಡವಾಳಶಾಹಿ ಧೋರಣೆಯಾಗಿದೆ. ಅಂದರೆ ಇಲ್ಲಿ ಬಂಡವಾಳದಾರರು ಗಣಿಗಾರಿಕೆಯ ಮಾಲೀಕರಾಗಿದ್ದಾರೆ. ಸಣ್ಣ ಮತ್ತು ಮಧ್ಯಮ ಹಿಡುವಳಿದಾರರು ಕೇವಲ ಕೃಷಿಯಲ್ಲಿ ತೊಡಗಿ ಜೀವಿಸುವುದು ದುಸ್ತರವಾಗಿದೆ. ಇವರನ್ನು ಗಣಿಗಾರಿಕೆಯು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಅವಲಂಬನೆಯಾಗುವಂತೆ ಮಾಡಿದೆ. ಕೃಷಿಯಲ್ಲಿ ಲಾಭ ದೊರೆಯುತ್ತಿಲ್ಲವೆಂದು ಇವರು ಗಣಿಕಾರ್ಮಿಕರಾಗಿ ಪರಿವರ್ತಿತರಾಗುತ್ತಿದ್ದಾರೆ. ಹಣದ ಆಸೆಗಾಗಿ ಕೃಷಿಯೋಗ್ಯ ಭೂಮಿಗಳನ್ನು ಅದಿರಿನ ಖಣಜಕ್ಕಾಗಿ ಗುತ್ತಿಗೆ ನೀಡುತ್ತಿದ್ದಾರೆ. ಜೊತೆಗೆ ಮುಕ್ತ ಗಣಿಗಾರಿಕೆಗಾಗಿ ತಮ್ಮ ಜಮೀನುಗಳನ್ನು ಬಂಡವಾಳಶಾಹಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ದೊಡ್ಡ ಹಿಡುವಳಿದಾರರಲ್ಲಿ ಕೆಲವರು ಸ್ವಂತ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಕೆಲವರು ಗಣಿಮಾಲಿಕರಾಗಿದ್ದಾರೆ. ದೊಡ್ಡ ಹಿಡುವಳಿಯನ್ನು ಗಣಿಮಾಲಿಕರು ಹೊಂದಿರುವುದು ಗಮನಾರ್ಹ ಸಂಗತಿಯಾಗಿದೆ. ದೊಡ್ಡ ಹಿಡುವಳಿದಾರರು ಕೃಷಿಯ ಜೊತೆಗೆ ಗಣಿಗಾರಿಕೆಯನ್ನು ನಡೆಸುತ್ತಿರುವುದರಿಂದ ಅವರಿಗೆ ಹಣದ ಸಮಸ್ಯೆಯಿಲ್ಲದಂತಾಗಿ, ಸಿರಿವಂತಿಕೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶ್ರೀಮಂತರು ಶ್ರೀಮಂತರಾಗಿ, ಬಡವರು ಬಡವರಾಗಿಯೇ ಮುಂದುವರೆಯುತ್ತಾರೆ ಎನ್ನುವುದಕ್ಕೆ ಗಣಿಗಾರಿಕೆಯೆ ಪ್ರಮುಖ ಉದಾಹರಣೆಯೆಂದು ಹೇಳಬಹುದು.

ರೂಪಾಂತರಗೊಳ್ಳುತ್ತಿರುವ ಕೃಷಿಕರೆಂದರೆ, ಕೃಷಿಯನ್ನು ತೊರೆಯುತ್ತಿರುವವರೆಂದು ಅರ್ಥ. ಬಡತನ, ಅವಿಭಕ್ತ ಕುಟುಂಬ, ಅಲ್ಪ ಕೃಷಿ ಭೂಮಿ ಇವರನ್ನು ಗಣಿಗಾರಿಕೆಯ ಕಾರ್ಮಿಕರಾಗಿ ರೂಪುಗೊಳ್ಳುತ್ತಿರುವುದಕ್ಕೆ ಪ್ರಮುಖ ಕಾರಣವಾಗಿದೆ. ಕೃಷಿ ಕಾರ್ಮಿಕರು ಬಡವರಾಗಿರುವುದರಿಂದ ಅವರ ಬದುಕು ಅನಿಶ್ಚಿತ ಅವರು ಹೆಚ್ಚಿನ ಕೂಲಿ ದೊರೆಯುವಲ್ಲಿ ಕೆಲಸಕ್ಕೆ ಹೋಗುತ್ತಾರೆ. ದೊಡ್ಡ ಕುಟುಂಬದವರು ತಮಗಿರುವ ಅಲ್ಪಭೂಮಿಯಲ್ಲಿ ಜೀವಿಸುವುದು ದುಸ್ತರವಾಗಿ ಗಣಿಗಾರಿಕೆಯ ಕೆಲಸದಲ್ಲಿ ತೊಡಗುತ್ತಿದ್ದಾರೆ. ಅಲ್ಪ ಪ್ರಮಾಣದ ಭೂಮಿಯಲ್ಲಿ ಮನೆಗೆ ಸಾಕಾಗುವಷ್ಟು ಬೆಳೆಯನ್ನು ಬೆಳೆಯಲಾಗದಿರುವುದರಿಂದ ಕೃಷಿಯನ್ನು ತ್ಯಜಿಸಿ ಗಣಿಕಾರ್ಮಿಕರಾಗುತ್ತಿದ್ದಾರೆ. ಸಂದರ್ಶನಕ್ಕೆ ಕೃಷಿಕರಲ್ಲಿ ಹೆಚ್ಚಿನವರು ಕೆಳವರ್ಗದವರೇ ಆಗಿದ್ದಾರೆ. ಸಣ್ಣ ಮತ್ತು ಮಧ್ಯಮ ಹಿಡುವಳಿದಾರರು ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ.

ಕೇವಲ ಕೃಷಿಕರನ್ನಲ್ಲದೆ ಗಣಿಕಾರ್ಮಿಕರು ಮತ್ತು ವಲಸಿಗರನ್ನು ಸಂದರ್ಶಿಸಲಾಗಿದೆ. ನನ್ನ ಅಧ್ಯಯನ ಕೃಷಿಕರ ಮೇಲಾಗಿದ್ದರು ಸಹ ಇಲ್ಲಿ ಗಣಿಕಾರ್ಮಿಕರು ಮತ್ತು ವಲಸಿಗರು ಬಹುಮುಖ್ಯ ಪಾತ್ರವನ್ನು ವಹಿಸುತ್ತಾರೆ. ಗಣಿಕಾರ್ಮಿಕರು ಮತ್ತು ವಲಸಿಗರು ಮುಖ್ಯವಾಗಿ ಕೃಷಿ ಮೂಲದವರಾಗಿದ್ದಾರೆ. ಅಂದರೆ ಇವರು ಸಣ್ಣ ಹಿಡುವಳಿ ಕೃಷಿಕರು ಮತ್ತು ಕೃಷಿಕಾರ್ಮಿಕರಾಗಿದ್ದಾರೆ. ಇವರು ಕೇವಲ ಕೃಷಿಯನ್ನು ನಂಬಿಕೊಂಡು ಜೀವಿಸುವುದು ಕಷ್ಟವೆಂದು ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಕೃಷಿಯಲ್ಲಿ ಕಡಿಮೆ ಕೂಲಿ ಸಿಗುವುದರಿಂದ ಗಣಿಗಾರಿಕೆಯ ಕಾರ್ಮಿಕರಾಗಿ ತೊಡಗಿಕೊಂಡಿದ್ದಾರೆ. ದೊಡ್ಡ ಕುಟುಂಬವಿರುವುದರಿಂದ ಅಲ್ಪ ಪ್ರಮಾಣದ ಭೂಮಿಯಲ್ಲಿ ದುಡಿದು ಜೀವನ ಸಾಗಿಸುವುದು ಕಷ್ಟವಾಗಿ ಗಣಿಗಾರಿಕೆಯನ್ನು ಅವಲಂಬಿಸಬೇಕಾಗಿದೆ. ಇಲ್ಲಿ ವಲಸಿಗರು ಮತ್ತು ಗಣಿಕಾರ್ಮಿಕರನ್ನು ತಲಾ ೨೫ ಜನರನ್ನು ಸಂದರ್ಶಿಸಲಾಗಿದೆ. ವಲಸಿಗರಲ್ಲಿ

ಹೆಚ್ಚಿನವರು ಕೃಷಿ ಕಾರ್ಮಿಕರಾಗಿದ್ದಾರೆ. ವಲಸಿಗರಲ್ಲಿ ಹೆಚ್ಚಿನವರು ಲಂಬಾಣಿಗಳು. ಈ ಸಮುದಾಯದವರು ಕೃಷಿಕೂಲಿಯನ್ನು ಬಿಟ್ಟು ಗಣಿಕಾರ್ಮಿಕರಾಗಿ ರೂಪಾಂತರಗೊಂಡಿದ್ದಾರೆ. ಸರಿಯಾದ ಮಳೆ ಬೆಳೆ ದೊರೆಯದೆ ಆ ಪರಿಸ್ಥಿತಿಯಲ್ಲಿ ಕುಟುಂಬವನ್ನು ಸಲಹುವ ದೃಷ್ಟಿಯಿಂದ ಗಣಿಗಾರಿಕೆಯೆಡೆಗೆ ಆಶ್ರಯವನ್ನರಸಿ ಬಂದಿದ್ದಾರೆ. ಗಣಿಕಾರ್ಮಿಕರು ಮತ್ತು ವಲಸಿಗರು ಹೆಚ್ಚಿನವರು ಸಣ್ಣ ಹಿಡುವಳಿದಾರರು ಮತ್ತು ಕೃಷಿ ಕಾರ್ಮಿಕರಾಗಿದ್ದಾರೆ. ಗಣಿಗಾರಿಕೆಯಲ್ಲಿ ಉತ್ತಮವಾದ ಕೂಲಿ ದೊರೆಯುವುದರಿಂದ ಇಲ್ಲಿಯೇ ನೆಲೆಸಲು ಇಚ್ಛಿಸುತ್ತಾರೆ. ಗಣಿಗಾರಿಕೆಯಲ್ಲಿಯೇ ಮುಂದುವರೆಯಲು ಬಯಸುತ್ತಾರೆ. ಗಣಿಕಾರ್ಮಿಕರಲ್ಲಿ ಎಲ್ಲರೂ ಕೂಲಿಗಳಾಗಿ ಕೆಲಸಕ್ಕೆ ಸೇರಿಕೊಂಡವರಾಗಿದ್ದಾರೆ.

ಗಣಿಗಾರಿಕೆಯ ವಿವಿಧ ಪ್ರಕ್ರಿಯೆಗಳಿಂದ ಕೃಷಿ ಸಮುದಾಯದ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅವುಗಳೆಂದರೆ, ಸಿಡಿಮದ್ದು ಸಿಡಿಸುವುದು, ಅದರಿಂದ ಧೂಳು, ಅದಿರಿನ ಖಣಿಜಗಳಾಗಿ ಕೃಷಿ ಭೂಮಿಯ ಬಳಕೆ, ಧೂಳು, ಕೃಷಿ ಭೂಮಿಯ ದುರ್ಬಳಕೆ, ಅಂತರ್ಜಲದ ಕುಸಿತ, ಪರಿಸರ ನಾಶ ವಿವಿಧ ಪ್ರಕ್ರಿಯೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹೀಗೆ ಹಲವಾರು ಪ್ರಕ್ರಿಯೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೧.೫ ಅಧ್ಯಯನದ ಮಹತ್ವ

ಗಣಿಗಾರಿಕೆಯಿಂದ ದೇಶವೇನೋ ಅಭಿವೃದ್ಧಿ ಹೊಂದಬಹುದು. ಆದರೆ ಅದರ ಸುತ್ತಮುತ್ತಲಿನ ಪರಿಸರದ ಜನ ಸಾಮಾನ್ಯರ ತೊಂದರೆಗಳು, ಪ್ರಕೃತಿ ಮೇಲಾಗುವ ಪರಿಣಾಮ ಅತ್ಯಧಿಕ. ಇವುಗಳ ಪರಿವೇ ಇಲ್ಲದೆ ಮುನ್ನುಗ್ಗುವುದರಿಂದ ಮುಂದೊಂದು ದಿನ ಭವಿಷ್ಯದ ಪೀಳಿಗೆಗಳ ಸರ್ವನಾಶ ಶತಸಿದ್ಧ. ಕಾಲಮಿಂಚುವ ಪೂರ್ವದಲ್ಲಿ ಎಚ್ಚೆತ್ತು ಗಣಿಗಳ ಮಿತಬಳಕೆ ಮತ್ತು ಯೋಜಿತ ಬಳಕೆ ಕೈಗೊಂಡಲ್ಲಿ ಮುಂಬರುವ ಜನಾಂಗಕ್ಕೊಂದಿಷ್ಟು ಅವಕಾಶ ನೀಡಿದಂತಾಗುತ್ತದೆ. ಅದಕ್ಕಾಗಿ ಪ್ರಸ್ತುತ ಅಧ್ಯಯನದಿಂದ ಗಣಿಗಾರಿಕೆಯ ಪರಿಣಾಮಗಳನ್ನು ಅರಿತುಕೊಂಡು ಪರ್ಯಾಯ ಕ್ರಮಗಳನ್ನು ಅನುಸರಿಸಿದ್ದೇ ಆದರೆ ಕೃಷಿ ಸಮುದಾಯದ ಬದುಕಿಗೆ ಭರವಸೆಯ ಬೆಳಕನ್ನು ನೀಡಿದಂತಾಗುತ್ತದೆ. ಗಣಿಗಳ ತೀವ್ರವಾದ ಬಳಕೆಯಿಂದ ಬರಿದಾಗುವ ಸಂಪನ್ಮೂಲದ ಬಗೆಗೆ ಗಮನ ನೀಡಿ ಬಳಕೆಯ ತೀವ್ರತೆ ಕಡಿಮೆ ಮಾಡಿ ಉಳಿಸಿಕೊಳ್ಳುವಲ್ಲಿ ಈ ಅಧ್ಯಯನವು ಪೂರಕವಾಗಿದೆ.

ಗಣಿಗಾರಿಕೆಯನ್ನು ವಿರೋಧಿಸುವುದನ್ನು ನಿಲ್ಲಿಸುವುದಕ್ಕಿಂತ ಪೂರ್ವದಲ್ಲಿ ಗಣಿಗಾರಿಕೆಯು ಹುಟ್ಟುಹಾಕುವ ಪರಿಣಾಮಗಳನ್ನು ಜನಸಮುದಾಯಕ್ಕೆ ಈ ಅಧ್ಯಯನದ ಮುಖಾಂತರ ತಿಳಿಸಿಕೊಡಲಾಗುವುದು. ಗಣಿಗಾರಿಕೆಯು ಕೇವಲ ಕೃಷಿ ಸಮುದಾಯಗಳಿಗೆ ಮಾತ್ರ ಸಮಸ್ಯೆಯನ್ನೊಡ್ಡುತ್ತಿದೆಯಲ್ಲದೆ ಇನ್ನಿತರ ಅನೇಕ ಕ್ಷೇತ್ರಗಳಲ್ಲಿಯ ಸಮಸ್ಯೆಗಳ ಉಗಮಕ್ಕೆ ಕಾರಣವಾಗಿದೆ. ಗಣಿಗಾರಿಕೆಯು ಕೃಷಿ ಕ್ಷೇತ್ರದ ಸಮಸ್ಯೆಗಳಿಗೆ, ಆರೋಗ್ಯದ ಸಮಸ್ಯೆಗಳಿಗೆ, ಪರಿಸರದ ಸಮಸ್ಯೆಗಳಿಗೆ, ಆರ್ಥಿಕ ಸಮಸ್ಯೆಗಳಿಗೆ, ಸಾಮಾಜಿಕ ಸಮಸ್ಯೆಗಳಿಗೆ, ಪ್ರತ್ಯಕ್ಷವಾಗಿ

ಮತ್ತು ಪರೋಕ್ಷವಾಗಿ ಕಾರಣೀಭೂತವಾಗಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನವು ಹೆಚ್ಚು ಸಮಕಾಲೀನವಾಗಿದೆ ಯೆಂದು ಭಾವಿಸುತ್ತೇನೆ.

ಪ್ರಸ್ತುತ ಅಧ್ಯಯನವು ಕೇವಲ ಗಣಿಗಾರಿಕೆಯಿಂದ ಕೃಷಿ ಸಮುದಾಯಕ್ಕಾಗುವ ಪರಿಣಾಮಗಳನ್ನು ಕುರಿತದ್ದಾಗಿದ್ದರೂ ಅದರಿಂದಾಗುವ ಉಪಯುಕ್ತತೆ ಸಮಾಜಕ್ಕೆ, ರಾಷ್ಟ್ರಕ್ಕೆ ಅತಿ ಹೆಚ್ಚು. ಗಣಿಗಾರಿಕೆಯನ್ನು ಅತಿಯಾಗಿ ಕೈಗೊಳ್ಳುವುದರಿಂದ ಅಂತರ್ಜಲಮಟ್ಟ ತಗ್ಗಿ, ನೈಸರ್ಗಿಕ ಪರಿಸರ ಹದಗೆಟ್ಟು, ಅನಾರೋಗ್ಯಕರ ವಾತಾವರಣ ಎಲ್ಲೆಡೆ ಆವರಿಸಿ ರೋಗಗ್ರಸ್ಥ ಸಮಾಜವಾಗಿ, ಊಹಿಸಲು ಅನುಕೂಲಕರವಾದ ಪ್ರದೇಶ ವಾಗುವುದಕ್ಕಿಂತ ಪೂರ್ವದಲ್ಲಿ ಗಣಿಗಾರಿಕೆಯ ಪರಿಣಾಮದ ಅಧ್ಯಯನ ಕೈಗೊಳ್ಳುವ ಈ ಸಂಶೋಧನೆಯು ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಅತ್ಯವಶ್ಯಕವಾಗಿದೆ. ಜನಕ್ಕೆ ನೈಸರ್ಗಿಕ ಪರಿಸರದ ಜ್ಞಾನವನ್ನು ನೀಡುವ ಈ ಪ್ರಸ್ತುತ ಅಧ್ಯಯನ ಸಮಾಜದಲ್ಲಿ ವಿಚಾರವಂತಿಕೆಯನ್ನು ಹುಟ್ಟುಹಾಕಲು ಸಹಾಯಕವಾಗುತ್ತದೆ. ಗಣಿಗಾರಿಕೆಯ ಪರಿಣಾಮಗಳ ತೀವ್ರತೆಯನ್ನು ಕಂಡುಕೊಳ್ಳಲು ಸಹಾಯಕವಾಗುವ ಈ ಅಧ್ಯಯನ ರಾಷ್ಟ್ರವು ಯೋಜಿತ ರೀತಿಯಲ್ಲಿ ಗಣಿಗಾರಿಕೆಯನ್ನು ಕೈಗೊಳ್ಳುವಲ್ಲಿ ಈ ಅಧ್ಯಯನ ಸಮಾಜ ಮತ್ತು ರಾಷ್ಟ್ರಕ್ಕೆ ಅವಶ್ಯಕವಾಗಿದೆ.

೧.೬ ಇದುವರೆಗೂ ನಡೆದ ಸಾಹಿತ್ಯದ ಪರಿಶೀಲನೆ

ಗಣಿಗಾರಿಕೆಗೆ ಸಂಬಂಧಿಸಿದಂತೆ ಹಲವಾರು ಮಾಹಿತಿಗಳನ್ನು ನೀಡುವ ಪುಸ್ತಕಗಳು ಈ ಕೆಳಗಿನಂತಿವೆ. ಇವುಗಳನ್ನು ಇಲ್ಲಿ ಗುಂಪುವಾರು ವಿವರಿಸಲು ಇಚ್ಛಿಸುತ್ತೇನೆ. ಅಂದರೆ ಗಣಿಗಾರಿಕೆ, ಗಣಿಗಾರಿಕೆ ಮತ್ತು ಪರಿಸರ ಮತ್ತು ಗಣಿಗಾರಿಕೆ, ಭೌಗೋಳಿಕ ಪ್ರದೇಶ, ಅದಿರು ದೊರೆಯುವ ಪ್ರದೇಶ, ಪ್ರಮಾಣ, ಅಂಕಿಸಂಖ್ಯೆ ಇತ್ಯಾದಿ. ಈ ರೀತಿಯಾಗಿ ವಿವರಿಸಲಾಗಿದೆ. ಅಲ್ಲದೆ, ವಿವಿಧ ವೆಬ್‌ಸೈಟ್‌ಗಳಿಂದ ಪಡೆದ ಮಾಹಿತಿಯನ್ನು ಸಹ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

A. ಗಣಿಗಾರಿಕೆ

ಪ್ರೊ. ಶಿವರಾಮಯ್ಯ, "ಕುದುರೆಮುಖ" ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು- ೨೦೦೩.

ಕುದುರೆಮುಖ ಗಣಿಗಾರಿಕೆಯಿಂದ ನ್ಯಾಷನಲ್ ಪಾರ್ಕ್‌ನ ನಿಜ ಸ್ವರೂಪವನ್ನು ವಿವರಿಸುತ್ತದೆ. ರಾಷ್ಟ್ರೀಯ ಆದಾಯದ ಸಲುವಾಗಿ ಪರೋಕ್ಷ ನಷ್ಟವನ್ನು ವಿವರಿಸುತ್ತದೆ. ಸರಕಾರ ಗಣಿಗಾರಿಕೆಯನ್ನು ನಿಲ್ಲಿಸುವುದರ ಬದಲು ಪ್ರೋತ್ಸಾಹ ನೀಡುತ್ತಿದೆ. ಕುದುರೆಮುಖ ಗಣಿಗಾರಿಕೆಯಿಂದ ಪಶ್ಚಿಮಘಟ್ಟಗಳು ಮತ್ತು ಹುಲ್ಲುಗಾವಲುಗಳ ನಾಶವನ್ನು ವಿವರಿಸುತ್ತದೆ. ಇಂಗುಗುಂಡಿ ಮತ್ತು ಚೆಕ್‌ಡ್ಯಾಂಗಳ ನಾಶದ ಬಗ್ಗೆ ತಿಳಿಸುತ್ತದೆ.

"ಕುದುರೆಮುಖ ಗಣಿಗಾರಿಕೆ ಪಂಚ ಮಹಾಸುಳ್ಳುಗಳು" ತುಂಗಭದ್ರ ಉಳಿಸಿ ಹೋರಾಟ ಒಕ್ಕೂಟ ಸಮಿತಿ- ೨೦೦೨.

"ಕುದುರೆಮುಖ ಗಣಿಗಾರಿಕೆ ಪಂಚಮಹಾ ಸುಳ್ಳುಗಳು" ಎಂಬ ಪುಸ್ತಕವು ಕುದುರೆಮುಖದ ಗಣಿಗಾರಿಕೆ ಕೆ.ಐ.ಓ.ಸಿ.ಎಲ್. ನಡೆಸಿರುವ ಹಾನಿಗಳು. ನದಿಗಳಿಗಾಗುತ್ತಿರುವ ಹಾನಿಗಳು, ಪರಿಸರದ ಸಂರಕ್ಷಣೆ, ಆಳವಾದ ಗಣಿಗಾರಿಕೆ ಇನ್ನೂ ಮುಂತಾದ ವಿಷಯಗಳ ಕುರಿತಾದ ವಿವರಗಳನ್ನು ಈ ಪುಸ್ತಕ ಒಳಗೊಂಡಿದೆ.

T.K.Meti "Economic development and social change in mysore state" Dharwar-1971.

ಮೈಸೂರು ರಾಜ್ಯದ ಔದ್ಯೋಗಿಕ ಬೆಳವಣಿಗೆಯ ಬಗೆಗೆ ವಿವರಿಸುತ್ತದೆ. ಮೈಸೂರು ರಾಜ್ಯದಲ್ಲಿ ಕಬ್ಬಿಣದ ಅದಿರಿನ ರಫ್ತು ಮತ್ತು ಆರ್ಥಿಕ ಬೆಳವಣಿಗೆಯನ್ನು ಕುರಿತು ವಿವರಿಸುತ್ತದೆ. ಮೈಸೂರು ರಾಜ್ಯದಿಂದ ಹೊರ ದೇಶಗಳಿಗೆ ಕಬ್ಬಿಣದ ಅದಿರಿನ ರಫ್ತಿನ ಬಗೆಗೆ ಮಾಹಿತಿ ನೀಡುತ್ತದೆ. ಬಿಹಾರ ಮತ್ತು ಮಧ್ಯಪ್ರದೇಶದ ನಂತರದ ಸ್ಥಾನದಲ್ಲಿ ಮೈಸೂರು ರಾಜ್ಯ ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಅದಿರನ್ನು ಉತ್ಪಾದಿಸುತ್ತದೆ. ಹೊಸಪೇಟೆ-ಬಳ್ಳಾರಿ ಮಾರ್ಗದ ಪ್ರದೇಶದಲ್ಲಿಯೇ ೩೦೦ ಮಿಲಿಯನ್ ಟನ್ ಕಬ್ಬಿಣದ ಅದಿರು ದೊರೆಯಬಹುದೆಂದು ೧೯೬೭ರಲ್ಲಿಯೇ ಅಂದಾಜಿಸಲಾದ ಪಟ್ಟಿಯನ್ನು ನೀಡುತ್ತದೆ. ಹೀಗೆ ಕಬ್ಬಿಣ ಮತ್ತು ಸ್ಟೀಲ್‌ನ ರಫ್ತಿನಲ್ಲಿ ಮೈಸೂರು ರಾಜ್ಯದ ಆರ್ಥಿಕ ಬೆಳವಣಿಗೆಯ ಬಗೆಗೆ ಹಲವಾರು ಮಾಹಿತಿಗಳನ್ನು ನೀಡುತ್ತದೆ. ಅಲ್ಲದೇ ಕೃಷಿ, ನೀರಾವರಿ, ಬ್ಯಾಂಕ್ ಮತ್ತು ಹಣಕಾಸು ಮುಂತಾದವುಗಳ ಬಗೆಗೆ ಸಮಗ್ರವಾದ ಮಾಹಿತಿಯನ್ನು ನೀಡುತ್ತದೆ.

ಈ ಮೇಲಿನ ಪುಸ್ತಕಗಳು ಗಣಿಗಾರಿಕೆಯನ್ನು ಕುರಿತು ವಿವರಿಸುತ್ತವೆ. ಸರಕಾರಕ್ಕೆ ದೊರೆಯುವ ಆದಾಯ ಮತ್ತು ಪರೋಕ್ಷ ನಷ್ಟವನ್ನು ಕುರಿತು ವಿವರಿಸುತ್ತವೆ. ಗಣಿಗಾರಿಕೆಯಿಂದ ಪರಿಸರದ ಮೇಲೆ ಯಾವ ಪರಿಣಾಮ ಬೀರುವುದಿಲ್ಲ ಎನ್ನುವ ಕೆ.ಐ.ಓ.ಸಿ.ಎಲ್.ನ ಬಗೆಗೆ ವಿವರಿಸುವುದರ ಜೊತೆಗೆ ಮೈಸೂರು ರಾಜ್ಯದ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ಗಣಿಗಾರಿಕೆಯ ಪಾತ್ರವನ್ನು ಕುರಿತು ವಿವರಸುತ್ತವೆ.

B. ಗಣಿಗಾರಿಕೆ ಮತ್ತು ಪರಿಸರ

ಕೆ.ಮೋಹನ್‌ಕೃಷ್ಣ ರೈ "ಪರಿಸರ ಚಳುವಳಿಗಳು" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೯೯೯ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾದ ಕೆ. ಮೋಹನ್‌ಕೃಷ್ಣ ರೈಯವರು ಬರೆದಿರುವ 'ಪರಿಸರ ಚಳುವಳಿಗಳು' ಎಂಬ ಪುಸ್ತಕದಲ್ಲಿ ಪರಿಸರದ ನಾಶ ಮತ್ತು ಉದ್ಯಮೀಕರಣವನ್ನು ಕುರಿತು ವಿವರಿಸುತ್ತದೆ. ಪರಿಸರ ಮತ್ತು ಆಧುನಿಕರಣ ಪ್ರಕ್ರಿಯೆಯನ್ನು ಕುರಿತು ವಿವರಿಸುತ್ತದೆ. ಗಣಿಗಾರಿಕೆಯಿಂದ ಪರಿಸರದ ಮೇಲಾಗುವ ಪರಿಣಾಮಗಳು, ಹೀಗೆ ಹಲವಾರು ರೀತಿಯ ಪರಿಸರ ಚಳುವಳಿಗಳನ್ನು ವಿವರಿಸುತ್ತದೆ.

ಡಾ.ಸಿ.ಮಹಾದೇವ, ಡಾ. ಎ. ಸುಬ್ಬಣ್ಣ ರೈ, ಡಾ. ಮಾಧವ ಪೆರಾಜೆ, "ಹೊಸಪೇಟೆ ತಾಲ್ಲೂಕು ದರ್ಶನ." ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨.

'ಹೊಸಪೇಟೆ ತಾಲ್ಲೂಕು ದರ್ಶನ' ಎಂಬ ಪುಸ್ತಕವು ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾಗಿದೆ. ಹೊಸಪೇಟೆ ತಾಲೂಕಿನ ಐತಿಹಾಸಿಕ ಹಿನ್ನೆಲೆ ಮತ್ತು ಹೊಸಪೇಟೆಯನ್ನು ವಿಶ್ವದಲ್ಲಿಯೇ ನೆನಪಿಡುವಂತಹ ವಿಚಾರಗಳನ್ನು ವಿವರಿಸುತ್ತದೆ. ಅಂದರೆ ಐತಿಹಾಸಿಕ ಸ್ಮಾರಕವಾದ ಹಂಪೆ ಮತ್ತು ಗಣಿಗಾರಿಕೆಯನ್ನು ಕುರಿತು ವಿವರಿಸುತ್ತದೆ. ಹೊಸಪೇಟೆ ತಾಲೂಕಿನ ಪ್ರತಿ ಹಳ್ಳಿಗಳ ಬಗೆಗೆ ಮತ್ತು ಒಟ್ಟಾರೆಯಾಗಿ ಹೊಸಪೇಟೆ ತಾಲೂಕಿನ ಬಗೆಗೆ ಸಮಗ್ರವಾದ ವಿವರಣೆಯನ್ನು ನೀಡುತ್ತದೆ.

ಶಿವರಾಮ ಕಾರಂತ "ಭಾರತ ಪರಿಸರ ದ್ವಿತೀಯ ಸಮೀಕ್ಷೆ", ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೬.

ಶಿವರಾಮ ಕಾರಂತರವರ 'ಭಾರತ ಪರಿಸರ ದ್ವಿತೀಯ ಸಮೀಕ್ಷೆ' ಎಂಬ ಪುಸ್ತಕವು ೧೯೮೬ರಲ್ಲಿ ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರದಿಂದ ಪ್ರಕಟಿಸಲ್ಪಟ್ಟಿದೆ. ಭಾರತ ದೇಶದ ಭೌಗೋಳಿಕ, ನೀರು, ಅರಣ್ಯ ಕುರಿತಂತೆ ಹಲವಾರು ಬಗೆಯ ವಿಷಯಗಳನ್ನು ಹೊರ ಚೆಲ್ಲುತ್ತದೆ. ಪರಿಸರದ ವಿವಿಧ ವಿಷಯಗಳ ಬಗ್ಗೆ ವಿಶ್ಲೇಷಿಸುತ್ತದೆ. ಗಣಿಗಾರಿಕೆಯ ಬಗೆಗೆ ಸ್ವಲ್ಪ ಪ್ರಮಾಣದ ಮಾಹಿತಿಯನ್ನು ನೀಡುತ್ತದೆ.

ಕೆ.ಜೆ. ವಾಸುಕಿ. "ಕರ್ನಾಟಕದ ಪರಿಸರ," ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

೧೯೯೫ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾದ ಕೆ.ಜೆ. ವಾಸುಕಿಯವರ 'ಕರ್ನಾಟಕ ಪರಿಸರ' ಎಂಬ ಪುಸ್ತಕವು ಗಣಿಗಳ ಸ್ಫೋಟದಿಂದ ಭೂಕಂಪ ಸಂಭವಿಸುವ ಸೂಚನೆಯನ್ನು ನೀಡುತ್ತದೆ. ವಿಜ್ಞಾನ, ಕೈಗಾರಿಕೆ, ಗೃಹೋಪಯೋಗಿಯಿಂದ ಪರಿಸರ ಮತ್ತು ಜಲಮಾಲಿನ್ಯದ ಬಗೆಗೆ ವಿವರಣೆ ನೀಡುತ್ತದೆ. ಅರಣ್ಯದ ಅವಶ್ಯಕತೆಯನ್ನು ವಿವರಿಸುತ್ತದೆ. ಪಶ್ಚಿಮ ಘಟ್ಟಗಳಂತ ಪ್ರದೇಶದಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ಪಕ್ಷಿ ಮತ್ತು ಪರಿಸರದ ಮೇಲಾಗುವ ಪರಿಣಾಮಗಳನ್ನು ವಿವರಿಸುತ್ತದೆ.

ಡಾ.ವ್ಹಿ.ಸಿ.ಚವಡಿ, "ಪರಿಸರ ಪ್ರಜ್ಞೆ," ಜಿಲ್ಲಾ ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿ, ಧಾರವಾಡ- ೧೯೯೨.

೧೯೯೨ರಲ್ಲಿ ಧಾರವಾಡ ಜಿಲ್ಲಾ ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿಯಿಂದ ಡಾ. ವ್ಹಿ.ಸಿ. ಚವಡಿಯವರ 'ಪರಿಸರ ಪ್ರಜ್ಞೆ' ಎಂಬ ಪುಸ್ತಕದಲ್ಲಿ ಪರಿಸರ ಸಮತೋಲನ, ಪರಿಸರ ನಾಶಕ್ಕೆ ಮೂಲಕಾರಣಗಳನ್ನು ವಿವರಿಸುತ್ತದೆ. ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ, ಆಧುನಿಕ ಕೃಷಿಯಿಂದ ಪರಿಸರ ಮಾಲಿನ್ಯದ ಬಗೆಗೆ ವಿವರಣೆಯನ್ನು ನೀಡುತ್ತದೆ.

ಟಿ.ಆರ್. ಚಂದ್ರಶೇಖರ್, "ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು." ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೧೯೯೪ರಲ್ಲಿ ಟಿ.ಆರ್. ಚಂದ್ರಶೇಖರ್‌ರವರು ಬರೆದಿರುವ 'ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು' ಎಂಬ ಪುಸ್ತಕದಲ್ಲಿ ಕಾರ್ಖಾನೆಗಳ ಬಗೆಗೆ, ಬಳ್ಳಾರಿ ಜಿಲ್ಲೆಯ ಭೌಗೋಳಿಕ ಲಕ್ಷಣಗಳ ಬಗೆಗೆ, ನಿಸರ್ಗ ಸಂಪತ್ತಿನ ಬಗೆಗೆ, ಭೂ ಸಂಪತ್ತಿನ ಬಗೆಗೆ, ಅರಣ್ಯ, ನದಿ, ಜಲಸಂಪತ್ತು, ಖನಿಜ ಸಂಪತ್ತಿನ ಬಗೆಗೆ ಸವಿವರವಾದ ಮಾಹಿತಿಯನ್ನು ಒದಗಿಸುತ್ತದೆ.

P.R. Trivedi and Gurudeepraj, "Environmental problems impact assessment." Akashdeep publishing house, New Delhi 1992.

ಖನಿಜ ಮತ್ತು ಗಣಿ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಪರಿಸರದ ಮೇಲಾಗುವ ಪರಿಣಾಮಗಳನ್ನು ವಿವರಿಸುತ್ತದೆ. ಜಲಮಾಲಿನ್ಯದ ಬಗೆಗೆ ತಿಳಿಸುತ್ತದೆ. ಮಾನವನ ಮೇಲಾಗುವ ಪರಿಣಾಮಗಳನ್ನು ವಿವರಿಸುತ್ತದೆ. ವಾಯುವಿನ ಗುಣಮಟ್ಟ ಕಾಪಾಡುವ ಬಗೆಗೆ, ತ್ಯಾಜ್ಯ ವಸ್ತುಗಳ ಬಗೆಗೆ ಮುನ್ನೆಚ್ಚರಿಕೆಯ ಕ್ರಮಗಳನ್ನು ವಿವರಿಸುತ್ತದೆ.

Timy Katyal and Prof. M. Satakee, "Environmental Pollution". Anmol Publications Pvt ltd- NewDelhi- 1996.

ವಾಯುಮಾಲಿನ್ಯ, ಜಲಮಾಲಿನ್ಯ, ತ್ಯಾಜ್ಯ ವಸ್ತುಗಳ ಮಾಲಿನ್ಯ, ಭೂಮಾಲಿನ್ಯ, ವಿಕಿರಣ ಮಾಲಿನ್ಯ, Thermol ಮಾಲಿನ್ಯದ ಬಗೆಗೆ ವಿವರಿಸುತ್ತದೆ. ಅಲ್ಲದೆ ಪರಿಸರ ರಕ್ಷಣೆಯ ೧೯೮೬ರ ಕಾಯಿದೆಯನ್ನು ವಿವರಿಸುವುದರ ಜೊತೆಗೆ ಪರಿಸರ ಶಿಕ್ಷಣವನ್ನು ನೀಡುತ್ತದೆ. ವಿವಿಧ ಪ್ರಕ್ರಿಯೆಗಳಿಂದಾಗಿ ಪರಿಸರ ಮಾಲಿನ್ಯವಾಗುತ್ತಿರುವುದರ ಬಗೆಗೆ ವಿವರಣೆಯನ್ನು ನೀಡುತ್ತದೆ. ಪರಿಸರದ ಮಹತ್ವವನ್ನು ವಿವರಿಸುತ್ತದೆ.

R.N. Trivedi, "A Text book of Environmental Sciences," Anmol Publications, NewDelhi-1993.

ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಮೇಲೆ ಬೆಳಕು ಚೆಲ್ಲುತ್ತದೆ. ಗಣಿಗಾರಿಕೆಯಲ್ಲಿ ಅರಣ್ಯನಿರ್ಮಾಣ ಮತ್ತು ಪರಿಸರದ ಬಗೆಗೆ ವಿವರಿಸುತ್ತದೆ. ಬಿಹಾರದ ಆರ್ಥಿಕ ಅಭಿವೃದ್ಧಿಯಲ್ಲಿ ಗಣಿಗಾರಿಕೆಯ ಪಾತ್ರವನ್ನು ಕುರಿತು ತಿಳಿಸುತ್ತದೆ. ಭಾರತದ ನೈಸರ್ಗಿಕ ಖನಿಜ ಸಂಪನ್ಮೂಲಗಳ ಅಭಿವೃದ್ಧಿಯ ಬಗೆಗೆ ವಿವರಣೆ ನೀಡುತ್ತದೆ. ಅಲ್ಲದೇ ಹೀಗೆ ಹತ್ತು ಹಲವಾರು ವಿಷಯಗಳ ಬಗೆಗೆ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಮತ್ತು ಸಮಸ್ಯೆಗಳಿಗೆ ಪರಿಹಾರೋಪಾಯವನ್ನು ಸೂಚಿಸುತ್ತದೆ.

A.P. Diwan, D.K.Arora, "Ecology of environmental cycles." Anmol Publications Pvt ltd, NewDelhi-1995.

ಪರಿಸರ ಸಂಗತಿಗಳು, ನೀರು, ಸಾರಜನಕ, ಇಂಗಾಲ, ವಾಯು, ವಿಕಿರಣಗಳಿಂದ ಪರಿಸರದ ಮೇಲಾಗುವ ಪರಿಣಾಮಗಳು ಮುಂತಾದ ವಿಷಯಗಳ ಕುರಿತು ವಿವರಿಸುತ್ತದೆ. ರಾಸಾಯನಿಕ ಖನಿಜಗಳು ಪರಿಸರದೊಂದಿಗೆ ಹೊಂದಿರುವ ಸರಪಳಿಯ ಚಿತ್ರಣವನ್ನು ನೀಡುತ್ತದೆ. ರಾಸಾಯನಿಕ ಖನಿಜಗಳ ಬಳಕೆ ಮತ್ತು ಅವುಗಳ ಸರಪಳಿಯ ಅವಧಿಯಲ್ಲಿ ರಾಸಾಯನಿಕ ಕ್ರಿಯೆಗಳ ಬಗೆಗೆ ಮಾಹಿತಿಯನ್ನು ನೀಡುತ್ತದೆ.

ಈ ಮೇಲಿನ ಪುಸ್ತಕಗಳು ಗಣಿಗಾರಿಕೆ ಮತ್ತು ಪರಿಸರದ ಬಗೆಗೆ ವಿವರಣೆ ನೀಡುತ್ತವೆ. ಗಣಿಗಾರಿಕೆಯಿಂದ ಪರಿಸರದ ಮೇಲಾಗುವ ಪರಿಣಾಮಗಳನ್ನು ಕುರಿತು ವಿವರಿಸುತ್ತವೆ. ಗಣಿಗಾರಿಕೆಯು ಪರಿಸರದ ಸ್ವರೂಪವನ್ನು ಬದಲಾಯಿಸುತ್ತಿರುವುದು ತಿಳಿದುಬರುತ್ತದೆ. ಪರಿಸರದ ಮಹತ್ವವನ್ನು ವಿವರಿಸುತ್ತವೆ. ಪರಿಸರ ಹಲವಾರು ರೀತಿಯಲ್ಲಿ ಮಲಿನಗೊಳ್ಳುತ್ತಿರುವುದರ ಬಗೆಗೆ ವಿವರಣೆ ನೀಡುತ್ತವೆ. ಪರಿಸರ ರಕ್ಷಣೆ ಮತ್ತು ಕಾಳಜಿಯ

ಬಗೆಗೆ ಅಧ್ಯಯನಿಸುತ್ತವೆ. ಪರಿಸರಮಾಲಿನ್ಯದ ಪ್ರಭಾವವನ್ನು ವಿವರಿಸುತ್ತವೆ. ಗಣಿಗಾರಿಕೆ ಮತ್ತಿತರ ಉದ್ದಿಮೆಗಳಿಂದ ಸಂಭವಿಸುವ ಪರಿಸರ ಮಾಲಿನ್ಯದ ಕುರಿತು ಮಾಹಿತಿಯನ್ನು ನೀಡುತ್ತವೆ.

C. ಗಣಿಗಾರಿಕೆಯ ಭೌಗೋಳಿಕ ವಿವರ, ಅದಿರು ದೊರೆಯುವ ಪ್ರದೇಶ, ಪ್ರಮಾಣ, ಅಂಕಿ ಸಂಖ್ಯೆಗಳು ಇತ್ಯಾದಿ

ಕೆ.ಗವಿಶೆಟ್ಟಿ, "ಕರ್ನಾಟಕದ ಖನಿಜ ಸಂಪತ್ತು," ದಿವ್ಯಜ್ಯೋತಿ ಪ್ರಕಾಶನ, ಬೆಂಗಳೂರು, ೧೯೯೫.

೧೯೯೫ರಲ್ಲಿ ದಿವ್ಯಜ್ಯೋತಿ ಪ್ರಕಾಶನ, ಬೆಂಗಳೂರು ಪ್ರಕಾಶನದಿಂದ ಪ್ರಕಟವಾದ ಕೆ. ಗವಿಶೆಟ್ಟಿಯವರು ಬರೆದಿರುವ 'ಕರ್ನಾಟಕದ ಖನಿಜ ಸಂಪತ್ತು' ಎಂಬ ಪುಸ್ತಕದಲ್ಲಿ ಕರ್ನಾಟಕದಲ್ಲಿ ದೊರೆಯುವ ಹಲವಾರು ರೀತಿಯ ಖನಿಜಗಳ ವಿವರಣೆಯನ್ನು ನೀಡುತ್ತದೆ. ಕರ್ನಾಟಕದಲ್ಲಿ ಯಾವ ಪ್ರದೇಶದಲ್ಲಿ ಯಾವ ಯಾವ ಖನಿಜಗಳು ಎಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಇದುವರೆಗೆ ಹೊರತೆಗೆದ ಖನಿಜದ ಪ್ರಮಾಣ ಅದರ ಮೌಲ್ಯಗಳ ಬಗೆಗೆ ವಿವರಿಸುತ್ತದೆ. ಖನಿಜಗಳ ಉತ್ಪಾದನೆಯಲ್ಲಿ ವಿಶ್ವದಲ್ಲಿ ಭಾರತದ ಮತ್ತು ಕರ್ನಾಟಕದ ಸ್ಥಾನವನ್ನು ವಿವರಿಸುತ್ತದೆ.

ಶ್ರೀಮತಿ ಮೆಹರ್ ಡಿ. ಎನ್. ವಾಡಿಯಾ, "ಭಾರತದ ಖನಿಜಗಳು," ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ, ೧೯೯೬.

೧೯೯೬ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ನವದೆಹಲಿಯಿಂದ ಪ್ರಕಟವಾದ ಶ್ರೀಮತಿ ಮೆಹರ್ ಡಿ.ಎನ್. ವಾಡಿಯಾರವರ 'ಭಾರತದ ಖನಿಜಗಳು' ಭಾರತದ ಶಿಲಾವರ್ಗಗಳ ಕುರಿತು ವಿವರಿಸುವುದರೊಂದಿಗೆ, ಖನಿಜಗಳು ಮತ್ತು ಲೋಹಗಳು, ನೀರು, ಜೇಡಿಮಣ್ಣು, ಮರಳು, ಸಿಮೆಂಟು, ಸುಣ್ಣ, ಕಟ್ಟಡ ಕಲ್ಲುಗಳು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಬಗೆಗೆ ವಿವರಣೆ ನೀಡುತ್ತದೆ. ಅದಿರುಗಳು ಮತ್ತು ಲೋಹಗಳು ದೊರೆಯುವ ಪ್ರಮಾಣ, ಸ್ಥಳಗಳನ್ನು ಸ್ಥೂಲವಾಗಿ ವಿವರಿಸುತ್ತದೆ. ಆರ್ಥಿಕ ಖನಿಜಗಳು ಮತ್ತು ಅಪರೂಪ ಖನಿಜಗಳ ಬಗೆಗೆ ವಿಂಗಡಣೆ ಮಾಡಿ ವಿವರಿಸುತ್ತದೆ. ಕಬ್ಬಿಣ ದೊರೆಯುವ ಸ್ಥಳಗಳು, ಲೋಹಾಂಶವುಳ್ಳ ಪ್ರಮಾಣ ಮತ್ತು ನಿಕ್ಷೇಪಗಳ ಬಗೆಗೆ ವಿವರಿಸುತ್ತದೆ.

B.P. Radhakrishna, "Iron ores of mysore state" prasaranga, university of mysore. Mysore, 1973

ಕಬ್ಬಿಣದ ಅದಿರಿನ ಬಗೆಗೆ ಭೌಗೋಳಿಕ ವಿಶ್ಲೇಷಣೆಯನ್ನು ನೀಡುತ್ತದೆ. ಗಣಿಗಾರಿಕೆಯ ವಿಧಗಳು, ಭಾರತದಲ್ಲಿ ಕಬ್ಬಿಣದ ಅದಿರಿನ ಸಂಗ್ರಹದ ಬಗೆಗೆ, ಅಲ್ಲದೇ ಮೈಸೂರು ರಾಜ್ಯದ (ಈಗಿನ ಕರ್ನಾಟಕ) ಕಬ್ಬಿಣದ ಅದಿರಿನ ಗಣಿಗಾರಿಕೆಯ ಬಗೆಗೆ ತಿಳಿಸುತ್ತದೆ. ಕರ್ನಾಟಕದ ಕಬ್ಬಿಣದ ಅದಿರಿನ ಸಂಗ್ರಹಣೆಯಲ್ಲಿ ತೊಡಗಿರುವ ಜಿಲ್ಲೆಗಳೆಂದರೆ ಬಳ್ಳಾರಿ, ಬಿಜಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಮಂಡ್ಯ, ಮೈಸೂರು, ಉತ್ತರ ಮತ್ತು ದಕ್ಷಿಣ ಕೆನರಾ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಾಗಿವೆ. ವಿಶ್ವದ ಕಬ್ಬಿಣದ ಅದಿರಿನ ಉತ್ಪಾದನೆಯ ಬಗೆಗೆ ಮಾಹಿತಿ ನೀಡುತ್ತದೆ. ಕಬ್ಬಿಣದ ಅದಿರಿನ ಗಣಿಗಾರಿಕೆ ಮತ್ತು

ಮಾರುಕಟ್ಟೆಯ ಬಗೆಗೆ ವಿವರಿಸುತ್ತದೆ. ಜೊತೆಗೆ ಬೆಳವಣಿಗೆಯ ಹಂತಗಳನ್ನು ವಿವರಿಸುತ್ತದೆ. ರಾಜ್ಯದ ಕೆಲವು ಕಬ್ಬಿಣ ಮತ್ತು ಸ್ಟೀಲ್ ಕಾರ್ಖಾನೆಗಳ ಬಗ್ಗೆ ತಿಳಿಸುತ್ತದೆ. ಹೀಗೆ ಹತ್ತು ಹಲವಾರು ವಿಷಯಗಳ ಬಗೆಗೆ ವಿವರಣೆಯನ್ನು ನೀಡುತ್ತದೆ.

"Compendium of Environment Statistics - 1998" Central Statistical Organisation department of statistics. Ministry of planning and programme implementation government of India. New delhi- 1998.

ದೇಶದಲ್ಲಿ ಒಟ್ಟು ಗಣಿಗಾರಿಕೆಯ ಸಂಖ್ಯೆಯನ್ನು ರಾಜ್ಯವಾರು ಗಣಿ ಸಂಖ್ಯೆಗಳನ್ನು ನೀಡುತ್ತದೆ. ಗಣಿಗಾರಿಕೆಯಿಂದ ಉತ್ಪಾದಿಸಲ್ಪಟ್ಟ ಖನಿಜಗಳ ಬಗೆಗೆ ವರ್ಷದಿಂದ ವರ್ಷಕ್ಕೆ ಉತ್ಪಾದಿಸಲ್ಪಟ್ಟಿರುವುದರ ಬಗೆಗೆ ಮಾಹಿತಿಯನ್ನು ನೀಡುತ್ತದೆ. ಅಂದರೆ ೧೯೯೪-೯೫ರಿಂದ ೧೯೯೭-೯೮ರವರೆಗಿನ ಖನಿಜ ಉತ್ಪಾದನೆಯ ಬಗೆಗೆ ಮಾಹಿತಿ ನೀಡುತ್ತದೆ. ೧೯೯೬-೯೭ರವರೆಗಿನ ಗಣಿಗಾರಿಕಾ ಪ್ರದೇಶದಲ್ಲಿ ಅರಣ್ಯ ನಿರ್ಮಾಣ ಮತ್ತು ಗಿಡಗಳ ಸಮೀಕ್ಷೆಯ ಮಾಹಿತಿಯನ್ನು ನೀಡುತ್ತದೆ. ಗಣಿಗಾರಿಕೆಯಲ್ಲಿ ಬಳಸಲ್ಪಡುತ್ತಿರುವ ಯಂತ್ರಗಳ ಬಗೆಗೆ ಅಂಕಿಸಂಖ್ಯೆಯನ್ನು ನೀಡುತ್ತದೆ. (೧೯೯೬-೧೯೯೭ರವರೆಗೆ ಮಾತ್ರ) ಅಲ್ಲದೇ ಇನ್ನು ಹಲವಾರು ವಿಷಯಗಳ ಬಗೆಗೆ ಮಾಹಿತಿ ನೀಡುತ್ತದೆ.

"Compendium of Environment Statistics - 1999", Central statistical organisation department of statistics. Ministry of planning and programme implementation. Government of India, New Delhi- 1999.

ಇದು ಸಹ ಮೇಲೆ ತಿಳಿಸಿರುವ ಮಾಹಿತಿಯನ್ನು ನೀಡುತ್ತದೆ. ಆದರೆ ಅದರಲ್ಲಿ ೯೮ರವರೆಗಿನ ವಿಷಯ ವಸ್ತುವನ್ನು ಹೊಂದಿದ್ದರೆ ಇದರಲ್ಲಿ ೧೯೯೯ರ ವರೆಗಿನ ಮಾಹಿತಿಯನ್ನು ನೋಡಬಹುದಾಗಿದೆ. ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ, ಆಂದ್ರಪ್ರದೇಶ, ಬಿಹಾರ, ಒರಿಸ್ಸಾ, ಕರ್ನಾಟಕ ಹೆಚ್ಚಿನ ಸಂಖ್ಯೆಯಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿವೆ.

ಕಬ್ಬಿಣದ ಅದಿರಿನ ಉತ್ಪಾದನೆ

ವರ್ಷ	೧೯೯೪-೯೫	೧೯೯೫-೯೬	೧೯೯೬-೯೭	೧೯೯೭೯೮	೧೯೯೮-೯೯
000t	೬೪೫೦೭	೬೭೪೧೮	೬೮೧೬೧	೭೫೭೨೩	೭೦೬೮೩

ಅಲ್ಲದೇ ಅರಣ್ಯ, ವಾಯು ಮತ್ತು ಸಾರಿಗೆ, ಕೈಗಾರಿಕೆ ಭೂಮಿಯ ಬಳಕೆ, ಕೃಷಿ, ಜನಸಂಖ್ಯೆ ಮತ್ತು ಬಡತನ, ನಗರೀಕರಣ ಹೀಗೆ ಹಲವಾರು ವಿಷಯಗಳ ಬಗೆಗೆ ಮಾಹಿತಿಯನ್ನು ನೀಡುತ್ತದೆ.

K. Rajagopalswamy, "Distribution of the world's mineral wealth", Prasaranga. University of Mysore - 1971.

ಖನಿಜಗಳ ವರ್ಗೀಕರಣದೊಂದಿಗೆ ಅಧ್ಯಾಯ ಪ್ರಾರಂಭವಾಗುತ್ತದೆ. ವಿಶ್ವದಲ್ಲಿ ಹೆಚ್ಚಿನ ಪ್ರಮಾಣದ ಖನಿಜಗಳನ್ನು ಹೊಂದಿರುವ ದೇಶಗಳ ಬಗೆಗೆ ಮಾಹಿತಿ ನೀಡುತ್ತದೆ. ಯಾವ ಯಾವ ಖನಿಜಗಳು ಯಾವ ಯಾವ ದೇಶದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ದೊರೆಯುತ್ತದೆಂಬುದನ್ನು ವಿವರಿಸುತ್ತದೆ. ಪ್ರತಿಯೊಂದು ಖನಿಜದ ಬಗೆಗೆ ಸವಿವರವಾದ ಮಾಹಿತಿಯನ್ನು ನೀಡುತ್ತದೆ. ಮಾಹಿತಿ ಸಂಗ್ರಹಣೆಯ ವಿಷಯವಸ್ತುವನ್ನು ತಿಳಿಸುತ್ತದೆ. ೧೯೬೮ರಲ್ಲಿ ವಿಶ್ವದಲ್ಲಿ ಉತ್ಪಾದನೆಯಾದ ಖನಿಜದ ಪ್ರಮಾಣವನ್ನು ಚಿತ್ರಿಸುತ್ತದೆ. ಯಾವ ಯಾವ ದೇಶಗಳು ಯಾವ ಯಾವ ಖನಿಜಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಉತ್ಪಾದಿಸಿದೆ ಎನ್ನುವುದರ ವಿವರಣೆ ನೀಡುತ್ತದೆ.

"Statistical Profiles of Minerals- 2000-2001", Controller General, Indian Bureau of Mines, Nagpur - 2001.

ಭಾರತದಲ್ಲಿ ದೊರೆಯುವ ಖನಿಜಗಳನ್ನು ರಾಜ್ಯವಾರು ವಿಂಗಡಣೆ ಮಾಡಿ ಮಾಹಿತಿ ನೀಡುತ್ತದೆ. ೧೯೯೯-೨೦೦೦ ಮತ್ತು ೨೦೦೦-೨೦೦೧ರಲ್ಲಿಯ ಗಣಿಗಾರಿಕಾ ಕಂಪನಿಗಳ ಸಂಖ್ಯೆ, ಅವುಗಳ ಖನಿಜ ಉತ್ಪತ್ತಿ, ಗುತ್ತಿಗೆ ಪಡೆದ ಭೂಮಿಯ ಅಂದಾಜು, ಖನಿಜಗಳ ಗುಣಮಟ್ಟ (ದರ್ಜೆ), ಆಮದು, ರಫ್ತು ಪ್ರಮುಖವಾಗಿ ದೊರೆಯುವ ಖನಿಜಗಳ ವಿಳಾಸ ಮತ್ತು ಗಣಿಗಾರಿಕಾ ಕಂಪನಿಗಳ ವಿಳಾಸ ಹೀಗೆ ಹಲವಾರು ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಈ ಮೇಲೆ ತಿಳಿಸಲಾದ ಪುಸ್ತಕಗಳಲ್ಲಿ ಗಣಿಗಾರಿಕೆಯ ಬಗೆಗೆ ಹೆಚ್ಚಿನ ಒತ್ತು ನೀಡುತ್ತವೆ. ಭಾರತ ದೇಶದಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಅದಿರುಗಳು ದೊರೆಯುತ್ತವೆ, ಯಾವ ಯಾವ ರಾಜ್ಯಗಳಲ್ಲಿ ಯಾವ ಅದಿರು ಎಷ್ಟು ಪ್ರಮಾಣದಲ್ಲಿ ದೊರೆಯುತ್ತವೆ ಎನ್ನುವುದರ ಬಗೆಗೆ ಮಾಹಿತಿ ನೀಡುತ್ತವೆ. ವಿಶ್ವದಲ್ಲಿ ದೊರೆಯುವ ಅದಿರುಗಳ ಪ್ರಮಾಣದಲ್ಲಿ ಭಾರತದ ಸ್ಥಾನವನ್ನು ತಿಳಿಸುತ್ತವೆ. ದೇಶದ ವಿವಿಧ ಭಾಗಗಳಲ್ಲಿರುವ ಗಣಿಗಾರಿಕೆಗಳ ಸಂಖ್ಯೆ ಮತ್ತು ಆ ಗಣಿಗಳಿಂದ ಇದುವರೆಗೆ ಉತ್ಪಾದಿಸಲ್ಪಟ್ಟ ಖನಿಜಗಳ ವಿವರಣೆಯನ್ನು ನೀಡುತ್ತವೆ. ಗಣಿಗಾರಿಕೆಯಿಂದ ಉತ್ಪಾದಿಸಲ್ಪಟ್ಟ ಖನಿಜಗಳ ವಿವರಣೆಯನ್ನು ನೀಡುತ್ತವೆ. ಗಣಿಗಾರಿಕೆಯಿಂದ ಉತ್ಪಾದಿಸಲ್ಪಟ್ಟ ಅದಿರು ಯಾವ ಯಾವ ದೇಶಗಳಿಗೆ ರಫ್ತಾಗುತ್ತವೆ ಎನ್ನುವ ವಿವರಣೆಯನ್ನು ನೀಡುತ್ತದೆ. ಗಣಿಗಾರಿಕೆಯ ಪ್ರದೇಶದಲ್ಲಿ ಅರಣ್ಯ ನಿರ್ಮಾಣ ಮಾಡಿದ ಪ್ರಮಾಣವನ್ನು ವಿವರಿಸುತ್ತವೆ. ಗಣಿಗಾರಿಕೆಯ ಪ್ರಮಾಣ ಮತ್ತು ಅರಣ್ಯೀಕರಣ ಪ್ರಮಾಣವನ್ನು ಶೇಕಡಾವರು ಅಂಶಗಳಲ್ಲಿ ವಿವರಿಸುತ್ತವೆ. ಗಣಿಗಾರಿಕೆಯಲ್ಲಿ ಬಳಸಲ್ಪಡುತ್ತಿರುವ ಯಂತ್ರಗಳ ಸಂಖ್ಯೆಯನ್ನು ನೀಡುತ್ತವೆ. ಕರ್ನಾಟಕದಲ್ಲಿ ದೊರೆಯುವ ಕಬ್ಬಿಣದ ಅದಿರು ವಿಶ್ವದ ಉತ್ತಮ ದರ್ಜೆಯದಾಗಿರುವುದರ ಬಗೆಗೆ ವಿವರಣೆ ನೀಡುತ್ತವೆ. ಹೀಗೆ ಹಲವಾರು ಬಗೆಯ ಮಾಹಿತಿಗಳನ್ನು ನೀಡುತ್ತವೆ. ಈ ಮಾಹಿತಿಯನ್ನು ಪ್ರಸ್ತುತ ಅಧ್ಯಯನದಲ್ಲಿ ಆನುಷಾಂಗಿಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ ೨

೨.೧. ಹೊಸಪೇಟೆ ತಾಲೂಕಿನ ಸಂಕ್ಷಿಪ್ತ ಪರಿಚಯ

೨.೨. ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಗಳ ವಿವರಗಳು

೨.೩. ಗಣಿಗಾರಿಕೆಯ ಸ್ವರೂಪ

ಪೀಠಿಕೆ

ಬಳ್ಳಾರಿ ಜಿಲ್ಲೆಯು ಗಣಿಗಾರಿಕೆಗೆ ಹೆಸರುವಾಸಿಯಾಗಿದೆ. ಈ ಜಿಲ್ಲೆಯಲ್ಲಿ ಮುಖ್ಯವಾಗಿ ಸೊಂಡೂರು ಮತ್ತು ಹೊಸಪೇಟೆ ತಾಲೂಕಿನಲ್ಲಿ ಗಣಿಗಾರಿಕೆಯು ವ್ಯಾಪಕವಾಗಿ ನಡೆಯುತ್ತಿದೆ. ಹೊಸಪೇಟೆ ತಾಲೂಕನ್ನು ಗಣಿಗಾರಿಕೆಯಿಂದ ಗುರುತಿಸುವಂತಾಗಿದೆ. ನಮ್ಮ ರಾಜ್ಯದಲ್ಲಿ ನೈಸರ್ಗಿಕ ಭಂಡಾರವನ್ನು ಹೊಂದಿರುವ ಪ್ರದೇಶಗಳಲ್ಲಿ ಬಳ್ಳಾರಿ ಜಿಲ್ಲೆಯು ಒಂದಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಹೆಚ್ಚಾಗಿ ಗಣಿಗಾರಿಕೆಯು ನಡೆಯುತ್ತಿರುವುದರಿಂದ ಕೆಲವೊಂದು ಗ್ರಾಮಗಳು ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾಗಿವೆ. ಜೊತೆಗೆ ಕೃಷಿಯು ಸಹ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಹೊಸಪೇಟೆ ತಾಲ್ಲೂಕು ಕೇವಲ ಕಬ್ಬಿಣದ ಅದಿರಿನ ಗಣಿಗಾರಿಕೆಯಲ್ಲದೆ ಮ್ಯಾಂಗನೀಸ್, ಸುಣ್ಣದ ಕಲ್ಲು, ಕಲ್ಲಿನ ಕ್ವಾರೆ ಕೆಲಸ, ಸಿಮೆಂಟ್ ಇಟ್ಟಿಗೆ ಮತ್ತು ಮಣ್ಣಿನ ಇಟ್ಟಿಗೆ ತಯಾರಿಕೆಯ ಉದ್ದಿಮೆಗಳನ್ನು ಒಳಗೊಂಡಿದೆ.

ಈ ಅಧ್ಯಯನದಲ್ಲಿ ಹೊಸಪೇಟೆ ತಾಲ್ಲೂಕಿನ ಸಂಕ್ಷಿಪ್ತ ಪರಿಚಯ, ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಗಳ ವಿವರ ಮತ್ತು ಗಣಿಗಾರಿಕೆಯ ಸ್ವರೂಪ ಅಂದರೆ ಯಾವ ಬಗೆಯ ಗಣಿಗಾರಿಕೆ ನಡೆಯುತ್ತಿದೆ ಎಂಬುದನ್ನು ಚರ್ಚಿಸಲಾಗಿದೆ.

೨.೧ ಹೊಸಪೇಟೆ ತಾಲ್ಲೂಕಿನ ಸಂಕ್ಷಿಪ್ತ ಪರಿಚಯ

ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ ಪ್ರಮುಖ ತಾಲ್ಲೂಕಾಗಿದೆ. ಹೊಸಪೇಟೆ ತಾಲ್ಲೂಕನ್ನು ಪ್ರಮುಖ ಕ್ಷೇತ್ರಗಳಿಂದ ಗುರುತಿಸಬಹುದಾಗಿದೆ. ಅವುಗಳೆಂದರೆ ಗಣಿಗಾರಿಕೆ, ತುಂಗಭದ್ರಾ ಜಲಾಶಯ ಮತ್ತು ಐತಿಹಾಸಿಕ ಪರಂಪರೆಯುಳ್ಳ ಹಂಪೆ. ಹೊಸಪೇಟೆ ತಾಲ್ಲೂಕಿನಲ್ಲಿ ನಿಸರ್ಗದತ್ತವಾದ ಪ್ರಾಕೃತಿಕ ಸಂಪನ್ಮೂಲ ಹೇರಳವಾಗಿದೆ. ಇದರಲ್ಲಿ ಕಬ್ಬಿಣದ ಅದಿರು ಪ್ರಮುಖವಾಗಿ ದೊರೆಯುತ್ತದೆ. ಈ ಕಾರಣಕ್ಕಾಗಿಯೂ ಸಹ ಹೊಸಪೇಟೆ ನಗರವು ಇಂದು ವಿಶ್ವಮಟ್ಟದಲ್ಲಿ ಗುರುತಿಸುವಂತಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಕಬ್ಬಿಣದ ಅದಿರಿನ ರಫ್ತು ಎಂದು ಹೇಳಬಹುದು. ಹೊಸಪೇಟೆ ತಾಲ್ಲೂಕು ಪ್ರದೇಶವು ಈಶಾನ್ಯದಲ್ಲಿ ಸಿರುಗುಪ್ಪ, ಪೂರ್ವದಲ್ಲಿ ಬಳ್ಳಾರಿ, ದಕ್ಷಿಣದಲ್ಲಿ ಸಂಡೂರು, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ, ವಾಯುವ್ಯ ಮತ್ತು ಉತ್ತರದಲ್ಲಿ ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ.

ಹೊಸಪೇಟೆ ತಾಲ್ಲೂಕು ಕೃಷಿ ಕ್ಷೇತ್ರಕ್ಕೆ ಗಣನೀಯ ಕೊಡುಗೆಯನ್ನು ನೀಡುತ್ತಿದೆ. ಕೃಷಿಗೆ ಪೂರಕವಾದ ಮತ್ತಿತರ ಕಾರ್ಖಾನೆಗಳು ಹೊಸಪೇಟೆಯಲ್ಲಿವೆ. ಅವುಗಳಲ್ಲಿ ಪ್ರಮುಖವಾಗಿ ತುಂಗಭದ್ರ ಸ್ಟೀಲ್ ಪ್ರೊಡಕ್ಟ್,

ಸಕ್ಕರೆ ಕಾರ್ಖಾನೆ, ರಸಾಯನಿಕ ಗೊಬ್ಬರಗಳ ಕಾರ್ಖಾನೆಗಳು ಹೀಗೆ ಹಲವಾರು ಬಗೆಯ ಕಾರ್ಖಾನೆಗಳು ಹೊಸಪೇಟೆಯಲ್ಲಿವೆ. ಈ ಪ್ರದೇಶವು ಕಪ್ಪು, ಕೆಂಪು ಮತ್ತು ಕಂದು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಕೃಷಿಗೆ ಯೋಗ್ಯವಾದ ಮಣ್ಣನ್ನು ಹೊಂದಿದೆ. “೮೯೪.೮ ಚದುರ ಕಿ.ಮೀ. ವಿಸ್ತೀರ್ಣವುಳ್ಳ ತಾಲ್ಲೂಕು ಪ್ರದೇಶವು ಜನವಸತಿಯುಳ್ಳ ಒಟ್ಟು ೭೫ ಗ್ರಾಮಗಳನ್ನು ಹೊಂದಿದೆ.” ಈ ಮೇಲೆ ತಿಳಿಸಿದ ಗ್ರಾಮಗಳನ್ನು ಹೊಸಪೇಟೆ, ಮರಿಯಮ್ಮನಹಳ್ಳಿ, ಕಮಲಾಪುರ ಮತ್ತು ಕಂಪ್ಲಿ ಎಂಬ ನಾಲ್ಕು ಹೋಬಳಿಗಳಲ್ಲಿ ವಿಂಗಡಿಸಲಾಗಿದೆ. “ನಾಲ್ಕು ಹೋಬಳಿಗಳ ರೈತ ಕುಟುಂಬಗಳ ಸಂಖ್ಯೆ ಒಟ್ಟು ೧೯,೮೬೦.” “ಹೊಸಪೇಟೆ ತಾಲ್ಲೂಕಿನಲ್ಲಿ ನಿವ್ವಳ ಸಾಗುವಳಿಗೆ ಲಭ್ಯವಿರುವ ಭೂ ಪ್ರದೇಶ ೫೩,೪೬೯ ಹೆಕ್ಟೇರ್‌ಗಳು ಇದೆ. ಇದರಲ್ಲಿ ನೀರಾವರಿಯ ಪ್ರಮಾಣ ೧೮,೨೮೬ ಹೆಕ್ಟೇರ್‌ಗಳು ಈ ನೀರಾವರಿಯ ಕೃಷಿಯಲ್ಲಿ ಕಾಲುವೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಂದರೆ ಕಾಲುವೆಗಳಿಂದ ನೀರಾವರಿ ಪ್ರಮಾಣ ೧೬,೬೭೬ ಹೆಕ್ಟೇರ್‌ಗಳು. ಉಳಿದ ೧,೬೧೦ ಹೆಕ್ಟೇರ್ ಪ್ರದೇಶದ ನೀರಾವರಿಯು ಕೆರೆ ಮತ್ತು ಬಾವಿಗಳನ್ನು ಆಶ್ರಯಿಸಿರುವಂತಹುದಾಗಿದೆ. ಈ ತಾಲ್ಲೂಕಿನಲ್ಲಿ ವಾರ್ಷಿಕ ಮಳೆಯ ಪ್ರಮಾಣ ೬೩೩.೪ ಮಿಲಿಯ ಮೀಟರ್‌ಗಳು.”

ತುಂಗಭದ್ರಾ ಜಲಾಶಯ ಇಲ್ಲಿಯ ರೈತರ ಜೀವನಾಡಿಯಾಗಿದೆ. ಕರ್ನಾಟಕ ಮತ್ತು ಆಂಧ್ರಪ್ರದೇಶ ಎರಡು ರಾಜ್ಯಗಳು ಸೇರಿ ಈ ಜಲಾಶಯವನ್ನು ನಿರ್ಮಿಸಿವೆ. ಈ ಜಲಾಶಯವು ಹಲವಾರು ಜಿಲ್ಲೆಯ ಲಕ್ಷಾಂತರ ಕುಟುಂಬಗಳ ಕೃಷಿ ಚಟುವಟಿಕೆಗೆ ಸಹಾಯಕವಾಗಿದೆ. “ನೀರಾವರಿ ಜಾದೂಗಾರನೆಂಬ ಕೀರ್ತಿ ಪಡೆದಿದ್ದ ಸರ್. ಆರ್ಥರ್ ಕಾಟನ್‌ರವರ ತೀವ್ರ ಆಸಕ್ತಿಯಿಂದಾಗಿ ಈ ಯೋಜನೆ ರೂಪುಗೊಂಡಿತು. ಇದೊಂದು ಅಂತರ್‌ರಾಜ್ಯ ಯೋಜನೆ. ಈ ಯೋಜನೆಯ ನಿರ್ಮಾಣವು ೨೮ನೇ ಫೆಬ್ರವರಿ ೧೯೪೫ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯು ಅಂತಿಮವಾಗಿ ಪೂರ್ಣಗೊಂಡಿದ್ದು ೧೯೬೫ರಲ್ಲಿ.”[೪] ಈ ಜಲಾಶಯದಿಂದ ವಿದ್ಯುತ್ ಉತ್ಪಾದೆಯನ್ನು ಸಹ ಮಾಡಲಾಗುತ್ತದೆ.

ಐತಿಹಾಸಿಕ ಪರಂಪರೆಯುಳ್ಳ ಹಂಪೆಯಿಂದಲೂ ಸಹ ಪ್ರಮುಖವಾಗಿ ಹೊಸಪೇಟೆ ತಾಲ್ಲೂಕನ್ನು ಗುರುತಿಸುವಂತಾಗಿದೆ. ಇದು ಪ್ರಮುಖ ಪ್ರವಾಸಿ ತಾಣವಾಗಿದೆ. ದೇಶ ವಿದೇಶದಿಂದ ಜನ ಇಲ್ಲಿಗೆ ಆಗಮಿಸುತ್ತಾರೆ. ಸಾರಿಗೆ, ಪ್ರವಾಸೋದ್ಯಮ ಹೀಗೆ ಇತರ ಇಲಾಖೆಗಳು ಉತ್ತಮವಾದ ಗಳಿಕೆಯನ್ನು ಕಂಡುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ವತಿಯಿಂದ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಐತಿಹಾಸಿಕ ಪರಂಪರೆಯುಳ್ಳ ಪ್ರದೇಶಗಳಿಗೆ ಯುನೆಸ್ಕೋದ ಧನಸಹಾಯ ದೊರೆಯುತ್ತದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹಂಪೆಯನ್ನು ಗುರುತಿಸುವುದರಿಂದ ಹೊಸಪೇಟೆ ತಾಲ್ಲೂಕು ಹಲವು ಕಾರಣಗಳಿಗೆ ಮುಖ್ಯ ಪ್ರದೇಶವಾಗಿದೆ.

“ಹೊಸಪೇಟೆ ತಾಲ್ಲೂಕಿನಲ್ಲಿ ಒಟ್ಟು ೨೦,೧೨೦.೮೮ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಬಳ್ಳಾರಿ ಜಿಲ್ಲೆಯಲ್ಲಿ ೩,೫೧೦.೮೩೦ ಹೆಕ್ಟೇರ್ ಪ್ರದೇಶವನ್ನು ಗಣಿಗಾರಿಕೆಗೆ ನೀಡಲಾಗಿದೆ. ಹೊಸಪೇಟೆ ತಾಲ್ಲೂಕಿನಲ್ಲಿ ೭೯೫ ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆದಿದೆ.” ಗಣಿಗಾರಿಕೆಯಿಂದ ನಾಶವಾದ ಅರಣ್ಯವನ್ನು

ಪುನಃ ಬೆಳೆಸಲು ಶ್ರಮಿಸಲಾಗುತ್ತಿದೆ. ಹೊಸ ಹೊಸ ಅರಣ್ಯವನ್ನು ಸೃಷ್ಟಿಸುವ ಕಾರ್ಯ ಕೈಗೊಳ್ಳಲಾಗಿದೆ. ಈ ಹೊಸ ಯೋಜನೆಯಲ್ಲಿ ಹೆಚ್ಚಾಗಿ ಸ್ಥಳೀಯ ಸಸಿಗಳನ್ನು ನೆಡಲಾಗುತ್ತಿದೆ. ಆ ಸಸಿಗಳೆಂದರೆ ಕಮರ, ಹಾಸು, ಬೇವು, ಹೊಂಗೆ, ಹುಣಸೆ, ಉದಯ, ಸೋಮಿ ಮುಂತಾದ ಸಸಿಗಳನ್ನು ನೆಡಲಾಗುತ್ತಿದೆಯೆಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸುತ್ತಾರೆ. ಪ್ರಮುಖ ಆಯುರ್ವೇದ ಗಿಡಮೂಲಿಕೆಗಳು ಹೊಸಪೇಟೆ ತಾಲ್ಲೂಕಿನಲ್ಲಿ ದೊರೆಯುತ್ತವೆ.

"ಹೊಸಪೇಟೆ ತಾಲ್ಲೂಕಿನಲ್ಲಿ ೧೯೯೧ರ ಜನಗಣತಿಯ ಪ್ರಕಾರ ೩,೧೨,೮೯೭ ಜನಸಂಖ್ಯೆಯಿತ್ತು. ೨೦೦೧ರ ಜನಗಣತಿಯ ಪ್ರಕಾರ ತಾಲ್ಲೂಕಿನಲ್ಲಿ ಒಟ್ಟು ಜನಸಂಖ್ಯೆಯು ೩,೭೩,೬೬೫ರಷ್ಟಾಗಿದೆ. ಇದರಲ್ಲಿ ಗಂಡಸರ ಸಂಖ್ಯೆ ೧,೮೯,೨೦೦ ಹಾಗೂ ಹೆಂಗಸರ ಸಂಖ್ಯೆ ೧,೮೪,೪೬೫. ೧೯೯೧ರ ಜನಸಂಖ್ಯೆಗೆ ಹೋಲಿಸಿದರೆ ಒಟ್ಟು ಜನಸಂಖ್ಯೆಯಲ್ಲಿ ೧೯.೪೨ರಷ್ಟು ಏರಿಕೆಯಾಗಿದೆ. ಹಾಗೆಯೇ ೧೮.೨೨ರಷ್ಟು ಗಂಡಸರು, ೨೦.೧೪ರಷ್ಟು ಮಹಿಳೆಯರು ಹೆಚ್ಚಾಗಿದ್ದಾರೆ."[೭]

ಹೊಸಪೇಟೆ ತಾಲ್ಲೂಕಿನಲ್ಲಿ ಗಣಿಗಾರಿಕೆ ಪ್ರದೇಶಗಳಿಗೆ ಹಲವಾರು ಸಮುದಾಯಗಳ ವಲಸಿಗರು ಉದ್ಯೋಗವನ್ನರಸಿ ಬರುತ್ತಿರುವುದು ಕಂಡುಬರುತ್ತದೆ. ಬೇರೆ ಬೇರೆ ಸ್ಥಳಗಳಿಂದ ದುಡಿಯುವ ವರ್ಗಗಳು ಬಂದು ನೆಲೆಸಿವೆ. ಅಂದರೆ ಗಣಿಗಾರಿಕೆಯಿಂದಾಗಿ ಹಲವಾರು ಜನರು ಹೊಟ್ಟೆ ತುಂಬಿಸಿಕೊಳ್ಳುವಂತಾಗಿದೆ. ಸಾವಿರಾರು ಕುಟುಂಬಗಳು ಈ ಗಣಿಗಾರಿಕೆಯನ್ನು ನೆಚ್ಚಿಕೊಂಡು ಬದುಕುತ್ತಿವೆ.

ಹೊಸಪೇಟೆ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ಪ್ರಮುಖವಾಗಿದೆ. "ಕರ್ನಾಟಕ ರಾಜ್ಯದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯದೇ ಸಿಂಹಪಾಲು. ರಾಜ್ಯದ ಒಟ್ಟು ಕಬ್ಬಿಣ ಅದಿರಿನ ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯ ಪಾಲು ಶೇ.೭೦. ಗಣಿಗಾರಿಕೆಯು ಬಳ್ಳಾರಿ ಜಿಲ್ಲೆಯ ಪ್ರಮುಖ ಉದ್ಯಮ ಮತ್ತು ಉದ್ಯೋಗದ ಮೂಲವಾಗಿದೆ. ಸುಮಾರು ೨೦,೦೦೦ ಜನಕ್ಕೆ ಗಣಿಗಾರಿಕೆ ಉದ್ಯೋಗ ನೀಡಿದೆ. ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಖನಿಜಗಳು ಜಿಲ್ಲೆಯಿಂದ ರಫ್ತಾಗುತ್ತಿದೆ."[೮]

ಹೊಸಪೇಟೆ ತಾಲ್ಲೂಕಿನಲ್ಲಿ ಗಣಿಗಾರಿಕೆಯಲ್ಲದೇ ಅದರ ಜೊತೆಗೆ ವಿದ್ಯುತ್ ಸರಬರಾಜು, ಸಣ್ಣ ಪ್ರಮಾಣದ ಕೈಗಾರಿಕೆಗಳು, ಬಟ್ಟೆ ತಯಾರಿಕೆಯ ಮಗ್ಗಗಳು, ಎಣ್ಣೆ ಕಾರ್ಖಾನೆಗಳು, ಗೊಬ್ಬರ ಕಾರ್ಖಾನೆಗಳು, ಸಕ್ಕರೆ ಕಾರ್ಖಾನೆಗಳು, ಮದ್ಯ (ಸರಾಯಿ) ಕಾರ್ಖಾನೆ, ತುಂಗಭದ್ರ ಸ್ಟೀಲ್ ಪ್ರೊಡಕ್ಟ್.ಲಿ. ಪಾನೀಯ ಕಾರ್ಖಾನೆಗಳು, ಸಿಮೆಂಟ್ ಮತ್ತು ಮಣ್ಣಿನ ಇಟ್ಟಿಗೆ ತಯಾರಿಕೆ, ಕಲ್ಲಿನ ಕ್ವಾರೆ ಕೆಲಸ ಹೀಗೆ ಹಲವಾರು ಉದ್ದಿಮೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ.

೨.೨ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಗಳ ವಿವರಗಳು

ಹೊಸಪೇಟೆ ತಾಲ್ಲೂಕಿನಲ್ಲಿ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಗಳ ವಿವರಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದಾಗಿದೆ.

೧. ಹೊಸಪೇಟೆ-ಬಳ್ಳಾರಿ ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು.

೨. ಹೊಸಪೇಟೆ-ಸಂಡೂರು ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು.

೩. ಹೊಸಪೇಟೆ-ಮರಿಯಮ್ಮನಹಳ್ಳಿ ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು.

೪. ಹೊಸಪೇಟೆ-ಕಂಪ್ಲಿ ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು.

೧. ಹೊಸಪೇಟೆ-ಬಳ್ಳಾರಿ ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು

೧. ಕಾರಿಗನೂರು : ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ಮುಖ ಹೆದ್ದಾರಿಯಲ್ಲಿ ಕಾರಿಗನೂರು ಗ್ರಾಮವಿದೆ. ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೫೬ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಒಟ್ಟು ವಿಸ್ತೀರ್ಣ ೯೭೪೭.೧೪ ಚ.ಕಿ.ಮೀ, ಗ್ರಾಮದ ವಿಸ್ತೀರ್ಣ ೯.೫೧ ಚ.ಕಿ.ಮೀ.ನಷ್ಟಿದೆ. ಈ ಗ್ರಾಮವು ಈಗ ಹೊಸಪೇಟೆ ನಗರಸಭೆಯ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದ ಒಟ್ಟು ಜನಸಂಖ್ಯೆ ೪,೧೫೩ ಇದೆ. ಒಟ್ಟು ೭೫೭ ಕುಟುಂಬಗಳನ್ನು ಹೊಂದಿದೆ.

ಈ ಗ್ರಾಮದಲ್ಲಿ ಕುರುಬ ಮತ್ತು ನಾಯಕ ಸಮುದಾಯಗಳು ಹೆಚ್ಚಾಗಿ ಕಂಡುಬರುತ್ತವೆ. ಉಳಿದಂತೆ ಈ ಗ್ರಾಮದಲ್ಲಿ ಹರಿಜನ, ಲಿಂಗಾಯತ, ಬ್ರಾಹ್ಮಣ, ಮುಸ್ಲಿಂ, ವಡ್ಡರು, ಅಗಸ, ಕಬ್ಬೇರ, ರೆಡ್ಡಿ, ನೇಕಾರ, ಹಕ್ಕಿ ಪಿಕ್ಕಿ, ಲಂಬಾಣಿ, ಮರಾಠಿ, ಗೊಲ್ಲ, ಹಡಪದ ಮೊದಲಾದ ಜಾತಿಯವರಿದ್ದಾರೆ. ಈ ಗ್ರಾಮದಲ್ಲಿ ಕುರುಬರು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಹಕ್ಕಿಪಿಕ್ಕಿ ಇಲ್ಲಿರುವ ವಿಶಿಷ್ಟ ಬುಡಕಟ್ಟು ಸಮುದಾಯವಾಗಿದೆ. ಈ ಗ್ರಾಮದ ಜನರು ತಮ್ಮ ಮಾತೃಭಾಷೆಯನ್ನು ರೂಡಿಯಲ್ಲಿಟ್ಟಿದ್ದಾರೆ. ಅಂದರೆ ಕನ್ನಡ, ತೆಲುಗು, ತಮಿಳು, ಲಂಬಾಣಿ, ಶಿಕಾರಿ ಭಾಷೆಗಳನ್ನಾಡುತ್ತಾರೆ. ಕನ್ನಡ ಭಾಷೆಯು ಹೆಚ್ಚಿನವರ ಮನೆಮಾತಾಗಿದೆ. ಕೃಷಿ ಮತ್ತು ಗಣಿಗಾರಿಕೆ ಇಲ್ಲಿಯ ಪ್ರಮುಖ ಉದ್ಯೋಗವಾಗಿದೆ. ಹೆಚ್ಚಿನ ಜನರಿಗೆ ಸ್ವಂತ ಭೂಮಿಯಿಲ್ಲವಾಗಿದೆ. ಭೂಮಿಯನ್ನು ಹೆಚ್ಚಾಗಿ ಲಿಂಗಾಯಿತ ಸಮುದಾಯದವರು ಹೊಂದಿದ್ದಾರೆ. ಕೆಂಪು ಮಣ್ಣಿನಿಂದ ಕೂಡಿದ ಈ ಪ್ರದೇಶದಲ್ಲಿ ಜೋಳ, ಮೆಕ್ಕೆಜೋಳ, ನವಣೆ ಮತ್ತು ಹತ್ತಿ ಪ್ರಮುಖ ಬೆಳೆಗಳಾಗಿವೆ. ಈ ಗ್ರಾಮದಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ಬಹುತೇಕ ಮಂದಿ ಗಣಿಗಾರಿಕೆಯ ಮೇಲೆ ಅವಲಂಬಿತರಾಗಿದ್ದಾರೆ. ತಕ್ಕಮಟ್ಟಿಗೆ ಉತ್ತಮವಾದ ಆರ್ಥಿಕ ಸ್ಥಿತಿಯಲ್ಲಿದ್ದಾರೆಂದು ಹೇಳಬಹುದು. ಈ ಗ್ರಾಮದಲ್ಲಿ ಕೇಂದ್ರ ಸರ್ಕಾರದ ಆಸ್ಪತ್ರೆಯಿದೆ. ಇದು ಇದ್ದರೂ ಸಾರ್ವಜನಿಕರಿಗೆ ಇಲ್ಲದಂತಾಗಿದೆ. ಕಾರಣ ಈ ಆಸ್ಪತ್ರೆಯು ಗಣಿಕಾರ್ಮಿಕರಿಗೆ ಮಾತ್ರ ಮೀಸಲಾಗಿದೆ. ಈ ಗ್ರಾಮದಲ್ಲಿ ಗ್ರಂಥಾಲಯ ಸೌಲಭ್ಯವಿದೆ.

ಗಣಿಗಾರಿಕೆಯು ಗ್ರಾಮದ ಪಕ್ಕದಲ್ಲಿ ನಡೆಯುತ್ತಿರುವುದರಿಂದ ಮತ್ತು ಅದಿರನ್ನು ಸಾಗಿಸುವ ಲಾರಿಗಳು ಹೆಚ್ಚಿನ ಪ್ರಮಾಣದಲ್ಲಿ ತಿರುಗಾಡುವುದರಿಂದ ಧೂಳಿನ ಸಮಸ್ಯೆಯಿದೆ. ಉಸಿರು ಕಟ್ಟುವ ವಾತಾವರಣ ನಿರ್ಮಾಣವಾದಂತೆ ಕಂಡುಬರುತ್ತದೆ. ನೀರಿನ ಸಮಸ್ಯೆ ಮತ್ತು ವೈದ್ಯರ ಸಮಸ್ಯೆಯಿದೆ. ಈ ಊರಿನಲ್ಲಿ ಕೆಲವೊಂದು ಆರ್.ಎಂ.ಪಿ. ವೈದ್ಯರು ಇರುವುದು ಕಂಡುಬರುತ್ತದೆ. ವೈದ್ಯರು ಕೊಟ್ಟಂತಹ ಚಿಕಿತ್ಸೆಗಳು ಫಲಕಾರಿಯಾಗುವುದಿಲ್ಲ. ಕಾರಣ ಇಲ್ಲಿಯ ಜನರು ಹೆಚ್ಚಾಗಿ ಗಣಿಗಾರಿಕೆಯ ಕೆಲಸವನ್ನು ಅವಲಂಬಿಸಿದ್ದಾರೆ. ಕಾರಣ ಇಲ್ಲಿಯ ಜನರು ಹೆಚ್ಚಾಗಿ ಗಣಿಗಾರಿಕೆಯ ಕೆಲಸವನ್ನು ಅವಲಂಬಿಸಿದ್ದಾರೆ. ಇದರಿಂದ ಅವರಿಗೆ ಬರುವ ರೋಗಗಳನ್ನು ನಿವಾರಿಸುವಂತಹ ಜ್ಞಾನವನ್ನು ಅವರು ಹೊಂದಿರುವುದಿಲ್ಲವೆಂದು ಹೇಳಬಹುದು.

ಬುಡಕಟ್ಟು ಸಮುದಾಯಗಳಲ್ಲೊಂದಾದ ಹಕ್ಕಿಪಕ್ಕಿ ಸಮುದಾಯದವರು ಗಣಿಗಾರಿಕೆ ಮತ್ತು ಬೇಟೆಯನ್ನು ನೆಚ್ಚಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಜನಾಂಗದವರಾಗಿ ಕಂಡುಬರುತ್ತಾರೆ. ಇವರು ಬೇರೆ ಸಮುದಾಯಗಳೊಂಗಿಗೆ ಬೆರೆಯದೇ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಗಣಿಗಾರಿಕೆ ನಡೆಯುತ್ತಿರುವುದರಿಂದ ಇಲ್ಲಿ ಅರಣ್ಯ ಕಡಿಮೆ ಪ್ರಮಾಣದಲ್ಲಿದೆ.

೨. ವಾಲ್ಮೀಕಿನಗರ : ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ಹೆದ್ದಾರಿಯಲ್ಲಿ ವಾಲ್ಮೀಕಿ ನಗರವಿದೆ. ತಾಲೂಕಿನಿಂದ ೫ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೫೫ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಕಾರಿಗನೂರು ವ್ಯಾಪ್ತಿಗೆ ಸೇರುತ್ತದೆ. ೧೮೧ ಕುಟುಂಬಗಳಿಂದ ಒಟ್ಟು ೯೬೬ ಜನಸಂಖ್ಯೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ನಾಯಕ ಸಮುದಾಯ ಹೆಚ್ಚಾಗಿ ಕಂಡುಬರುತ್ತದೆ. ಉಳಿದಂತೆ ಹರಿಜನ, ಭೋವಿ, ನೇಕಾರ, ಕ್ರಿಶ್ಚಿಯನ್, ಮುಸ್ಲಿಂ, ರೆಡ್ಡಿ ಸಮುದಾಯಗಳಿವೆ. ಇಲ್ಲಿನ ಪ್ರಮುಖ ಭಾಷೆ ಕನ್ನಡ ಮತ್ತು ತೆಲುಗು ಆಗಿರುತ್ತದೆ.

೩. ಶಂಕರನಗರ : ಈ ಗ್ರಾಮ ತಾಲೂಕು ಕೇಂದ್ರದಿಂದ ೭ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೫೩ ಕಿ.ಮೀ. ಅಂತರದಲ್ಲಿದೆ. ೧.೩ ಚ.ಕಿ.ಮೀ. ಭೂ ವಿಸ್ತೀರ್ಣವಿದೆ. ಒಟ್ಟು ೯೦ ಕುಟುಂಬಗಳಿಂದ ೫೦೦ ಜನಸಂಖ್ಯೆಯನ್ನು ಹೊಂದಿದೆ. ಗ್ರಾಮದ ವಾಸದ ನೆಲೆಯು ಸಮತಟ್ಟು ಪ್ರದೇಶವಾಗಿದೆ. ನಾಯಕ ಸಮುದಾಯವು ಹೆಚ್ಚಾಗಿ ಕಂಡುಬರುತ್ತದೆ. ಉಳಿದಂತೆ ಮುಸ್ಲಿಂ, ಹರಿಜನ ಮತ್ತು ಕುರುಬರು ಇದ್ದಾರೆ. ಇಲ್ಲಿಯ ಭಾಷೆ ಕನ್ನಡ ಮತ್ತು ತೆಲುಗು ಆಗಿರುತ್ತದೆ. ಗ್ರಾಮದ ಒಟ್ಟು ಕುಟುಂಬಗಳಲ್ಲಿ ಕಾಲು ಭಾಗದಷ್ಟು ಜನರಿಗೆ ಭೂಮಿ ಇದೆ ಎಂದು ಹೇಳುವುದು ಕಷ್ಟ. ಈ ಗ್ರಾಮದಲ್ಲಿ ಗಣಿಕಾರ್ಮಿಕರು ಮತ್ತು ವಲಸಿಗರು ಹೆಚ್ಚಾಗಿ ಕಂಡುಬರುತ್ತಾರೆ. ಇಲ್ಲಿನ ಭೂಮಿಯು ಕೆಂಪುಮಣ್ಣಿನಿಂದ ಕೂಡಿದುದಾಗಿದೆ. ಜೋಳ, ಮೆಕ್ಕೆಜೋಳ, ಶೇಂಗಾ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಇಲ್ಲಿನ ಜನರು ಮುಖ್ಯವಾಗಿ ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ಗ್ರಾಮದಲ್ಲಿ ವಲಸಿಗರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ.

ಪ್ರಮುಖ ಸಮಸ್ಯೆಗಳೆಂದರೆ ಲಾರಿಗಳ ವಿಪರೀತ ಓಡಾಟದಿಂದ ರಸ್ತೆಗಳು ಸರಿಯಾಗಿಲ್ಲ. ಮುಖ್ಯವಾಗಿ ಹೇಳಬೇಕೆಂದರೆ ಇಡೀ ಊರು ಧೂಳಿನಿಂದ ಮುಚ್ಚಿಹೋಗಿದೆ. ನೀರಿನ ಅಭಾವ ಬಹಳಷ್ಟು ಕಂಡುಬರುತ್ತದೆ.

ಈ ಮಾರ್ಗದ ಹಳ್ಳಿಗಳಿಗೆ ತಲಾ ಒಂದು ಇಂಚು ನೀರನ್ನು ಜಿಂದಾಲ್ ಕಂಪನಿಯವರು ಪೂರೈಸುತ್ತಿದ್ದಾರೆ. ಕಾರಣ ತುಂಗಭದ್ರಾ ಜಲಾಶಯದಿಂದ ಜಿಂದಾಲ್‌ಗೆ ನೀರಿನ ಕೊಳವೆ ಮಾರ್ಗವನ್ನು ಒದಗಿಸಲಾಗಿದೆ. ಆ ಸಂದರ್ಭದಲ್ಲಿ ಗ್ರಾಮಸ್ಥರ ಕೋರಿಕೆಯ ಮೇಲೆ ನೀರನ್ನು ಒದಗಿಸಿದ್ದಾರೆ. ಈ ವ್ಯವಸ್ಥೆ ಇದ್ದರೂ ಸಹ ಬೇಸಿಗೆಯಲ್ಲಿ ನೀರು ಸರಿಯಾಗಿ ದೊರೆಯದೇ ಹಾಹಾಕಾರ ತಲೆ ದೋರುತ್ತದೆ. ಕಾಡು ನಾಶವಾಗಿದೆ. ವಿದ್ಯಾರ್ಥಿ ಮತ್ತು ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆಯಿದೆ. ಶಾಲೆಯಲ್ಲಿ ಸಿಬ್ಬಂದಿಗಳ ಕೊರತೆಯು ಪ್ರಮುಖ ಕಾರಣವೆನ್ನಬಹುದು.

೪. ಇಂಗಳಗಿ : ಹೊಸಪೇಟೆ ಬಳ್ಳಾರಿಯ ಮುಖ್ಯ ರಸ್ತೆಯಲ್ಲಿ ಇಂಗಳಗಿ ಗ್ರಾಮವಿದೆ. ತಾಲೂಕು ಕೇಂದ್ರದಿಂದ ೭ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೫೭ ಕಿ.ಮೀ. ಅಂತರದಲ್ಲಿದೆ. ಮುಖ್ಯ ರಸ್ತೆಯಿಂದ ೧ ಕಿ.ಮೀ. ಉತ್ತರಕ್ಕಿದೆ. ಈ ಗ್ರಾಮದ ವಿಸ್ತೀರ್ಣ ೧೭೦೮.೨೩ ಹೆಕ್ಟೇರ್ ಮತ್ತು ಗ್ರಾಮ ವ್ಯಾಪ್ತಿಯು ೨.೯೯ ಚ.ಕಿ.ಮೀ. ವಿಸ್ತೀರ್ಣವಿದೆ. ೧೯೯೧ರ ಜನಗಣತಿಯ ಪ್ರಕಾರ ೧೮೧೦ ಜನಸಂಖ್ಯೆಯಿದೆ. ಕುರುಬರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಉಳಿದಂತೆ ನಾಯಕ, ಕುಂಬಾರ, ಬಡಿಗ, ಜಂಗಮ, ಹರಿಜನ, ಲಂಬಾಣಿ, ಕೊರವ, ಮಡ್ಡೇರು, ಶೆಟ್ಟರು, ಶೆಟ್ಟಬಣಜಿಗರು, ಹಡಪದ, ಅಗಸ, ಕಂಬಾರ ಜಾತಿಯವರಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ತೆಲುಗನ್ನು ಕೆಲವೊಂದು ಸಂದರ್ಭದಲ್ಲಿ ಮಾತ್ರ ಬಳಸುವುದರಿಂದ ಕನ್ನಡ ಪ್ರಮುಖ ಭಾಷೆಯಾಗಿದೆ.

ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಕೆಲವೊಂದು ಕುಟುಂಬಗಳು ಭೂಮಿಯನ್ನು ಹೊಂದಿಲ್ಲದಿದ್ದರೂ ಸಹ ಕೃಷಿಯಲ್ಲಿ ಹೆಚ್ಚಾಗಿ ತೊಡಗಿದ್ದಾರೆ. ಜೊತೆಗೆ ಗಣಿಗಾರಿಕೆಯ ಕೆಲಸಕ್ಕೆ ಹೋಗುತ್ತಿದ್ದಾರೆ. ಹೆಚ್ಚಿನ ನೀರಾವರಿಯು ಬೋರ್‌ವೆಲ್‌ನಿಂದ ಅವಲಂಬಿತವಾಗಿದೆ. ಭೂಮಿಯು ಕೆಂಪು ಮತ್ತು ಕಪ್ಪುಮಿಶ್ರಿತ ಕಂದು ಬಣ್ಣದ್ದಾಗಿದೆ. ಜೋಳ, ಹತ್ತಿ, ಶೇಂಗಾ, ನವಣೆ, ಕಬ್ಬು ಪ್ರಮುಖ ಬೆಳೆಗಳಾಗಿವೆ. ಕೃಷಿ ಜಮೀನನ್ನು ಅದಿರಿನ ಪುಡಿ ಸಂಗ್ರಹಿಸಲು ಗುತ್ತಿಗೆ ನೀಡಿರುವುದು ಕಂಡುಬರುತ್ತದೆ. ಈ ಊರಿನ ಒಬ್ಬ ವ್ಯಕ್ತಿ ಗಣಿಗಾರಿಕೆ ನಡೆಸುತ್ತಿದ್ದಾಗ ಇದು ಅಕ್ರಮ ಗಣಿಗಾರಿಕೆ ಎಂದು ಹೇಳಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಈ ಗ್ರಾಮದ ಪಕ್ಕದಲ್ಲಿ ಕಬ್ಬಿಣದ ಅದಿರನ್ನು ಪುಡಿ ಮಾಡುವ ಕ್ರಶರ್ ಮತ್ತು ಬಿಳಿ ಕಲ್ಲಿನ ಕ್ವಾರೆ ಕೆಲಸದ ಕ್ರಶರ್ ಇರುವುದರಿಂದ ಬೆಳೆಗಳ ಮೇಲೆಲ್ಲಾ ಧೂಳು ಬಂದು ಬೀಳುತ್ತಿದೆ. ಬಿಳಿ ಕಲ್ಲಿನ ಕ್ರಶರ್‌ನಿಂದ ಬೆಳೆಗಳ ಮೇಲೆ ಧೂಳು ಬೀಳುತ್ತದೆ ಎಂದು ಪ್ರತಿಭಟಿಸಿದರೆ, ನಮ್ಮ ಧೂಳು ನಿಮಗೆ ಬಿರುವುದಿಲ್ಲವೆಂದು ಈ ಗ್ರಾಮದವರನ್ನು ತಟಸ್ಥಗೊಳಿಸಲಾಗಿದೆ. ಈ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಒಂದೇ ಒಂದು ಸಾರ್ವಜನಿಕ ಬೋರ್‌ವೆಲ್ ಈ ಊರಿಗೆ ನೀರಿನ ಮೂಲವಾಗಿದೆ. ಅದರಲ್ಲಿ ಕೆಲವೊಂದು ಸಲ ನೀರು ಹೋಗಿ ಬಿಡುತ್ತದೆ. ಹೀಗಾಗಿ ಇಲ್ಲಿ ನೀರನ್ನು ಸಂಗ್ರಹಿಸುವುದು ಕಷ್ಟಸಾಧ್ಯವಾಗಿದೆ. ವಿದ್ಯುತ್ ಸಮಸ್ಯೆಯು ಸಹ ಬಹಳಷ್ಟು ಸಮಸ್ಯೆಯನ್ನು ತಂದೊಡ್ಡುತ್ತಿದೆ.

೫. ವಡ್ಡರಹಳ್ಳಿ : ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮವಿದೆ. ತಾಲ್ಲೂಕಿನಿಂದ ೧೦ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೫೦ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ವಿಸ್ತೀರ್ಣ ೧೮೮.೩೧ ಚ.ಕಿ.ಮೀ. ೧೯೯೧ರ ಜನಗಣತಿಯ ಪ್ರಕಾರ ೭೪೩ ಜನಸಂಖ್ಯೆಯನ್ನು ಹೊಂದಿದೆ. ವಡ್ಡರು, ಗಾಣಿಗ, ಪಂಚಾಚಾರ, ಜಂಗಮ, ರೆಡ್ಡಿ, ಲಿಂಗಾಯಿತ, ಹರಿಜನ, ಮುಸ್ಲಿಂ, ನಾಯಕ, ಕುರುಬ. ಅಗಸ, ಕಂಬಾರ, ಅಕ್ಕಸಾಲಿಗ, ಕಜ್ಜೇರ ಜನಾಂಗದವರು ವಾಸಿಸುತ್ತಿದ್ದಾರೆ. ವಡ್ಡರ ಸಮುದಾಯ ಹೆಚ್ಚಾಗಿ ಕಂಡುಬರುತ್ತದೆ. ಇಲ್ಲಿ ಸಾಮಾನ್ಯವಾಗಿ ಕನ್ನಡ, ತೆಲುಗು, ತಮಿಳು ಮತ್ತು ಹಿಂದಿ ಭಾಷೆಯನ್ನು ಆಡುತ್ತಾರೆ.

ಈ ಗ್ರಾಮ ಸಮತಟ್ಟು ಪ್ರದೇಶದಲ್ಲಿದೆ. ಇಲ್ಲಿಯ ಜನರು ಕೃಷಿ ಮತ್ತು ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಗಣಿಗಾರಿಕೆ ಕೆಲಸಕ್ಕೆ ಹೋಗುವವರ ಪ್ರಮಾಣ ಕಡಿಮೆಯಿದೆ. ಹೆಚ್ಚಿನ ಜನರು ಅಲ್ಪಸ್ವಲ್ಪ ಭೂಮಿಯನ್ನು ಹೊಂದಿದ್ದಾರೆ. ಇಲ್ಲಿನ ಭೂಮಿಯು ಕಂದು ಬಣ್ಣದಿಂದ ಕೂಡಿದೆ. ಹತ್ತಿ, ನವಣೆ, ಜೋಳ, ಸೂರ್ಯಕಾಂತಿ ಇಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾಗಿವೆ. ಕೆಲವೊಂದು ಬೋರ್‌ವೆಲ್ ನೀರಾವರಿಯನ್ನು ಹೊಂದಿವೆ. ಈ ಗ್ರಾಮದಲ್ಲಿ ನೀರಿನ ಅಭಾವವಿರುವುದರಿಂದ ಬೆಳೆಗಳಿಗೆ, ದನಕರುಗಳಿಗೆ ಮತ್ತು ಜನರಿಗೆ ತುಂಬಾ ತೊಂದರೆಯಾಗುತ್ತದೆ. ಇಲ್ಲಿಯ ಜನರು ಕೃಷಿಯಲ್ಲಿ ಲಾಭವಿಲ್ಲವೆಂದುಕೊಂಡು ಗಣಿಗಾರಿಕೆ ಕೆಲಸಕ್ಕೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿನ ಜನ ಗಣಿಗಾರಿಕೆಯ ಕೆಲಸಕ್ಕೆ ಪಕ್ಕದ ಊರಿಗೆ ಹೋಗುತ್ತಾರೆ. ಗಣಿಗಾರಿಕೆಯ ಸ್ಫೋಟದಿಂದಾಗಿ ಮನೆಗಳು ಬಿರುಕುಬಿಟ್ಟಿವೆ. ಸ್ಫೋಟದಿಂದಾಗಿ ಅಂತರ್ಜಲ ಕುಸಿಯುತ್ತಿದೆ ಎನ್ನುವ ಅನುಮಾನವಿದೆ. ಗಣಿಗಾರಿಕೆಯ ಪ್ರಭಾವದಿಂದಾಗಿ ಅರಣ್ಯದ ಪ್ರಮಾಣ ಕಡಿಮೆಯಿದೆ. ಈ ಗ್ರಾಮದಲ್ಲಿ ನೀರು, ಆಸ್ಪತ್ರೆ, ವಿದ್ಯುತ್ ಪ್ರಮುಖ ಸಮಸ್ಯೆಗಳಾಗಿವೆ. ಖಾಸಗಿ ವೈದ್ಯರೊಬ್ಬರು ೨ ರಿಂದ ೩ ಊರುಗಳಲ್ಲಿ ಚಿಕಿತ್ಸೆ ನೀಡುವುದರಿಂದ ವೈದ್ಯಕೀಯ ವ್ಯವಸ್ಥೆ ಸಮರ್ಪಕವಾಗಿಲ್ಲ.

೬. ಪಾಪಿನಾಯಕನಹಳ್ಳಿ : ಹೊಸಪೇಟೆಯಿಂದ ೧೨ ಕಿ.ಮೀ. ಮತ್ತು ಬಳ್ಳಾರಿಯಿಂದ ೪೮ ಕಿ.ಮೀ. ಅಂತರದಲ್ಲಿದೆ. ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ಹೆದ್ದಾರಿಯಲ್ಲಿ ಈ ಗ್ರಾಮವಿದೆ. ಈ ಗ್ರಾಮವು ಸಮತಟ್ಟು ಪ್ರದೇಶದಿಂದ ಕೂಡಿದುದಾಗಿದೆ. ಒಟ್ಟು ೩೬೪೦ ಜನಸಂಖ್ಯೆಯನ್ನು ಹೊಂದಿದೆ. ಲಿಂಗಾಯತ, ನಾಯಕ, ಕುರುಬ, ಮುಸ್ಲಿಂ, ಜಂಗಮ, ಹರಿಜನ, ವಡ್ಡ, ರೆಡ್ಡಿ, ಕಂಬಾರ, ಬ್ರಾಹ್ಮಣ, ಈಡಿಗ, ಅಗಸ, ಉಪ್ಪಾರ ಮೊದಲಾದ ಸಮುದಾಯಗಳು ಕಂಡುಬರುತ್ತವೆ. ತಮಿಳು ಮತ್ತು ಮರಾಠಿಯ ವಲಸಿಗರು ಕಂಡು ಬರುತ್ತಾರೆ. ಲಿಂಗಾಯತ ಮತ್ತು ಕುರುಬ ಸಮುದಾಯ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇಲ್ಲಿ ಸಾಮಾನ್ಯವಾಗಿ ಕನ್ನಡ, ತೆಲುಗು, ತಮಿಳು, ಉರ್ದು, ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ಹೆಚ್ಚಾಗಿ ಬಳಕೆಯಲ್ಲಿರುವುದು ಕಂಡುಬರುತ್ತದೆ.

ಈ ಗ್ರಾಮದವರು ಅತಿ ಹೆಚ್ಚಾಗಿ ಕೃಷಿಗಿಂತ ಗಣಿಗಾರಿಕೆಗೆ ಒತ್ತು ನೀಡುತ್ತಾರೆ. ಗಣಿಗಾರಿಕೆ ಹೆಚ್ಚಾದಂತೆ ಜನರ ಅಥವಾ ಗಣಿಕಾರ್ಮಿಕರ ಕೈಯಲ್ಲಿ ಆರ್ಥಿಕ ಸ್ಥಿತಿ ಸುಧಾರಿಸಿದೆ. ಇಲ್ಲಿಯ ಜನ ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ, ಏಕೆಂದರೆ ಬೆಳಿಗ್ಗೆ ೨ ತಾಸು ವ್ಯಾಗಿನ್ ಲೋಡ್ ಮಾಡಿದರೆ ೧೦೦ ರಿಂದ ೧೫೦ ರೂ.ಗಳು ಸಿಗುತ್ತವೆ. ಇಲ್ಲಿ ಹೆಚ್ಚಿನ ಜನರು ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದಾರೆ.

ಈ ಊರಿನಲ್ಲಿ ,ಸರಿಯಾದ ಶೌಚಾಲಯ ವ್ಯವಸ್ಥೆಯಿಲ್ಲ. ಇದರಿಂದ ಮಹಿಳೆಯರಿಗೆ ಬಹಳ ತೊಂದರೆಯಾಗುತ್ತಿದೆ. ಒಳಚರಂಡಿ ವ್ಯವಸ್ಥೆಯು ಸಹ ಇಲ್ಲ. ಬೇಸಿಗೆ ಸಮಯದಲ್ಲಿ ವಿದ್ಯುತ್ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತದೆ. ಕುಡಿಯುವ ನೀರಿನ ಸಮಸ್ಯೆಯಿದೆ. ಜಿಂದಾಲ್ ಕಾರ್ಖಾನೆಗೆ ಹೋಗುವ ನೀರಿನಲ್ಲಿ ಈ ಊರಿಗೂ ಸ್ವಲ್ಪ ಪಾಲು ದೊರೆಯುತ್ತದೆ. ಅದೇ ನೀರನ್ನು ಇಲ್ಲಿನ ಗ್ರಾಮಸ್ಥರು ಹೆಚ್ಚಾಗಿ ಆಶ್ರಯಿಸಿದ್ದಾರೆ. ಗಣಿಗಾರಿಕೆ ನಡೆಯುತ್ತಿರುವ ಪ್ರಮುಖ ಪ್ರದೇಶಗಳಲ್ಲಿ ಇದು ಒಂದಾಗಿದೆ. ಲಾರಿಗಳ ವಿಪರೀತ ಓಡಾಟದಿಂದ, ಶಬ್ದಮಾಲಿನ್ಯ, ವಾಯುಮಾಲಿನ್ಯ ಹೆಚ್ಚಾಗಿ ಕಂಡುಬರುತ್ತದೆ. ಊರು ಮತ್ತು ಮನೆಗಳು ಗಣಿಗಾರಿಕೆಯ ಕೆಂಪು ಧೂಳಿನಿಂದ ಆವೃತವಾಗಿದೆ. ವಾಯುಮಾಲಿನ್ಯದಿಂದಾಗಿ ಜನರು ಅಸ್ತಮಾ, ಟಿ.ಬಿ., ಹೊಟ್ಟೆನೋವು ಮುಂತಾದ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಸರಿಯಾದ ವೈದ್ಯಕೀಯ ಸೌಲಭ್ಯ ಇಲ್ಲವಾಗಿದೆ. ಕೆಲವು ವೈದ್ಯರು ೨ ರಿಂದ ೩ ಊರುಗಳಿಗೆ ಚಿಕಿತ್ಸೆ ನೀಡುವುದರಿಂದ ಸಂಚಾರಿ ವೈದ್ಯರಾಗಿದ್ದಾರೆ. ಕೆಲವೊಂದು ಸಮಯದಲ್ಲಿ ವೈದ್ಯರ ಸಮಸ್ಯೆ ಕಂಡುಬರುತ್ತದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ಕಾಡು ನಾಶವಾಗಿದೆ. ಇಲ್ಲಿನ ಗುಡ್ಡ ಮತ್ತು ಕಾಡುಗಳು ಗಣಿಗಾರಿಕೆಯಿಂದ ಇಲ್ಲವಾಗುತ್ತಿವೆ. ಗಣಿಗಾರಿಕೆಯ ಸ್ಫೋಟದಿಂದಾಗಿ ಈ ಗ್ರಾಮದಲ್ಲಿ ಮನೆಗಳು ಬಿರುಕು ಬಿಡುತ್ತಿವೆ.

೭. ಬೈಲುವದ್ದಿಗೇರಿ : ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ಮುಖ್ಯ ಹೆದ್ದಾರಿಯಲ್ಲಿ ಈ ಗ್ರಾಮವಿದೆ. ತಾಲ್ಲೂಕಿನಿಂದ ೧೫ ಕಿ.ಮೀ. ಮತ್ತು ಜಿಲ್ಲೆಯಿಂದ ೪೫ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ವಿಸ್ತೀರ್ಣ ೧೧೦೩.೦೧ ಚ.ಕಿ.ಮೀ ಇದೆ. ಗ್ರಾಮಾಂತರವು ೭.೦೬ ಚ.ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ೫೦೦ ಕುಟುಂಬಗಳಿಂದ ಒಟ್ಟು ೨,೩೮೩ ಜನಸಂಖ್ಯೆಯನ್ನು ಹೊಂದಿದೆ. ಹರಿಜನ, ಲಿಂಗಾಯತ ನಾಯಕ, ಕುರುಬ, ಶೆಟ್ಟಿಬಣಜಿಗ, ವಡ್ಡರು, ಕೊರವರು, ಜಂಗಮ, ಮುಸ್ಲಿಂ, ಬಾರಿಕರು, ಬಡಿಗ, ಕುಂಬಾರ, ಈಡಿಗ, ಮಡ್ಡೇರು ಸಮುದಾಯಗಳು ಕಂಡುಬರುತ್ತವೆ. ಹರಿಜನ ಮತ್ತು ಲಿಂಗಾಯತ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಕನ್ನಡ, ತೆಲುಗು, ತಮಿಳು ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ಭಾಷೆಯು ಹೆಚ್ಚು ರೂಢಿಯಲ್ಲಿದೆ.

ಕೃಷಿ ಇಲ್ಲಿನ ಪ್ರಮುಖ ಉದ್ಯೋಗವಾಗಿದೆ. ಸಾಮಾನ್ಯವಾಗಿ ಎಲ್ಲಾ ಸಮುದಾಯದವರು ಭೂಮಿಯನ್ನು ಹೊಂದಿದ್ದಾರೆ. ಇಲ್ಲಿನ ಭೂಮಿಯು ಕೆಂಪು ಮಿಶ್ರಿತ ಕಂದು ಬಣ್ಣದಿಂದ ಕೂಡಿದೆ. ಹತ್ತಿ, ಜೋಳ, ನವಣೆ, ಈರುಳ್ಳಿ, ತೊಗರೆ, ಸಜ್ಜೆ, ಸೂರ್ಯಕಾಂತಿ ಇಲ್ಲಿನ ಪ್ರಮುಖ ಬೆಳೆಗಳಾಗಿವೆ. ಈರುಳ್ಳಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ನೀರಾವರಿಗಿಂತ ಒಣಭೂಮಿಯೇ ಹೆಚ್ಚಾಗಿ ಕಂಡುಬರುತ್ತದೆ. ಗಣಿಗಾರಿಕೆಯಿಂದ ದೂರದಲ್ಲಿದೆಯಾದರು, ಒಂದು ಬಿಳಿಕಲ್ಲಿನ ಕ್ವಾರೆ ಕೆಲಸವು ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದೆ. ಧೂಳು ಪಕ್ಕದ ಜಮೀನುಗಳ ಮೇಲೆಲ್ಲಾ ಹರಡುತ್ತಿದೆ. ಈ ಕ್ವಾರೆಯ ಮಾಲೀಕರು ಕ್ವಾರೆ ಕೆಲಸದ ಜೊತೆಗೆ ಗಣಿಗಾರಿಕೆಯ ಪುಡಿಯನ್ನು ಶೇಖರಿಸಿಟ್ಟಿದ್ದಾರೆ. ಈ ಗ್ರಾಮದಲ್ಲಿ ಕುರುಬ ಸಮುದಾಯವು ಆರ್ಥಿಕವಾಗಿ ಪ್ರಬಲವಾಗಿದೆ. ಜನಸಂಖ್ಯೆಯಲ್ಲಿ ಹರಿಜನ ಮತ್ತು ಲಿಂಗಾಯತ ಸಮುದಾಯಗಳು ಪ್ರಾಬಲ್ಯವನ್ನು ಮೆರೆಯುತ್ತವೆ.

ಈ ಗ್ರಾಮದಲ್ಲಿ ಒಂದು ಕೊಳಾಯಿ ಮತ್ತು ಒಂದು ಬೋರ್‌ವೆಲ್ ಇದೆ. ಕೆಲವೊಂದು ಸಮಯ ನೀರಿನ ಪ್ರಮಾಣ ಕಡಿಮೆಯಾಗಿ, ನೀರಿನ ಸಮಸ್ಯೆ ಕಂಡುಬರುತ್ತದೆ. ಶೌಚಾಲಯ ವ್ಯವಸ್ಥೆಯಿಲ್ಲ. ಗಣಿಗಾರಿಕೆಯಿಂದ ದೂರವಿದೆಯಾದರು ಕಾಡಿನ ಪ್ರಮಾಣ ಕಡಿಮೆಯಿದೆ. ಬೆಳೆಗಳನ್ನು ಬೆಳೆಯಲು ಧೂಳಿನ ತೊಂದರೆಯು ಅಷ್ಟಾಗಿ ಕಾಣಿಸುವುದಿಲ್ಲ. ಕೆಲವೊಂದು ಸಮಸ್ಯೆಗಳನ್ನು ಹೊರತು ಪಡಿಸಿದರೆ ಇಲ್ಲಿ ಕೆಲವೊಂದು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಹೊಸ ಶಾಲಾ ಕಟ್ಟಡ ನಿರ್ಮಾಣ, ಸಮುದಾಯ ಭವನ ನಿರ್ಮಾಣ, ರಸ್ತೆ ನಿರ್ಮಾಣ ಮುಂತಾದವುಗಳೆಂದು ಹೇಳಬಹುದು.

೨. ಹೊಸಪೇಟೆ-ಸಂಡೂರು ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು.

೧. ಕಣವಿರಾಯನಗುಡಿ : ಹೊಸಪೇಟೆಯಿಂದ ಸಂಡೂರಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮವಿದೆ. ಹೊಸಪೇಟೆಯಂದ ೨ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೬೫ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ೪೦ ಕುಟುಂಬಗಳಿಂದ ಒಟ್ಟು ೨೫೦ ಜನಸಂಖ್ಯೆಯನ್ನು ಹೊಂದಿದೆ. ಈ ಗ್ರಾಮವು ತಗ್ಗು ಪ್ರದೇಶದಲ್ಲಿದೆ. ನಾಯಕ ಮತ್ತು ಕಬ್ಬೇರ ಸಮುದಾಯಗಳು ವಾಸವಾಗಿವೆ. ನಾಯಕರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಆಂಜನೇಯ ಮತ್ತು ಅಂಜಿನಮ್ಮ ಈ ಊರಿನ ಪ್ರಮುಖ ದೈವಗಳಾಗಿವೆ. ಇಲ್ಲಿನ ಜನರು ಹೆಚ್ಚಾಗಿ ಜಂಬುನಾಥನಿಗೆ ನಡೆದುಕೊಳ್ಳುತ್ತಾರೆ. ಜಂಬುನಾಥನ ಜಾತ್ರೆ ಇವರಿಗೆ ವಿಶೇಷವಾಗಿದೆ.

ಕೃಷಿ ಮತ್ತು ಗಣಿಗಾರಿಕೆಯ ಕೆಲಸದ ಜೊತೆಗೆ ಹೈನುಗಾರಿಕೆ ಈ ಗ್ರಾಮದ ಮುಖ್ಯ ಕಸುಬಾಗಿದೆ. ಕಪ್ಪು ಮತ್ತು ಕೆಂಪು ಮಣ್ಣಿನಿಂದ ಕೂಡಿದ ಈ ಭೂಮಿಯಲ್ಲಿ ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ, ಕಬ್ಬು ಪ್ರಮುಖ ಬೆಳೆಗಳಾಗಿವೆ. ಕೆಲವೊಂದು ಕುಟುಂಬಗಳು ಮಾತ್ರ ಬೋರ್‌ವೆಲ್ ವ್ಯವಸ್ಥೆಯನ್ನು ಹೊಂದಿದ್ದರೆ ಉಳಿದವುಗಳು ಒಣಭೂಮಿಯಾಗಿವೆ. ಪಕ್ಕದಲ್ಲಿ ಗಣಿಗಾರಿಕೆಯ ಗುಡ್ಡಗಳಿರುವುದರಿಂದ ಧೂಳು ಮತ್ತು ಮಳೆಗಾಲದ ಸಮಯದಲ್ಲಿ ಅದಿರಿನ ಪುಡಿ ಮಿಶ್ರಿತ ಕೊಳಕು ನೀರು ಬರುವುದರಿಂದ ಸರಿಯಾದ ಬೆಳೆ ಬೆಳೆಯುತ್ತಿಲ್ಲ. ಊರಿನ ಕೆಲವರು ಎಸ್.ಎಫ್.ಐ. ಒಕ್ಕೂಟದೊಂದಿಗೆ ಸೇರಿ ಚಳುವಳಿ ನಡೆಸಿದಾಗ ಬೈಪಾಸ್ ರಸ್ತೆಯನ್ನು ನಿರ್ಮಿಸಲಾಗಿದೆ. ಈ ಗ್ರಾಮದಿಂದ ಗಣಿಗಾರಿಕೆಯ ಕೆಲಸಕ್ಕೆ ೮ ರಿಂದ ೧೦ ಕುಟುಂಬದವರು ಮಾತ್ರ ಹೋಗುತ್ತಾರೆ. ಈ ಗ್ರಾಮದ ಮುಖ್ಯ ಸಮಸ್ಯೆಯೆಂದರೆ ನೀರಿನದು. ಒಂದೇ ಒಂದು ಬೋರವೆಲ್ ಇದೆ. ಆದರೆ ಅದರಲ್ಲಿ ನೀರು ಇಲ್ಲ. ಯಾವಾಗಲಾದಗು ಒಂದೊಂದು ಸಲ ಬಂದರೆ ಬಂತು ಇಲ್ಲದಿದ್ದರೆ ಇಲ್ಲ ಎನ್ನುವ ಸ್ಥಿತಿಯಿದೆ. ಗಣಿಮಾಲಿಕರು ಟ್ಯಾಂಕರ್ ಮೂಲಕ ದಿನಕ್ಕೆರಡು ಬಾರಿ ನೀರನ್ನು ಈ ಗ್ರಾಮಕ್ಕೆ ಪೂರೈಸುತ್ತಾರೆ. ಸಾರಿಗೆ ಸಮಸ್ಯೆ, ವೈದ್ಯರ ಸಮಸ್ಯೆ ಪ್ರಮುಖವಾದವುಗಳಾಗಿವೆ. ಈ ಗ್ರಾಮವು ತಗ್ಗು ಪ್ರದೇಶದಲ್ಲಿರುವುದರಿಂದ ಗಣಿಗಾರಿಕೆಯ ಲಾರಿಗಳ ಓಡಾಟದಿಂದ ಊರು ಧೂಳಿನಿಂದ ಮುಚ್ಚಿ ಹೋಗಿದೆ. ವಾಯುಮಾಲಿನ್ಯದಿಂದಾಗಿ ಉಸಿರಾಡುವುದು ಕಷ್ಟವಾಗುತ್ತದೆ. ಈ ಗ್ರಾಮದ ಪರಿಸರದಲ್ಲಿ ಕೆಲವೊಂದು ಕಾಡು ಪ್ರಾಣಿಗಳಿಂದ ಕೂಡಿದ ಅರಣ್ಯವು ಕಂಡುಬರುತ್ತದೆ.

೨. ರಾಜಾಪುರ : ಹೊಸಪೇಟೆಯಿಂದ ಸಂಡೂರಿಗೆ ಹೋಗುವ ಮುಖ್ಯ ರಸ್ತೆಯಲ್ಲಿ ರಾಜಾಪುರ ಗ್ರಾಮವಿದೆ. ತಾಲ್ಲೂಕು ಕೇಂದ್ರಕ್ಕೆ ೪ ಕಿ.ಮೀ. ಮತ್ತು ಜಿಲ್ಲಾ ಕೇಂದ್ರಕ್ಕೆ ೬೭ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಕಣಿವೆ ಪ್ರದೇಶದಿಂದ ಕೂಡಿದೆ. ೪೫೧.೪೩ ಹೆಕ್ಟೇರ್ ವಿಸ್ತೀರ್ಣವಿರುವ ಈ ಗ್ರಾಮ ೧.೭೧ ಹೆಕ್ಟೇರ್ ಗ್ರಾಮಠಾಣವನ್ನು ಹೊಂದಿದೆ. ೧೧೪ ಕುಟುಂಬಗಳಿಂದ ೮೫೦ ಜನಸಂಖ್ಯೆಯನ್ನು ಹೊಂದಿದೆ. ಕುರುಬ, ನಾಯಕ, ಶೆಟ್ಟಿಬಣಜಗ, ಮುಸ್ಲಿಂ, ಹರಿಜನ, ಜಂಗಮ ಮೊದಲಾದ ಸಮುದಾಯದವರು ಕಂಡಬರುತ್ತಾರೆ. ಅತಿ ಹೆಚ್ಚಾಗಿ ಕಂಡುಬರುವ ಸಮುದಾಯವೆಂದರೆ ಕುರುಬ ಸಮುದಾಯವಾಗಿದೆ. ಕನ್ನಡ, ಹಿಂದಿ, ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ಭಾಷೆಯು ಇಲ್ಲಿ ಪ್ರಮುಖ ಭಾಷೆಯಾಗಿ ಬಳಕೆಯಲ್ಲಿದೆ.

ಇಲ್ಲಿಯ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಕೆಂಪು ಬಣ್ಣದ ಈ ಪ್ರದೇಶದ ಭೂಮಿಯಲ್ಲಿ ಸಜ್ಜೆ, ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ ಬೆಳೆಗಳನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಗಣಿಗಾರಿಕೆಯ ಸ್ಫೋಟದಿಂದಾಗಿ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಹೆಚ್ಚಿನವರ ಬೋರವೆಲ್‌ಗಳಲ್ಲಿ ನೀರು ಮಾಯವಾಗಿದೆ. ಮೊದಲು ೬೦ ರಿಂದ ೭೦ ಅಡಿಗೆ ನೀರು ಬರುತ್ತಿದ್ದು, ಇಂದು ೨೦೦ ರಿಂದ ೩೫೦ ಅಡಿ ಆಳ ಬೋರವೆಲ್ ತೆಗೆಸಿದರು ನೀರು ಇಲ್ಲವಾಗಿದೆ. ಇಲ್ಲಿಯ ಜನರಿಗೆ ಗಣಿಗಾರಿಕೆಯಲ್ಲಿ ಅಷ್ಟೊಂದು ಕೆಲಸ ದೊರೆತಿಲ್ಲ. ಈ ಊರಿಗೂ ಸಹ ಟ್ಯಾಂಕರ್ ಮೂಲಕ ನೀರನ್ನು ಪೂರೈಸಲಾಗುತ್ತದೆ. ಆರ್ಥಿಕವಾಗಿ, ರಾಜಕೀಯವಾಗಿ ಕುರುಬ ಸಮುದಾಯದವರು ಪ್ರಬಲರಾಗಿದ್ದಾರೆ. ನೀರಿನ ಸಮಸ್ಯೆ, ವೈದ್ಯರ ಸಮಸ್ಯೆ, ವಾಯುಮಾಲಿನ್ಯ ಈ ಗ್ರಾಮದ ಪ್ರಮುಖ ಸಮಸ್ಯೆಗಳಾಗಿವೆ. ಅರಣ್ಯ ಹೆಚ್ಚಿನ ಪ್ರಮಾಣದಲ್ಲಿ ಇಲ್ಲವೆಂದರು ಸಹ ಇದ್ದುದರಲ್ಲಿ ಪರವಾಗಿಲ್ಲವೆಂದು ಹೇಳಬೇಕಾಗುತ್ತದೆ.

೩. ಕಲ್ಲಹಳ್ಳಿ : ಹೊಸಪೇಟೆ ಸಂಡೂರು ಮಾರ್ಗದಲ್ಲಿರುವ ಈ ಗ್ರಾಮವು ಹೊಸಪೇಟೆ ತಾಲ್ಲೂಕಿನ ಈ ಮಾರ್ಗದ ಕೊನೆಯ ಗ್ರಾಮವಾಗಿದೆ. ತಾಲ್ಲೂಕಿನಿಂದ ೬ ಕಿ.ಮೀ. ಮತ್ತು ಜಿಲ್ಲೆಯಿಂದ ೬೯ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಒಟ್ಟು ವಿಸ್ತೀರ್ಣ ೧೨೯.೯೧ ಹೆಕ್ಟೇರ್ ಇದೆ. ೪.೯೨ ಗ್ರಾಮಠಾಣವನ್ನು ಹೊಂದಿದೆ. ಒಟ್ಟು ೨೮೭ ಕುಟುಂಬಗಳಿಂದ ೧,೯೪೧ ಜನಸಂಖ್ಯೆಯನ್ನು ಹೊಂದಿದೆ. ಲಂಬಾಣಿ, ನಾಯಕ, ಮುಸ್ಲಿಂ, ಹರಿಜನ, ಲಿಂಗಾಯತ, ಕ್ರಿಶ್ಚಿಯನ್ ಮೊದಲಾದ ಜಾತಿಯವರು ಕಂಡುಬರುತ್ತಾರೆ. ಲಂಬಾಣಿ ಜನಾಂಗವು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ. ಕನ್ನಡ, ಲಂಬಾಣಿ, ತೆಲುಗು, ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಕನ್ನಡಕ್ಕಿಂತ ಲಂಬಾಣಿ ಭಾಷೆಯು ಹೆಚ್ಚು ಬಳಕೆಯಲ್ಲಿದೆ. ಈ ಗ್ರಾಮದಲ್ಲಿ ಕೆಲವೊಬ್ಬರು ಬಯಲಾಟ, ನಾಟಕಗಳನ್ನು ಮಾಡುವ ಕಲಾವಿದರಿದ್ದಾರೆ. ಹೆಚ್ಚಿನ ಲಂಬಾಣಿಯವರಿಗೆ ಸ್ವಂತ ಭೂಮಿಯಿದೆ. ಆರ್ಥಿಕವಾಗಿಯೂ ಸಹ ಉತ್ತಮ ಸ್ಥಿತಿಯನ್ನು ಹೊಂದಿದ್ದಾರೆ. ವೈಯಕ್ತಿಕ ಗಣಿಗಾರಿಕೆಯನ್ನು ಸಹ ನಡೆಸುತ್ತಿದ್ದಾರೆ.

ವಾಯುಮಾಲಿನ್ಯ, ನೀರಿನ ಸಮಸ್ಯೆ ಪ್ರಮುಖವಾಗಿ ಕಂಡುಬರುತ್ತದೆ. ಲಾರಿಗಳ ವಿಪರೀತ ಓಡಾಟದಿಂದ ರಸ್ತೆಗಳು ಹಾಳಾಗಿಹೋಗಿದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ಅರಣ್ಯ ಹೆಚ್ಚಿನ ಪ್ರಮಾಣದಲ್ಲಿದೆ. ಗಣಿಗಾರಿಕೆ ಹೆಚ್ಚಾಗಿ ನಡೆಸಿರುವುದರಿಂದ ಈ ಗ್ರಾಮವನ್ನು ಇಂದು ಗಣಿಗಾರಿಕೆಯಿಂದ ಗುರುತಿಸಬಹುದಾಗಿದೆ.

೩. **ಹೊಸಪೇಟೆ-ಮರಿಯಮ್ಮನಹಳ್ಳಿ ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು.**

೧. ವ್ಯಾಸನಕೆರೆ : ಹೊಸಪೇಟೆಯಿಂದ ಮರಿಯಮ್ಮನಹಳ್ಳಿಗೆ ಹೋಗುವ ಮಾರ್ಗದಲ್ಲಿ ಪಶ್ಚಿಮಕ್ಕೆ ೩ ಕಿ.ಮೀ. ಅಂತರದಲ್ಲಿ ಈ ಗ್ರಾಮವಿದೆ. ಹೊಸಪೇಟೆಯಿಂದ ೧೧ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೭೩ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ನದಿಯ ದಡದ ಮೇಲಿದೆ. ೧೨೧ ಕುಟುಂಬಗಳಿಂದ ೭೮೨ ಜನಸಂಖ್ಯೆಯನ್ನು ಹೊಂದಿದೆ. ಇದರ ಭೌಗೋಳಿಕ ವಿಸ್ತೀರ್ಣ ೩೪೦.೩೧ ಇದೆ. ಈ ಗ್ರಾಮದಲ್ಲಿ ಕುರುಬರು, ಬಾರಿಕರು, ಮುಸ್ಲಿಂ, ಗೊಲ್ಲರು, ನಾಯಕ, ಹರಿಜನ ಸಮುದಾಯದವರು ಕಂಡುಬರುತ್ತಾರೆ. ಇವರಲ್ಲಿ ಕುರುಬರು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಾರೆ.

ಇಲ್ಲಿನ ಜನರ ಪ್ರಮುಖ ಉದ್ಯೋಗ ಕೃಷಿ. ಇಲ್ಲಿನ ಭೂಮಿಯು ಕೆಂಪು ಮಣ್ಣಿನಿಂದ ಕೂಡಿದೆ. ಜೋಳ, ಮೆಕ್ಕೆಜೋಳ, ಹತ್ತಿ, ಶೇಂಗಾ, ಅಲಸಂದಿ ಬೆಳೆಗಳನ್ನು ಬೆಳೆಯುತ್ತಾರೆ. ತುಂಗಭದ್ರಾ ಜಲಾಶಯದಲ್ಲಿ ಪೂರ್ಣ ಪ್ರಮಾಣದ ನೀರು ತುಂಬಿದರೆ ಕೆಲವೊಂದು ರೈತರ ಜಮೀನುಗಳು ಜಲಾವೃತವಾಗುತ್ತವೆ. ಜಲಾಶಯದಲ್ಲಿ ನೀರು ಕಡಿಮೆಯಾದಂತೆಲ್ಲಾ ಆ ಭೂಮಿಯಲ್ಲಿ ಉಳುಮೆ ಮಾಡುತ್ತಾರೆ. ಕೃಷಿಗೆ ಯೋಗ್ಯ ಪ್ರದೇಶವಾದುದಾಗಿದೆ. ಕೆಲವೊಂದು ಕುಟುಂಬದವರು ಗಣಿಗಾರಿಕೆಯ ಕೆಲಸಕ್ಕೆ ಹೋಗುತ್ತಾರೆ. ಸಾರಿಗೆ ಮತ್ತು ವೈದ್ಯರ ಸಮಸ್ಯೆ ಪ್ರಮುಖವಾಗಿ ಕಂಡುಬರುತ್ತದೆ. ಜೊತೆಗೆ ವಿದ್ಯುತ್ ಸಮಸ್ಯೆಯು ಸಹ ಕಂಡುಬರುತ್ತದೆ. ಅರಣ್ಯ ಪ್ರದೇಶ ಕಡಿಮೆಯಿದೆಯಾದರೂ ಸಮೃದ್ಧವಾಗಿ ಹಸಿರಿನಿಂದ ಕಂಗೊಳಿಸುತ್ತಿದೆ. ಒಟ್ಟು ವ್ಯಾಸನಕೆರೆ ವ್ಯಾಪ್ತಿಯಲ್ಲಿ ೧೦೩.೯೨ ಹೆಕ್ಟೇರ್ ಅರಣ್ಯ ಪ್ರದೇಶವಿದೆ.

೨. ಗಾಳೆಮ್ಮನಗುಡಿ : ಹೊಸಪೇಟೆ ಮರಿಯಮ್ಮನಹಳ್ಳಿ ಮಾರ್ಗದ ರಾಷ್ಟ್ರೀಯ ಹೆದ್ದಾರಿ. ೧೩ರಲ್ಲಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೭೨ ಕಿ.ಮೀ. ಅಂತರದಲ್ಲಿದೆ. ಸಮತಟ್ಟು ಪ್ರದೇಶದಿಂದ ಕೂಡಿದೆ. ೧೬೫ ಕುಟುಂಬಗಳಿಂದ ೧,೧೨೫ ಜನಸಂಖ್ಯೆಯಿದೆ. ನಾಯಕ, ಹರಿಜನ, ಬಾರಿಕರು, ವಡ್ಡರು, ತಮಿಳು ಜಾತಿಯವರು ಕಂಡುಬರುತ್ತಾರೆ. ನಾಯಕ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ ಕನ್ನಡ, ತೆಲುಗು, ಮತ್ತು ತಮಿಳು ಭಾಷೆಯನ್ನು ಆಡುತ್ತಾರೆ. ಕನ್ನಡ ಭಾಷೆಯು ಹೆಚ್ಚು ರೂಢಿಯಲ್ಲಿದೆ.

ಇಲ್ಲಿನ ಜನರು ಹೆಚ್ಚಾಗಿ ಗಣಿಗಾರಿಕೆಯ ಕಾರ್ಖಾನೆಗಳನ್ನು ಅವಲಂಬಿಸಿದ್ದಾರೆ. ಈ ಗ್ರಾಮದಲ್ಲಿ ಭೂರಹಿತ ಕುಟುಂಬಗಳ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಬೆರಳೆಣಿಕೆಯಷ್ಟು ಕುಟುಂಬಗಳು ಮಾತ್ರ ಭೂಮಿಯನ್ನು ಹೊಂದಿವೆ. ಅದರಲ್ಲಿ ಕೆಲವೊಂದು ಕುಟುಂಬಗಳು ಮಾತ್ರ ಖಾಯಂ ಭೂಮಿಯನ್ನು ಹೊಂದಿದ್ದರೆ, ಕೆಲವು ಕುಟುಂಬಗಳು ತುಂಗಭದ್ರಾ ಜಲಾಶಯದ ಹಿನ್ನೀರು ಖಾಲಿಯಾದ ಪ್ರದೇಶದಲ್ಲಿ ಭೂ ಸಾಗುವಳಿ ಮಾಡುತ್ತಾರೆ. ಕೆಂಪು ಮಣ್ಣಿನ ಈ ಪ್ರದೇಶದಲ್ಲಿ ಜೋಳ, ಮೆಕ್ಕೆಜೋಳ, ಅಲಸಂದಿ, ಕಬ್ಬು, ಸೂರ್ಯಕಾಂತಿ, ನೆಲಗಡಲೆ ಬೆಳೆಗಳನ್ನು ಬೆಳೆಯಲಾಗುತ್ತದೆ.

ಈ ಗ್ರಾಮದ ಹೆಚ್ಚಿನ ಪಾಲು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಕಾರಣ ತಂದೆ ತಾಯಿ ಕೆಲಸಕ್ಕೆ ಹೋದರೆ ಚಿಕ್ಕ ಮಕ್ಕಳನ್ನು ಆಟವಾಡಿಸುವುದಕ್ಕೆ ಮತ್ತು ಮನೆಯ ಹತ್ತಿರ ಇರಲು ಬಿಟ್ಟು ಹೋಗುತ್ತಾರೆ. ಈ ಪ್ರದೇಶದಲ್ಲಿ ಅರಣ್ಯ ಹೆಚ್ಚಿನ ಪ್ರಮಾಣದಲ್ಲಿದೆ. ಆದರೆ ಅದನ್ನು ನಾಶ ಮಾಡುತ್ತಿರುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯವಾಗಿದೆ. ಗಣಿಗಾರಿಕೆಗಾಗಿ ಅರಣ್ಯ ಧ್ವಂಸವಾಗುತ್ತಿದೆ.

೩. **ಹನುಮನಹಳ್ಳಿ :** ಹೊಸಪೇಟೆಯಿಂದ ಮರಿಯಮ್ಮನಹಳ್ಳಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಗ್ರಾಮವಿದೆ. ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೭೩ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಸಮತಟ್ಟು ಪ್ರದೇಶದಿಂದ ಕೂಡಿದೆ. ಒಟ್ಟು ೨,೨೪೭ ಜನಸಂಖ್ಯೆಯು ೪೨೮ ಕುಟುಂಬಗಳನ್ನೊಳಗೊಂಡಿದೆ. ಕುರುಬ, ಹರಿಜನ, ನಾಯಕ, ಲಿಂಗಾಯತ, ಮುಸ್ಲಿಂ, ಮರಾಠಿ, ಈಡಿಗ, ಶೆಟ್ಟರು, ಬ್ರಾಹ್ಮಣ ಸಮುದಾಯಗಳಿವೆ. ಕುರುಬ ಮತ್ತು ಹರಿಜನರು ಹೆಚ್ಚಾಗಿ ಕಂಡುಬರುತ್ತಾರೆ. ಕನ್ನಡ, ತೆಲುಗು, ಉರ್ದು, ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ಭಾಷೆ ಹೆಚ್ಚಿನವರ ಮನೆ ಮಾತಾಗಿದೆ.

ಈ ಗ್ರಾಮದ ಜನರು ಕೃಷಿಗಿಂತ ಗಣಿಗಾರಿಕೆಯ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಕೆಂಪು ಮಣ್ಣಿನ ಭೂಮಿಯಾಗಿದ್ದು ಜೋಳ, ಮೆಕ್ಕೆಜೋಳ, ಹತ್ತಿ, ಸೂರ್ಯಕಾಂತಿಯನ್ನು ಬೆಳೆಯಲಾಗುತ್ತದೆ. ಈ ಗ್ರಾಮದಲ್ಲಿ ರೈತರು ಕೃಷಿಯನ್ನು ನಂಬಿಕೊಂಡು ಬದುಕುತ್ತಿಲ್ಲ. ಹೆಸರಿಗೆ ಮಾತ್ರ ರೈತರಾಗಿದ್ದಾರೆ. ಆದರೆ ಗಣಿಗಾರಿಕೆಯ ಕಾರ್ಮಿಕರಾಗಿ ಜೀವನ ನಡೆಸುತ್ತಿದ್ದಾರೆ. ಹಲವಾರು ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ರೈತರ ಕೆಲವೊಂದು ಚಳುವಳಿಗಳು ಭಗ್ನಗೊಳ್ಳಲು ಈ ಊರಿನ ಕೆಲವರ ಕುಮ್ಮಕ್ಕು ಇದೆ. ಬೋರವೆಲ್‌ನಲ್ಲಿ ದೊರೆಯುವ ನೀರು ಕ್ಷಾರದ ಅಂಶವನ್ನು ಹೊಂದಿರುವುದರಿಂದ ಕುಡಿಯುವ ನೀರಿನ ಸಮಸ್ಯೆಯಿದೆ. ವಿದ್ಯುತ್ ಸಮಸ್ಯೆ ಮತ್ತು ವಾಯುಮಾಲಿನ್ಯ ಪ್ರಮುಖ ಸಮಸ್ಯೆಗಳಾಗಿವೆ.

೪. **ಡಣಾಪುರ :** ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿ ಹೊಸಪೇಟೆಯಿಂದ ಮರಿಯಮ್ಮನಹಳ್ಳಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮವಿದೆ. ತಾಲ್ಲೂಕು ಪ್ರದೇಶದಿಂದ ೧೨ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೭೪ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಸಮತಟ್ಟು ಪ್ರದೇಶದಿಂದ ಕೂಡಿದೆ. ಈ ಗ್ರಾಮದ ವಿಸ್ತೀರ್ಣ ೨೦೮೮.೯೮ ಇದೆ. ಮತ್ತು ಗ್ರಾಮಠಾಣ ೫೨.೩೨ ಹೆಕ್ಟೇರ್ ಇದೆ. ೨೮೨ ಕುಟುಂಬಗಳಿಂದ ೧,೨೫೦ ಜನಸಂಖ್ಯೆಯಿದೆ. ಲಿಂಗಾಯತ, ಹರಿಜನ, ಕುರುಬ, ಮುಸ್ಲಿಂ, ಗೊಲ್ಲ, ನಾಯಕ, ಈಡಿಗ, ಅಗಸ, ಕಮ್ಮಾರ, ಶೆಟ್ಟರು, ಬ್ರಾಹ್ಮಣ, ಜಂಗಮ, ಮೇದರ ಮುಂತಾದ ಸಮುದಾಯಗಳು ಕಂಡುಬರುತ್ತವೆ. ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ರೂಢಿಯಲ್ಲಿರುವ ಭಾಷೆಯಾಗಿದೆ. ಲಿಂಗಾಯತ ಮತ್ತು ಹರಿಜನ ಸಂಖ್ಯಾಬಲವಾಗಿ ಕಾಣುತ್ತಾರೆ.

ಈ ಗ್ರಾಮವು ಕೆಂಪು ಮತ್ತು ಕಪ್ಪು ಮಿಶ್ರಿತ ಕಂದು ಬಣ್ಣದ ಭೂಮಿಯನ್ನು ಹೊಂದಿದೆ. ಕೃಷಿ ಇಲ್ಲಿನ ಪ್ರಮುಖ ಉದ್ಯೋಗವಾಗಿದೆ. ಶೇಂಗಾ, ಈರುಳ್ಳಿ, ಜೋಳ, ಮೆಕ್ಕೆಜೋಳವನ್ನು ಬೆಳೆಯುತ್ತಾರೆ. ಕಬ್ಬಿಣದ ಅದಿರಿನ ಕಾರ್ಖಾನೆಯು ಇತ್ತೀಚೆಗೆ ಊರಿನ ಪಕ್ಕದಲ್ಲಿ ಪ್ರಾರಂಭವಾಗಿದೆ. ಅದರ ಧೂಳು ಬಂದು ಬೆಳೆಯ

ಮೇಲೆ ಬೀಳುತ್ತದೆ ಎನ್ನುವುದು ರೈತರ ಆತಂಕವಾಗಿದೆ. ವಾಯುಮಾಲಿನ್ಯ, ವಿದ್ಯುತ್ ಮತ್ತು ನೀರು ಪ್ರಮುಖ ಸಮಸ್ಯೆಗಳಾಗಿವೆ.

೪. ಹೊಸಪೇಟೆ-ಕಂಪ್ಲಿ ರಸ್ತೆ ಮಾರ್ಗದಲ್ಲಿನ ಗಣಿಗಾರಿಕೆಯ ನೇರ ಪರಿಣಾಮ ಎದುರಿಸುತ್ತಿರುವ ಗ್ರಾಮಗಳು.

೧. **ಕೊಂಡನಾಯಕನಹಳ್ಳಿ :** ಹೊಸಪೇಟೆಯಿಂದ ಕಂಪ್ಲಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮವಿದೆ. ತಾಲ್ಲೂಕಿಗೆ ೪ ಕಿ.ಮೀ. ಮತ್ತು ಜಿಲ್ಲೆಗೆ ೬೪ ಕಿ.ಮೀ. ದೂರವಿದೆ. ೧೬೪೮.೯೬ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ೫.೪೬ ಹೆಕ್ಟೇರ್ ಗ್ರಾಮದ ವಿಸ್ತೀರ್ಣವನ್ನು ಹೊಂದಿದೆ. ಒಟ್ಟು ೨,೨೧೦ ಜನಸಂಖ್ಯೆಯನ್ನು ಹೊಂದಿದೆ. ಹರಿಜನ, ಕುರುಬ, ಜಂಗಮ, ಲಂಬಾಣಿ, ಮುಸ್ಲಿಂ, ವಡ್ಡ, ಲಿಂಗಾಯತ, ಕಟ್ಟೇರ, ವಾಲ್ಮೀಕಿ, ದೇವಾಂಗ, ವೈಶ್ಯ ಸಮುದಾಯದವರಿದ್ದಾರೆ. ಕುರುಬರು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಕನ್ನಡ, ತೆಲುಗು, ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ಹೆಚ್ಚು ರೂಢಿಯಲ್ಲಿರುವ ಭಾಷೆಯಾಗಿದೆ.

ಈ ಗ್ರಾಮದ ಪ್ರಮುಖ ಉದ್ಯೋಗ ಕೃಷಿ ಮತ್ತು ಇಟ್ಟಿಗೆ ತಯಾರಿಸುವುದಾಗಿದೆ. ಈ ಪ್ರದೇಶದ ಕಂದುಬಣ್ಣದ ಭೂಮಿಯಲ್ಲಿ ಹತ್ತಿ. ಕಬ್ಬು, ಜೋಳ, ಸೂರ್ಯಕಾಂತಿಯನ್ನು ಬೆಳೆಯುತ್ತಾರೆ. ಕುರುಬ ಸಮುದಾಯದವರು ಹೆಚ್ಚಾಗಿ ಭೂಮಿಯನ್ನು ಹೊಂದಿದ್ದಾರೆ. ಮಣ್ಣಿನ ಇಟ್ಟಿಗೆಯನ್ನು ಹೆಚ್ಚಾಗಿ ತಯಾರಿಸಲಾಗುತ್ತದೆ. ಇಟ್ಟಿಗೆ ತಯಾರಿಕೆಯಲ್ಲಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈ ಗ್ರಾಮ ಪ್ರಸಿದ್ಧಿಯಾದುದಾಗಿದೆ.

೨. **ಕಮಲಾಪುರ :** ಹೊಸಪೇಟೆ ಕಂಪ್ಲಿ ರಸ್ತೆಯಲ್ಲಿ ಕಮಲಾಪುರ ಪಟ್ಟಣವಿದೆ. ಇದು ತಾಲ್ಲೂಕು ಕೇಂದ್ರಕ್ಕೆ ೧೦ ಕಿ.ಮೀ. ಮತ್ತು ಜಿಲ್ಲಾ ಕೇಂದ್ರಕ್ಕೆ ೫೫ ಕಿ.ಮೀ. ಅಂತರದಲ್ಲಿದೆ. ಸಮತಟ್ಟು ಪ್ರದೇಶದಿಂದ ಕೂಡಿದುದಾಗಿದೆ. ಒಟ್ಟು ೩೦ ಸಾವಿರ ಜನಸಂಖ್ಯೆಯನ್ನು ಹೊಂದಿದೆ. ಲಿಂಗಾಯತ, ಹರಿಜನ, ಕುರುಬ, ಮುಸ್ಲಿಂ, ಗೊಲ್ಲ, ನಾಯಕ, ಈಡಿಗ, ಅಗಸ, ಕಮ್ಮಾರ, ಶೆಟ್ಟರು, ಬ್ರಾಹ್ಮಣ, ಜಂಗಮ, ಹೂಗಾರರು, ಗೌಳೇರು, ಬೋವಿ, ಬಾರಿಕ, ಅಕ್ಕಸಾಲಿಗ, ಕ್ರಿಶ್ಚಿಯನ್, ಕೊರವ, ಲಂಬಾಣಿ, ನೇಕಾರ, ಕಿಳ್ಳಿಕ್ಯಾತರು, ಮರಾಠಿ, ರೆಡ್ಡಿ, ತಮಿಳು, ವಲಸಿಗರು, ಬೌದ್ಧ, ಜೈನ ಮೊದಲಾದ ಸಮುದಾಯದವರು ಕಂಡುಬರುತ್ತಾರೆ. ಕನ್ನಡ, ತೆಲುಗು, ತಮಿಳು, ಉರ್ದು, ಕೊಂಕಣಿ ಭಾಷೆಯನ್ನಾಡುತ್ತಾರೆ. ಕನ್ನಡ ಮತ್ತು ತೆಲುಗು ಹೆಚ್ಚು ಬಳಕೆಯಲ್ಲಿರುವ ಭಾಷೆಯಾಗಿದೆ.

ಈ ಪಟ್ಟಣದಲ್ಲಿ ಕೃಷಿ ಪ್ರಮುಖ ಉದ್ಯೋಗವಾಗಿದೆ. ಕೃಷಿಯ ಜೊತೆಗೆ ವ್ಯಾಪಾರ ವಹಿವಾಟುಗಳು ಸಹ ನಡೆಯುತ್ತವೆ. ರೈತರು ಈ ಪ್ರದೇಶದ ಕೆಂಪು ಮತ್ತು ಕಂದು ಬಣ್ಣದ ಭೂಮಿಯಲ್ಲಿ ಕಬ್ಬು, ಬಾಳೆ, ಶೇಂಗಾ, ಭತ್ತ, ಹತ್ತಿ, ಜೋಳ, ನವಣೆ, ಸಜ್ಜೆ, ಮೆಕ್ಕೆಜೋಳ, ಸೆಣಬು, ಸೂರ್ಯಕಾಂತಿ, ಅಲಸಂದಿ, ತರಕಾರಿಗಳನ್ನು ಬೆಳೆಯುತ್ತಾರೆ. ಇಲ್ಲಿ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ. ೭ ಮಣ್ಣಿನ ಇಟ್ಟಿಗೆ ಮತ್ತು ೨ ಸಿಮೆಂಟಿನ ಇಟ್ಟಿಗೆ ಭಟ್ಟಿಗಳಿವೆ.

ಈ ಪಟ್ಟಣದ ವ್ಯಾಪ್ತಿಯಲ್ಲಿ ಕುರುಚಲು ಅರಣ್ಯ ಕಂಡುಬರುತ್ತದೆ. ನರಿ, ಕಾಡು ಹಂದಿ, ತೋಳ, ಚಿರತೆ, ಆಡವಿಬೆಕ್ಕು ಮುಂತಾದ ಪ್ರಾಣಿ ಪಕ್ಷಿಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಹಲವಾರು ಸರಕಾರಿ ಕಛೇರಿಗಳು ಕಂಡುಬರುತ್ತವೆ. ಒಂದು ಪುರಾತತ್ವ ಸಂಗ್ರಹಾಲಯವಿದೆ. ೨ ಚಲನಚಿತ್ರ ಮಂದಿರ ಮತ್ತು ೨ ಬಸ್ ನಿಲ್ದಾಣಗಳನ್ನು ಹೊಂದಿದೆ. ೩ ಬ್ಯಾಂಕ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ಈ ಪ್ರದೇಶ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎನ್ನಬಹುದಾಗಿದೆ.

೩. **ರಾಮನಗರ :** ಹೊಸಪೇಟೆ ಕಂಪ್ಲಿ ಮುಖ್ಯ ರಸ್ತೆಯಲ್ಲಿ ಈ ಗ್ರಾಮವಿದೆ. ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೫೬ ಕಿ.ಮೀ. ಅಂತರದಲ್ಲಿದೆ ಒಟ್ಟು ೨೬ ಕುಟುಂಬಗಳಿಂದ ೧೫೦ ಜನಸಂಖ್ಯೆಯನ್ನು ಹೊಂದಿದೆ. ಲಂಬಾಣಿ, ಕುರುಬ, ಮುಸ್ಲಿಂ, ಅಗಸ ಸಮುದಾಯಗಳು ಕಂಡುಬರುತ್ತವೆ. ಲಂಬಾಣಿ ಸಮುದಾಯದವರು ಹೆಚ್ಚಾಗಿ ಕಂಡುಬರುತ್ತಾರೆ. ಇಲ್ಲಿ ಹೆಚ್ಚಾಗಿ ಲಂಬಾಣಿ ಭಾಷೆಯನ್ನು ಮಾತನಾಡುತ್ತಾರೆ.

ಇಲ್ಲಿನ ಜನರು ಹೆಚ್ಚಾಗಿ ಮೂಢನಂಬಿಕೆಗಳ ಮೇಲೆ ಪ್ರಭಾವಿತರಾಗಿದ್ದಾರೆ. ಈ ಗ್ರಾಮದ ಜನರಿಗೆ ಸ್ವಂತ ಜಮೀನು ಇಲ್ಲ. ಬೇರೆಯವರ ಹತ್ತಿರ ಕೆಲಸ ಮಾಡಿ ಬದುಕುತ್ತಾರೆ. ಕೆಲವರು ಬೇರೆಯವರ ಜಮೀನನ್ನು ಗುತ್ತಿಗೆ ಪಡೆದು ಉಳುಮೆ ಮಾಡುತ್ತಾರೆ. ಕೆಲವರು ಕೃಷಿ ಕಾರ್ಮಿಕ ಕೆಲಸದ ಜೊತೆಗೆ ಕಟ್ಟಿಗೆಯನ್ನು ಮಾರಿ ಜೀವನ ಸಾಗಿಸುತ್ತಾರೆ. ಕೆಂಪು ಮಿಶ್ರಿತ ಕಂದು ಬಣ್ಣದ ಈ ಭೂಮಿಯಲ್ಲಿ ಕಬ್ಬು, ಬಾಳೆ ಮತ್ತು ಭತ್ತವನ್ನು ಬೆಳೆಯುತ್ತಾರೆ. ಇಲ್ಲಿ ಮಣ್ಣಿನ ಮತ್ತು ಸಿಮೆಂಟಿನ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಪ್ರದೇಶವು ಕಲ್ಲು ಗುಡ್ಡಗಳಿಂದ ಕೂಡಿದೆ.

೪. **ವೆಂಕಟಾಪುರಕ್ಯಾಂಪ್ :** ಈ ಗ್ರಾಮ ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೫೮ ಕಿ.ಮೀ. ಅಂತರದಲ್ಲಿದೆ. ಒಟ್ಟು ೬೮೦ ಜನಸಂಖ್ಯೆಯನ್ನು ೧೪೦ ಕುಟುಂಬಗಳು ಹೊಂದಿದೆ. ಬೋವಿ, ನಾಯಕ, ಹಗಲುವೇಷಗಾರರು, ಕ್ರಿಶ್ಚಿಯನ್, ಮುಸ್ಲಿಂ, ಲಿಂಗಾಯತ, ಗೊಲ್ಲ, ಈಡಿಗ, ಬ್ರಾಹ್ಮಣ, ಬಣಜಿಗ ಸಮುದಾಯಗಳು ಕಂಡುಬರುತ್ತವೆ. ಬೋವಿ ಜನಾಂಗದವರು ಅಧಿಕ ಸಂಖ್ಯೆಯಲ್ಲಿದ್ದಾರೆ. ಕನ್ನಡ, ತೆಲುಗು, ತಮಿಳು, ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ಮತ್ತು ತಮಿಳು ಭಾಷೆಯು ಹೆಚ್ಚು ಜನಪ್ರಿಯವಿದೆ.

ಈ ಗ್ರಾಮದ ಜನ ಕಲ್ಲಿನ ಕ್ವಾರೆ ಮತ್ತು ಕೃಷಿಯನ್ನವಲಂಬಿಸಿದ್ದಾರೆ. ಕೃಷಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಲ್ಲಿನ ಕ್ವಾರೆಯನ್ನು ಅವಲಂಬಿಸಿದ್ದಾರೆ. ಕಪ್ಪು ಮಿಶ್ರಿತ ಕಂದುಬಣ್ಣದ ಭೂಮಿಯನ್ನು ಹೊಂದಿದೆ. ಕೇವಲ ೧೫ ರಿಂದ ೨೦ ಕುಟುಂಬಗಳು ಮಾತ್ರ ಭೂಮಿಯನ್ನು ಹೊಂದಿವೆ. ಕಲ್ಲಿನ ಗುಡ್ಡಗಳಿಂದ ಆವೃತವಾಗಿರುವ ಈ ಪ್ರದೇಶದಲ್ಲಿ ಅರಣ್ಯ ಕಡಿಮೆ ಪ್ರಮಾಣದಲ್ಲಿದೆ.

೫. **೭೬ ವೆಂಕಟಾಪುರ :** ಹೊಸಪೇಟೆ ಮತ್ತು ಕಂಪ್ಲಿ ಮಾರ್ಗದಲ್ಲಿ ಈ ಗ್ರಾಮವಿದೆ. ತಾಲ್ಲೂಕು ಕೇಂದ್ರಕ್ಕೆ ೧೭ ಕಿ.ಮೀ. ಮತ್ತು ಜಿಲ್ಲಾ ಕೇಂದ್ರಕ್ಕೆ ೬೦ ಕಿ.ಮೀ. ಅಂತರದಲ್ಲಿದೆ. ಗ್ರಾಮದ ವಿಸ್ತೀರ್ಣ ೨೯೬೩.೨೨

ಚ.ಕಿ.ಮೀ ಇದೆ. ಗ್ರಾಮಠಾಣವು ೧೩.೭೭ ಚ.ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ೧೯೯೧ರ ಜನಗಣತಿಯ ಪ್ರಕಾರ ೨,೦೫೩ ಜನಸಂಖ್ಯೆಯನ್ನು ಹೊಂದಿದೆ. ನಾಯಕ, ಲಿಂಗಾಯತ, ಕುರುಬ, ಹರಿಜನ, ಉಪ್ಪಾರ, ಮುಸ್ಲಿಂ, ಕಬ್ಬೇರ, ವಡ್ಡ, ಈಡಿಗ, ರೆಡ್ಡಿ, ಪದ್ಮಶಾಲಿ, ಕೊರವ, ಬ್ರಾಹ್ಮಣ, ಬಡಿಗ ಜಂಗಮ, ಕುಂಬಾರ, ಹಡಪದ, ಅಗಸ ಮುಂತಾದ ಸಮುದಾಯದವರು ಕಂಡುಬರುತ್ತಾರೆ. ನಾಯಕ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಕನ್ನಡ, ತೆಲುಗು, ಹಿಂದಿ ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ರೂಢಿಯಲ್ಲಿರುವ ಭಾಷೆಯಾಗಿದೆ. ಇಲ್ಲಿನ ಜನರು ಕೃಷಿ ಮತ್ತು ಕ್ವಾರೆ ಕೆಲಸವನ್ನು ಅವಲಂಬಿಸಿದ್ದಾರೆ. ಕೆಂಪು ಮತ್ತು ಕಪ್ಪು ಮಿಶ್ರಿತ ಕಂದು ಬಣ್ಣದ ಭೂಮಿಯನ್ನು ಹೊಂದಿದೆ. ಕಬ್ಬು, ಬಾಳೆ ಮತ್ತು ಭತ್ತ ಇಲ್ಲಿನ ಪ್ರಮುಖ ಬೆಳೆಗಳಾಗಿವೆ. ಇಲ್ಲಿ ಕೃಷಿ ಭೂಮಿಯನ್ನು ಹೊಂದಿದವರು ಕಡಿಮೆ ಪ್ರಮಾಣದಲ್ಲಿದ್ದಾರೆ. ಹೆಚ್ಚಿನವರು ಕೃಷಿ ಕೂಲಿಕಾರರಾಗಿ ಕೆಲಸ ಮಾಡುತ್ತಿದ್ದಾರೆ.

೬. ಬುಕ್ಕಸಾಗರ : ಹೊಸಪೇಟೆ ಕಂಪ್ಲಿ ಮಾರ್ಗದಲ್ಲಿ ಬುಕ್ಕಸಾಗರ ಗ್ರಾಮವಿದೆ. ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ಮತ್ತು ಜಿಲ್ಲಾ ಕೇಂದ್ರದಿಂದ ೬೨ ಕಿ.ಮೀ. ಅಂತರದಲ್ಲಿದೆ. ಸಮತಟ್ಟು ಪ್ರದೇಶದಿಂದ ಕೂಡಿದ ಈ ಗ್ರಾಮದ ವಿಸ್ತೀರ್ಣ ೧೩೮೬.೧೫ ಚ.ಕಿ.ಮೀ. ಇದೆ. ಇದರಲ್ಲಿ ಗ್ರಾಮಠಾಣದ ವಿಸ್ತೀರ್ಣ ೧೩.೮೮ ಚ.ಕಿ.ಮೀ. ೧೯೯೧ರ ಜನಗಣತಿಯ ಪ್ರಕಾರ ೨೩೭ ಕುಟುಂಬಗಳು ನೆಲೆಸಿವೆ. ಬೋವಿ, ಹರಿಜನ, ಮುಸ್ಲಿಂ, ಲಿಂಗಾಯತ, ಬ್ರಾಹ್ಮಣ, ಈಡಿಗ, ನಾಯಕ, ಕುರುಬ ಮುಂತಾದ ಸಮುದಾಯಗಳು ಕಂಡುಬರುತ್ತವೆ. ಇಲ್ಲಿನ ಜನರು ಹೆಚ್ಚಾಗಿ ಕೃಷಿಗಿಂತ ಕಲ್ಲಿನ ಕ್ವಾರೆಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕಪ್ಪು ಮಿಶ್ರಿತ ಕಂದುಬಣ್ಣದ ಈ ಭೂಮಿಯಲ್ಲಿ ಬಾಳೆ ಮತ್ತು ಭತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಭೂ ರಹಿತ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ. ಅದರಲ್ಲೂ ಹೆಚ್ಚಾಗಿ ಪರಿಶಿಷ್ಟ ಜಾತಿಯವರು ಭೂ ರಹಿತರಾಗಿದ್ದಾರೆ. ಇವರು ಕ್ವಾರೆಯ ಕೆಲಸದಲ್ಲಿ ಒಂದು ಕಲ್ಲಿಗೆ ಅಥವಾ ಒಂದು ಬಂಡೆಗೆ ಇಂತಿಷ್ಟು ಹಣ ಎನ್ನುವ ಪ್ರಮಾಣದಲ್ಲಿ ದುಡಿಯುತ್ತಾರೆ. ಈ ಗ್ರಾಮದಲ್ಲಿ ಬಯಲಾಟವಾಡುವ ವಿಶಿಷ್ಟ ಕಲಾವಿದರಿದ್ದಾರೆ. ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ.

೭. ಸಿದ್ದೇಶ್ವರನಗರ : ಹೊಸಪೇಟೆ ಕಂಪ್ಲಿ ಮಾರ್ಗದಲ್ಲಿ ಈ ಗ್ರಾಮವಿದೆ. ಸಮತಟ್ಟು ಪ್ರದೇಶದಿಂದ ಕೂಡಿದೆ. ತಾಲ್ಲೂಕು ಕೇಂದ್ರಕ್ಕೆ ೨೭ ಕಿ.ಮೀ. ಮತ್ತು ಜಿಲ್ಲಾ ಕೇಂದ್ರಕ್ಕೆ ೫೬ ಕಿ.ಮೀ. ಅಂತರದಲ್ಲಿದೆ. ಒಟ್ಟು ೧೪ ಕುಟುಂಬಗಳಿಂದ ೪೪ ಜನಸಂಖ್ಯೆಯನ್ನು ಹೊಂದಿದೆ. ರಾಮಸಾಗರ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಈ ಹಳ್ಳಿಯು ಸೇರುತ್ತದೆ. ರೆಡ್ಡಿ, ಜಂಗಮ, ಬಡಿಗ, ಗೊಲ್ಲ, ಲಿಂಗಾಯತ ಸಮುದಾಯಗಳು ಕಂಡುಬರುತ್ತವೆ. ಆಂಧ್ರದವರು ಹೆಚ್ಚಾಗಿ ಕಂಡುಬರುತ್ತಾರೆ. ನಂತರದಲ್ಲಿ ಜಂಗಮ ಮತ್ತು ಲಿಂಗಾಯತ ಸಮುದಾಯಗಳು ಕಂಡುಬರುತ್ತವೆ.

ಕೆಲವೊಂದು ಕುಟುಂಬಗಳು ಭೂಮಿಯನ್ನು ಹೊಂದಿಲ್ಲ. ಉಳಿದವರು ಕಾಲುವೆ ನೀರನ್ನು ಅವಲಂಬಿಸಿ ಕೃಷಿಯಲ್ಲಿ ತೊಡಗಿದ್ದಾರೆ. ಕೆಂಪು ಬಣ್ಣದಿಂದ ಕೂಡಿದ ಈ ಭೂಮಿಯಲ್ಲಿ ಭತ್ತ, ರಾಗಿ, ಸೂರ್ಯಕಾಂತಿ,

ಮೆಕ್ಕೆಜೋಳವನ್ನು ಬೆಳೆಯುತ್ತಾರೆ. ಕೆಲವೇ ಕುಟುಂಬಗಳು ಇಲ್ಲಿ ವಾಸಿಸುತ್ತಿವೆಯಾದರೂ, ಇಟ್ಟಿಗೆ ತಯಾರಿಕೆಯು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಕೃಷಿಯ ಜೊತೆಗೆ ಇಟ್ಟಿಗೆ ತಯಾರಿಕೆಯು ಪ್ರಮುಖ ಪಾತ್ರ ವಹಿಸುತ್ತದೆ.

೨.೩ ಗಣಿಗಾರಿಕೆಯ ಸ್ವರೂಪ

ವಿಶ್ವದಲ್ಲಿ ಅತಿ ಹೆಚ್ಚಾಗಿ ಗಣಿಗಾರಿಕೆ ನಡೆಸುತ್ತಿರುವ ದೇಶಗಳೆಂದರೆ ಚೀನಾ ಮತ್ತು ಭಾರತ. ಚೀನಾ ದೇಶದಲ್ಲಿ ಭೂ ಆಳದ ಗಣಗಾರಿಕೆ ಹೆಚ್ಚಾಗಿ ನಡೆಯುತ್ತದೆ. ಭಾರತದಲ್ಲಿ ಮುಚ್ಚಿದ ಮತ್ತು ತೆರೆದ ಗಣಿಗಾರಿಕೆಗಳು ನಡೆಯುತ್ತಿವೆ. "ರಾಜ್ಯದ ಹೊಸಪೇಟೆ ಮತ್ತು ಬಳ್ಳಾರಿ ವಲಯದಿಂದಲೇ ಈಗ ಸುಮಾರು ೩,೦೦೦ ಕೋಟಿ ರೂಪಾಯಿ ಮೌಲ್ಯದ ಖನಿಜಗಳು ರಫ್ತಾಗುತ್ತಿವೆ."[೫] ಹೊಸಪೇಟೆ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರು ಹೇರಳವಾಗಿ ದೊರೆಯುತ್ತಿದೆ. ಭೂಮಿಯ ಮೇಲ್ಪದರಿನಲ್ಲಿ ಖನಿಜಗಳು ದೊರೆಯುತ್ತಿರುವುದರಿಂದ ಮುಚ್ಚಿದ ಗಣಿಗಾರಿಕೆ ಅವಶ್ಯಕತೆಯಿಲ್ಲ. ಇಲ್ಲಿ ಹೆಚ್ಚಾಗಿ ಕಬ್ಬಿಣದ ಅದಿರನ್ನು ಹೊರ ತೆಗೆದು ಗೋವಾ ಮೂಲಕ ಚೀನಾ ದೇಶಕ್ಕೆ ಸಾಗಿಸಲಾಗುತ್ತಿದೆ.

ಖನಿಜ ಮುಗಿದು ಹೋಗುವ ಸಂಪನ್ಮೂಲ ಎನ್ನುವ ಅರಿವಿದ್ದರು ಸಹ ಬೃಹತ್ ಪ್ರಮಾಣದಲ್ಲಿ ಗಣಿಗಾರಿಕೆಯನ್ನು ಕೈಗೊಳ್ಳಲಾಗುತ್ತಿದೆ. "ಖನಿಜ ಸಂಪನ್ಮೂಲಗಳು ನವೀಕರಿಸಲಾಗದವುಗಳಾಗಿರುವುವು. ಅವುಗಳನ್ನು ಒಮ್ಮೆ ಉಪಯೋಗಿಸಿದರೆ ಮತ್ತೆ ದೊರೆಯಲಾರವು. ಆದ್ದರಿಂದ ಅವುಗಳನ್ನು ಮಿತಮಿತವಾಗಿ ಬಳಸಿಕೊಳ್ಳಬೇಕಾಗಿರುವುದು."[೬]

ಹೊಸಪೇಟೆ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ, ಮ್ಯಾಂಗನೀಸ್, ಸುಣ್ಣದ ಕಲ್ಲಿನ ಗಣಿಗಾರಿಕೆ, ಬಿಳಿಕಲ್ಲಿನ ಗಣಿಗಾರಿಕೆ, ಮಣ್ಣಿನ ಮತ್ತು ಸಿಮೆಂಟಿನ ಇಟ್ಟಿಗೆ ತಯಾರಿಕೆಯು ಭರದಿಂದ ಸಾಗಿದೆ. ಸಣ್ಣ ಪ್ರಮಾಣದಿಂದ ಹಿಡಿದು ಬೃಹತ್ ಪ್ರಮಾಣದ ಗಣಿಗಾರಿಕೆಗಳು ನಡೆಯುತ್ತಿವೆ. ಗಣಿಗಾರಿಕೆಯ ಪ್ರಕ್ರಿಯೆಗಳು ಅಥವಾ ಚಟುವಟಿಕೆಗಳನ್ನು ಈ ಕೆಳಗಿನಂತೆ ನೋಡಬಹುದು.

ಸಿಡಿಮದ್ದು ಸಿಡಿಸುವುದು : ಸಿಡಿಮದ್ದು ಸಿಡಿಸುವುದು ಗಣಿಗಾರಿಕೆಯ ಪ್ರಮುಖ ಚಟುವಟಿಕೆಗಳಲ್ಲೊಂದಾಗಿದೆ. ದೊಡ್ಡ ಪ್ರಮಾಣದ ಗಣಿಗಾರಿಕೆಯ ಸ್ಥಳಗಳಲ್ಲಿ ಈ ದೃಶ್ಯ ಕಂಡುಬರುತ್ತದೆ. ಬೆಟ್ಟ ಗುಡ್ಡಗಳ ಮೇಲೆ ಸಿಡಿಮದ್ದು ಸಿಡಿಸಿ ಅದಿರನ್ನು ಪುಡಿ ಮಾಡಿ ಸಂಗ್ರಹಿಸಲಾಗುವುದು. ಸಿಡಿಮದ್ದು ಇಲ್ಲದಿದ್ದರೆ ಗಣಿಗಾರಿಕೆ ನಡೆಸಲು ಸಾಧ್ಯವಾಗುವುದಿಲ್ಲ. ಬೆಟ್ಟಗುಡ್ಡಗಳ ಮೇಲೆ ಸಿಡಿಮದ್ದು ಅತ್ಯವಶ್ಯಕವಾಗಿದೆ.

Hitachi ಯಂತ್ರಗಳ ಮೂಲಕ ಅದರಿನ್ನು ಹೊರತೆಗಯುವುದು : Hitachi ಯಂತ್ರಗಳ ಮೂಲಕವು ಸಹ ಅದಿರನ್ನು ಹೊರತೆಗೆಯುತ್ತಾರೆ. ಇದು ಕೆಲವೊಂದು ಸಮಯದಲ್ಲಿ ಬೃಹತ್ ಪ್ರಮಾಣದ ಅದಿರನ್ನು ಹೊರತೆಗೆಯಬಹುದು ಅಥವಾ ವಿರಳವಾದ ಅದಿರುಗಳಿದ್ದರೆ ಸಣ್ಣ ಪ್ರಮಾಣದ ಅದಿರಿನ ಉತ್ಪಾದನೆಯನ್ನು ಉತ್ಪಾದಿಸಬಹುದು. ಈ ಯಂತ್ರಗಳಿಂದ ಬೆಟ್ಟ-ಗುಡ್ಡಗಳ ಮೇಲೆ ಸಿಡಿಮದ್ದು ಸ್ಫೋಟಿಸಿದ ಮೇಲೆ

ಪುಡಿಯಾದ ಅದಿರನ್ನು ತುಂಬಲು ಬಳಸುತ್ತಾರೆ. ಅಲ್ಲದೇ ಬಯಲು ಪ್ರದೇಶದಲ್ಲಿ ಅಥವಾ ಕೃಷಿ ಭೂಮಿಯ ತಳಭಾಗದಲ್ಲಿ ದೊರೆಯುವ ಅದಿರುಗಳನ್ನು ಹೊರತೆಗೆಯಲು ಬಳಸಲಾಗುತ್ತದೆ. Hitachi ಯಂತ್ರವು ಸಹ ಗಣಿಗಾರಿಕೆಯ ಪ್ರಮುಖ ಚಟುವಟಿಕೆಯನ್ನಬಹುದಾಗಿದೆ.

ಭೂಮಿಯ ಮೇಲ್ಭಾಗದಲ್ಲಿರುವ ಅದಿರನ್ನು ಸಂಗ್ರಹಿಸುವುದು : ಭೂಮಿಯ ಮೇಲ್ಭಾಗದಲ್ಲಿ ದೊರೆಯುವ ಅದಿರಿನ ಸಂಗ್ರಹವು ಕೆಲವೊಂದು ಕಡೆ ವ್ಯಾಪಕವಾಗಿ ನಡೆಯುತ್ತಿದೆ. ಬಯಲು ಪ್ರದೇಶದಲ್ಲಿ ಬಿದ್ದಿರುವ ಕಬ್ಬಿಣದ ಅದಿರಿನ ಕಲ್ಲುಗಳನ್ನು ಜನಸಾಮಾನ್ಯರು ಕದ್ದು ಮುಚ್ಚಿ ಆಯ್ದುಕೊಂಡು ಹೋಗಿ ಒಂದು ಪುಟ್ಟಿಗೆ ಇಂತಿಷ್ಟು ಎನ್ನುವ ರೀತಿಯಲ್ಲಿ ಕಾಯಕವನ್ನಾಗಿಸಿಕೊಂಡಿದ್ದಾರೆ. ಕೆಲವೊಂದು ಕಡೆ ಕೂಲಿ ಆಳುಗಳಿಂದ ಗಣಿಮಾಲಿಕರು ಆರಿಸುತ್ತಾರೆ. ಕೃಷಿ ಭೂಮಿಯಲ್ಲಿ ದೊರೆಯುವ ಅದಿರನ್ನು ರೈತರು ಆಯ್ದು ಮಾರಿದರೆ, ಇನ್ನೂ ಕೆಲವರು ಎಕರೆಗೆ ಇಂತಿಷ್ಟು ಎನ್ನುವ ರೀತಿಯಲ್ಲಿ ಅದಿರನ್ನು ಆಯ್ದುಕೊಳ್ಳಲು ಗುತ್ತಿಗೆ ನೀಡುತ್ತಾರೆ.

ಕ್ರಶರ್‌ಗಳ ಮೂಲಕ ಮತ್ತು ಕೂಲಿ ಆಳುಗಳ ಮೂಲಕ ಅದಿರನ್ನು ಪುಡಿ ಮಾಡುವುದು : ಅದಿರನ್ನು ಪುಡಿ ಮಾಡುವಲ್ಲಿ ಕ್ರಶರ್‌ಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕ್ರಶರ್‌ಗಳ ಮೂಲಕ ಬೃಹತ್ ಪ್ರಮಾಣದಲ್ಲಿ ಅದಿರನ್ನು ಪುಡಿಮಾಡಲಾಗುತ್ತದೆ. ಕೆಲವೊಂದು ಕಡೆ ಕೂಲಿ ಆಳುಗಳ ಮೂಲಕ ಕುಟ್ಟಿ ಪುಡಿ ಮಾಡಿಸಲಾಗುತ್ತದೆ. ಅದರಿನ್ನು ಪುಡಿ ಮಾಡಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಶೇಖರಿಸಿ ನಂತರ ಆ ಪುಡಿಯನ್ನು ವಿಲೇವಾರಿ ಮಾಡಲಾಗುತ್ತದೆ.

ಅದಿರಿನ ಪುಡಿಯ ಸಂಗ್ರಹ

ರೈತರ ಜಮೀನಿನಲ್ಲಿ : ಅದಿರಿನ ಪುಡಿಯ ಸಂಗ್ರಹಣೆಯಲ್ಲಿ ರೈತರ ಜಮೀನುಗಳು ಪ್ರಮುಖ ಪಾತ್ರವಹಿಸುತ್ತವೆ. ಅದರಿನ ಪುಡಿಯ ಸಂಗ್ರಹಕ್ಕಾಗಿ ಎಕರೆಗೆ ಪ್ರತಿವರ್ಷಕ್ಕೆ ೨೦ ರಿಂದ ೩೦ ಸಾವಿರ ರೂಪಾಯಿ ದೊರೆಯುವುದರಿಂದ ಹಣದ ಆಸೆಗಾಗಿ ರೈತರ ಜಮೀನುಗಳು ಅದಿರಿನ (Stock yard) ಕಣಜಗಳಾಗುತ್ತಿವೆ.

ಗಣಿ ಮಾಲಿಕರ ಸ್ಥಳಗಳಲ್ಲಿ : ಕೆಲವೊಂದು ಕಡೆ ಅದಿರಿನ ಪುಡಿಯ ಸಂಗ್ರಹಣೆಯು ಗಣಿಮಾಲಿಕರ ಸ್ಥಳಗಳಲ್ಲಿ ಹಾಕಲಾಗಿದೆ. ಕೃಷಿಕರಿಂದ ಖರೀದಿ ಮಾಡಿಕೊಂಡ ಅಥವಾ ಮೊದಲಿನಿಂದಲೂ ಇರುವ ತಮ್ಮ ಜಮೀನಿನಲ್ಲಿಯೇ ಗಣಿ ಮಾಲಿಕರು ಅದಿರಿನ ಪುಡಿಯನ್ನು ಸಂಗ್ರಹಿಸಿರುವುದು ಕಂಡುಬರುತ್ತದೆ.

ಪಾಳು ಭೂಮಿಯಲ್ಲಿ : ಕೆಲವೊಂದು ಕಡೆ ಪಾಳು ಭೂಮಿಯಲ್ಲಿ ಅದಿರನ್ನು ಸಂಗ್ರಹಿಸಲಾಗಿದೆ. ಬೆಟ್ಟ-ಗುಡ್ಡದ ಕಲ್ಲು ಮಿಶ್ರಿತ ಪಾಳು ಭೂಮಿ, ಕಸ-ಕಂಟೆಗಳು ಬೆಳೆದಿರುವ ಪ್ರದೇಶವನ್ನು ಹಸನಾಗಿಸಿ ಅದಿರಿನ ಪುಡಿಯನ್ನು ಸಂಗ್ರಹಿಸಿರುವುದು ಕಂಡುಬರುತ್ತದೆ.

ಅದಿರಿನ ಪುಡಿಯ ಸಾಗಣೆ

ಲಾರಿಗಳ ಮೂಲಕ : "ಹೊಸಪೇಟೆ ಸೊಂಡೂರು ಭಾಗಗಳಿಂದ ಪ್ರತಿದಿನ ಸುಮಾರು ೧೫೦೦ ರಿಂದ ೨೦೦೦

[illegible]

ಲಾರಿಗಳು ಅದಿರು ತುಂಬಿಕೊಂಡು ಓಡಾಡುತ್ತಿವೆ.[೧೧೦] ಅದಿರಿನ ಪುಡಿಯ ಸಾಗಣೆಯಲ್ಲಿ ಲಾರಿ/ಟಿಪ್ಪರ್‌ಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ದಿನನಿತ್ಯ ಸಾವಿರಾರು ಲಾರಿಗಳು ಗಣಿಗಾರಿಕೆಯ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ಬೆಟ್ಟ-ಗುಡ್ಡಗಳ ಮೇಲಿಂದ ಕೆಳಕ್ಕೆ ತರುವುದು ಮತ್ತು ಬೇರೆಡೆಗೆ ಸಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಸರಕು ರೈಲುಗಳ ಮೂಲಕ : ಲಾರಿಗಳು ಬೆಟ್ಟಗುಡ್ಡಗಳ ಮೇಲಿಂದ ತಂದು ಕೃಷಿ ಭೂಮಿಯಲ್ಲಿ ಅಥವಾ ಸರಕು ಸಾಗಣೆಯ ರೈಲ್ವೇ ನಿಲ್ದಾಣದ ಸ್ಥಳದಲ್ಲಿ ತಂದು ಹಾಕುತ್ತವೆ. ಆದರೆ ಅಲ್ಲಿಂದ ಮುಂದಕ್ಕೆ ಸಾಗಿಸುವಲ್ಲಿ ಸರಕು ರೈಲುಗಳು ಪ್ರಮುಖ ಪಾತ್ರ ವಹಿಸುತ್ತವೆ. ಸರಕು ರೈಲುಗಳು ಅದಿರಿನ ಪುಡಿಯನ್ನು ಬಂದರಿನವರಿಗೆ ಸಾಗಿಸುತ್ತವೆ. ಅಲ್ಲಿಂದ ವಿದೇಶಕ್ಕೆ ರಫ್ತಾಗುತ್ತವೆ. ಹೀಗೆ ಸರಕು ರೈಲುಗಳು ಅದಿರಿನ ಪುಡಿಯನ್ನು ಸಾಗಿಸುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತವೆ.

ಹೀಗೆ ಗಣಿಗಾರಿಕೆಯು ಹಲವಾರು ವಿವಿಧ ಪ್ರಕ್ರಿಯೆಗಳ ಮೂಲಕ ಸಾಗುತ್ತದೆ. ಗಣಿಗಾರಿಕೆಯು ದಿನದಿಂದ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಕಾರಿಗನೂರು, ವಾಲ್ಮೀಕಿನಗರ,ಶಂಕರನಗರ, ವಡ್ಡರಹಳ್ಳಿ, ಪಾಪಿನಾಯಕನಹಳ್ಳಿಯಲ್ಲಿ ಕಬ್ಬಿಣದ ಅದಿರನ್ನು ಹೊರ ತೆಗೆಯುತ್ತಿರುವುದು ತಿಳಿದುಬರುತ್ತದೆ. ಇಂಗಳಗಿ, ಪಾಪಿನಾಯಕನಹಳ್ಳಿ, ಬೈಲುವದ್ದಿಗೇರಿಯಲ್ಲಿ ದೊಡ್ಡ ಪ್ರಮಾಣದ ಕಲ್ಲಿನ ಕ್ವಾರೆಯ ಕ್ರಶರ್‌ಗಳು ಕೆಲಸ ನಿರ್ವಹಿಸುತ್ತಿವೆ. ಪಾಪಿನಾಯಕನಹಳ್ಳಿಯಲ್ಲಿ ಒಂದು ಮ್ಯಾಂಗನೀಸ್ ಗಣಿಗಾರಿಕೆಯು ಸಹ ನಡೆಯುತ್ತಿದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಜನರು, ಕೃಷಿಕರು ಗಣಗಾರಿಕೆಯನ್ನು ಅವಲಂಬಿಸಿದ್ದಾರೆ. ರೈಲ್ವೇ ಮಾರ್ಗವಿರುವುದರಿಂದ ವ್ಯಾಗಿನ್ ಕೆಲಸದಲ್ಲಿ ಹೆಚ್ಚಾಗಿ ತೊಡಗಿದ್ದಾರೆ. ಕಣವಿರಾಯನಗುಡಿ, ರಾಜಾಪುರ ಮತ್ತು ಕಲ್ಲಹಳ್ಳಿಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಯುತ್ತಿದೆ. ಕಲ್ಲಹಳ್ಳಿಯಲ್ಲಿ ಸಣ್ಣ ಪ್ರಮಾಣದಲ್ಲಿ ಮ್ಯಾಂಗನೀಸ್ ದೊರೆಯುತ್ತಿದೆ. ಅಂದರೆ ಇಲ್ಲಿ ಕಬ್ಬಿಣದ ಅದಿರಿನ ಜೊತೆಗೆ ಮ್ಯಾಂಗನೀಸ್ ಗಣಿಗಾರಿಕೆ ನಡೆಯುತ್ತಿದೆ.

ವ್ಯಾಸನಕೆರೆ ವ್ಯಾಪ್ತಿಯ ವ್ಯಾಸನಕೆರೆ ಸ್ಟೇಷನ್, ಗುಂಡಾ ಸ್ಟೇಷನ್, ಬಲ್ಡೋಟ ಮೈನ್ಸ್ ಮುಂತಾದವುಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಯುತ್ತಿದೆ. ಗಾಳೆಮ್ಮನಗುಡಿಯಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆಯ ಜೊತೆಗೆ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರಿನ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಹನುಮನಹಳ್ಳಿಯಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಯುತ್ತಿದೆ. ಧನಾಪುರದಲ್ಲಿ ಕಬ್ಬಿಣದ ಅದಿರಿನ ಕಾರ್ಖಾನೆಯು ಹೊಸದಾಗಿ ಪ್ರಾರಂಭವಾಗಿದೆ. ಮರಿಯಮ್ಮನಹಳ್ಳಿ ತಾಂಡದಲ್ಲಿ ಕಬ್ಬಿಣದ ಕಾರ್ಖಾನೆಯಿಂದ ಬಂದ ತ್ಯಾಜ್ಯ ಪದಾರ್ಥವನ್ನು ಪುಡಿ ಮಾಡಿ ಕಬ್ಬಿಣ, ಕೋಕ್ ಮತ್ತು ಸಿಲಿಕಾಗಳನ್ನು ಬೇರ್ಪಡಿಸುವ ಕಾರ್ಯ ನಡೆಯುತ್ತಿದೆ. ಜೊತೆಗೆ ಕಲ್ಲಿನ ಕ್ವಾರೆ ಕೆಲಸವು ಸಹ ನಡೆದಿದೆ. ದೇವಲಾಪುರದಲ್ಲಿ ಎರಡು ಕಲ್ಲಿನ ಕ್ವಾರೆಗಳು ಕಾರ್ಯ ನಿರ್ವಹಿಸುತ್ತಿವೆ.

ಅನಂತಶಯನಗುಡಿಯಲ್ಲಿ ಇಟ್ಟಿಗೆಯ ಜೊತೆಗೆ ಸುಣ್ಣವನ್ನು ತಯಾರಿಸುತ್ತಾರೆ. ಕೊಂಡನಾಯಕನಹಳ್ಳಿ, ಕಮಲಾಪುರ, ರಾಮನಗರ, ವೆಂಕಟಾಪುರಕ್ಯಾಂಪ್, ಬುಕ್ಕಸಾಗರ ಫಾರಂ, ಸಿದ್ದೇಶ್ವರ ನಗರದಲ್ಲಿ ಕೆಂಪು ಮಣ್ಣಿನ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ. ಅಲ್ಲದೆ ಕಮಲಾಪುರ, ರಾಮನಗರದಲ್ಲಿ ಮತ್ತು ಪಣಾಪುರ ದಲ್ಲಿ ಸಿಮೆಂಟಿನ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ. ವೆಂಕಟಾಪುರಕ್ಯಾಂಪ್, ೭೬ ವೆಂಕಟಾಪುರ ಮತ್ತು ಬುಕ್ಕಸಾಗರದಲ್ಲಿ ಕಲ್ಲಿನ ಕ್ವಾರೆಯ ಕೆಲಸ ನಡೆಯುತ್ತಿದೆ. ಈ ಕ್ವಾರೆಯಲ್ಲಿ ಮಾನವ ಶಕ್ತಿಯನ್ನು ವ್ಯಯಿಸ ಲಾಗುತ್ತದೆ. ಮೊದಲು ಈ ಪ್ರದೇಶದಲ್ಲಿ ಸರಕಾರದ ವತಿಯಿಂದ ಗುತ್ತಿಗೆ ಪಡೆದು ಕ್ವಾರೆ ಕೆಲಸವನ್ನು ಮಾಡುತ್ತಿದ್ದರು. ಆದರೆ ಈಗ ಸರಕಾರ ಕ್ವಾರೆ ಕೆಲಸಕ್ಕೆ ಅನುಮತಿ ನೀಡುತ್ತಿಲ್ಲವಾದರೂ ಕಳ್ಳತನದಿಂದ ಕ್ವಾರೆ ಕೆಲಸ ನಡೆದಿದೆ. ಕಮಲಾಪುರದ ಕೆಲವು ತಮಿಳು ಮಹಿಳೆಯರು ಮನೆಯ ಮುಂದೆ ಜೆಣಚನ್ನು ಕುಟ್ಟಿ ಪುಡಿಮಾಡಿ ಮಾರಾಟ ಮಾಡುತ್ತಿರುವುದು ಕಂಡುಬರುತ್ತದೆ. ಹೊಸಪೇಟೆ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ, ಮ್ಯಾಂಗನೀಸ್, ಕಲ್ಲಿನ ಕ್ವಾರೆ, ಮಣ್ಣಿನ ಇಟ್ಟಿಗೆ ಮತ್ತು ಸಿಮೆಂಟಿನ ಇಟ್ಟಿಗೆ ತಯಾರಿಕೆಯ ಕೆಲಸ ಭರದಿಂದ ನಡೆಯುತ್ತಿರುವುದು ಕಂಡುಬರುತ್ತದೆ.

ಗಣಿಗಾರಿಕೆಯ ಈ ಎಲ್ಲ ಚಟುವಟಿಕೆಗಳು ಕೃಷಿ ಸಮುದಾಯದ ಮೇಲೆ ಮತ್ತು ಕೃಷಿಯ ಮೇಲೆ ಅನೇಕ ಪರಿಣಾಮಗಳನ್ನು ಬೀರುತ್ತವೆ. ವಿಪರೀತ ಗಣಿಗಾರಿಕೆಯಿಂದ ಕೃಷಿ ಭೂಮಿ ಬಂಜರಾಗುವುದರಿಂದ ಹಿಡಿದು, ಆ ಪ್ರದೇಶದ ಮಣ್ಣಿನಲ್ಲಿ ನೀರಿನ ಇಂಗುವಿಕೆಯ ಪ್ರಮಾಣ ಕುಸಿಯುತ್ತದೆ. ರೈತರ ಇಳುವರಿ ಕಡಿಮೆಯಾಗುವುದಲ್ಲದೆ, ಅಂತರ್ಜಲದ ಮಟ್ಟ ಕುಸಿಯುತ್ತದೆ. ರೈತ ಕ್ರಮೇಣ ಕೃಷಿಯನ್ನು ಬಿಟ್ಟು ಹೆಚ್ಚು ಲಾಭ ಕೊಡುವ ಗಣಿಗಾರಿಕೆಗೆ ತನ್ನ ಜಮೀನನ್ನು ಬಿಟ್ಟುಕೊಡುವ ನಿರ್ಧಾರ ಮಾಡುತ್ತಾನೆ. ಇಲ್ಲವೆ ಗಣಿಮಾಲಿಕನ ಅತಿಯಾದ ಒತ್ತಡದಿಂದಲಾದರೂ ತನ್ನ ಕೃಷಿ ಜಮೀನನ್ನು ಮಾರಬೇಕಾಗುತ್ತದೆ. ಕಬ್ಬಿಣದ ಅದಿರನ್ನು ಸಂಗ್ರಹಿಸಲೆಂದು ಹಲವು ಸಲ ನಿರ್ಮಾಣವಾಗುವ Stock yardಗಳಿಗೆ ರೈತರು ಅನಿವಾರ್ಯದಿಂದ ಇಲ್ಲವೆ ಒತ್ತಡದ ಕಾರಣಗಳಿಗಾಗಿ ತಮ್ಮ ಜಮೀನನ್ನು ಗುತ್ತಿಗೆ ರೂಪದಲ್ಲಿ ಗಣಿಮಾಲಿಕರಿಗೆ ನೀಡ ಬೇಕಾಗುತ್ತದೆ. ಅತಿಯಾದ ಗಣಿಗಾರಿಕೆಯಿಂದ ಹಾರುವ ಧೂಳು ನೈಸರ್ಗಿಕ ಹುಲ್ಲುಗಾವಲುಗಳನ್ನು ನಾಶ ಮಾಡುತ್ತದೆ. ಈ ಕಾರಣಕ್ಕಾಗಿ ಭೂಸವಕಳಿ ಉಂಟಾಗಿ ಕೆರೆ, ಹಳ್ಳಗಳಲ್ಲಿ ಹೂಳು ತುಂಬಿ ಸಹಜ ನೀರಾವರಿ ವ್ಯವಸ್ಥೆಯು ನಾಶವಾಗುತ್ತದೆ. ಈ ಮೇಲೆ ವಿವರಿಸಿದ ಗಣಿಗಾರಿಕೆಯ ವಿವಿಧ ಚಟುವಟಿಕೆಗಳು ರೈತ ಸಮುದಾಯದ ಮೇಲೆ ನೇರ ಪರಿಣಾಮ ಬೀರುವುದರಿಂದ ಗಣಿಗಾರಿಕೆಯ ವಿವಿಧ ಹಂತದ ಚಟುವಟಿಕೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಟಿಪ್ಪಣಿಗಳು

೧. ಹೊಸಪೇಟೆ ತಾಲ್ಲೂಕು ದರ್ಶನ, ಡಾ.ಸಿ. ಮಹದೇವ, ಡಾ.ಎ.ಸುಬ್ಬಣ್ಣ ರೈ, ಡಾ. ಮಾಧವ ಪೆರಾಜೆ, ಪುಟ.೩

೨. ಕೃಷಿ ಇಲಾಖೆಯ ಮಾಹಿತಿ, ೨೦೦೪

೩. ಕೃಷಿ ಇಲಾಖೆಯ ಮಾಹಿತಿ, ೨೦೦೪

೪. ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಟಿ.ಆರ್. ಚಂದ್ರಶೇಖರ, ಪುಟ. ೩೬

೫. ಅರಣ್ಯ ಇಲಾಖೆ ಮಾಹಿತಿ, ೨೦೦೪

೬. ಹೊಸಪೇಟೆ ತಾಲ್ಲೂಕು ದರ್ಶನ, ಡಾ.ಸಿ. ಮಹದೇವ, ಡಾ.ಎ.ಸುಬ್ಬಣ್ಣ ರೈ, ಡಾ. ಮಾಧವ ಪೆರಾಜೆ, ಪುಟ.೨೨೮

೭. ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಟಿ.ಆರ್. ಚಂದ್ರಶೇಖರ, ಪುಟ. ೫೧

೮. ಪ್ರಜಾವಾಣಿ, ದಿನಪತ್ರಿಕೆ, ದಿನಾಂಕ ೨೨ನೇ ಸೆಪ್ಟೆಂಬರ್, ೨೦೦೪

೯. ಪರಿಸರ ಅಧ್ಯಯನ, ಪ್ರೊ.ಕೆ. ಭೈರಪ್ಪ, ಪುಟ. ೭೬

೧೦. ಪ್ರಜಾವಾಣಿ, ದಿನಪತ್ರಿಕೆ, ದಿನಾಂಕ ೧೩ನೇ ಡಿಸೆಂಬರ್, ೨೦೦೪

ಅಧ್ಯಾಯ ೩

೩.೧. ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳು

೩.೨. ಈ ಗ್ರಾಮಗಳ ಮುಖ್ಯ ಆರ್ಥಿಕ ಚಟುವಟಿಕೆಗಳು

೩.೩. ಕೃಷಿಯನ್ನವಲಂಬಿಸಿರುವ ಸಮುದಾಯಗಳು

ಪೀಠಿಕೆ

ಬಳ್ಳಾರಿ ಜಿಲ್ಲೆಯನ್ನು ಗಣಿಗಾರಿಕೆಯಿಂದ ಗುರುತಿಸುವಂತಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ ಮತ್ತು ಸಂಡೂರಿನಲ್ಲಿ ದೊಡ್ಡ ಪ್ರಮಾಣದ ಗಣಿಗಾರಿಕೆ ನಡೆಯುತ್ತಿದೆ. ಹೊಸಪೇಟೆ ತಾಲ್ಲೂಕಿನಲ್ಲಿ ಗಣಿಗಾರಿಕೆಯು ವ್ಯಾಪಕವಾಗಿ ನಡೆದಿದೆ. ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳ ಜನರಿಗೆ ಗಣಿಗಾರಿಕೆಯು ಒಂದು ವರದಾನವೋ ಅಥವಾ ಒಂದು ಶಾಪವೋ ಎನ್ನುವುದು ತಿಳಿಯದಂತಾಗಿದೆ. ಗಣಿಗಾರಿಕೆಯನ್ನು ಯಥೇಚ್ಛವಾಗಿ ನಡೆಸುತ್ತಿದೆಯಾದರೂ ಸರಿಯಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ಅರಣ್ಯ ರಕ್ಷಣೆ, ಭೂಮಿಯ ಮೇಲ್ಮಣ್ಣಿನ ರಕ್ಷಣೆಗೆ ಯಾವುದೇ ಸರಿಯಾದ ಕ್ರಮಗಳನ್ನು ಕೈಗೊಳ್ಳದಿರುವುದು ಕಂಡುಬರುತ್ತದೆ. “ಕೈಗಾರಿಕಾ ಕ್ರಾಂತಿಯ ನಂತರದ ಅವಧಿಯಲ್ಲಿ ಗಣಿಗಳಲ್ಲಿ ವಿವಿಧ ಬಗೆಯ ಅದಿರುಗಳನ್ನು ಹೊರತೆಗೆಯುವ ಕಾರ್ಯ ಸತತವಾಗಿ ಸಾಗುತ್ತಿದೆ. ಭೂಮಿಯಲ್ಲಿ ಹುದುಗಿರುವ ಹಾಗೂ ಭೂಮಿಯ ಮೇಲ್ಭಾಗದಲ್ಲಿರುವ ಖನಿಜ ಸಂಪನ್ಮೂಲಗಳ ಅದಿರುಗಳನ್ನು ಅಗೆದು ತೆಗೆಯುವಾಗ ಫಲವತ್ತಾದ ಮೇಲ್ಮಣ್ಣು ನಾಶವಾಗುತ್ತದೆ. ವೃಕ್ಷ ಸಂಪತ್ತು ನಾಶವಾಗುತ್ತದೆ. ಜೀವಜಂತುಗಳು ಧ್ವಂಸವಾಗುತ್ತವೆ. ಭೂ ಕುಸಿತ ಹಾಗೂ ಭೂ ಸವೆತ ಸಂಭವಿಸುತ್ತದೆ. ವಾಯುಮಾಲಿನ್ಯ, ಜಲಮಾಲಿನ್ಯ ಮತ್ತು ಶಬ್ದಮಾಲಿನ್ಯಗಳು ಉಂಟಾಗುತ್ತವೆ. ಯಾವುದೇ ಗಣಿ ಕೆಲಸಗಳನ್ನು ಪ್ರಾರಂಭಿಸುವಾಗ ಮೇಲ್ಮಣ್ಣಿನ ರಕ್ಷಣೆಯ ಬಗ್ಗೆ ಅಗತ್ಯ ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡಿರಬೇಕಾಗುತ್ತದೆ.”[೧] ಇಂದು ಕೃಷಿ ಸಮುದಾಯಗಳು ಕೃಷಿಯನ್ನು ತೊರೆದು ಗಣಿಗಾರಿಕೆಗಳಲ್ಲಿ ತೊಡಗಲು ಇಚ್ಛಿಸುತ್ತಿವೆ. ಗ್ರಾಮಗಳಲ್ಲಿ ಕೃಷಿಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದರೆ ಗಣಿಗಾರಿಕೆಯ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಕೃಷಿ ನೆಲಕಚ್ಚುವ ಹಂತವನ್ನು ತಲುಪಿದೆ. ಇಲ್ಲಿನ ಗ್ರಾಮಗಳ ಜನರು ಅಂದರೆ ರೈತರನ್ನು ಒಳಗೊಂಡಂತೆ ಹೆಚ್ಚಿನವರು ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಕೃಷಿ ಸಮುದಾಯಗಳು ಹೆಚ್ಚಾಗಿ ಕೆಳವರ್ಗದವರಾಗಿ ಕಂಡುಬರುತ್ತಾರೆ. ಈ ಅಧ್ಯಾಯದಲ್ಲಿ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳು, ಈ ಗ್ರಾಮಗಳ ಮುಖ್ಯ ಆರ್ಥಿಕ ಚಟುವಟಿಕೆಗಳು ಮತ್ತು ಕೃಷಿಯನ್ನವಲಂಬಿಸಿರುವ ಸಮುದಾಯದ ಬಗೆಗೆ ಚರ್ಚಿಸಲಾಗಿದೆ.

೩.೧ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳು

ಹೊಸಪೇಟೆ ತಾಲ್ಲೂಕಿನಲ್ಲಿ ಹಲವಾರು ಬಗೆಯ ಗಣಿಗಾರಿಕೆಗಳು ನಡೆಯುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕಬ್ಬಿಣದ ಅದಿರಿನ ಗಣಿಗಾರಿಕೆ, ಮ್ಯಾಂಗನೀಸ್ ಗಣಿಗಾರಿಕೆ, ಸುಣ್ಣದ ಕಲ್ಲಿನ ಗಣಿಗಾರಿಕೆ, ಬಿಳಿಕಲ್ಲಿನ ಗಣಿಗಾರಿಕೆ ಮತ್ತು ಇಟ್ಟಿಗೆ ತಯಾರಿಕೆ. ಹೊಸಪೇಟೆ ತಾಲ್ಲೂಕಿನಲ್ಲಿ ನಡೆಯುವ

[illegible]

ಗಣಿಗಾರಿಕೆಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಹೊಸಪೇಟೆ ತಾಲ್ಲೂಕಿನಲ್ಲಿ ಹಳೆಯ ಶಿಲಾಯುಗದ ಕೆಲವೊಂದು ಅವಶೇಷಗಳು ದೊರೆತಿವೆ. ಹೊಸಪೇಟೆ ತಾಲ್ಲೂಕಿನಲ್ಲಿ ಗಣಿಗಾರಿಕೆ ನಡೆಯುತ್ತಿರುವದರಿಂದ ಇದರ ವ್ಯವಹಾರದಲ್ಲಿ ದೇಶ ವಿದೇಶಗಳು ಪಾಲ್ಗೊಳ್ಳುವುದರಿಂದ ಚಿರಪರಿಚಿತವಾದ ಸ್ಥಳವಾಗಿ ಉಳಿಯುತ್ತದೆ. ಮೇಲೆ ತಿಳಿಸಲಾದ ಗಣಿಗಾರಿಕೆಗಳು ಯಾವ ಯಾವ ಊರುಗಳಲ್ಲಿ ನಡೆಯುತ್ತವೆ ಎಂಬುದನ್ನು ತಿಳಿಯೋಣ

೧. ಕಬ್ಬಿಣದ ಅದಿರಿನ ಗಣಿಗಾರಿಕೆ

೨. ಮ್ಯಾಂಗನೀಸ್ ಗಣಿಗಾರಿಕೆ

೩. ಸುಣ್ಣದಕಲ್ಲಿನ ಗಣಿಗಾರಿಕೆ

೪. ಬಿಳಿಕಲ್ಲಿನ ಗಣಿಗಾರಿಕೆ

೫. ಇಟ್ಟಿಗೆ ತಯಾರಿಕೆ

ಅ. ಮಣ್ಣಿನ ಇಟ್ಟಿಗೆ

ಬ. ಸಿಮೆಂಟಿನ ಇಟ್ಟಿಗೆ

೧. ಕಬ್ಬಿಣದ ಅದಿರಿನ ಗಣಿಗಾರಿಕೆ

ಹೊಸಪೇಟೆ ತಾಲೂಕಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದೆ. ಹಲವಾರು ಜನರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸಿದೆ. ಹಲವಾರು ಗ್ರಾಮಗಳ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಇಲ್ಲಿ ದೊರೆಯುವ ಅದಿರು ಉತ್ತಮ ಗುಣಮಟ್ಟದಿಂದ ಕೂಡಿರುವುದು ತಿಳಿದುಬರುತ್ತದೆ. "ಹೊಸಪೇಟೆ, ಬಳ್ಳಾರಿ ಪರಿಸರದಲ್ಲಿ ದೊರೆಯುವ ಅದಿರು ಪ್ರಪಂಚದ ಅದಿರುಗಳಲ್ಲಿ ಅತ್ಯುತ್ತಮವಾದ ಅದಿರೆಂದು ಖ್ಯಾತಿಗಳಿಸಿದೆ. ಈ ಉತ್ತಮ ವರ್ಗದ ನಿಕ್ಷೇಪಗಳು ಸುಮಾರು ೧೦೦೦ ಮಿಲಿಯ ಟನ್‌ಗಳಷ್ಟು ಅದಿರನ್ನು ಒದಗಿಸಬಲ್ಲವೆಂದು ಪರಿಗಣಿಸಲಾಗಿದೆ."[೨] ಹೊಸಪೇಟೆ ತಾಲ್ಲೂಕಿನಲ್ಲಿ ಗಣಿಗಾರಿಕೆ ಯಥೇಚ್ಛವಾಗಿ ನಡೆಯುತ್ತಿದೆ. ಈ ಗಣಿಗಾರಿಕೆ ನಡೆಯುವ ಪ್ರಮುಖ ಸ್ಥಳಗಳೆಂದರೆ, ಕಾರಿಗನೂರು, ವಾಲ್ಮೀಕಿನಗರ, ಶಂಕರನಗರ, ಇಂಗಳಗಿ, ವಡ್ಡರಹಳ್ಳಿ, ಪಾಪಿನಾಯಕನಹಳ್ಳಿ, ವ್ಯಾಸನಕೆರೆ, ವ್ಯಾಸನಕೆರೆ ಸ್ಟೇಷನ್, ಗಾಳೆಮ್ಮನಗುಡಿ, ಹನುಮನಹಳ್ಳಿ, ಡಣಾಪುರ, ಮರಿಯಮ್ಮನಹಳ್ಳಿತಾಂಡ, ಕಣವಿರಾಯನಗುಡಿ, ರಾಜಾಪುರ, ಕಲ್ಲಹಳ್ಳಿಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಯುತ್ತಿದೆ. ಕಬ್ಬಿಣದ ಅದಿರಿನ ಪುಡಿಯ ಸಂಗ್ರಹದ ಸ್ಥಳಗಳು ಸಣ್ಣ ಸಣ್ಣ ಬೆಟ್ಟ ಗುಡ್ಡಗಳಂತೆ ಗೋಚರಿಸುತ್ತವೆ. ಅದಿರಿನ ಪುಡಿ ಮಾಡಲು ಕ್ರಶರ್‌ಗಳನ್ನು ಅಳವಡಿಸಲಾಗಿದೆ. ಮರಿಯಮ್ಮನಹಳ್ಳಿ ತಾಂಡದಲ್ಲಿ ಗಣಿಗಾರಿಕೆ ನಡೆಯುತ್ತಿಲ್ಲ. ಆದರೆ ಕಬ್ಬಿಣದ ಅದಿರಿನ ಕಾರ್ಖಾನೆಯ ತ್ಯಾಜ್ಯ ವಸ್ತುಗಳನ್ನು ತಂದು ಸಂಗ್ರಹಿಸಲಾಗುತ್ತದೆ. ಅದನ್ನು ಕೂಲಿ ಕೆಲಸಗಾರರಿಂದ ಪುಡಿ ಮಾಡಿ ಬೇರ್ಪಡಿಸುತ್ತಾರೆ. ಬೇರ್ಪಡಿಸಿದಾಗ ಅವರಲ್ಲಿ ಶುದ್ಧ ಕಬ್ಬಿಣ, ಸಿಲಿಕಾ, ಕೋಕ್‌ಗಳನ್ನು ಬೇರೆ ಬೇರೆಯಾಗಿ ವಿಂಗಡಿಸುತ್ತಾರೆ.

೨. ಮ್ಯಾಂಗನೀಸ್ ಗಣಿಗಾರಿಕೆ

ವ್ಯಾಸನಕೆರೆ, ಕಲ್ಲಹಳ್ಳಿ ಮತ್ತು ಪಾಪಿನಾಯಕನಹಳ್ಳಿ ಗ್ರಾಮಗಳು ಹೊಸಪೇಟೆ ತಾಲ್ಲೂಕಿನಲ್ಲಿ ಮ್ಯಾಂಗನೀಸ್‌ನ್ನು ಹೊರತೆಗೆಯುವ ಗ್ರಾಮಗಳಾಗಿವೆ. ಹೊಸಪೇಟೆ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರಿನಂತೆ ಮ್ಯಾಂಗನೀಸ್ ಹೇರಳವಾಗಿ ದೊರೆಯುತ್ತಿಲ್ಲ. ಬಳ್ಳಾರಿ ಜಿಲ್ಲೆಯು ಕರ್ನಾಟಕದಲ್ಲಿ ಅತಿ ಹೆಚ್ಚು ಮ್ಯಾಂಗನೀಸ್ ಉತ್ಪಾದನೆ ಮಾಡುವ ಜಿಲ್ಲೆಯಾಗಿದೆ. "ಬಳ್ಳಾರಿ ಜಿಲ್ಲೆಯ ಸೊಂಡೂರಿನಲ್ಲಿ ಸಿಗುವ ಮ್ಯಾಂಗನೀಸ್ ಪ್ರಮಾಣ ೨೧.೫೧ ರಿಂದ ೬೧.೬"[೩] ಎಂದು ತಿಳಿಯುತ್ತದೆ. ಅಂದರೆ ಬಳ್ಳಾರಿ ಜಿಲ್ಲೆಯಲ್ಲಿ ದೊರೆಯುವ ಮ್ಯಾಂಗನೀಸ್ ಉತ್ತಮ ದರ್ಜೆಯದಾಗಿದೆ. "ಮ್ಯಾಂಗನೀಸ್ ಉತ್ಪಾದನೆಯಲ್ಲಿ ವಿಶ್ವದಲ್ಲಿ ಭಾರತ ೪ನೇ ಸ್ಥಾನವನ್ನು ಹೊಂದಿದೆ."[೪] "ಸಂಡೂರು ಮ್ಯಾಂಗನೀಸ್ ಕಂಪನಿಯವರು ಬಳ್ಳಾರಿ ಜಿಲ್ಲೆಯ ಸಂಡೂರು ಗಣಿಗಳಿಂದ ಪ್ರತಿ ವರ್ಷ ಸುಮಾರು ೨ ಲಕ್ಷ ಟನ್ ಮ್ಯಾಂಗನೀಸ್ ಅದಿರನ್ನು ಹೊರದೇಶಗಳಿಗೆ ರಫ್ತು ಮಾಡುತ್ತಾರೆ."[೫]

೩. ಸುಣ್ಣದಕಲ್ಲಿನ ಗಣಿಗಾರಿಕೆ

ಸುಣ್ಣದಕಲ್ಲು ಸಹ ಅವಶ್ಯಕವಾಗಿ ಬೇಕಾದಂತಹ ಖನಿಜವೆನ್ನಬಹುದು. ಸಿಮೆಂಟ್ ತಯಾರಿಕೆಯಲ್ಲಿ ಸುಣ್ಣದ ಕಲ್ಲು ಪ್ರಮುಖ ಪಾತ್ರವಹಿಸುತ್ತದೆ. ಗುಲ್ಬರ್ಗ, ವಿಜಾಪುರ, ಬೆಳಗಾಂ, ಚಿತ್ರದುರ್ಗದಲ್ಲಿ ಹೆಚ್ಚಿನ ಪ್ರಮಾಣದ ಸುಣ್ಣದ ಶಿಲೆಯು ದೊರೆಯುತ್ತದೆ. ಸುಣ್ಣದ ಶಿಲೆಗಳು ಹೆಚ್ಚಾಗಿ ದೊರೆಯುವ ಪ್ರದೇಶದಲ್ಲಿ ಸಿಮೆಂಟಿನ ಕಾರ್ಖಾನೆಗಳು ಹೆಚ್ಚಾಗಿ ಕಂಡುಬರುತ್ತವೆ. ಸುಣ್ಣದಿಂದ ಹಲವಾರು ಉಪಯೋಗಗಳನ್ನು ಪಡೆದುಕೊಳ್ಳುತ್ತೇವೆ. ಮನೆ, ಗೋಡೆ, ಮಸೀದಿ ಮುಂತಾದ ಕಟ್ಟಡ ಅಥವಾ ಗೋಡೆಗಳಿಗೆ ಸುಣ್ಣವನ್ನು ಬಳಸುತ್ತೇವೆ. ಅನಂತಶಯನಗುಡಿಯಲ್ಲಿ ಸುಣ್ಣವನ್ನು ತಯಾರಿಸಲಾಗುತ್ತದೆ. ಇದಕ್ಕೆ ಬೇಕಾದಂತಹ ಸುಣ್ಣದ ಕಲ್ಲುಗಳು ಕಾರಿಗನೂರು, ಪಾಪಿನಾಯಕನಹಳ್ಳಿ ಮತ್ತು ಗಾದಿಗನೂರುಗಳಲ್ಲಿ ದೊರೆಯುತ್ತದೆ.

೪. ಬಿಳಿಕಲ್ಲಿನ ಗಣಿಗಾರಿಕೆ

ಹೊಸಪೇಟೆ ತಾಲ್ಲೂಕಿನಲ್ಲಿ ಗುಡ್ಡಗಾಡುಗಳು ಹೆಚ್ಚಾಗಿ ಕಂಡುಬರುತ್ತವೆ. ಕೆಲವೊಂದು ಕಡೆಯ ಗುಡ್ಡಗಾಡುಗಳು ಹಸಿರನ್ನು ತುಂಬಿಕೊಂಡು ಕಂಗೊಳಿಸುತ್ತಿವೆ. ಕೆಲವೊಂದು ಕಡೆ ಬೋಳು ಗುಡ್ಡಗಳಾಗಿ ಕಂಡುಬರುತ್ತದೆ. ಬಿಳಿಕಲ್ಲಿನ ಕ್ವಾರೆ ಕೆಲಸ ಹೆಚ್ಚಾಗಿ ಕಂಡುಬರುತ್ತದೆ. ಇದು ಸಹ ಕಬ್ಬಿಣದ ಅದಿರಿನ ಗಣಿಗಾರಿಕೆಯ ತರಹ ಕೆಲವೊಂದು ಸಮಸ್ಯೆಗಳನ್ನು ತಂದೊಡ್ಡುತ್ತದೆ. "ಕಲ್ಲಿನ ಗಣಿಗಳಿಂದ ಹೊರಹೊಮ್ಮುವ ಧೂಳಿನ ಮಟ್ಟವೂ ಅತಿಯಾಗಿದೆ. ಕೆಲವು ಕಲ್ಲು ಗಣಿಗಳ ಆಸುಪಾಸಿನ ಎರಡು ಚದುರ ಕಿ.ಮೀ. ವಿಸ್ತೀರ್ಣದವರೆಗೂ ಇಂಥ ಧೂಳಿನ ಕಣಗಳು ಚದುರುವುದನ್ನು ಕಾಣಬಹುದು."[೬] ಸುತ್ತಮುತ್ತಲಿನ ಕೃಷಿಯ ಮೇಲೆ ಪರಿಣಾಮ ಬೀರುತ್ತದೆ. ಕೆಲವೊಂದು ಕಲ್ಲಿನ ಕ್ವಾರೆ ಕೆಲಸಗಳು ಇಲಾಖೆಯ ಅನುಮತಿ ಪಡೆದು ನಡೆಸುತ್ತಿದ್ದರೆ, ಕೆಲವೊಂದು ಅಕ್ರಮವಾಗಿ ನಡೆಯುತ್ತಿವೆ. ದೊಡ್ಡ ಮತ್ತು ಚಿಕ್ಕ ಪ್ರಮಾಣದಲ್ಲಿ ಈ ಕ್ವಾರೆ

ಕೆಲಸ ನಡೆದಿದೆ. ದೊಡ್ಡ ಪ್ರಮಾಣದ ಕ್ವಾರೆ ಕೆಲಸಗಳಲ್ಲಿ ಕ್ರಶರ್‌ಗಳನ್ನು ಅಳವಡಿಸಲಾಗಿದೆ. ಈ ಕ್ರಶರ್ ಮೂಲಕ ದೊಡ್ಡ ಪ್ರಮಾಣದಲ್ಲಿ ಕಲ್ಲಿನ ನಮೂನೆಗಳನ್ನು ತಯಾರಿಸುತ್ತಾರೆ. ಅದರಲ್ಲಿ ಮುಖ್ಯವಾಗಿ ಬೆಣಚು, ಸಣ್ಣ ಬೆಣಚು, ಚಿಪ್ಸ್ ಮತ್ತು ಪೌಡರ್‌ಗಳನ್ನು ತಯಾರಿಸುತ್ತಾರೆ. ಬೆಣಚುಗಳು ಕಾಂಕ್ರೀಟ್ ಕೆಲಸಕ್ಕೆ ಮತ್ತು ರಸ್ತೆ ನಿರ್ಮಾಣಕ್ಕೆ ಉಪಯೋಗಿಸುತ್ತಾರೆ. ಚಿಪ್ಸ್ ಮತ್ತು ಪೌಡರ್‌ಗಳು ರಸ್ತೆಯ ನಿರ್ಮಾಣದಲ್ಲಿ ಮೇಲಿನ ಪದರಿನಲ್ಲಿ ಬಳಸುತ್ತಾರೆ. ಅಲ್ಲದೆ ಸಿಮೆಂಟ್ ಇಟ್ಟಿಗೆ ತಯಾರಿಸಲು ಸಹ ಬಳಸುತ್ತಾರೆ. ಇಲ್ಲಿ ಉತ್ಪಾದನೆಯಾದ ಹೆಚ್ಚಿನ ಪ್ರಮಾಣದ ಬಿಳಿಕಲ್ಲಿನ ಉತ್ಪನ್ನಗಳು ಜಿಂದಾಲ್ ಕಾರ್ಖಾನೆಗೆ ರವಾನೆಯಾಗುತ್ತದೆ. "ಬಳ್ಳಾರಿ ಜಿಲ್ಲೆಯಲ್ಲಿ ೧೯೯೧-೯೨ರಲ್ಲಿ ೧೧,೬೭೬ ಟನ್‌ಗಳಿದ್ದ ಬೆಣಚು ಉತ್ಪಾದನೆ ೧೯೯೨-೯೩ರಲ್ಲಿ ೧೨,೬೫೨ ಟನ್‌ನಷ್ಟಾಗಿದೆ."[೭]

ಸಣ್ಣ ಪ್ರಮಾಣದ ಕ್ವಾರೆ ಕೆಲಸಗಳು ಸಹ ನಡೆಯುತ್ತಿವೆ. ಇಲ್ಲಿ ಹೆಚ್ಚಾಗಿ ಗೃಹ ನಿರ್ಮಾಣ ಗಾತ್ರದ ಕಲ್ಲುಗಳು, ಬಂಡೆಗಳು ಮತ್ತು ಹೆಬ್ಬಂಡೆಗಳನ್ನು ತಯಾರಿಸುತ್ತಾರೆ. ಇಲ್ಲಿ ಯಂತ್ರಶಕ್ತಿಯ ಬದಲು ಮಾನವನ ಶ್ರಮವನ್ನು ಅವಲಂಬಿಸಿದೆ. ಈ ರೀತಿಯ ಸಣ್ಣ ಪ್ರಮಾಣದ ಕ್ವಾರೆಗಳನ್ನು ಮೊದಲು ಇಲಾಖೆಯ ವತಿಯಿಂದ ಗುತ್ತಿಗೆ ನೀಡುತ್ತಿದ್ದರು. ಆದರೆ ಈಗ ಕೆಲವು ವರ್ಷಗಳಿಂದ ಈ ಪದ್ಧತಿಯನ್ನು ರದ್ದುಗೊಳಿಸಿದ್ದಾರೆ. ಈ ಕೆಲಸವನ್ನು ನೆಚ್ಚಿಕೊಂಡಿದ್ದ ಕೆಲವು ಸಮುದಾಯಗಳು ಈಗ ಬೇರೆ ದಾರಿ ಕಾಣದೆ ಅಕ್ರಮ ಅಥವಾ ಕಳ್ಳತನದಿಂದ ಕ್ವಾರೆ ಕೆಲಸವನ್ನು ನಡೆಸುತ್ತಿರುವುದು ಕಂಡುಬರುತ್ತದೆ.

ಈ ಬಿಳಿಕಲ್ಲಿನ ಕ್ವಾರೆ ಕೆಲಸವು ಹೊಸಪೇಟೆ ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಆ ಸ್ಥಳಗಳೆಂದರೆ ಇಂಗಳಗಿ, ಪಾಪಿನಾಯಕನಹಳ್ಳಿ, ಬೈಲುವದ್ದಿಗೇರಿ, ಮರಿಯಮ್ಮನಹಳ್ಳಿತಾಂಡ ಮತ್ತು ದೇವಲಾಪುರದಲ್ಲಿ ದೊಡ್ಡ ಪ್ರಮಾಣದ ಕ್ರಶರ್‌ಗಳ ಮೂಲಕ ಕ್ವಾರೆ ಕೆಲಸ ನಡೆಯುತ್ತಿದೆ. ಸಣ್ಣ ಪ್ರಮಾಣದ ಕ್ವಾರೆ ಕೆಲಸ ನಡೆಯುವ ಸ್ಥಳಗಳೆಂದರೆ ವೆಂಕಟಾಪುರಕ್ಯಾಂಪ್, ೭೬. ವೆಂಕಟಾಪುರ ಮತ್ತು ಬುಕ್ಕಸಾಗರ.

೫. ಇಟ್ಟಿಗೆ ತಯಾರಿಕೆ

ಹೊಸಪೇಟೆ ತಾಲ್ಲೂಕಿನ ಕೆಲವೊಂದು ಸ್ಥಳಗಳಲ್ಲಿ ಇಟ್ಟಿಗೆ ತಯಾರಿಕೆಯು ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಕೊಂಡನಾಯಕನಹಳ್ಳಿಯನ್ನು ಇಟ್ಟಿಗೆ ತಯಾರಿಕೆಯಲ್ಲಿ ಗುರುತಿಸಬಹುದಾಗಿದೆ. ಈ ತಾಲ್ಲೂಕಿನಲ್ಲಿ ಮಣ್ಣಿನ ಮತ್ತು ಸಿಮೆಂಟಿನ ಇಟ್ಟಿಗೆಯನ್ನು ತಯಾರಿಸಲಾಗತ್ತದೆ. ಇವುಗಳನ್ನು ಒಂದೊಂದಾಗಿ ಈ ಕೆಳಗೆ ನೋಡಬಹುದಾಗಿದೆ.

ಅ. ಮಣ್ಣಿನ ಇಟ್ಟಿಗೆ : ಮಣ್ಣಿನ ಇಟ್ಟಿಗೆ ತಯಾರಿಕೆಯು ಹೆಚ್ಚು ಶ್ರಮವಿಲ್ಲದ, ದುಬಾರಿ ವೆಚ್ಚವಲ್ಲದ ಉದ್ದಿಮೆಯೆಂದು ಹೇಳಬಹುದು. ಆದರೆ ದುರದೃಷ್ಟದ ಸಂಗತಿಯೆಂದರೆ ಇದಕ್ಕೆ ಬಳಸುವ ಮಣ್ಣು ಕೃಷಿಯೋಗ್ಯ ಭೂಮಿಯದಾಗಿರುತ್ತದೆ. ಕಾರಣ ಆ ಮಣ್ಣು ಜಿಗಿಯಾಗಿರುತ್ತದೆ. ಅಲ್ಲದೆ ಅದರಲ್ಲಿ ಮರಳಿನಂಶವಿರುವದಿಲ್ಲ ಎನ್ನುವುದೇ ಇದಕ್ಕೆ ಕಾರಣ. ಕೆಂಪು ಮಣ್ಣಿಗಿಂತ ಕಪ್ಪು ಮಣ್ಣು ಇಟ್ಟಿಗೆ

ತಯಾರಿಕೆಯಲ್ಲಿ ಯೋಗ್ಯವಾದುದಾಗಿ ಪರಿಗಣಿಸಲ್ಪಡುತ್ತದೆ. ಜಮೀನಿನ ಎತ್ತರದ ಭಾಗದಿಂದ ಈ ಮಣ್ಣನ್ನು ತರುತ್ತಾರಾದರೂ ಅದು ಕೃಷಿಯೋಗ್ಯ. ಅಲ್ಲದೇ ಫಲವತ್ತಾದ ಮೇಲ್ಪದರವಾಗಿರುವುದು ಗಮನಿಸಬೇಕಾದ ಅಂಶವಾಗಿದೆ. ಇಂತಹ ಫಲವತ್ತಾದ ಮಣ್ಣನ್ನು ಒಂದು ಟ್ರ್ಯಾಕ್ಟರಿಗೆ ೩೦ ರಿಂದ ೫೦ ರೂ.ಗಳಿಗೆ ಮಾರುತ್ತಿದ್ದಾರೆ. ಅಲ್ಪ ಹಣಕ್ಕಾಗಿ ಚಿನ್ನದ ಗುಣವಿರುವ ಮಣ್ಣನ್ನು ಈ ರೀತಿ ಬಳಸುತ್ತಿರುವುದು ದುರ್ದೈವವೇ ಸರಿ. ಒಂದು ಟ್ರ್ಯಾಕ್ಟರ್ ಮಣ್ಣಿನಿಂದ ೮೦೦ ರಿಂದ ೧,೨೦೦ರವರೆಗೆ ಇಟ್ಟಿಗೆಯನ್ನು ತಯಾರಿಸುತ್ತಾರೆ. ಇಟ್ಟಿಗೆಗೆ ಮಳೆಗಾಲದ ಸಮಯದಲ್ಲಿ ಬೇಡಿಕೆ ಹೆಚ್ಚಾಗಿ ಕಂಡುಬರುತ್ತದೆ. ಕೊಂಡನಾಯಕನಹಳ್ಳಿ, ಕಮಲಾಪುರ, ರಾಮನಗರ, ವೆಂಕಟಾಪುರಕ್ಯಾಂಪ್ ಮತ್ತು ಸಿದ್ದೇಶ್ವರನಗರಗಳಲ್ಲಿ ಮಣ್ಣಿನ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ.

ಬ. ಸಿಮೆಂಟಿನ ಇಟ್ಟಿಗೆ ತಯಾರಿಕೆ : ಕ್ವಾರೆ ಕೆಲಸದಲ್ಲಿ ಚಿಪ್ಸ್ ಮತ್ತು ಪೌಡರ್‌ನ ಮಧ್ಯದಲ್ಲಿ ದೊರೆಯುವ ಉತ್ಪನ್ನವನ್ನು ಸಿಮೆಂಟ್ ಇಟ್ಟಿಗೆ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಜೊತೆಗೆ ಉಸುಕು (ಮರಳು) ಮತ್ತು ಸಿಮೆಂಟನ್ನು ಬಳಸುತ್ತಾರೆ. ಡಣಾಪುರ, ಕಮಲಾಪುರ ಮತ್ತು ರಾಮನಗರದಲ್ಲಿ ಸಿಮೆಂಟಿನ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ.

ಈ ಮೇಲೆ ತಿಳಿಸಿದ ವಿವಿಧ ಗಣಿಗಾರಿಕೆಗಳನ್ನು ಈ ಕೋಷ್ಟಕದ ಮೂಲಕ ಒಟ್ಟಾರೆಯಾಗಿ ನೋಡಬಹುದು.

ಕ್ರ.ಸಂ.	**ನಡೆಯುತ್ತಿರುವ ಗಣಿಗಾರಿಕೆ**	**ಸ್ಥಳಗಳು**
೦೧.	ಕಬ್ಬಿಣದ ಅದಿರಿನ ಗಣಿಗಾರಿಕೆ	ಕಾರಿಗನೂರು
		ವಾಲ್ಮೀಕಿನಗರ
		ಶಂಕರ್‌ನಗರ
		ಇಂಗಳಗಿ
		ಪಾಪಿನಾಯಕನಹಳ್ಳಿ
		ಕಣವಿರಾಯನಗುಡಿ
		ರಾಜಾಪುರ
		ಕಲ್ಲಹಳ್ಳಿ
		ವ್ಯಾಸನಕೆರೆ
		ಗಾಳೆಮ್ಮನಗುಡಿ
		ಹನುಮನಹಳ್ಳಿ
		ಡಣಾಪುರ

೦೨.	ಮ್ಯಾಂಗನೀಸ್ ಗಣಿಗಾರಿಕೆ	ಪಾಪಿನಾಯಕನಹಳ್ಳಿ
		ಕಲ್ಲಹಳ್ಳಿ
		ವ್ಯಾಸನಕೆರೆ
೦೩.	ಸುಣ್ಣದ ಕಲ್ಲಿನ ಗಣಿಗಾರಿಕೆ	ಅನಂತಶಯನಗುಡಿ
೦೪.	ಬಿಳಿಕಲ್ಲಿನ ಗಣಿಗಾರಿಕೆ	ಇಂಗಳಗಿ
		ಪಾಪಿನಾಯಕನಹಳ್ಳಿ
		ಬೈಲುವದ್ದಿಗೇರಿ
		ಮರಿಯಮ್ಮನಹಳ್ಳಿತಾಂಡ
		ದೇವಲಾಪುರ
		ವೆಂಕಟಾಪುರಕ್ಯಾಂಪ್
		೭೬. ವೆಂಕಟಾಪುರ
		ಬುಕ್ಕಸಾಗರ.
೦೫.	ಇಟ್ಟಿಗೆ ತಯಾರಿಕೆ	
	ಅ. ಮಣ್ಣಿನ ಇಟ್ಟಿಗೆ ತಯಾರಿಕೆ	ಕೊಂಡನಾಯಕನಹಳ್ಳಿ
		ಕಮಲಾಪುರ
		ರಾಮನಗರ
		ವೆಂಕಟಾಪುರಕ್ಯಾಂಪ್
		ಸಿದ್ದೇಶ್ವರನಗರ.
	ಬ. ಸಿಮೆಂಟ್ ಇಟ್ಟಿಗೆ ತಯಾರಿಕೆ	ಕಮಲಾಪುರ
		ರಾಮನಗರ
		ಡಣಾಪುರ

೩.೨ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳ ಮುಖ್ಯ ಆರ್ಥಿಕ ಚಟುವಟಿಕೆಗಳು

ಭಾರತ ದೇಶವು ಹಳ್ಳಿಗಳಿಂದ ಕೂಡಿದುದಾಗಿದೆ. ಗ್ರಾಮಗಳು ದೇಶದ ಪ್ರಮುಖ ಉದ್ದಿಮೆಗಳಂತೆ ಕಾರ್ಯನಿರ್ವಹಿಸುತ್ತವೆ. ಗ್ರಾಮಗಳಲ್ಲಿ ಶ್ರೀಮಂತ ವರ್ಗಕ್ಕಿಂತ ಕೆಳವರ್ಗಗಳು ಅಂದರೆ ದುಡಿಯುವ ವರ್ಗಗಳು ಹೆಚ್ಚಾಗಿ ಕಂಡುಬರುತ್ತವೆ. ಕೃಷಿ ಗ್ರಾಮಗಳ ಮುಖ್ಯ ಆರ್ಥಿಕ ಚಟುವಟಿಕೆಯಾಗಿದೆ. ಜೊತೆಗೆ ಪಶುಪಾಲನೆ ಮತ್ತು ಕುರಿಸಾಕಣಿಕೆಯು ಉಪಕಸುಬುಗಳಾಗಿ ಕಂಡುಬರುತ್ತವೆ.

ಇಂದಿನ ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ. ರೈತರು ಸರಿಯಾದ ಬೆಳೆಯನ್ನು ತೆಗೆಯುವುದಕ್ಕಾಗಿ ಹೋರಾಟ ನಡೆಸಬೇಕಾಗಿದೆ. ಗಣಿಗಾರಿಕೆಯಿಂದಾಗಿ ಹೊಸಪೇಟೆ ತಾಲ್ಲೂಕಿನಲ್ಲಿ

ವ್ಯವಸಾಯ ತೀವ್ರತೆರನಾಗಿ ಕುಂಠಿತಗೊಂಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ಬೆಳೆಗಳ ಇಳುವರಿ ವರ್ಷದಿಂದ ವರ್ಷಕ್ಕೆ ಕುಂಠಿತಗೊಳ್ಳುತ್ತಿದೆ. ಸುಮಾರು ವರ್ಷಕ್ಕೆ ಕನಿಷ್ಠ ಶೇ.೩೦ ಇಳುವರಿ ಕುಂಠಿತಗೊಳ್ಳುತ್ತಿದೆ ಎನ್ನುವ ಮಾಹಿತಿಯನ್ನು ಕೃಷಿ ತಜ್ಞರು ನೀಡುತ್ತಾರೆ. ``ಪ್ರಸಕ್ತ ವರ್ಷ ಇಲಾಖೆಯು ೬.೮೦ ಲಕ್ಷ ಟನ್ ಆಹಾರಧಾನ್ಯ, ೧.೩೦ ಲಕ್ಷ ಟನ್ ಎಣ್ಣೆಕಾಳು ಉತ್ಪಾದನೆಯ ಗುರಿ ಹಾಕಿಕೊಂಡಿದೆ. ಆದರೆ ಗಣಿಗಾರಿಕೆ, ಅತಿವೃಷ್ಟಿ, ರೋಗಗಳ ಕಾರಣದಿಂದಾಗಿ ಆ ಗುರಿ ಮುಟ್ಟುವುದು ಅನುಮಾನ ಎನ್ನುತ್ತವೆ ಇಲಾಖೆಯ ಮೂಲಗಳು.''[೨] ವ್ಯಾಪಕ ಪ್ರಮಾಣದಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ಗಣಿಗಾರಿಕೆಯ ಸುತ್ತಮುತ್ತಲಿನ ಗ್ರಾಮಗಳ ಆರ್ಥಿಕ ಚಟುವಟಿಕೆಗಳು ಬೇರೆ ಬೇರೆ ಮೂಲಗಳನ್ನು ಆಶ್ರಯಿಸಿವೆ. ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳ ಆರ್ಥಿಕ ಚಟುವಟಿಕೆಗಳನ್ನು ಈ ಕೆಳಗಿನಂತೆ ನೋಡಬಹುದು.

ಹೊಸಪೇಟೆ-ಬಳ್ಳಾರಿ ಮಾರ್ಗದಲ್ಲಿನ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳು

೧. ಕಾರಿಗನೂರು : ಈ ಗ್ರಾಮದ ಪಕ್ಕದಲ್ಲಿ ಗಣಿಗಾರಿಕೆಯ ಗುಡ್ಡಗಳು ಮತ್ತು ಇನ್ನೊಂದು ಬದಿಯಲ್ಲಿ ರೈಲ್ವೇ ಮಾರ್ಗವನ್ನು ಹೊಂದಿದೆ. ಹೆಚ್ಚಿನ ಸಂಖ್ಯೆಯ ಕುಟುಂಬಗಳು ಭೂರಹಿತರಾಗಿದ್ದಾರೆ. ಕೆಲವೊಂದು ಕುಟುಂಬಗಳು ಕೃಷಿಯ ಜೊತೆಗೆ ಗಣಿಗಾರಿಕೆಯಲ್ಲಿ ತೊಡಗಿಕೊಂಡಿವೆ. ಕೃಷಿಗಿಂತ ಗಣಿಗಾರಿಕೆಯು ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಕಬ್ಬಿಣದ ಅದಿರಿನ ವಿತರಣೆ ಹಾಗೂ ಸಂಗ್ರಹಣೆಯಲ್ಲಿ ಪ್ರಮುಖವಾದ ಸ್ಥಳಗಳಲ್ಲಿ ಇದು ಒಂದಾಗಿದೆ. ಇಲ್ಲಿನ ಜನರು ಮುಖ್ಯವಾಗಿ ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಮೊದಲ ಬಾರಿ ಸಂದರ್ಶನಕ್ಕೆ ಹೋದಾಗ ಮುಖ್ಯ ರಸ್ತೆಯ ಪಕ್ಕದ ಸ್ಥಳ ಬೀಳು ಭೂಮಿಯಂತಿತ್ತು. ನಂತರ ೪ ದಿನಗಳಲ್ಲಿ ಅದರ ಸ್ವರೂಪವೇ ಬದಲಾಗಿ ಹೋಗಿತ್ತು. ಕಾರಣ ಆ ಪ್ರದೇಶದಲ್ಲಿ ಗಣಿಗಾರಿಕೆ ನಡೆದಿದೆ. ಅದಿರಿನ ಪುಡಿಯನ್ನು ಸಂಗ್ರಹಿಸಲು (Stock yard) ರೈತರಿಂದ ಜಮೀನನ್ನು ಎಕರೆಗೆ ಇಂತಿಷ್ಟು ರೂ.ಗಳಂತೆ ಒಪ್ಪಂದ ಮಾಡಿಕೊಂಡು ಗಣಿಮಾಲಿಕರು ತೆಗೆದುಕೊಳ್ಳುತ್ತಿದ್ದಾರೆ. ಈ ಗ್ರಾಮದಲ್ಲಿ ಬುಡಕಟ್ಟು ಸಮುದಾಯಗಳಲ್ಲೊಂದಾದ ಹಕ್ಕಿಪಿಕ್ಕಿ ಸಮುದಾಯವು ಗಣಿಗಾರಿಕೆಯನ್ನವಲಂಬಿಸಿ ಜೀವನ ಸಾಗಿಸುತ್ತಿದೆ.

ಈ ಪ್ರದೇಶದಲ್ಲಿ ವೈಯಕ್ತಿಕ ಗಣಿಗಾರಿಕೆ ಹೆಚ್ಚಾಗಿ ಕಂಡುಬರುತ್ತದೆ. ಈ ಪ್ರದೇಶದ ಜಮೀನುಗಳಲ್ಲಿಯೂ ಸಹ ಕಬ್ಬಿಣದ ಕಲ್ಲುಗಳು ಹೇರಳವಾಗಿ ದೊರೆಯುತ್ತವೆ. ಗಣಿಮಾಲಿಕರಿಂದ ತಂದ ಕಲ್ಲಿನ ಅದಿರನ್ನು ಪುಡಿಮಾಡಿ ಕೊಡಲು ಒಂದು ಪುಟ್ಟಿಗೆ ೬ ರೂಪಾಯಿ ದೊರೆಯುತ್ತದೆ. ಸಾಮಾನ್ಯ ಜನರು ತಾವೇ ಸ್ವತಃ ಅದಿರಿನ ಕಲ್ಲುಗಳನ್ನು ಆಯ್ದು ತಂದು ಪುಡಿಮಾಡಿ ಕೊಟ್ಟರೆ ೧೬ ರೂಪಾಯಿ ಮತ್ತು ಉತ್ತಮ ದರ್ಜೆಯ ಕಬ್ಬಿಣವಾದರೆ ೨೫ ರೂಪಾಯಿಗಳನ್ನು ಪಡೆಯುತ್ತಾರೆ. ಒಂದು ಟನ್ ಕಬ್ಬಿಣವನ್ನು ೨೦೦೦ರೂ. ಗಳಿಗೆ ಮಾರಾಟ ಮಾಡಲಾಗುತ್ತದೆ.

ವಾಲ್ಮೀಕಿನಗರದಲ್ಲಿ ಹೆಚ್ಚಾಗಿ ಗಣಿಕಾರ್ಮಿಕರಿದ್ದಾರೆ. ಶಂಕರನಗರದಲ್ಲಿ ಆಂಧ್ರ ಮತ್ತು ತಮಿಳು ಜನರು ಹೆಚ್ಚಾಗಿ ಕಂಡುಬರುತ್ತಾರೆ. ಇಲ್ಲಿ ಗಣಿಗಾರಿಕೆಯು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ.

[illegible]

[illegible]

[illegible]

[illegible]

ಕಾಲುಭಾಗದ ಜನರಿಗೆ ಸ್ವಂತ ಕೃಷಿ ಭೂಮಿ ಇದೆ ಎಂದು ಹೇಳವುದು ದುಸ್ತರವಿದೆ. ಆದರಿಂದ ಗಣಿಗಾರಿಕೆಯು ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ.

೨. ಇಂಗಳಗಿ : ಈ ಗ್ರಾಮವು ಗಣಿಗಾರಿಕೆ ನಡೆಯುವ ಸ್ಥಳದಿಂದ ದೂರವಿದೆಯಾದರೂ ತನ್ನನ್ನು ತಾನು ಗಣಿಗಾರಿಕೆಯಲ್ಲಿ ತೊಡಗಿಸಿಕೊಂಡಿದೆ. ಇಲ್ಲಿನ ಜನರು ವ್ಯವಸಾಯದ ಜೊತೆಗೆ ಗಣಿಗಾರಿಕೆಯ ಕೆಲಸಕ್ಕೆ ಹೋಗುತ್ತಾರೆ. ಈ ಗ್ರಾಮದ ಕೆಲವೊಂದು ಕೃಷಿ ಯೋಗ್ಯ ಭೂಮಿಯನ್ನು ಅದಿರಿನ ಪುಡಿಯನ್ನು ಸಂಗ್ರಹಿಸಲು ನೀಡಲಾಗಿದೆ. ಕಬ್ಬಿಣದ ಅದಿರಿನ ಪುಡಿ ಮಾಡುವ ಕ್ರಶರ್ ಮತ್ತು ಬಿಳಿಕಲ್ಲಿನ ಕ್ವಾರೆಯ ಕ್ರಶರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ಇಲ್ಲಿನ ಜನರು ಕೃಷಿ ಮತ್ತು ಗಣಿಗಾರಿಕೆಯನ್ನವಲಂಬಿಸಿದ್ದಾರೆ. ಆದರೆ ಕೃಷಿಯಲ್ಲಿ ಹೆಚ್ಚಿನ ಜನರು ತೊಡಗಿರುವುದರಿಂದ ಕೃಷಿಯು ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಕ್ರಶರ್‌ಗಳ ಕೆಲಸದಲ್ಲಿ ಕೆಲವೇ ಜನರು ಕಾರ್ಯ ನಿರ್ವಹಿಸುವುದರಿಂದ ಗಣಿಗಾರಿಕೆಯು ಆರ್ಥಿಕ ಚಟುವಟಿಕೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆಯುತ್ತದೆ.

೩. ವಡ್ಡರಹಳ್ಳಿ : ಈ ಗ್ರಾಮದಲ್ಲಿ ಗಣಿಗಾರಿಕೆ ನಡೆಯುತ್ತಿಲ್ಲ. ಹೆಚ್ಚಿನವರು ಕೃಷಿಯನ್ನವಲಂಬಿಸಿದ್ದಾರೆ. ಕೃಷಿ ಪ್ರಮುಖವಾದ ಕ್ಷೇತ್ರವಾಗಿ ಗುರುತಿಸಲ್ಪಡುತ್ತದೆ. ಈ ಊರಿನ ಕೆಲವೊಂದು ಜನರು ಗಣಿಗಾರಿಕೆಯ ಕೆಲಸಕ್ಕಾಗಿ ಪಕ್ಕದ ಊರಿಗೆ ಹೋಗಿಬರುತ್ತಾರೆ. ಈ ಗ್ರಾಮವು ಗಣಿಗಾರಿಕೆಯಿಂದ ದೂರವಿದೆಯಾದರೂ ಪರೋಕ್ಷವಾಗಿ ಗಣಿಗಾರಿಕೆಯಲ್ಲಿ ತೊಡಗಿಕೊಂಡಿದೆ. ಈ ಗ್ರಾಮದಲ್ಲಿ ಒಬ್ಬ ಶ್ರೀಮಂತ ರೈತನು ಸ್ವಂತ ಗಣಿಗಾರಿಕೆಯನ್ನು ನಡೆಸುತ್ತಿದ್ದಾನೆ. ಉಳಿದಂತೆ ಗ್ರಾಮದ ಹೆಚ್ಚಿನ ಜನರು ಕೃಷಿಯನ್ನವಲಂಬಿಸಿದ್ದಾರೆ.

೪. ಪಾಪಿನಾಯಕನಹಳ್ಳಿ : ಅತಿ ಹೆಚ್ಚು ಗಣಿಗಾರಿಕೆಯಲ್ಲಿ ತೊಡಗಿಕೊಂಡಿರುವ ಪ್ರದೇಶಗಳಲ್ಲಿ ಇದು ಒಂದಾಗಿದೆ. ಇಲ್ಲಿನ ಜನ ಕೃಷಿಗಿಂತ ಗಣಿಗಾರಿಕೆಯೇ ಲಾಭ ತರುವ ಉದ್ಯಮವೆಂಬಂತೆ ಭಾವಿಸುತ್ತಿದ್ದಾರೆ ಇಲ್ಲಿಯ ಜನರು ಕೃಷಿಯ ಜೊತೆಗೆ ಗಣಿಗಾರಿಕೆಯ ಕೆಲಸದಲ್ಲಿ ತೊಡಗಿದ್ದಾರೆ. ಭಾರೀ ಪ್ರಮಾಣದ ಗಣಿಗಾರಿಕೆ ನಡೆಯುತ್ತಿದೆಯೆಂದು ಹೇಳಬಹುದು. ಕೆಲವೊಂದು ಜಮೀನುಗಳಲ್ಲಿ ಕಬ್ಬಿಣದ ಕಲ್ಲನ್ನು ಆರಿಸುತ್ತಿರುವುದು ಕಂಡುಬರುತ್ತದೆ. ಕೆಲವೊಂದು ಜಮೀನುಗಳಲ್ಲಿ ಕಬ್ಬಿಣದ ಅದಿರಿನ ಪುಡಿಯನ್ನು ಸಂಗ್ರಹಿಸಿರುವುದು ನೋಡಿದರೆ, ಸಣ್ಣ ಸಣ್ಣ ಬೆಟ್ಟ ಗುಡ್ಡಗಳು ಸೃಷ್ಟಿಯಾಗಿದೆಯೇ ಎನ್ನುವಂತೆ ಕಂಡುಬರುತ್ತದೆ. ಅತಿ ಹೆಚ್ಚಿನ ಪ್ರಮಾಣದಲ್ಲಿ ಅದಿರಿನ ಸಂಗ್ರಹಣೆಯ ದೃಶ್ಯ ಕಂಡುಬರುತ್ತದೆ.

ಈ ಗ್ರಾಮದಲ್ಲಿ ವೈಯಕ್ತಿಕ ಗಣಿಗಾರಿಕೆ ಕಂಡುಬರುತ್ತದೆ. ಕೆಲವೊಂದು ಕಡೆ ಬೇರೆಯವರ ಜಮೀನನ್ನು ಇಂತಿಷ್ಟು ದುಡ್ಡು ಕೊಡುತ್ತೇವೆ ಎಂದು ಮೇಲ್ಭಾಗದಲ್ಲಿರುವ ಕಬ್ಬಿಣದ ಅದಿರಿನ ಕಲ್ಲುಗಳನ್ನು ಆರಿಸಿಕೊಳ್ಳುತ್ತಾರೆ. ಇನ್ನೊಂದೆಡೆ ಕೃಷಿಕರು ತಮ್ಮ ಜಮೀನನ್ನು ಗಣಿಮಾಲಿಕರಿಗೆ ಅದಿರಿನ ಖಣಜಕ್ಕಾಗಿ ಎಕರೆಗೆ ೨೦,೨೫,೩೦,೩೫ ಸಾವಿರ ರೂ.ಗಳಂತೆ ಪ್ರತಿವರ್ಷಕ್ಕೆ ಪಡೆಯುತ್ತಿದ್ದಾರೆ. ಕೆಲವು ರೈತರು ತಮ್ಮ ಜಮೀನಿನಲ್ಲಿಯೇ ಕಲ್ಲನ್ನು ಕಿತ್ತಿಸುವುದು ಮತ್ತು ಆರಿಸುವುದು ಕಂಡುಬರುತ್ತದೆ.

ಒಂದು ವ್ಯಾಗಿನ್ ಲೋಡ್‌ಗಾಗಿ ೬೦ ಸಾವಿರ ರೂಪಾಯಿ ನೀಡಲಾಗುತ್ತದೆ. ದಿನಕ್ಕೆ ಒಂದು ಅಥವಾ ಎರಡು ವ್ಯಾಗಿನ್ ಕೆಲಸ ನಡೆಯುತ್ತದೆ. ಎರಡು ವ್ಯಾಗಿನ್ ಲೋಡ್ ಮಾಡಿದರೆ ೧ ಲಕ್ಷ ೨೦ ಸಾವಿರ ಹಣ ಕಾರ್ಮಿಕರಿಗೆ ಹಂಚಿಕೆಯಾಗುತ್ತದೆ. ಹೀಗಾಗಿ ಇಲ್ಲಿ ಕೃಷಿಗಿಂತ ಗಣಿಗಾರಿಕೆಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಒಂದು ವ್ಯಾಗಿನ್ ಲೋಡ್‌ಗೆ ಸುಮಾರು ೫೦೦ ರಿಂದ ೬೦೦ ಜನ ಕಾರ್ಮಿಕರು ಶ್ರಮಿಸುತ್ತಾರೆ. ಈ ಗ್ರಾಮದ ರೈಲು ನಿಲ್ದಾಣದ ಕಡೆಗೆ ಪ್ರತ್ಯೇಕವಾದ ವಲಸಿಗ ತಮಿಳರ ಕಾಲೋನಿ ಕಂಡುಬರುತ್ತದೆ.

ಗಣಿಗಾರಿಕೆಯ ಸುತ್ತ ೫೦೦ ಮೀಟರ್ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಧೂಳು ಪರಿಹಾರ ದೊರೆಯುತ್ತಿದೆ. ಧೂಳು ಪರಿಹಾರವಾಗಿ ಪ್ರತಿ ಎಕರೆಗೆ ೧,೫೫೦ ರೂ.ಗಳನ್ನು ರೈತರು ಪಡೆಯುತ್ತಿದ್ದಾರೆ. ಅದು ಯಾವುದಕ್ಕೂ ಸಾಲದಾಗಿದೆ. ಆದ್ದರಿಂದ ಇಲ್ಲಿ ಹೆಚ್ಚಿನವರು ಗಣಿಗಾರಿಕೆಯನ್ನವಲಂಬಿಸಿದ್ದಾರೆ. ಈ ಗ್ರಾಮದ ಆರ್ಥಿಕ ಚಟುವಟಿಕೆಯಲ್ಲಿ ಕೃಷಿಗೆ ದ್ವಿತೀಯ ಪ್ರಾಮುಖ್ಯತೆ ದೊರೆತರೆ, ಗಣಿಗಾರಿಕೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ.

೫. ಬೈಲುವದ್ದಿಗೇರಿ : ಈ ಗ್ರಾಮವು ಗಣಿಗಾರಿಕೆಯಿಂದ ದೂರದಲ್ಲಿದೆ. ಆದರೆ ಕೆಲವೊಂದು ಜಮೀನುಗಳು ಮಾತ್ರ ಗಣಿಗಾರಿಕೆಯ ವ್ಯಾಪ್ತಿಯಲ್ಲಿ ಬರುತ್ತವೆ. ಅಂತಹ ಜಮೀನುಗಳಿಗೆ ಮಾತ್ರ ಧೂಳಿನಿಂದ ಸಮಸ್ಯೆಯಿದೆ. ಉಳಿದಂತೆ ಯಾವುದೇ ಧೂಳಿನ ಸಮಸ್ಯೆ ಅಷ್ಟಾಗಿ ಕಂಡುಬರುವುದಿಲ್ಲ. ಇಲ್ಲಿ ಒಂದು ಕಲ್ಲಿನ ಕ್ವಾರೆ ಕೆಲಸವು ಕ್ರಶರ್ ಮೂಲಕ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಪಕ್ಕದ ಜಮೀನುಗಳಿಗೆ ಧೂಳು ಬರುತ್ತಿದೆಯಾದರೂ ಯಾವುದೇ ರೀತಿಯ ಪರಿಹಾರ ದೊರೆಯುತ್ತಿಲ್ಲವೆಂದು ತಿಳಿಯುತ್ತದೆ. ಈ ಗ್ರಾಮದವರು ಹೆಚ್ಚಾಗಿ ಕೃಷಿಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕೃಷಿ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಈ ಗ್ರಾಮದ ಕೃಷಿಕಾರ್ಮಿಕರು ಪಕ್ಕದ ಊರುಗಳ ಕೃಷಿ ಚಟುವಟಿಕೆಗೆ ಕೃಷಿ ಕಾರ್ಮಿಕರಾಗಿ ದುಡಿಯಲು ಹೋಗುತ್ತಾರೆ.

ಹೊಸಪೇಟೆ-ಮರಿಯಮ್ಮನಹಳ್ಳಿ ಮಾರ್ಗದಲ್ಲಿನ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮುಗಳು

ಈ ಮೇಲೆ ತಿಳಿಸಲಾದ ಮಾರ್ಗದಲ್ಲಿ ಬರುವ ಹೊಸಪೇಟೆ ತಾಲ್ಲೂಕಿನ ಹಳ್ಳಿಗಳ ಆರ್ಥಿಕ ಚಟುವಟಿಕೆಗಳು.

೧. ದೇವಲಾಪುರ : ಈ ಗ್ರಾಮದಲ್ಲಿ ಎರಡು ಕ್ವಾರೆ ಕೆಲಸಗಳು ಕ್ರಶರ್ ಮೂಲಕ ನಡೆಯುತ್ತಿವೆ. ೧ ಕ್ವಾರೆಯ ಸುತ್ತ ಯಾವುದೇ ಜಮೀನುಗಳಿಲ್ಲ. ಸ್ವಲ್ಪ ಬಯಲು ಭೂಮಿಯಿರುವುದರಿಂದ ಇಲ್ಲಿ ಕೃಷಿ ಚಟುವಟಿಕೆಯ ಮೇಲೆ ಯಾವುದೇ ಪರಿಣಾಮವಾಗುತ್ತಿಲ್ಲ. ಇನ್ನೊಂದು ಕ್ರಶರ್ ಊರಿನಿಂದ ಸ್ವಲ್ಪ ದೂರದಲ್ಲಿದೆ. ಅಲ್ಲಿನ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕುರುಬ ಸಮುದಾಯದವರಿದ್ದಾರೆ. ಅವರು ಕ್ವಾರೆ ಕೆಲಸದ ಮಾಲಿಕರ ಜೊತೆಗೆ ಅನ್ಯೋನ್ಯ ಸಂಬಂಧವನ್ನು ಹೊಂದಿರುವುದರಿಂದ ಯಾವುದೇ ತಂಟೆ ತಗಾದೆಗಳಿಲ್ಲ. ಆದ್ದರಿಂದ ಅವರು ಕ್ವಾರೆಯ ಬಗೆಗೆ ವಿವರ ನೀಡಲು ನಿರಾಕರಿಸಿದರು. ಈ ಗ್ರಾಮದಲ್ಲಿ ಕೃಷಿ ಪ್ರಮುಖ ಕ್ಷೇತ್ರವಾಗಿ ಕಂಡುಬರುತ್ತದೆ. ಕೃಷಿಯು ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

[illegible]

[illegible]

[illegible]

[illegible]

೨. ಮರಿಯಮ್ಮನಹಳ್ಳಿತಾಂಡ : ಗಣಿಗಾರಿಕೆಯ ಕಾರ್ಖಾನೆಯ ಕಿಟ್ಟದಿಂದ ಬಂದ ತ್ಯಾಜ್ಯ ವಸ್ತುವನ್ನು ಪುಡಿಮಾಡಿ ಅದರಲ್ಲಿಯ ಮಿಶ್ರಣಗಳನ್ನು ಬೇರ್ಪಡಿಸುತ್ತಾರೆ. ಯಂತ್ರಗಳ ಮೂಲಕ ಮತ್ತು ಕೂಲಿ ಆಳುಗಳ ಮೂಲಕ ಕಬ್ಬಿಣವನ್ನು ಬೇರ್ಪಡಿಸುತ್ತಾರೆ. ಈ ಬೇರ್ಪಡಿಸುವ ವಿಧಾನದಲ್ಲಿ ೪ ಬಗೆಯ ಖನಿಜಗಳು ದೊರೆಯುತ್ತವೆ. ಅವುಗಳೆಂದರೆ ಕಬ್ಬಿಣ, ಸಿಲಿಕಾ, ಕೋಕ್ ಮತ್ತು ಮಣ್ಣುಮಿಶ್ರಿತ ತ್ಯಾಜ್ಯ ಖನಿಜ ದೊರೆಯುತ್ತದೆ.

ಮಾನವನ ಶ್ರಮವನ್ನಾಧರಿಸಿ ಒಂದು ಕಲ್ಲಿನ ಕ್ವಾರೆ ನಡೆಯುತ್ತಿದೆ. ಅಲ್ಲದೇ ಒಂದು ಸಿಮೆಂಟಿನ ಇಟ್ಟಿಗೆ ತಯಾರಿಕೆ ನಡೆಯುತ್ತಿದೆ. ಆದರೆ ಅವುಗಳು ಮಾರಾಟಕ್ಕಲ್ಲ. ತಾವು ನಿರ್ಮಿಸುತ್ತಿರುವ ಉಗ್ರಾಣಕ್ಕೆಂದು ಅದರ ಮಾಲಿಕರು ತಿಳಿಸುತ್ತಾರೆ. ಅಲ್ಲದೆ ಕೆಲವು ರೈತರು ಕೃಷಿಯನ್ನವಲಂಬಿಸಿದ್ದಾರೆ. ಕೆಲವರು ಬೇರೆ ಬೇರೆ ಕೆಲಸಗಳನ್ನು ಆಶ್ರಯಿಸಿರುವುದು ಕಂಡುಬರುತ್ತದೆ. ಕೃಷಿಕಾರ್ಮಿಕರು ಸಹ ಕಂಡುಬರುತ್ತಾರೆ. ಈ ಗ್ರಾಮವು ವಿವಿಧ ಪ್ರಕ್ರಿಯೆಗಳಲ್ಲಿ ತೊಡಗಿಕೊಂಡಿದೆ.

೩. ಡಣಾಪುರ : ಈ ಗ್ರಾಮದ ಭೂಮಿಗಳು ಫಲವತ್ತತೆಯನ್ನು ಹೊಂದಿವೆ. ಈ ಗ್ರಾಮದ ಹತ್ತಿರ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೊಸದಾಗಿ ಕಬ್ಬಿಣ ಮತ್ತು ಮ್ಯಾಂಗನೀಸ್ ಕಾರ್ಖಾನೆ ಸ್ಥಾಪನೆಯಾಗಿದೆ. ಇದು ಗ್ರಾಮಕ್ಕೆ ಬಹಳ ಹತ್ತಿರವಿರುವುದರಿಂದ ಅದರಿಂದ ಬರುವ ಹೊಗೆ ಮತ್ತು ಧೂಳಿನ ಪ್ರಮಾಣ ಹೆಚ್ಚಾಗಿದೆ. ಈ ಕಾರ್ಖಾನೆ ಸ್ಥಾಪನೆಯಾಗಿ ೩ ರಿಂದ ೪ ತಿಂಗಳುಗಳಾಗಿರಬಹುದು. ಈ ಗ್ರಾಮದ ಜನರು ಗಣಿಗಾರಿಕೆಯ ಕೆಲಸಕ್ಕೆ ಹೋಗುತ್ತಿದ್ದಾರೆ. ಈ ಕಾರ್ಖಾನೆಯ ಸ್ಥಾಪನೆಗಾಗಿ ಭೂಮಿಯನ್ನು ರೈತರಿಂದ ಪಡೆಯಲಾಗಿದೆ. ಕಾರ್ಖಾನೆಯ ಮಾಲಿಕರು ಪ್ರತಿ ಎಕರೆಗೆ ಒಂದು ಲಕ್ಷ ರೂ.ಗಳನ್ನು ನೀಡಿ ಭೂಮಿಯನ್ನು ಕೊಂಡುಕೊಂಡಿದ್ದಾರೆ. ಈ ಕಾರ್ಖಾನೆ ಪ್ರಾರಂಭವಾದಾಗಿನಿಂದ ರೈತರು ಮತ್ತು ಗ್ರಾಮದ ಜನರಿಗೆ ತೀವ್ರ ತೊಂದರೆಯಾಗುತ್ತಿದೆ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಈ ಗ್ರಾಮದಲ್ಲಿ ವೈಯಕ್ತಿಕ ಗಣಿಗಾರಿಕೆಗೆ ಆಸ್ಪದವಿಲ್ಲ. ಕಾರಣ ಜಮೀನುಗಳಲ್ಲಿ ಕಬ್ಬಿಣದ ಅದಿರು ದೊರೆಯುವ ಪ್ರಮಾಣ ಕಂಡುಬರುವುದಿಲ್ಲ. ಗಣಿಕಾರ್ಮಿಕರಾಗಿ ಈ ಗ್ರಾಮದ ಹಲವಾರು ಜನರು ಗಣಿಗಾರಿಕೆಯಲ್ಲಿ ತೊಡಗಿದ್ದಾರೆ. ಒಂದು ಸಿಮೆಂಟಿನ ಇಟ್ಟಿಗೆ ತಯಾರಿಕೆಯ ಕೆಲಸವು ಸಹ ನಡೆಯುತ್ತಿದೆ. ಆದರೂ ಸಹ ಹೆಚ್ಚಿನ ಜನರು ಕೃಷಿಯಲ್ಲಿ ತೊಡಗಿದ್ದಾರೆ. ಕೃಷಿಯು ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ.

೪. ಹನುಮನಹಳ್ಳಿ : ಗಣಿಗಾರಿಕೆಯ ಸ್ಫೋಟದಿಂದಾಗಿ ಈ ಗ್ರಾಮದ ಕೆಲವೊಂದು ಮನೆಗಳು ಬಿರುಕುಬಿಟ್ಟಿವೆ. ಹೆಚ್ಚಿನ ಜನರು ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ಗ್ರಾಮದಲ್ಲಿ ಭೂರಹಿತರ ಸಂಖ್ಯೆ ಜಾಸ್ತಿಯಿದೆ. ಈ ಗ್ರಾಮವು ಪ್ರಮುಖವಾದುದೆಂದು ಹೇಳಬಹುದು. ಕಾರಣ ಗಣಿಗಾರಿಕೆಯ ವಿರುದ್ಧ ಕೆಲವೊಂದು ಜನ ಒಟ್ಟುಗೂಡಿ ಚಳುವಳಿ ಮಾಡಲು ಮುಂದಾದಾಗ, ಈ ಗ್ರಾಮದ ಕೆಲವು ಜನರ ಕುತಂತ್ರದಿಂದಾಗಿ ಚಳುವಳಿ ಯಶಸ್ವಿಯಾಗಲಿಲ್ಲ. ಗಣಿಗಾರಿಕೆಯಲ್ಲಿ ಕೆಲಸ ಮಾಡುವ ಈ ಗ್ರಾಮದ ಕೆಲವೊಂದು ಜನ ಚಳುವಳಿಯನ್ನು ನಿಷ್ಪ್ರಯೋಜನಗೊಳಿಸಿದರೆಂದು ತಿಳಿಯುತ್ತದೆ. ಗಣಿಗಾರಿಕೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಗಣಿಗಾರಿಕೆಯು ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ.

೫. ಗಾಳೆಮ್ಮನಗುಡಿ : ಈ ಗ್ರಾಮದ ಪಕ್ಕದಲ್ಲಿ ಗಣಿಗಾರಿಕೆ ನಡೆದಿರುವ ಬೆಟ್ಟಗುಡ್ಡಗಳು ಒಂದೆಡೆಯಾದರೆ, ಇನ್ನೊಂದೆಡೆ ತುಂಗಭದ್ರಾ ಜಲಾಶಯದ ಹಿನ್ನೀರು. ಹೀಗಾಗಿ, ಈ ಗ್ರಾಮದಲ್ಲಿ ಭೂಮಿ ಹೊಂದಿರುವವರೇ ವಿರಳ. ತುಂಗಭದ್ರಾ ಜಲಾಶಯದಲ್ಲಿ ನೀರು ಕಡಿಮೆಯಾದಂತೆಲ್ಲ ಅದರ ದಡದಲ್ಲಿ ಬೇಸಾಯ ಮಾಡುತ್ತಾರೆ. ಇಲ್ಲಿ ಬೇಸಾಯ ಮಾಡಬೇಕಾದರೆ ಯಾರು ಮುಂದೆ ಹೋಗಿ ಮಾಡುತ್ತಾರೆಯೋ ಅವರು ಅದರಲ್ಲಿ ಬೆಳೆಯಬಹುದು. ಈ ದಡದಲ್ಲಿ ಕೆಲವರು ಬೋರವೆಲ್ ಹಾಕಿಸಿ ಕೃಷಿ ಮಾಡುತ್ತಿದ್ದಾರೆ. ಕೆಲವರು ಆ ಭೂಮಿಯ ತೇವದಲ್ಲಿ ಬೆಳೆಯನ್ನು ಬೆಳೆಯುತ್ತಾರೆ. ಈ ಗ್ರಾಮದವರು ಹೆಚ್ಚಾಗಿ ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಗಣಿಗಾರಿಕೆಯೇ ಇವರ ಪ್ರಮುಖ ವೃತ್ತಿ ಎನ್ನುವಂತಾಗಿದೆ. ಈ ಗ್ರಾಮದ ಆರ್ಥಿಕ ಚಟುವಟಿಕೆಯಲ್ಲಿ ಗಣಿಗಾರಿಕೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ.

೬. ವ್ಯಾಸನಕೆರೆ : ಈ ಗ್ರಾಮವು ತುಂಗಭದ್ರಾ ಹಿನ್ನೀರಿನ ಪ್ರದೇಶದಲ್ಲಿದೆ. ಗಣಿಗಾರಿಕೆಯ ಪ್ರಭಾವ ಕಡಿಮೆಯಿದೆಯಾದರೂ ಇಲ್ಲಿಯ ಜನರು ಗಣಿಗಾರಿಕೆು ಕೆಲಸಕ್ಕೆ ಹೋಗುತ್ತಾರೆ. ಈ ಗ್ರಾಮದ ಕೆಲವು ರೈತರು ಸಹ ತುಂಗಭದ್ರಾ ಜಲಾಶಯದ ನದಿಯ ದಡದಲ್ಲಿ ಬೇಸಾಯ ಮಾಡುತ್ತಿದ್ದಾರೆ. ಆದರೆ ಈ ಪದ್ಧತಿಯು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ವ್ಯಾಸನಕೆರೆ ವ್ಯಾಪ್ತಿಯ ವ್ಯಾಸನಕೆರೆ ಸ್ಟೇಷನ್ ಮತ್ತು ಬಲ್ಡೋಟ ಮೈನ್ಸ್‌ನಲ್ಲಿ ಹೆಚ್ಚಿನ ಪ್ರಮಾಣದ ಗಣಿಗಾರಿಕೆ ನಡೆಯುತ್ತಿದೆ. ವ್ಯಾಸನಕೆರೆಯ ಗ್ರಾಮದ ಜನರು ಹೆಚ್ಚಾಗಿ ಕೃಷಿಯಲ್ಲಿ ತೊಡಗಿದ್ದಾರೆ. ಕೃಷಿಯು ಈ ಗ್ರಾಮದ ಜೀವಾಳವಾಗಿದೆ.

೭. ವ್ಯಾಸನಕೆರೆ ಸ್ಟೇಷನ್ : ಇಲ್ಲಿಯ ಜನರೆಲ್ಲರೂ ಪ್ರಮುಖವಾಗಿ ಗಣಿಗಾರಿಕೆಯನ್ನವಲಂಬಿಸಿದ್ದಾರೆ. ಇಲ್ಲಿಯ ಕೆಲವು ಜನರು ತುಂಗಭದ್ರಾ ಜಲಾಶಯ ಇಳಿಮುಖವಾದಂತೆಲ್ಲಾ ಕೃಷಿಗಾಗಿ ಜಲಾಶಯದ ಹಿನ್ನೀರಿನ ಭಾಗವನ್ನು ಆಶ್ರಯಿಸುತ್ತಿದ್ದಾರೆ. ವ್ಯಾಸನಕೆರೆ ಸ್ಟೇಷನ್ ಮತ್ತು ಗಾಳೆಮ್ಮನಗುಡಿ ಮಧ್ಯದಲ್ಲಿ ಗುಂಡಾ ಕಾಯ್ದಿಟ್ಟ ಅರಣ್ಯ ಪ್ರದೇಶವಿದೆ. ಈ ಕಾಯ್ದಿಟ್ಟ ಅರಣ್ಯ ಪ್ರದೇಶವು ಸುಮಾರು ೨ ಸಾವಿರ ಎಕರೆಗೂ ಮೇಲ್ಪಟ್ಟಿದೆ. ಒಂದೆಡೆ ಕಾಯ್ದಿಟ್ಟ ಅರಣ್ಯ, ಮತ್ತೊಂದೆಡೆ ಪಕ್ಕದಲ್ಲಿಯೇ ಗಣಿಗಾರಿಕೆ ಮತ್ತು ಗಣಿಗಾರಿಕೆಯ ಕಾರ್ಖಾನೆಗಳು ನಡೆಯುತ್ತಿವೆ. ಹೀಗಾಗಿ ಈ ಕಾಯ್ದಿಟ್ಟ ಅರಣ್ಯ ಪ್ರದೇಶವು ವಿನಾಶದ ಅಂಚಿನಲ್ಲಿದೆಯೆಂದು ಹೇಳಬಹುದು. ವ್ಯಾಸನಕೆರೆ ವ್ಯಾಪ್ತಿಯ ಪ್ರದೇಶದಲ್ಲಿ ದೊಡ್ಡ ಪ್ರಮಾಣದ ಗಣಿಗಾರಿಕೆ ನಡೆಯುತ್ತಿದೆ. ಈ ಗ್ರಾಮದ ಜನರಿಗೆ ಗಣಿಗಾರಿಕೆಯು ಪ್ರಮುಖ ವೃತ್ತಿಯಾಗಿ ಪರಿಣಮಿಸಿದೆ. ಗಣಿಗಾರಿಕೆಯು ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ.

ಹೊಸಪೇಟೆ-ಸಂಡೂರು ಮಾರ್ಗದಲ್ಲಿನ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳು

೧. ಕಣವಿರಾಯನಗುಡಿ : ಕಣವಿರಾಯನಗುಡಿಯಲ್ಲಿ ನೀರಿನ ಅಭಾವವಿದೆ. ಕೃಷಿಗಾಗಿ ಹಾಕಿಸಿದ ಬೋರ್‌ವೆಲ್‌ನಲ್ಲಿ ನೀರಿನ ಪ್ರಮಾಣ ಕುಸಿತವನ್ನು ಕಂಡಿದೆ. ಈ ಗ್ರಾಮವು ತಗ್ಗು ಪ್ರದೇಶದಲ್ಲಿರುವುದರಿಂದ ಹೆಚ್ಚಾಗಿ ಕೃಷಿಯನ್ನವಲಂಬಿಸಿದ್ದಾರೆ. ಜೊತೆಗೆ ಹೈನುಗಾರಿಕೆಯನ್ನು ನೆಚ್ಚಿಕೊಂಡಿದ್ದಾರೆ. ಹೊಸಪೇಟೆ ನಗರಕ್ಕೆ

ಹೈನು ಉತ್ಪನ್ನಗಳನ್ನು ಸಾಗಿಸಿ ಜೀವನ ನಡೆಸುತ್ತಿದ್ದಾರೆ. ಬೆರಳೆಣಿಕೆಯಷ್ಟು ಕುಟುಂಬಗಳು ಮಾತ್ರ ಗಣಿಗಾರಿಕೆಯ ಕೆಲಸಕ್ಕೆ ಹೋಗುತ್ತಿವೆ. ಕೃಷಿ ಮತ್ತು ಹೈನುಗಾರಿಕೆ ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಮಳೆಗಾಲದ ಸಮಯದಲ್ಲಿ ಉತ್ತಮವಾದ ಬೆಳೆಗಳು ರೈತರಿಗೆ ಲಭ್ಯವಾಗುತ್ತದೆ.

೨. ರಾಜಾಪುರ : ಈ ಗ್ರಾಮದಲ್ಲಿ ನೀರಿನ ಅಭಾವ ಅತಿ ದೊಡ್ಡ ಸಮಸ್ಯೆಯಾಗಿದೆ. ಅಂತರ್ಜಲದ ತೀವ್ರ ಕುಸಿತದಿಂದಾಗಿ ಇಲ್ಲಿನ ರೈತರ ಸ್ಥಿತಿ ತುಂಬಾ ಶೋಚನೀಯವಾಗಿದೆ. ಈ ಗ್ರಾಮದ ರೈತರು ಬೇರೆ ಯಾವ ಉಪಕಸುಬನ್ನು ಅವಲಂಬಿಸಿಲ್ಲ. ಗಣಿಗಾರಿಕೆಯು ಸ್ವಲ್ಪ ದೂರದಲ್ಲಿ ನಡೆಯುತ್ತಿದೆಯಾದರೂ ಅಲ್ಲಿ ಯಂತ್ರಶಕ್ತಿ ಮತ್ತು ವಾಹನಗಳದೇ ಕಾರುಬಾರು. ಗಣಿಗಾರಿಕೆಯ ಸ್ಫೋಟದಿಂದಾಗಿ ಅಂತರ್ಜಲ ಪೂರ್ಣವಾಗಿ ಕುಸಿದಿದೆ. ಯಾರ ಬೋರವೆಲ್‌ನಲ್ಲಿ ನೀರು ಉಳಿದಿದೆಯೋ ಅವರೇ ಪುಣ್ಯವಂತರು ಎನ್ನುವ ಅಭಿಪ್ರಾಯವನ್ನು ಗ್ರಾಮದ ಕೆಲವು ರೈತರು ವ್ಯಕ್ತಪಡಿಸುತ್ತಾರೆ. ಈ ಗ್ರಾಮದ ಜನರು ಗಣಿಗಾರಿಕೆಯಿಂದ ತುಂಬಾ ನಷ್ಟವನ್ನು ಅನುಭವಿಸುತ್ತಿದ್ದಾರೆ. ಗಣಿಮಾಲಿಕರಿಂದಾಗಲಿ ಅಥವಾ ಸರಕಾರದಿಂದಾಗಲಿ ಇವರಿಗೆ ಯಾವುದೇ ನೆರವು ದೊರೆಯುತ್ತಿಲ್ಲ. ಈ ಗ್ರಾಮದವರು ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಕೃಷಿ ಈ ಗ್ರಾಮದ ಪ್ರಮುಖ ಚಟುವಟಿಕೆಯಾಗಿ ಕಂಡುಬರುತ್ತದೆ.

೩. ಕಲ್ಲಹಳ್ಳಿ : ಕಲ್ಲಹಳ್ಳಿ ಗ್ರಾಮವು ಹೊಸಪೇಟೆ ತಾಲ್ಲೂಕಿನ ಸಂಡೂರು ಮಾರ್ಗದ ಕೊನೆಯ ಗ್ರಾಮವಾಗಿದೆ. ಇದ್ದುದರಲ್ಲಿ ಈ ಗ್ರಾಮದವರ ಆರ್ಥಿಕ ಸ್ಥಿತಿ ಸ್ವಲ್ಪಮಟ್ಟಿಗೆ ಉತ್ತಮವಾಗಿದೆ. ಈ ಗ್ರಾಮದಲ್ಲಿ ಲಂಬಾಣಿ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ. ಈ ಗ್ರಾಮದ ಕೆಲವು ಜನ ಗಣಿಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ಜನ ಸ್ವತಃ ತಾವೇ ಸಣ್ಣ ಪ್ರಮಾಣದಲ್ಲಿ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೆಲವೊಂದು ಜನ ರೈತರು ತಮ್ಮ ಜಮೀನಿನ ಮೇಲ್ಭಾಗದಲ್ಲಿ ದೊರೆಯುವ ಕಬ್ಬಿಣದ ಅದಿರಿನ ಕಲ್ಲುಗಳನ್ನು ಆರಿಸುತ್ತಿದ್ದಾರೆ. ಗಣಿಗಾರಿಕೆಯ ಕೆಲಸಕ್ಕೆ ಸೇರದೆ ಇರುವ ಕೆಲವೊಂದು ಕುಟುಂಬಗಳು ಸ್ವತಂತ್ರವಾಗಿ ಕೃಷಿಯನ್ನವಲಂಬಿಸಿದ್ದಾರೆ. ಕೆಲವು ಜನರು ಗಣಿಗಾರಿಕೆಯನ್ನು ವಿರೋಧಿಸುತ್ತಾರಾದರೂ ಹೆಚ್ಚಿನ ಜನರು ಗಣಿಗಾರಿಕೆಯ ಬಗೆಗೆ ಒಲವು ತೋರಿಸುತ್ತಾರೆ. ಈ ಗ್ರಾಮದಲ್ಲಿ ಸಂದರ್ಶಿಸಿದ ೬ ಜನ ರೈತರಲ್ಲಿ ಒಟ್ಟು ಅರ್ಧದಷ್ಟು ಜನ ಕೃಷಿಯ ಜೊತೆಗೆ ಗಣಿಗಾರಿಕೆಯನ್ನವಲಂಬಿಸಿದ್ದಾರೆ. ರೈತರು ಸಹ ವೈಯಕ್ತಿಕ ಗಣಿಗಾರಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಹೆಚ್ಚಿನ ಜನರು ಗಣಿಗಾರಿಕೆಯ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಸುತ್ತಮುತ್ತಲಿನ ಗ್ರಾಮದವರೆಲ್ಲ ಸೇರಿ ಒಂದು ಸಾರಿ ಪ್ರತಿಭಟಿಸಿದಾಗ ಕೆಲವೊಂದು ಜನ ಗಣಿಮಾಲಿಕರ ಸತ್ತಿರ ಹಣ ಪಡೆದು ಈ ಪ್ರತಿಭಟನೆಯನ್ನು ಅರ್ಧಕ್ಕೆ ನಿಲ್ಲುವಂತೆ ಮಾಡಲಾಗಿದೆ.

ಹೊಸಪೇಟೆ-ಕಂಪ್ಲಿ ಮಾರ್ಗದಲ್ಲಿನ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳು

೧. ಕೊಂಡನಾಯಕನಹಳ್ಳಿ : ಕೃಷಿ ಈ ಗ್ರಾಮದ ಪ್ರಮುಖ ಉದ್ಯೋಗವಾಗಿದೆ. ಇಲ್ಲಿನ ಜನರು ಹೆಚ್ಚಾಗಿ ಕೃಷಿಯನ್ನವಲಂಬಿಸಿದ್ದಾರೆ. ಕೃಷಿ ಪ್ರಧಾನವಾದ ಪ್ರದೇಶವಾಗಿದೆ. ಈ ಗ್ರಾಮದಲ್ಲಿ ಮಣ್ಣಿನ ಇಟ್ಟಿಗೆಯನ್ನು

ಹೆಚ್ಚಾಗಿ ತಯಾರಿಸಲಾಗಿರುತ್ತದೆ. ಈ ಗ್ರಾಮದಲ್ಲಿ ತಯಾರಿಸಲಾಗುವ ಇಟ್ಟಿಗೆಗಳು ಉತ್ತಮ ದರ್ಜೆಯಾಗಿರುತ್ತದೆ. ಇಲ್ಲಿ ತಯಾರಾಗುವ ಇಟ್ಟಿಗೆಗಳನ್ನು ಈ ಊರಿನ ಹೆಸರಿನ ಮೂಲಕ ಗುರುತಿಸಲಾಗುತ್ತದೆ. ಆರ್ಥಿಕ ಚಟುವಟಿಕೆಯಲ್ಲಿ ಇಟ್ಟಿಗೆ ತಯಾರಿಕೆಯು ಗಣನೀಯ ಸೇವೆ ನೀಡುತ್ತಿದೆಯಾದರೂ, ಕೃಷಿ ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ಕಂಡುಬರುತ್ತದೆ.

೨. **ಕಮಲಾಪುರ :** ಈ ಪಟ್ಟಣವು ಹೊಸಪೇಟೆ ತಾಲ್ಲೂಕಿನ ೪ ಹೋಬಳಿಗಳಲ್ಲಿ ಒಂದಾಗಿದೆ. ಇಲ್ಲಿನ ಜನ ಪ್ರಮುಖವಾಗಿ ಕೃಷಿಯನ್ನವಲಂಬಿಸಿದ್ದಾರೆ. ಈ ಪಟ್ಟಣದ ಕೃಷಿಯಲ್ಲಿ ಕಾಲುವೆ ನೀರು ಮತ್ತು ಕೆರೆ ನೀರು ಪ್ರಮುಖ ಪಾತ್ರ ವಹಿಸುತ್ತವೆ. ಕಮಲಾಪುರ ಪಟ್ಟಣದ ಕೃಷಿ ವ್ಯವಸ್ಥೆಯಲ್ಲಿ ೨ ಕೆರೆಗಳು ನೀರಾವರಿಯ ಸೌಲಭ್ಯವನ್ನು ಒದಗಿಸುತ್ತವೆ. ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇದು ಪಟ್ಟಣ ಪ್ರದೇಶವಾಗಿರುವುದರಿಂದ ವ್ಯಾಪಾರ ವಹಿವಾಟು ಪ್ರಾಮುಖ್ಯತೆಯನ್ನು ಪಡೆದಿದೆ. ಕೃಷಿಯ ಸಮಪಾಲು ಎಂಬಂತೆ ವ್ಯಾಪಾರ ವಹಿವಾಟುಗಳು ನಡೆಯುತ್ತವೆ. ಇಲ್ಲಿ ಮಣ್ಣಿನ ಮತ್ತು ಸಿಮೆಂಟಿನ ಇಟ್ಟಿಗೆಗಳನ್ನು ತಯಾರಿಸಲಾಗುತ್ತದೆ. ಕೆಲವೊಂದು ಕುಟುಂಬಗಳು ಇಟ್ಟಿಗೆ ಉದ್ಯಮವನ್ನು ನಂಬಿಕೊಂಡು ಬದುಕುತ್ತಿವೆ.

೩. **ರಾಮನಗರ :** ಈ ಗ್ರಾಮದಲ್ಲಿ ಭೂರಹಿತ ಲಂಬಾಣಿ ಕುಟುಂಬಗಳು ಹೆಚ್ಚಾಗಿ ವಾಸಿಸುತ್ತಿವೆ. ಕೃಷಿ ಚಟುವಟಿಕೆಯಲ್ಲಿ ತೊಡಗುವುದು ಇವರ ಮುಖ್ಯ ಕಾಯಕ. ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಜೊತೆಗೆ ಕಟ್ಟಿಗೆಯನ್ನು ಮಾರಾಟ ಮಾಡುತ್ತಾರೆ. ಒಂದು ಕುಟುಂಬ ಮಾತ್ರ ಮಣ್ಣಿನ ಇಟ್ಟಿಗೆ ತಯಾರಿಕೆಯಲ್ಲಿ ತೊಡಗಿದೆ. ಈ ಗ್ರಾಮದವರು ಕೂಲಿಯ ಹಣದ ಮೇಲೆ ಜೀವನ ಮಾಡುತ್ತಿದ್ದಾರೆ.

೪. **ವೆಂಕಟಾಪುರಕ್ಯಾಂಪ್ :** ವೆಂಕಟಾಪುರಕ್ಯಾಂಪ್‌ನಲ್ಲಿ ಕೃಷಿ ಪ್ರಮುಖ ಕ್ಷೇತ್ರವಾಗಿ ಕಾಣಿಸುತ್ತಿದೆಯಾದರೂ ಕೆಲವೇ ಜನ ಭೂಮಿಯನ್ನು ಹೊಂದಿದ್ದಾರೆ. ಇಲ್ಲಿನ ಜನರು ಹೆಚ್ಚಾಗಿ ಕ್ವಾರೆ ಕೆಲಸವನ್ನು ಅವಲಂಬಿಸಿದ್ದಾರೆ. ಮಾನವ ಶಕ್ತಿಯ ಶ್ರಮವನ್ನಾಧರಿಸಿದ ಕ್ವಾರೆ ಕೆಲಸ ನಡೆಯುತ್ತಿದೆ. ಈ ಗ್ರಾಮದಲ್ಲಿ ಕೃಷಿಗಿಂತ ಹೆಚ್ಚಾಗಿ ಕ್ವಾರೆ ಕೆಲಸವನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಒಂದು ಮಣ್ಣಿನ ಇಟ್ಟಿಗೆ ತಯಾರಿಕೆಯು ಕಂಡುಬರುತ್ತದೆ.

೫. **ಬುಕ್ಕಸಾಗರ :** ಹೆಚ್ಚಿನ ಸಂಖ್ಯೆಯ ಭೂರಹಿತ ಕುಟುಂಬಗಳು ಈ ಗ್ರಾಮದಲ್ಲಿ ವಾಸಿಸುತ್ತಿವೆ. ಕೃಷಿ ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಗಳಲ್ಲೊಂದಾಗಿದೆ. ಕೃಷಿಯ ಜೊತೆಗೆ ಮಾನವಶಕ್ತಿಯ ಶ್ರಮದ ಕಲ್ಲಿನ ಕ್ವಾರೆಯ ಕೆಲಸವು ಸಹ ವ್ಯಾಪಕವಾಗಿ ನಡೆಯುತ್ತಿದೆ. ಭೂರಹಿತ ಕುಟುಂಬಗಳು ಕ್ವಾರೆಯ ಕೆಲಸದಲ್ಲಿ ತೊಡಗಿರುವುದು ಕಂಡುಬರುತ್ತದೆ. ಕೆಲವೊಂದು ಭೂರಹಿತ ಕುಟುಂಬಗಳು ಕೃಷಿಕಾರ್ಮಿಕರಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಈ ಗ್ರಾಮದಲ್ಲಿ ಭತ್ತ ಮತ್ತು ಬಾಳೆಯನ್ನು ಬೆಳೆಯಲಾಗುತ್ತದೆ. ಒಟ್ಟಿನಲ್ಲಿ ಕೃಷಿ ಮತ್ತು ಕ್ವಾರೆ ಕೆಲಸ ಎರಡು ಆರ್ಥಿಕ ಚಟುವಟಿಕೆಯ ಕಾರ್ಯಗಳಾಗಿ ರೂಪುಗೊಂಡಿವೆ.

[illegible]

೬. ಸಿದ್ದೇಶ್ವರನಗರ :, ಈ ಗ್ರಾಮವು ಕೇವಲ ೧೪ ಕುಟುಂಬಗಳನ್ನೊಳಗೊಂಡಿದೆ. ಇದು ಅತಿ ಚಿಕ್ಕ ಗ್ರಾಮವಾಗಿದೆ. ಕೃಷಿ ಮತ್ತು ಮಣ್ಣಿನ ಇಟ್ಟಿಗೆ ತಯಾರಿಕೆಯು ಪ್ರಮುಖ ಚಟುವಟಿಕೆಗಳಾಗಿ ಕಂಡುಬರುತ್ತವೆ. ಇಟ್ಟಿಗೆ ಉದ್ಯಮವು ಬಹುದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಇಲ್ಲಿ ಕೃಷಿ ಚಟುವಟಿಕೆ ಪ್ರಮುಖವಾಗಿದೆಯೋ ಅಥವಾ ಇಟ್ಟಿಗೆ ಉದ್ಯಮ ಪ್ರಮುಖವಾಗಿದೆಯೋ ಎಂಬುದು ತಿಳಿಯದಂತಾಗುತ್ತದೆ. ಇದು ಸಣ್ಣ ಗ್ರಾಮವಾಗಿದ್ದರೂ ಸಹ ಬೃಹತ್ ಪ್ರಮಾಣದಲ್ಲಿ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ. ಕೃಷಿ ಮತ್ತು ಇಟ್ಟಿಗೆ ತಯಾರಿಕೆ ಪ್ರಮುಖ ಆರ್ಥಿಕ ಚಟುವಟಿಕೆಗಳೆಂದು ತಿಳಿದುಬರುತ್ತದೆ.

೩.೩ ಕೃಷಿಯನ್ನವಲಂಬಿಸಿರುವ ಸಮುದಾಯಗಳು

ನಮ್ಮ ದೇಶವು ಕೃಷಿ ಪ್ರಧಾನವಾದುದಾಗಿದೆ. ಶೇ. ೭೦ರಷ್ಟು ಜನ ನಮ್ಮ ದೇಶದಲ್ಲಿ ಕೃಷಿಯನ್ನು ಅವಲಂಬಿಸಿದ್ದಾರೆ. ಕೃಷಿಯನ್ನು ನೆಚ್ಚಿಕೊಂಡು ಹಲವಾರು ಸಮುದಾಯಗಳು ಜೀವನವನ್ನು ನಡೆಸುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಪ್ರಮುಖ ವೃತ್ತಿಯಾಗಿ ಕಂಡುಬರುತ್ತದೆ. ಒಂದು ದೇಶ ಅಭಿವೃದ್ಧಿ ಹೊಂದುವಲ್ಲಿ ಕೃಷಿ ಪ್ರಮುಖ ಪಾತ್ರ ವಹಿಸುತ್ತದೆ. "ಭಾರತವು ಕೃಷಿ ಪ್ರಧಾನವಾದ ದೇಶ. ಪ್ರತಿ ಮೂವರಲ್ಲಿ ಇಬ್ಬರು ಕೃಷಿಕರು ಅಂದರೆ ಸುಮಾರು ೫೮ ಕೋಟಿ ಜನರ ಮುಖ್ಯ ಕಸುಬು ಕೃಷಿಯಾಗಿದೆ. ಜಗತ್ತಿನಲ್ಲಿ ಕೃಷಿಯೋಗ್ಯ ಭೂಮಿ ಶೇಕಡಾ ೧೧ ಆದರೆ ಭಾರತದಲ್ಲಿ ಇದರ ಪ್ರಮಾಣ ಶೇಕಡಾ ೫೧.೫." ಭಾರತ ದೇಶದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿದ್ದರು ಸಹ ನಮ್ಮ ಕೃಷಿ ಇನ್ನೂ ಹಿಂದುಳಿದಿದೆ. ನಮ್ಮ ದೇಶದಲ್ಲಿ ೫೧.೫ ಕೃಷಿಯೋಗ್ಯ ಭೂಮಿಯಿದೆ. ಆದರೆ ಅದರ ಸಮರ್ಪಕ ಬಳಕೆಯಾಗುತ್ತಿಲ್ಲ. ಕೃಷಿಯೋಗ್ಯ ಭೂಮಿಯನ್ನು ಕೃಷಿಗೆ ಬಳಸುವುದರ ಬದಲು ಗಣಿಗಾರಿಕೆ, ಕಾರ್ಖಾನೆ, ಕಟ್ಟಡ ಹೀಗೆ ಮುಂತಾದವುಗಳಿಗೆ ಬಳಸಲ್ಪಡುತ್ತಿದೆ. "ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮುಕ್ಕಾಲುಭಾಗ ಕೃಷಿ ಆಧಾರಿತ ಜೀವನವನ್ನೇ ನಡೆಸುತ್ತಿದ್ದರೂ ಕೃಷಿಕ ಕಾಲೇಜುಗಳ ಸಂಖ್ಯೆ ಶೇ.೧.೪ ರಷ್ಟು ಮಾತ್ರ ಇದೆ. ಒಟ್ಟು ವಿದ್ಯಾರ್ಥಿ ಸಂಖ್ಯೆಯಲ್ಲಿ ಕೃಷಿ ಕೋರ್ಸುಗಳಿಗೆ ಪ್ರವೇಶ ಪಡೆದವರ ಸಂಖ್ಯೆ ೧.೧ ಮಾತ್ರ. ರೈತಾಪಿ ಸಂಸ್ಕೃತಿಯ ಶ್ರಮಜೀವಿಗಳಿಗೂ ಬಿಳಿಕಾಲರ್ ಸಂಸ್ಕೃತಿಯ ಬುದ್ಧಿಜೀವಿಗಳಿಗೂ ನಡುವೆ ನಮ್ಮ ದೇಶದಲ್ಲಿ ಎಂತಹ ಅಗಾಧ ಕಂದರವಿದೆಯೆಂಬುದನ್ನು ಈ ಅಂಕಿ ಅಂಶಗಳು ಸಾದರಪಡಿಸುತ್ತವೆ."" ಗಣಿಗಾರಿಕೆಯಂತಹ ಬುದ್ಧಿಜೀವಿಗಳು ನೀಡುವ ಹಣದ ಆಮಿಷಕ್ಕೆ ರೈತರು ಕೃಷಿಯೋಗ್ಯ ಭೂಮಿಯನ್ನು ಅದಿರಿನ ಸಂಗ್ರಹಣೆಗಾಗಿ ನೀಡುತ್ತಿದ್ದಾರೆ. ಸುಮಾರು ೭೦ಕ್ಕೂ ಅಧಿಕ ಜನ ಕೃಷಿಯನ್ನವಲಂಬಿಸಿದ್ದಾರೆ. ಆದರೆ ಕೃಷಿಗೆ ಪೂರಕವಾದ ಮಾಹಿತಿಯನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾಗುತ್ತಿಲ್ಲ.

ಕೃಷಿ ಇಲಾಖೆಯ ಮಾಹಿತಿಯ ಪ್ರಕಾರ ಹೊಸಪೇಟೆ ತಾಲ್ಲೂಕಿನಲ್ಲಿ ೩,೨೧೦ ಸಣ್ಣ ರೈತರು ಮತ್ತು ೪,೧೯೫ ಅತಿಸಣ್ಣ ರೈತರ ಕುಟುಂಬಗಳು ವಾಸಿಸುತ್ತಿವೆ. ದೊಡ್ಡ ಹಿಡುವಳಿ ಕೃಷಿಕರು ಮತ್ತು ರೂಪಾಂತರಗೊಳ್ಳುತ್ತಿರುವ ಕೃಷಿಕರನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶದ ಜನರು ಹೆಚ್ಚಾಗಿ

ಕೃಷಿಯನ್ನವಲಂಬಿಸಿದವರಾಗಿರುತ್ತಾರೆ. ಹಳ್ಳಿಗಳಲ್ಲಿ ಶ್ರೀಮಂತ ವರ್ಗ, ಮಧ್ಯಮ ವರ್ಗ ಮತ್ತು ಕೆಳವರ್ಗಗಳು ಕಂಡುಬರುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಎಲ್ಲಾ ಸಮುದಾಯದವರು ಭೂಮಿಯನ್ನು ಹೊಂದಿದವರಾಗಿರುತ್ತಾರೆ. ಭೂರಹಿತ ಕುಟುಂಬಗಳು ಸಹ ಕಂಡುಬರುತ್ತವೆ. ಕೃಷಿಕ ವರ್ಗಗಳೆಂದರೆ ಮುಖ್ಯವಾಗಿ ಹಿಂದುಳಿದ ವರ್ಗಗಳು ಎಂದು ಅರ್ಥವಾಗುತ್ತದೆ. ಕೆಳವರ್ಗಗಳು ಹೆಚ್ಚಾಗಿ ಕೃಷಿಯನ್ನವಲಂಬಿಸಿರುತ್ತವೆ. ಅವು ಸ್ವತಃ ಕೃಷಿಯ ಭೂಮಿಯನ್ನು ಹೊಂದಿ ಕೃಷಿಯಲ್ಲಿ ತೊಡಗಿರಬಹುದು ಅಥವಾ ಕೃಷಿಕಾರ್ಮಿಕರಾಗಿ ಕೆಲಸವನ್ನು ಮಾಡುವವರಾಗಿರಬಹುದು. ಹೀಗಾಗಿ ಕೃಷಿ ಸಮುದಾಯಗಳು ಕೆಳವರ್ಗಗಳು ಎಂದು ಹೇಳಬೇಕಾಗುತ್ತದೆ. ಇವರಿಗೆ ಕೃಷಿಯ ವಿನಃ ಬೇರೆ ಕೆಲಸ ಬರುವುದಿಲ್ಲ. ಇವರಿಗೆ ಕೃಷಿಯೇ ಜೀವನಾಡಿಯಾಗಿದೆ.

ಕೃಷಿಯನ್ನವಲಂಬಿಸಿರುವ ಸಮುದಾಯಗಳು ಒಂದೇ ಬಗೆಯಲ್ಲಿ ಕಂಡುಬರುವುದಿಲ್ಲ. ಕೆಲವರು ಸಣ್ಣ ಪ್ರಮಾಣದ ಭೂಮಿಯನ್ನು ಹೊಂದಿದ್ದರೆ, ಕೆಲವರು ಮಧ್ಯಮ ಪ್ರಮಾಣದ ಭೂಮಿಯನ್ನು ಹೊಂದಿದವರಾಗಿರುತ್ತಾರೆ. ಇನ್ನೂ ‑ಕೆಲವರು ದೊಡ್ಡ ಪ್ರಮಾಣದ ಭೂಮಿಯನ್ನು ಹೊಂದಿರುತ್ತಾರೆ. ಕೆಲವೊಂದು ಕೃಷಿಕ ಸಮುದಾಯಗಳು ಬೇರೆಡೆ ವಾಲುತ್ತಿದ್ದರೆ ರೂಪಾಂತರಗೊಳ್ಳುತ್ತಿರುವ ಸಮುದಾಯದವರಾಗಿ ಕಂಡುಬರುತ್ತಾರೆ. ಆದ್ದರಿಂದ ಇಲ್ಲಿ ೪ ವಿಧಗಳಲ್ಲಿ ಕೃಷಿಕರನ್ನು ಅಧ್ಯಯನ ಮಾಡಬಹುದು. ಅವುಗಳೆಂದರೆ

೧. ಸಣ್ಣ ಹಿಡುವಳಿ ಕೃಷಿಕರು.

೨. ಮಧ್ಯಮ ಹಿಡುವಳಿ ಕೃಷಿಕರು.

೩. ದೊಡ್ಡ ಹಿಡುವಳಿ ಕೃಷಿಕರು ಮತ್ತು

೪. ರೂಪಾಂತರಗೊಳ್ಳುತ್ತಿರುವ ಕೃಷಿಕರು.

ರೂಪಾಂತರಗೊಳ್ಳುತ್ತಿರುವ ಕೃಷಿಕರಲ್ಲಿ ಹೆಚ್ಚಾಗಿ ಅತಿ ಸಣ್ಣ ರೈತರಾಗಿದ್ದಾರೆ. ದೊಡ್ಡ ಕುಟುಂಬ, ಕೈಲಾಗದವರು ಸೇರಿದಂತೆ ಇನ್ನಿತರ ಖರ್ಚುಗಳಿಗಾಗಿ ಸಾಲ ಮಾಡಿ ಭೂಮಿಯನ್ನು ಮಾರಾಟ ಮಾಡಿ ಕೃಷಿ ಕಾರ್ಮಿಕರಾಗುತ್ತಿದ್ದಾರೆ. ಭಾರತ ಸರಕಾರವು ಕೃಷಿಯಲ್ಲಿ ತೊಡಗಿದ ರೈತರು ಯಾವ ಯಾವ ಪ್ರಮಾಣದಲ್ಲಿ ಭೂಮಿ ಹೊಂದಿದ್ದಾರೆ ಎನ್ನುವುದನ್ನು ನಿರ್ಧರಿಸಿದೆ. ಅದರಂತೆ ೫ ಬಗೆಯ ಕೃಷಿಕರನ್ನು ಪಟ್ಟಿ ಮಾಡಿದೆ. ಅವುಗಳಂದರೆ ಸೀಮಾಂತ ಹಿಡುವಳಿದಾರರು, ಸಣ್ಣ ಹಿಡುವಳಿದಾರರು, ಅರೆಮಧ್ಯಮ ಹಿಡುವಳಿದಾರರು, ಮಧ್ಯಮ ಹಿಡುವಳಿದಾರರು ಮತ್ತು ದೊಡ್ಡ ಹಿಡುವಳಿದಾರರು ಎಂದು ಗುರುತಿಸಿದೆ. ನನ್ನ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡಿದ ಹಿಡುವಳಿದಾರರನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಸಣ್ಣ ಹಿಡುವಳಿದಾರರು

ಭಾರತ ಸರಕಾರದ ನಿಯಮಾನುಸಾರ ೧ ರಿಂದ ೨ ಹೆಕ್ಟೇರ್ ವಿಸ್ತೀರ್ಣದ ಕೃಷಿಭೂಮಿಯನ್ನು ಹೊಂದಿರುವವರನ್ನು ಸಣ್ಣ ಹಿಡುವಳಿದಾರರು ಎಂದು ಕರೆಯಲಾಗುತ್ತದೆ. ಹೊಸಪೇಟೆ ತಾಲ್ಲೂಕಿನ

ಗಣಿಗಾರಿಕೆ ಪ್ರದೇಶದ ,ವ್ಯಾಪ್ತಿಯೊಳಗಿನ ೨೫ ಜನ ಸಣ್ಣ ಹಿಡುವಳಿದಾರರನ್ನು ನನ್ನ ಕ್ಷೇತ್ರಕಾರ್ಯದ ಸಮೀಕ್ಷೆಯಲ್ಲಿ ಸಂದರ್ಶಿಸಿದ್ದೇನೆ. ಸಣ್ಣ ಹಿಡುವಳಿದಾರರು ಕೇವಲ ೧ ರಿಂದ ೨ ಹೆಕ್ಟೇರ್ ವಿಸ್ತೀರ್ಣದ ಕೃಷಿಭೂಮಿಯನ್ನು ಹೊಂದಿದವರಾಗಿದ್ದಾರೆ. ಈ ಪ್ರಮಾಣದ ಭೂಮಿಯಲ್ಲಿ ಕೃಷಿಯನ್ನು ನೆಚ್ಚಿಕೊಂಡು ಜೀವನ ಸಾಗಿಸುವುದು ದುಸ್ತರವಾಗಿದೆ. ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಸಣ್ಣ ಪ್ರಮಾಣದ ಕೃಷಿ ಭೂಮಿ ಇರುವುದರಿಂದ ಉಪಕಸುಬುಗಳಾಗಿ ಗಣಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕೆಲವರು ಕೃಷಿ ಕೂಲಿಗಳಾಗಿ ಜೀವನ ನಡೆಸುತ್ತಿದ್ದಾರೆ. ಒಟ್ಟು ೨೫ ಕುಟುಂಬಗಳಲ್ಲಿ ೧೦ ಕುಟುಂಬಗಳು ಗಣಿಗಾರಿಕೆಯ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಉಳಿದ ೧೫ ಕುಟುಂಬಗಳಲ್ಲಿ ೦೯ ಕುಟುಂಬದವರು ಕೃಷಿ ಕೂಲಿಗಳಾಗಿ ದುಡಿಯುತ್ತಿದ್ದಾರೆ. ಕೃಷಿಯಲ್ಲಿ ಲಾಭವಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

೨. ಮಧ್ಯಮ ಹಿಡುವಳಿದಾರರು

೪ ರಿಂದ ೧೦ ಹೆಕ್ಟೇರ್ ವಿಸ್ತೀರ್ಣದ ಕೃಷಿ ಭೂಮಿಯನ್ನು ಹೊಂದಿರುವವರನ್ನು ಮಧ್ಯಮ ಹಿಡುವಳಿದಾರರು ಎಂದು ಕರೆಯಲಾಗುತ್ತದೆ. ಹೊಸಪೇಟೆ ತಾಲ್ಲೂಕಿನ ಗಣಿಗಾರಿಕಾ ಪ್ರದೇಶದ ವ್ಯಾಪ್ತಿಯಲ್ಲಿನ ಒಟ್ಟು ೪೦ ಜನ ಮಧ್ಯಮ ಹಿಡುವಳಿದಾರರನ್ನು ಸಂದರ್ಶಿಸಲಾಗಿದೆ. ಇವರು ೪ ರಿಂದ ೧೦ ಹೆಕ್ಟೇರ್ ವಿಸ್ತೀರ್ಣದ ಕೃಷಿ ಭೂಮಿಯನ್ನು ಹೊಂದಿರುವುದರಿಂದ ಇದ್ದುದರಲ್ಲಿ ಇವರ ಆರ್ಥಿಕ ಸ್ಥಿತಿ ಚೆನ್ನಾಗಿದೆ. ಇವರಲ್ಲಿ ಕೆಲವೊಂದು ರೈತರು ಆರ್ಥಿಕವಾಗಿ ಪ್ರಬಲರಾಗಿ ಕಂಡುಬರುತ್ತಾರೆ. ೪೦ ಜನ ರೈತರಲ್ಲಿ ೪ ಜನ ಸ್ವಂತವಾಗಿ ಗಣಿಗಾರಿಕೆ ನಡೆಸುತ್ತಿದ್ದಾರೆ. ಉಳಿದಂತೆ ಕೆಲವರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಗಣಿಗಾರಿಕೆಯನ್ನು ಅವಲಂಬಿಸಿರುವುದು ಕಂಡುಬಂದಿತಾದರೂ ಗಣಿಗಾರಿಕೆಯ ಬಗೆಗೆ ಮಾಹಿತಿ ನೀಡುವಲ್ಲಿ ನಿರಾಕರಿಸಿದರು.

೩. ದೊಡ್ಡ ಹಿಡುವಳಿದಾರರು

೧೦ ಹೆಕ್ಟೇರ್‌ಗಿಂತ ಹೆಚ್ಚಿನ ವಿಸ್ತೀರ್ಣದ ಕೃಷಿ ಭೂಮಿಯನ್ನು ಹೊಂದಿದವರನ್ನು ದೊಡ್ಡ ಹಿಡುವಳಿದಾರರೆಂದು ಕರೆಯಲಾಗುತ್ತದೆ. ಇವರು ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಬಲರಾಗಿರುವುದು ಕಂಡುಬರುತ್ತದೆ. ೧೦ ಹೆಕ್ಟೇರ್‌ಗಿಂತ ಮೇಲ್ಪಟ್ಟ ಭೂಮಿಯನ್ನು ಹೊಂದಿರುವುದರಿಂದ ಇವರು ಹೆಚ್ಚಿನ ಮನ್ನಣೆ ಪಡೆದವರಂತೆ ಆಯಾ ಗ್ರಾಮಗಳ ವಿಭಾಗದಲ್ಲಿ ಕಂಡುಬರುತ್ತಾರೆ. ಕ್ಷೇತ್ರಕಾರ್ಯದಲ್ಲಿ ೨೦ ಜನ ದೊಡ್ಡ ಹಿಡುವಳಿದಾರರನ್ನು ಸಂದರ್ಶಿಸಲಾಗಿದೆ. ಇವರಲ್ಲಿ ೬ ಜನ ಸ್ವಂತವಾಗಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ದೊಡ್ಡ ಹಿಡುವಳಿದಾರರು ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅಂದರೆ ಹೆಚ್ಚಿನ ಪ್ರಮಾಣದ ಭೂಮಿಯನ್ನು ಹೊಂದಿರುವುದರಿಂದ ಹೆಚ್ಚಿನ ಪ್ರಮಾಣದ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಾರೆ. ಆದ್ದರಿಂದ ಕೃಷಿಯಲ್ಲಿ ಇವರ ಪಾತ್ರ ಪ್ರಮುಖವಾಗಿ ಕಂಡುಬರುತ್ತದೆ.

೪. ಅಂಚಿನಲ್ಲಿರುವ ಕೃಷಿಕರು

೧ ಹೆಕ್ಟೇರ್‌ಗಿಂತ ಕಡಿಮೆ ವಿಸ್ತೀರ್ಣದ ಕೃಷಿಭೂಮಿಯನ್ನು ಹೊಂದಿದವರನ್ನು ಸೀಮಾಂತ ಹಿಡುವಳಿದಾರರು ಎಂದು ಕರೆಯಲಾಗುತ್ತದೆ. ಅಂದರೆ ಇವರು ತೀರಾ ಕಡಿಮೆ ಪ್ರಮಾಣದ ಭೂಮಿಯನ್ನು ಹೊಂದಿದವರಾಗಿದ್ದಾರೆ. ಒಂದು ರೀತಿಯಲ್ಲಿ ಇವರನ್ನು ಅಂಚಿನಲ್ಲಿರುವ ಕೃಷಿಕರು ಎಂದು ಕರೆಯಬಹುದಾಗಿದೆ. ಈ ಉದ್ದೇಶದಲ್ಲಿ ಸೀಮಾಂತ ಹಿಡುವಳಿದಾರರನ್ನು ಅಂಚಿನಲ್ಲಿರುವ ಕೃಷಿಕರು ಎಂದು ಕರೆಯಲು ಪ್ರಮುಖ ಕಾರಣವೆಂದರೆ, ಇವರು ತೀರಾ ಬಡ ಕೃಷಿಕರಾಗಿದ್ದಾರೆ. ಒಟ್ಟು ೯ ಜನ ಅಂಚಿನಲ್ಲಿರುವ ಕೃಷಿಕರನ್ನು ಸಂದರ್ಶಿಸಲಾಗಿದೆ. ಇವರು ೧ ಹೆಕ್ಟೇರ್‌ಗಿಂತ ಕಡಿಮೆ ಇರುವ ಭೂಮಿಯಲ್ಲಿ ಬೆಳೆ ತೆಗೆದು ಜೀವನ ನಡೆಸಲು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇವರಲ್ಲಿ ಹೆಚ್ಚಿನವರು ಈ ಭೂಮಿಯಿಂದ ಲಾಭವಿಲ್ಲ. ಮನೆಯಲ್ಲಿ ಹತ್ತಾರು ಸಮಸ್ಯೆಗಳಿವೆ. ಈ ಭೂಮಿಯನ್ನು ಮಾರಾಟ ಮಾಡಿದರೂ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಸೂಚಿಸುತ್ತಾರೆ. ಅಂದರೆ ಇಲ್ಲಿ ಕೃಷಿ ಭೂಮಿಯನ್ನು ಮಾರಾಟ ಮಾಡಲು ಮುಂದಾದವರಂತೆ ಕಂಡುಬರುತ್ತಾರೆ. ಇವರು ಗಣಿಗಾರಿಕೆಯ ಕಾರ್ಮಿಕರಾಗಿ ಮತ್ತು ಕೃಷಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕೃಷಿಯನ್ನು ತೊರೆಯಲು ಮುಂದಾದವರಾಗಿ ಕಂಡುಬರುತ್ತಾರೆ.

ಸಣ್ಣ ಹಿಡುವಳಿದಾರರ ೨೫ ಜನ ರೈತರು, ಮಧ್ಯಮ ಹಿಡುವಳಿದಾರರ ೪೦ ಜನ ರೈತರು, ೨೦ ಜನ ದೊಡ್ಡ ಹಿಡುವಳಿದಾರರು ಮತ್ತು ೯ ಜನ ಅಂಚಿನಲ್ಲಿರುವ ರೈತರನ್ನು ಸಂದರ್ಶಿಸಲಾಗಿದೆ. ಅಲ್ಲದೆ ೬ ಜನ ಭೂರಹಿತರನ್ನು ಸೇರಿ ೧೦೦ ಜನ ರೈತರನ್ನು ಸಂದರ್ಶಿಸಲಾಗಿದೆ. ಭೂರಹಿತರು ಎಂದರೆ ಬೇರೆಯವರ ಭೂಮಿಯನ್ನು ಗುತ್ತಿಗೆ ಮಾಡುತ್ತಿರುವ ರೈತರು ಎಂದರ್ಥ.

ಹೊಸಪೇಟೆ ತಾಲ್ಲೂಕಿನಲ್ಲಿ ಹಲವಾರು ಬಗೆಯ ಕೃಷಿ ವ್ಯವಸ್ಥೆಯನ್ನು ಕಾಣಬಹುದು. "ಹೊಸಪೇಟೆ ತಾಲ್ಲೂಕಿನ ಒಟ್ಟು ಭೂ ವಿಸ್ತೀರ್ಣ ೯೩,೩೭೪ ಹೆಕ್ಟೇರ್‌ಗಳು. ಇದರಲ್ಲಿ ೨೪,೯೭೦ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದೆ."[೧೧] ಕೃಷಿ ಇಲಾಖೆಯ ಮಾಹಿತಿಯ ಪ್ರಕಾರ ನಿವ್ವಳ ಸಾಗುವಳಿಗೆ ಲಭ್ಯವಾದ ಪ್ರದೇಶ ೫೩,೪೬೯ ಹೆಕ್ಟೇರ್‌ಗಳು, ನಿವ್ವಳ ನೀರಾವರಿ ೧೮,೨೮೬ ಹೆಕ್ಟೇರ್‌ಗಳು. ಕಾಲುವೆಗಳಿಂದ ೧೬,೬೭೩ ಹೆಕ್ಟೇರ್‌ಗಳು, ಕೆರೆ ಮತ್ತು ಬಾವಿಗಳಿಂದ ೧,೬೧೦ ಹೆಕ್ಟೇರ್. ಒಟ್ಟು ೩೫,೧೮೩ ಹೆಕ್ಟೇರ್ ಪ್ರದೇಶದಲ್ಲಿ ನಿವ್ವಳ ಕೃಷಿ ನಡೆದಿದೆ ಎಂದು ತಿಳಿಸುತ್ತಾರೆ. ಅದೆ ರೀತಿಯಾಗಿ ನಾವು ಇಲ್ಲಿ ಕೃಷಿಯ ಬಗೆಗಳನ್ನು ಅಧ್ಯಯನ ಮಾಡಬಹುದಾಗಿದೆ. ಅವುಗಳೆಂದರೆ

೧. ಮಳೆಯನ್ನಾಧರಿಸಿದ ಕೃಷಿ ವ್ಯವಸ್ಥೆ

೨. ಕೆರೆ ಮತ್ತು ಭಾವಿಗಳಿಂದ ಕೃಷಿ ವ್ಯವಸ್ಥೆ

೩. ಕಾಲುವೆ ನೀರಾವರಿ ಕೃಷಿ ವ್ಯವಸ್ಥೆ

೧. ಮಳೆಯನ್ನಾಧರಿಸಿದ ಕೃಷಿ ವ್ಯವಸ್ಥೆ

ನಮ್ಮ ದೇಶದ ಹೆಚ್ಚಿನ ಕೃಷಿ ಪದ್ಧತಿಯು ಮಳೆಯನ್ನಾಧರಿಸಿದುದಾಗಿದೆ. ಹೊಸಪೇಟೆ ತಾಲ್ಲೂಕಿನಲ್ಲಿ ಕಾಲುವೆ, ಕೆರೆ, ಬಾವಿ ಮತ್ತು ಮಳೆಯನ್ನಾಧರಿಸಿದ ಕೃಷಿ ವ್ಯವಸ್ಥೆಯಿದೆ. ಕೃಷಿ ಇಲಾಖೆ ಮಾಹಿತಿಯ ಪ್ರಕಾರ ಹೊಸಪೇಟೆ ತಾಲ್ಲೂಕಿನಲ್ಲಿ ೧೯,೭೯೧ ಹೆಕ್ಟೇರ್ ಪ್ರದೇಶವು ಮಳೆಯನ್ನಾಧರಿಸಿದ ಕೃಷಿ ನಡೆಯುತ್ತದೆ. ಈ ಪ್ರದೇಶದ ರೈತರು ಮಳೆಯ ಮೇಲೆ ಅವಲಂಬನೆಯಾಗಿ ಬೆಳೆಯಬೇಕಾಗಿದೆ. ಮಳೆ ಸರಿಯಾಗಿ ಬಾರದೇ ಇದ್ದರೆ ಈ ಪ್ರದೇಶದ ರೈತರ ಸ್ಥಿತಿ ಚಿಂತಾಜನಕವಾಗುತ್ತದೆ. ಬರಗಾಲಕ್ಕೆ ತುತ್ತಾಗಿ ಇವರ ಜೀವನ ಶೋಚನೀಯವಾಗುತ್ತಿದೆ.

೨. ಕೆರೆ ಮತ್ತು ಬಾವಿಗಳಿಂದ ಕೃಷಿ ವ್ಯವಸ್ಥೆ

ಹೊಸಪೇಟೆ ತಾಲ್ಲೂಕಿನಲ್ಲಿ ಕೆರೆ ಮತ್ತು ಬಾವಿಗಳಿಂದ ೧,೬೧೦ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ನಡೆಯುತ್ತಿದೆ. ಅಣೆಕಟ್ಟು ಮತ್ತು ಕಾಲುವೆಗಳ ನಿರ್ಮಾಣಕ್ಕಿಂತ ಮುಂಚೆ ಕೆರೆಗಳು ನೀರಾವರಿ ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಇಂದಿಗೂ ಸಹ ಕೆರೆಗಳಿಂದ ನೀರಾವರಿ ನಡೆಸುತ್ತಿರುವುದು ಕಂಡುಬರುತ್ತದೆ. ಬಾವಿಗಳು ಸಹ ನೀರಾವರಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಕೆರೆ ಮತ್ತು ಬಾವಿಗಳಲ್ಲಿ ನೀರು ಇರುವುದನ್ನು ನೋಡಿಕೊಂಡು ಬೆಳೆ ಬೆಳೆಯುವಲ್ಲಿ ಮುಖ್ಯವೆನಿಸುತ್ತವೆ. ಒಟ್ಟು ಸಂದರ್ಶಿಸಿದ ೧೦೦ ಜನರ ರೈತರಲ್ಲಿ ೬೮ ಜನ ರೈತರು ಕೆರೆ, ಬಾವಿ ಮತ್ತು ಬೋರ್‌ವೆಲ್‌ಗಳಿಂದ ಕೃಷಿಯನ್ನು ನಡೆಸುತ್ತಿದ್ದಾರೆ.

೩. ಕಾಲುವೆ ನೀರಾವರಿ ಕೃಷಿ ಪದ್ಧತಿ

ಹೊಸಪೇಟೆ ಹತ್ತಿರ ತುಂಗಭದ್ರಾ ಜಲಾಶಯ ನಿರ್ಮಾಣಗೊಂಡಿದೆ. ಇದು ಕೇವಲ ಬಳ್ಳಾರಿ ಜಿಲ್ಲೆಯಲ್ಲದೆ ಹಲವಾರು ಜಿಲ್ಲೆಗಳ ರೈತರ ಜೀವನಾಡಿಯಾಗಿದೆ. ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ರಾಜ್ಯಗಳ ಕೆಲವು ಜಿಲ್ಲೆಗಳಿಗೆ ನೀರುಣಿಸುತ್ತದೆ. ಪ್ರಸ್ತುತ ಹೊಸಪೇಟೆ ತಾಲ್ಲೂಕಿನಲ್ಲಿ ೧೬,೬೭೬ ಹೆಕ್ಟೇರ್‌ಗಳು ಕಾಲುವೆಯ ನೀರಾವರಿ ಕೃಷಿ ಪದ್ಧತಿಯನ್ನೊಳಗೊಂಡಿದೆ. ಸಂದರ್ಶಿಸಿದ ಒಟ್ಟು ರೈತರಲ್ಲಿ ೮ ಜನರು ಕಾಲುವೆಗಳ ನೀರಾವರಿ ವ್ಯವಸ್ಥೆಯನ್ನು ಹೊಂದಿದ್ದಾರೆ. ಕಾಲುವೆಯ ನೀರಾವರಿ ವ್ಯವಸ್ಥೆಯು ಆಧುನಿಕ ಸಮಾಜದ ಕೃಷಿಗೆ ವರದಾನವಾಗಿದೆ. ಇಲ್ಲಿ ರೈತನು ಮಳೆಯನ್ನು ಕಾಯುವ, ಕೆರೆ ಮತ್ತು ಬಾವಿಗಳಲ್ಲಿ ನೀರು ಇದೆಯೇ ಎಂದು ನೋಡುವ ಅವಶ್ಯಕತೆಯಿಲ್ಲವಾಗಿದೆ. ಕಾಲುವೆ ನೀರಾವರಿಯ ಕೃಷಿಯಿಂದ ಹೆಚ್ಚು ಹೆಚ್ಚು ಉತ್ಪಾದನೆ ಮಾಡಬಹುದಾಗಿದೆ. ಬರಗಾಲದ ಸಮಸ್ಯೆಯಿಂದ ಬಳಲುವ ಅವಶ್ಯಕತೆ ಇರುವುದಿಲ್ಲ.

ಹೊಸಪೇಟೆ ತಾಲ್ಲೂಕಿನಲ್ಲಿ ಮೇಲೆ ತಿಳಿಸಿದ ಕೃಷಿ ವ್ಯವಸ್ಥೆ ಕಂಡುಬರುತ್ತದೆ. ಮಳೆಯಾಶ್ರಿತ ಪ್ರದೇಶದಲ್ಲಿ ಹೆಚ್ಚಾಗಿ ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ, ನವಣೆ, ಸಜ್ಜೆ, ರಾಗಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಕೆರೆ ಮತ್ತು ಬಾವಿಗಳ ಕೃಷಿ ವ್ಯವಸ್ಥೆಯಲ್ಲಿ ಶೇಂಗಾ, ಸೂರ್ಯಕಾಂತಿ, ಹತ್ತಿ,

ಈರುಳ್ಳಿ, ಕಬ್ಬು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕಾಲುವೆ ನೀರಾವರಿಯ ಕೃಷಿ ಪದ್ಧತಿಯಲ್ಲಿ ಪ್ರಮುಖವಾಗಿ ಭತ್ತ, ಬಾಳೆ, ಕಬ್ಬುಗಳನ್ನು ಬೆಳೆಯಲಾಗುತ್ತದೆ.

ನನ್ನ ಕ್ಷೇತ್ರಕಾರ್ಯದ ಸಂದರ್ಭದ ರೈತರ ಸಂದರ್ಶನದಲ್ಲಿ ಹೆಚ್ಚಾಗಿ ಕೆಳವರ್ಗಗಳು ಮತ್ತು ಹಿಂದುಳಿದ ವರ್ಗಗಳು ಕಂಡುಬಂದಿವೆ. ಅವುಗಳಲ್ಲಿ ಪ್ರಮುಖವಾಗಿ ಕುರುಬ, ನಾಯಕ, ಲಂಬಾಣಿ, ಜೋವಿ, ಹರಿಜನ, ಲಿಂಗಾಯತ, ದಾಸ ಪ್ರಮುಖವಾಗಿ ಕಂಡುಬಂದ ಸಮುದಾಯಗಳಾಗಿವೆ. ಅಲ್ಲದೆ ಇನ್ನು ಹಲವಾರು ಸಮುದಾಯಗಳೊಂದಿಗೆ ಅಲ್ಪಸಂಖ್ಯಾತರ ಕೆಲವೊಂದು ರೈತರನ್ನು ಸಂದರ್ಶಿಸಲಾಗಿದ. ನನ್ನ ಕ್ಷೇತ್ರಕಾರ್ಯದಲ್ಲಿ ಯಾವ ಊರಿನಲ್ಲಿ ಯಾವ ಯಾವ ಬಗೆಯ ಸಮುದಾಯಗಳನ್ನು ಸಂದರ್ಶಿಸಿದ್ದೇನೆ ಎನ್ನುವುದನ್ನು ಈ ಮುಂದಿನ ಕೋಷ್ಟಕದಲ್ಲಿ ನೋಡಬಹುದು.

ಸಂದರ್ಶನಕ್ಕೆ ಆಯ್ಕೆ ಮಾಡಿಕೊಂಡ ವಿವಿಧ ಗ್ರಾಮಗಳ ರೈತ ಸಮುದಾಯಗಳು

ಕ್ರ.ಸಂ.	ಊರುಗಳು	ಕುರುಬ	ಬೋವಿ	ಲಿಂಗಾಯತ	ಲಂಬಾಣಿ	ನಾಯಕ	ಮುಸ್ಲಿಂ	ಹರಿಜನ	ದಾಸರು	ಅಗಸ	ಮೇದ	ಶೆಟ್ಟಿಬಣಜಿಗ	ಬ್ರಾಹ್ಮಣ	ರಜಪೂತ	ಈಡಿಗ	ಪದಪದ	ಕುಂಬಾರ	ಒಟ್ಟು
೧.	ಕಾರಿಗನೂರು	೦೬	--	೦೧	--	--	--	--	೦೨	--	--	--	--	--	--	--	--	೦೯
೨.	ಇಂಗಳಗಿ	೦೩	೦೧	--	--	--	--	--	--	೦೧	--	೦೧	--	--	೦೧	--	--	೦೭
೩.	ವಪ್ಪರಹಳ್ಳಿ	೦೧	೦೩	೦೪	--	--	--	೦೨	--	--	--	--	೦೧	--	--	--	--	೧೧
೪.	ಪಾಪಿನಾಯಕನಹಳ್ಳಿ	೦೬	--	೦೨	--	೦೩	೦೧	--	೦೧	೦೧	--	--	--	೦೧	--	--	೦೨	೧೭
೫.	ಜೈಲುವದ್ದಿಗೇರಿ	೦೩	--	--	--	--	--	--	--	--	--	--	--	--	--	--	--	೦೩
೬.	ಕಣವಿರಾಯನಗುಡಿ	--	--	--	--	೦೮	--	--	--	--	--	--	--	--	--	--	--	೦೮
೭.	ರಾಜಾಪುರ	೦೭	--	--	--	--	--	--	--	--	--	--	--	--	--	--	--	೦೭
೮.	ಕಲ್ಲಹಳ್ಳಿ	--	--	--	೦೫	--	೦೧	--	--	--	--	--	--	--	--	--	--	೦೬
೯.	ವ್ಯಾಸನಕೆರೆ	೦೨	--	--	--	--	--	--	--	--	--	--	--	--	--	--	--	೦೨
೧೦.	ಗಾಳೆಮ್ಮನಗುಡಿ	--	೦೨	--	--	--	--	--	--	--	--	--	--	--	--	--	--	೦೨
೧೧.	ಹನುಮನಹಳ್ಳಿ	೦೪	--	--	--	--	--	೦೧	--	--	--	--	--	--	--	--	--	೦೫
೧೨.	ಪಣಾಪುರ	೦೨	--	೦೨	--	--	--	--	--	--	೦೨	--	--	--	--	--	--	೦೬
೧೩.	ಮರಿಯಮ್ಮನಹಳ್ಳಿ ತಾಂಡ	--	--	--	೦೨	--	--	--	--	--	--	--	--	--	--	--	--	೦೨
೧೪.	ಅನಂತಶಯನಗುಡಿ	--	--	--	--	--	--	--	೦೧	--	--	--	--	--	--	--	--	೦೧
೧೫.	ಕಮಲಾಪುರ	೦೧	೦೧	--	--	--	೦೩	--	--	--	--	--	--	--	--	೦೧	--	೦೬
೧೬.	ರಾಮನಗರ	--	೦೧	--	--	--	--	--	--	--	--	--	--	--	--	--	--	೦೧
೧೭.	ವೆಂಕಟಾಪುರಕ್ಯಾಂಪ್	--	೦೨	--	--	--	--	--	--	--	--	--	--	--	--	--	--	೦೨
೧೮.	ಬುಕ್ಕಸಾಗರ	--	೦೨	೦೧	--	--	--	೦೧	--	--	--	--	--	--	--	--	--	೦೪
೧೯.	ಸಿದ್ಧೇಶ್ವರನಗರ	--	--	೦೧	--	--	--	--	--	--	--	--	--	--	--	--	--	೦೧
	ಒಟ್ಟು	೩೫	೧೨	೧೧	೦೭	೧೧	೦೫	೦೪	೦೪	೦೨	೦೨	೦೧	೦೧	೦೧	೦೧	೦೧	೦೨	೧೦೦

ಟಿಪ್ಪಣಿಗಳು

೧. ಪರಿಸರ ಅಧ್ಯಯನ, ಪ್ರೊ.ಕೆ. ಭೈರಪ್ಪ, ಪು. ೭೭, ೭೮

೨. ಕರ್ನಾಟಕ ರಾಜ್ಯ ಗ್ಯಾಸೇಟಿಯರ್ ಭಾಗ-೨, ಸೂರ್ಯನಾಥ ಯು. ಕಾಮತ್, ಪು.೭

೩. ಕರ್ನಾಟಕದ ಖನಿಜ ಸಂಪತ್ತು, ಕೆ. ಗವಿಶೆಟ್ಟಿ, ಪು.೮೮

೪. ಅದೇ.... ಪು. ೮೪

೫. ಕರ್ನಾಟಕ ರಾಜ್ಯ ಗ್ಯಾಸೇಟಿಯರ್ ಭಾಗ-೨, ಸೂರ್ಯನಾಥ ಯು. ಕಾಮತ್, ಪು.೮

೬. ಗಾಳಿಗೆ ವಿಷ, ನೀರಿಗೆ ವಿಷ ಎನ್. ಮಣಿವಾಸಕಮ್, (ಅನು-ನಾಗೇಶ ಹೆಗಡೆ), ಪು.೧೦

೭. ಕರ್ನಾಟಕ ಖನಿಜ ಸಂಪತ್ತು, ಕೆ. ಗವಿಶೆಟ್ಟಿ, ಪು.೩೨೨

೮. ಪ್ರಜಾವಾಣಿ, ದಿನಪತ್ರಿಕೆ, ೨೭ನೇ ಆಗಸ್ಟ್, ೨೦೦೫

೯. ಕರ್ನಾಟಕ ಪರಿಸರ, ಕೆ.ಜೆ. ವಾಸುಕಿ, ಪು.೧೬೩

೧೦. ಕಾಡು ಮತ್ತು ತೋಪು, ವಿ. ಚಂದ್ರಶೇಖರ ನಂಗಲಿ, ಪು.೫೩

೧೧. ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಟಿ.ಆರ್. ಚಂದ್ರಶೇಖರ, ಪು.೨೩

ಅಧ್ಯಾಯ ೪

೪.೧. ಗಣಿಗಾರಿಕೆಯಿಂದ ಕೃಷಿ ಚಟುವಟಿಕೆಗಳ ಮೇಲಾಗುತ್ತಿರುವ ಪರಿಣಾಮಗಳು

೪.೨. ಕೃಷಿ ಸಮುದಾಯದ ಪರ್ಯಾಯ ಅವಲಂಬನೆ ಮತ್ತು ಪ್ರತಿಕ್ರಿಯೆಗಳು

೪.೩. ಬದಲಾಗುತ್ತಿರುವ ಆರ್ಥಿಕ ಚಟುವಟಿಕೆಗಳು ಮತ್ತು ಕೃಷಿಕ ಸಮುದಾಯಗಳು

ಪೀಠಿಕೆ

ಭಾರತ ದೇಶದಲ್ಲಿ ಸುಮಾರು ೭೦ರಷ್ಟು ಜನ ಕೃಷಿಯನ್ನವಲಂಬಿಸಿದ್ದಾರೆ. ಅಂದರೆ ಕೃಷಿ ಪ್ರಮುಖ ಕ್ಷೇತ್ರವಾಗಿದೆ. ತೀರ ಹಿಂದುಳಿದ ಅಥವಾ ಅವೈಜ್ಞಾನಿಕ ಕೃಷಿ ವ್ಯವಸ್ಥೆ ನಮ್ಮಲ್ಲಿ ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣ ನಮ್ಮ ದೇಶದ ರೈತರಿಗೆ ತಂತ್ರಜ್ಞಾನದ ಕೊರತೆಯಿದೆ. ಜೊತೆಗೆ ಗಣಿಗಾರಿಕೆಯಂತಹ ಕ್ಷೇತ್ರದಿಂದಲೂ ನಮ್ಮ ಕೃಷಿ ಇನ್ನೂ ಹಿಂದುಳಿಯುತ್ತಿದೆ. ಗಣಿಗಾರಿಕೆಯಿಂದಾಗಿ ಕೃಷಿಯ ಮೇಲೆ ಹಲವಾರು ರೀತಿಯ ಪರಿಣಾಮಗಳಾಗುತ್ತಿವೆ. ಸರಿಯಾದ ಬೆಳೆ ಬೆಳೆಯದೇ ಇರುವುದರಿಂದ ಅವರ ಆರ್ಥಿಕ ಸ್ಥಿತಿ ಕುಂಠಿತವಾಗುತ್ತಿದೆ. ಈ ವಿಷಯಗಳ ಬಗ್ಗೆ ಇಲ್ಲಿ ಚರ್ಚಿಸುವುದು ಸೂಕ್ತವಾಗಿದೆ. ಕೃಷಿಯ ಅಭಿವೃದ್ಧಿಯ ಯೋಜನೆಗಾಗಿ ಹಲವಾರು ಸೌಲಭ್ಯಗಳನ್ನು ಸರಕಾರ ಒದಗಿಸಿದರೂ ಈ ಸೌಲಭ್ಯಗಳು ರೈತರ ಕೈ ಸೇರುತ್ತಿಲ್ಲ. ಹೆಚ್ಚಿನ ಸಂಖ್ಯೆಯ ರೈತಾಪಿ ವರ್ಗದವರು ಅನಕ್ಷರಸ್ಥರಾಗಿದ್ದಾರೆ. ಅವರಿಗೆ ಈ ಯೋಜನೆಗಳ ಬಗೆಗೆ ಸರಿಯಾದ ಮಾಹಿತಿ ದೊರೆಯುತ್ತಿಲ್ಲ. ಕೆಲವೊಂದು ಮಾಹಿತಿಗಳು ದೊರೆತರೂ ಸಹ ಅದಕ್ಕೆ ದಾಖಲೆಗಳು, ಪುರಾವೆಗಳು ಮುಂತಾದ ದಾಖಲೆಗಳನ್ನು ಒದಗಿಸುವುದರಲ್ಲಿ ಸುಸ್ತಾಗಿ ರೈತರು ಸರಕಾರದ ಸೌಲಭ್ಯಗಳನ್ನು ಸರಿಯಾಗಿ ಪಡೆದುಕೊಳ್ಳಲು ಆಗುತ್ತಿಲ್ಲ. ಮಧ್ಯವರ್ತಿಗಳು ಮತ್ತು ಸ್ವಾರ್ಥಿಗಳ ಪ್ರಭಾವವು ಸಹ ಒಂದಾಗಿದೆ.

ರೈತರು ಮುಖ್ಯವಾಗಿ ಕೃಷಿಯನ್ನವಲಂಬಿಸಿದವರಾಗಿದ್ದಾರೆ. ರೈತರಿಗೆ ಕೃಷಿಯನ್ನು ಬಿಟ್ಟು ಬೇರೆ ಕೆಲಸವನ್ನು ಮಾಡಲು ಬರುವುದಿಲ್ಲ. ಅವರು ಲಾಭ ದೊರೆತರೂ ಸರಿ, ನಷ್ಟವಾದರೂ ಸರಿ ಕೃಷಿಯನ್ನು ಬಿಟ್ಟು ಜೀವಿಸಲು ಆಗುವುದಿಲ್ಲ. ಕೃಷಿ ಸಮುದಾಯ ಹಿಂದುಳಿಯಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಗಣಿಗಾರಿಕೆಯು ಒಂದಾಗಿದೆ. ಗಣಿಗಾರಿಕೆಯ ಧೂಳಿನಿಂದಾಗಿ ಸರಿಯಾದ ಬೆಳೆ ಬೆಳೆಯಲು ಆಗದೆ, ರೈತರು ಇಂದು ಕೃಷಿಯನ್ನು ತೊರೆದು ಗಣಿಗಾರಿಕೆಯಲ್ಲಿ ತೊಡಗುವುದೇ ಲಾಭದ ಕೆಲಸವೆಂದು ಯೋಚಿಸಲು ಪ್ರಾರಂಭಿಸಿದ್ದಾರೆ. ಕೆಲವೊಂದು ಜನ ತಮ್ಮ ಭೂಮಿಯನ್ನು ಗಣಿಗಾರಿಕೆಗಾಗಿ ಗುತ್ತಿಗೆ ನೀಡಿದ್ದಾರೆ. ಕೆಲವರು ಸ್ವತಃ ತಾವೇ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಹೀಗೆ ಮುಂದುವರೆದರೆ ಕೃಷಿ ಸಮುದಾಯ ನೆಲಕಚ್ಚಿ ಆಹಾರದ ಅಭಾವ ಕಂಡುಬರುತ್ತದೆ. ಖನಿಜ ಮುಗಿದು ಹೋಗುವ ಸಂಪನ್ಮೂಲ ಎನ್ನುವ ಅರಿವಿದ್ದರೂ ಸಹ ಗಣಿಗಾರಿಕೆಗೆ ಮಹತ್ವ ಕೊಡಲಾಗಿದೆ. ಗಣಿಗಾರಿಕೆಯಿಂದ ಸಾವಿರಾರು ರೈತ ಕುಟುಂಬಗಳು ಬೀದಿ ಪಾಲಾಗುವ ಸ್ಥಿತಿಗೆ ಬಂದಿವೆ. ಗಣಿಗಾರಿಕೆ ಎಷ್ಟು ವರ್ಷ ನಡೆಯಬಹುದು? ಇನ್ನು ಕೆಲವು ವರ್ಷಗಳು ಮಾತ್ರ. ಆದರೆ ಕೃಷಿ ಶಾಶ್ವತ ಎನ್ನುವುದು ಮರೆತುಹೋದಂತಿದೆ.

೪.೧ ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುತ್ತಿರುವ ಪರಿಣಾಮಗಳು

ಭಾರತವು ಬಡ ಜನರಿಂದ ಕೂಡಿದ ಶ್ರೀಮಂತ ರಾಷ್ಟ್ರವಾಗಿದೆ. ಈ ಹೇಳಿಕೆಯು ಬಹಳ ಅರ್ಥಪೂರ್ಣವಾದುದಾಗಿದೆ. ಅಂದರೆ ಭಾರತ ದೇಶದಲ್ಲಿ ನಿಸರ್ಗ ಸಂಪತ್ತು ಹೇರಳವಾಗಿದೆ. ಆದರೆ ಅದರ ಉಪಯೋಗ ಮಾತ್ರ ನಮಗೆ ತಿಳಿದಿಲ್ಲ. ನಮ್ಮ ನಿಸರ್ಗ ಸಂಪತ್ತಿನ ಕಚ್ಚಾ ಸರಕನ್ನು ಬೇರೆ ದೇಶಗಳಿಗೆ ಅಗ್ಗದ ದರದಲ್ಲಿ ಕೊಟ್ಟು, ಸಿದ್ಧವಸ್ತುಗಳನ್ನು ದುಬಾರಿ ಬೆಲೆಗೆ ತೆಗೆದುಕೊಳ್ಳುತ್ತಿದ್ದೇವೆ. ಹೀಗಾಗಿ ನಮ್ಮ ಸಂಪನ್ಮೂಲವು ಬೇರೆಯವರ ಲಾಭಕ್ಕಾಗಿದೆಯೇ ಹೊರತು, ನಮಗಲ್ಲ. ಇದೇ ರೀತಿ ಹಲವಾರು ಪ್ರಸಂಗಗಳು ನಮ್ಮಲ್ಲಿ ಕಂಡುಬರುತ್ತವೆ.

"ನಮಗೆ ಸ್ವಾತಂತ್ರ್ಯ ದೊರೆಕಿದ ಮೇಲೆ ಈ ದೇಶದಲ್ಲಿ ಗಣಿಗಾರಿಕೆ ವಿಶೇಷವಾಗಿ ಬೆಳೆದಿದೆ. ೧೯೫೦ರಲ್ಲಿ ನಾವು ೭೦೦ ಮಿಲಿಯ ರೂ.ಮೌಲ್ಯದ ಖನಿಜಗಳನ್ನು ಸಂಗ್ರಹಿಸಿದ್ದರೆ, ೧೯೮೦ರ ಆ ಉತ್ಪನ್ನ ೩೪ ಸಾವಿರ ಮಿಲಿಯಕ್ಕೆ ಏರಿತು."[೧] ಗಣಿಗಾರಿಕೆಯಿಂದ ವಿದೇಶಿ ವಿನಿಮಯ ದೊರೆಯುತ್ತದೆ. ಆದರೆ ಗಣಿಗಾರಿಕೆಯಿಂದ ಪರೋಕ್ಷವಾಗಿ ಎಷ್ಟು ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸುತ್ತಿದ್ದೇವೆ ಎನ್ನುವುದರ ಕಡೆಗೆ ನಮ್ಮ ಗಮನ ಇಲ್ಲವಾಗಿದೆ. ಅದರಲ್ಲಿ ಕೃಷಿ ಸಮುದಾಯವು ಒಂದಾಗಿದೆ. ಗಣಿಗಾರಿಕೆಯು ಕೃಷಿ ಸಮುದಾಯದ ಮೇಲೆ ತನ್ನದೇ ಆದ ಪರಿಣಾಮವನ್ನು ಬೀರಿದೆ. ಗಣಿಗಾರಿಕೆಯಿಂದ ಕೆಲವೊಂದು ಅನುಕೂಲಗಳಿರಬಹುದು ಆದರೆ ಅನಾನುಕೂಲಗಳೇ ಅಧಿಕವಾಗಿವೆ. ಅದರಲ್ಲಿ ಗಣಿಗಾರಿಕೆಯಿಂದ ಕೃಷಿಗೆ ಅನುಕೂಲಕ್ಕಿಂತ ಅನಾನುಕೂಲಗಳೇ ಹೆಚ್ಚು.

ಭಾರತದ ದೇಶದಲ್ಲಿ ಶೇ.೭೦ರಷ್ಟು ಜನ ಹಳ್ಳಿಗಾಡಿನವರಾಗಿರುವುದರಿಂದ ಅವರು ಕೃಷಿಯ ಮೇಲೆ ಅವಲಂಬನೆಯಾಗಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಮ್ಮ ದೇಶದ ರೈತರ ಸಂಖ್ಯೆಗಿಂತ ಕಾಲುಭಾಗ ಮಾತ್ರವಿದ್ದರೂ, ತಮ್ಮ ದೇಶಕ್ಕೆ ಸಾಕಾಗಿ ಬೇರೆ ದೇಶಗಳಿಗೆ ರಫ್ತು ಮಾಡುವಷ್ಟು ಇಳುವರಿಯನ್ನು ತೆಗೆಯುತ್ತಾರೆ. ಇದಕ್ಕೆ ಪ್ರಮುಖ ಕಾರಣ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ. ನಮ್ಮ ದೇಶದ ರೈತರಿಗೆ ಆಧುನಿಕ ತಂತ್ರಜ್ಞಾನ ತಿಳಿದಿಲ್ಲದಿರುವುದರಿಂದ ಕೃಷಿಯು ಹಿಂದುಳಿಯುವುದಕ್ಕೆ ಕಾರಣವಾಗಿದೆ. ಹಳೆಯ ಕಾಲದ ಮಾದರಿಯ ವ್ಯವಸ್ಥೆಯನ್ನು ನೆಚ್ಚಿಕೊಂಡು ವ್ಯವಸಾಯವನ್ನು ಮಾಡುವಂತಾಗಿದೆ. ನಮ್ಮ ದೇಶದ ಬಹುಪಾಲು ಕೃಷಿಯು ಮಳೆಯನ್ನವಲಂಬಿಸಿದೆ. ಸರಿಯಾದ ನೀರಾವರಿ ವ್ಯವಸ್ಥೆ ಇಲ್ಲವಾಗಿದೆ.

ನಮ್ಮ ದೇಶದ ರೈತರು ಬರಗಾಲ, ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತ ಮುಂತಾದುವುಗಳನ್ನೆದುರಿಸಿ ಬೆಳೆಯಬೇಕಾಗಿದೆ. ಈ ಮೇಲೆ ತಿಳಿಸಿದ ಪ್ರಕೋಪಗಳು ನಿಸರ್ಗದಿಂದ ನಡೆಯುವಂತವುಗಳಾಗಿವೆ. ಇಷ್ಟೆಲ್ಲಾ ಕಷ್ಟದ ಮಧ್ಯೆಯು ಬೆಳೆದು ಬದುಕಬೇಕಾಗಿದೆ. ಅಲ್ಲದೇ ಮಾನವ ನಿರ್ಮಿತ ಪ್ರಕೋಪದಿಂದ ಕಷ್ಟವನ್ನು ಎದುರಿಸುವಂತಾಗಿದೆ. ಅಂದರೆ ಗಣಿಗಾರಿಕೆಯು ಮಾನವ ನಿರ್ಮಿತ ಪ್ರಕೋಪವೆನ್ನಬಹುದಾಗಿದೆ. ಗಣಿಗಾರಿಕೆಯು ಸುತ್ತಮುತ್ತಲಿನ ಬೆಳೆಗಳ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತದೆ. ಅಲ್ಪ ಪ್ರಮಾಣದ ವಿದೇಶಿ ವಿನಿಮಯಕ್ಕೆ ಸರಕಾರ ಮನಸೋತು ಶ್ರೀಮಂತ ಕಂಪನಿಗಳಿಗೆ ಗಣಿಗಾರಿಕೆ ನಡೆಸಲು ಅನುಮತಿ ನೀಡುತ್ತಿದೆ.

[illegible]

ಗಣಿಗಾರಿಕೆಯು ಪರಿಸರದ ಸುತ್ತ ಕೃಷಿ ಚಟುವಟಿಕೆಗಳಿಗೆ ಓನ್ನೆಡೆಯಾಗಿರುವುದು ಮೇಲುನೋಟಕ್ಕೆ ಗೋಚರಿಸುತ್ತದೆ. ಹಾರುಧೂಳು, ಸ್ಟಾಕ್ ಯಾರ್ಡ್‌ಗಳು, ಸಿಡಿಮದ್ದಿನ ಸ್ಫೋಟ, ಹೂಳು ಇತ್ಯಾದಿ ಕಾರಣಗಳಿಗಾಗಿ ಕೃಷಿ ಚಟುವಟಿಕೆಗಳಿಗೆ ನಿಸ್ಸಂದೇಹವಾಗಿ ಓನ್ನೆಡೆ ಉಂಟಾಗಿದೆ. ಇದನ್ನು ಅರ್ಥ ಮಾಡಿಕೊಳ್ಳಲು ಭಾರೀ ವಿಜ್ಞಾನದ ನೆರವು ಬೇಕಿಲ್ಲ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮಾನದಂಡಗಳನ್ನಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ.

* ಕೃಷಿ ಜಮೀನುಗಳು ಮುಕ್ತ ಗಣಿಗಾರಿಕೆಗಾಗಿ ಬಳಸಲ್ಪಡುತ್ತಿರುವುದು.
* ಕೃಷಿ ಜಮೀನುಗಳು ಸ್ಟಾಕ್ ಯಾರ್ಡ್‌ಗಳಾಗಿ ಬಳಸಲ್ಪಡುತ್ತಿರುವುದು.
* ಗಣಿಗಾರಿಕೆಯ ಪರಿಸರದ ಸುತ್ತ ಕೃಷಿ ಚಟುವಟಿಕೆಗಳಿಗೆ ಓನ್ನೆಡೆಯಾಗಿರುವುದು.
* ಇಳುವರಿ ವರ್ಷದಿಂದ ವರ್ಷಕ್ಕೆ ಕುಂಠಿತಗೊಂಡಿರುವುದು.
* ಇಳುವರಿ ಕಡಿಮೆಯಾಯಿತೆಂದು ರೈತರು ಪ್ರತಿಭಟಿಸಿದಾಗ ಗಣಿಮಾಲಿಕರು ರೈತರಿಗೆ ಪರಿಹಾರ ಕೊಡುತ್ತಿರುವರು.
* ಕೃಷಿ ಜಮೀನುಗಳನ್ನು ಒತ್ತಾಯ ಪೂರ್ವಕವಾಗಿ ಗಣಿಗಾರಿಕೆಗೆ ಬಳಸಲು ಪ್ರಯತ್ನಿಸುತ್ತಿರುವುದು.
* ಕೃಷಿ ಜಮೀನುಗಳನ್ನು ಗಣಿಗಾರಿಕೆಗೆ ಬಳಸಲು ಆಮಿಷ ಒಡ್ಡುವುದು.
* ಈ ಪರಿಸರದಲ್ಲಿ ಹುಲ್ಲುಗಾವಲು ನಾಶವಾಗಿ, ಜಾನುವಾರುಗಳ ಸಂಖ್ಯೆ ಕಡಿಮೆಯಾಗಿರುವುದು.
* ಜಮೀನುಗಳಲ್ಲಿ ಕಬ್ಬಿಣದ ಅದಿರಿನ ಧೂಳು ಸೇರಿ, ಮಣ್ಣಿಗೆ ಇರುವ ಸಾವಯವತೆ ನಾಶವಾಗಿರುವುದು.
* ಕೆರೆ, ಕಾಲುವೆ ಮತ್ತು ಹಳ್ಳಿಗಳಲ್ಲಿ ಹೂಳು ತುಂಬಿ ಅವು ನಿಷ್ಕ್ರಿಯವಾಗಿರುವುದು.
* ತಕ್ಷಣ ದೊರೆಯುವ ಹಣಕ್ಕಾಗಿಯೇ ಕೃಷಿಕರು ತಮ್ಮ ಜಮೀನುಗಳನ್ನು ಗಣಿಗಾರಿಕೆಗೆ ಒಪ್ಪಿಸುತ್ತಿರುವುದು.
* ಕೃಷಿಭೂಮಿ Stock Yardಗಳಾಗಿ ರೂಪಾಂತರ.
* ಕೃಷಿ ಜಮೀನು ಮುಕ್ತ ಗಣಿಗಾರಿಕೆಗೆ ಮಾರಲ್ಪಡುತ್ತಿದೆ.
* ಸಣ್ಣ ಹಿಡುವಳಿದಾರರು ಗಣಿಕಾರ್ಮಿಕರಾಗುತ್ತಿದ್ದಾರೆ. ಇಲ್ಲವೇ ವಲಸೆ ಹೋಗುತ್ತಿದ್ದಾರೆ.

ಈ ಮೇಲಿನ ಮಾನದಂಡಗಳನ್ನು ಇಟ್ಟುಕೊಂಡೇ ಅಧ್ಯಯನ ಮಾಡಲಾಗಿದೆ. ಜೊತೆಗೆ ಈ ಮಾನದಂಡಗಳನ್ನು ಮುಖ್ಯವಾಗಿಟ್ಟುಕೊಂಡೇ ತಿರ್ಮಾನಗಳಿಗೆ ಬರಲಾಗಿದೆ. ಜೊತೆಗೆ ಭೂ ಸವಕಳಿ, ಭೂಕಂಪನದ ಸಾಧ್ಯತೆ ಮತ್ತು ಅಂತರ್ಜಲದ ಕುಸಿತದ ಸಂಭವಗಳನ್ನು ಭೂವಿಜ್ಞಾನಿಗಳ ತಜ್ಞ ವರದಿಗಳಿಂದ ಪಡೆದು ಉಲ್ಲೇಖಿಸಲಾಗಿದೆ.

ಗಣಿಗಾರಿಕೆಯಿಂದ ಕೃಷಿ ಚಟುವಟಿಕೆಗಳ ಮೇಲಾಗುತ್ತಿರುವ ಅಪೇಕ್ಷಿತ ಪರಿಣಾಮಗಳು

೧. ನಿರುದ್ಯೋಗ ನಿವಾರಣೆ

೨. ಆರ್ಥಿಕ ಸ್ಥಿತಿ ಸುಧಾರಣೆ

೩. ಉತ್ತಮವಾದ ವಾರ್ಷಿಕ ವರಮಾನದ ಆಶಯ

೪. ನಷ್ಟದ ಭಯವಿಲ್ಲ

ಗಣಿಗಾರಿಕೆಯಿಂದ ಕೃಷಿ ಚಟುವಟಿಕೆಗಳ ಮೇಲಾಗುವ ಅನಪೇಕ್ಷಿತ ಪರಿಣಾಮಗಳು

೧. ಬೆಳೆಗಳ ಮೇಲೆ ದುಷ್ಪರಿಣಾಮ

೨. ಇಳುವರಿ ಕಡಿಮೆಯಾಗುತ್ತದೆ

೩. ಕೃಷಿಯ ಮೇಲೆ ನಿರಾಸಕ್ತಿ

೪. ಅಂತರ್ಜಲ ಕುಸಿತ

೫. ಕೃಷಿ ಚಟುವಟಿಕೆಗಳ ಸ್ಥಗಿತ

೬. ಕೃಷಿ ಭೂಮಿಯ ಸಾವಯವತೆಯ ನಾಶ

೭. ಅಲ್ಪ ಪ್ರಮಾಣದ ಪರಿಹಾರ

೮. ಹೂಳಿನಿಂದ ಹಳ್ಳ ಮತ್ತು ಕೆರೆಗಳು ಮುಚ್ಚಿಹೋಗುತ್ತವೆ

೯. ಅರಣ್ಯನಾಶ

೧೦. ದನ ಕರುಗಳ ಸಂಖ್ಯೆಯಲ್ಲಿ ಇಳಿಮುಖ

೧೧. ರೋಗ ರುಜಿನೆಗಳು ತೀವ್ರವಾಗಿ ಹರಡುತ್ತವೆ

ಗಣಿಗಾರಿಕೆಯಿಂದ ಕೃಷಿ ಚಟುವಟಿಕೆಗಳ ಮೇಲಾಗುವ ಪರಿಣಾಮಗಳನ್ನು ಈ ಕೆಳಗಿನಂತೆ ಒಂದೊಂದಾಗಿ ನೋಡಬಹುದು.

ಅಪೇಕ್ಷಿತ ಪರಿಣಾಮಗಳು

೧. ನಿರುದ್ಯೋಗ ನಿವಾರಣೆ : ಗಣಿಗಾರಿಕೆಯಿಂದಾಗಿ ಹತ್ತಾರು, ನೂರಾರು ಕುಟುಂಬಗಳು ಬೇರೆ ಪ್ರದೇಶದಿಂದ ಉದ್ಯೋಗವನ್ನರಸಿ ಬರುತ್ತವೆ. ಸಾವಿರಾರು ಕುಟುಂಬಗಳು ಗಣಿಗಾರಿಕೆಯಲ್ಲಿ ಕೆಲಸ ನಿರ್ವಹಿಸಿ ಜೀವನ ಸಾಗಿಸುತ್ತಿದ್ದಾರೆ. ನಿರುದ್ಯೋಗ ನಿವಾರಣೆಯಾಗುತ್ತಿದೆ. ಕೃಷಿಯನ್ನು ವರ್ಷಪೂರ್ತಿ ಮಾಡಲು ಆಗುವುದಿಲ್ಲ. ಕೆಲವೊಂದು ತಿಂಗಳು ಕೃಷಿಯಲ್ಲಿ ಕೆಲಸವಿಲ್ಲದಂತಾಗುತ್ತದೆ. ಅಂತಹ ಸಂದರ್ಭದಲ್ಲಿ ರೈತ ಗಣಿಗಾರಿಕೆಯ ಕೆಲಸವನ್ನು ನಿರ್ವಹಿಸುವುದು ಕಂಡುಬರುತ್ತದೆ. ಸಣ್ಣ ಪ್ರಮಾಣದ ಭೂಮಿಯನ್ನು ಹೊಂದಿದ ದೊಡ್ಡ ಕುಟುಂಬವು ಗಣಿಗಾರಿಕೆಯಿಂದ ಜೀವನ ನಿರ್ವಹಿಸಬಹುದಾಗಿದೆ. ಇಂತಹ ಕುಟುಂಬದಲ್ಲಿ ಕೆಲವರು ಕೃಷಿಯನ್ನವಲಂಬಿಸಿದರೆ ಕೆಲವರು ಗಣಿಗಾರಿಕೆಯಲ್ಲಿ ದುಡಿಯಬಹುದಾಗಿದೆ. ಕೆಲವೊಂದು ದುಡಿಯುವ ವರ್ಗಗಳು ಕೃಷಿ ಕಾರ್ಯಗಳು ಸ್ಥಗಿತಗೊಂಡಾಗ ಬೇರೆ ಸ್ಥಳದಿಂದ ಉದ್ಯೋಗವನ್ನರಸಿ ಬಂದಿರುವುದನ್ನು ಕಾಣಬಹುದಾಗಿದೆ.

೨. ಆರ್ಥಿಕ ಸ್ಥಿತಿ ಸುಧಾರಣೆ : ಗಣಿಗಾರಿಕೆಯ ಕೆಲಸದಲ್ಲಿ ಉತ್ತಮವಾದ ಕೂಲಿ ದೊರೆಯುತ್ತದೆ. ಕೃಷಿ ಚಟುವಟಿಕೆಗೆ ಅಗತ್ಯವಾದ ಸಾಮಗ್ರಿಗಳನ್ನು ತರಬಹುದು. ರೈತರು ಹೊರಗಿನಿಂದ ಸಾಲ ತಂದು ಕೃಷಿಯನ್ನವಲಂಬಿಸಿ ಬದುಕುವುದು ಸ್ವಲ್ಪ ಕಡಿಮೆಯಾಗುತ್ತದೆ. ಗಣಿಗಾರಿಕೆಯ ಕೂಲಿಯಿಂದ ಮನೆಯ ಅಥವಾ ಕೃಷಿಯ ಮೇಲೆ ವೆಚ್ಚ ಮಾಡಲು ಅನುಕೂಲವಾಗುತ್ತದೆ. ಕೃಷಿಯಿಂದ ಆರು ತಿಂಗಳಿಗೆ ಅಥವಾ

[illegible]

ವರ್ಷಕ್ಕೆ ಬೆಳೆಯನ್ನು ಬೆಳೆದಾಗ ಮಾತ್ರ ಅವರಿಗೆ ಲಾಭ ದೊರೆತರೆ, ಅವರ ಕೈಯಲ್ಲಿ ಹಣ ಉಳಿಯುತ್ತದೆ. ಅಷ್ಟೊಂದು ಸಮಯದವರೆಗೆ ಕಾಯುವ ಅವಕಾಶ ಕಡಿಮೆಯಾಗಿರುತ್ತದೆ. ಕೇವಲ ಕೃಷಿಯನ್ನು ನೆಚ್ಚಿಕೊಂಡು ಗಣಿಗಾರಿಕೆಯ ಕೆಲಸದಲ್ಲಿ ತೊಡಗದೇ ಇರುವ ರೈತರಿಗೆ ಮಾತ್ರ ಕಷ್ಟವಾಗುತ್ತದೆ. ಆದರೆ ಕೃಷಿಯ ಜೊತೆಗೆ ಗಣಿಗಾರಿಕೆಯ ಕಾರ್ಮಿಕರಾಗಿ ದುಡಿಯುವವರಿಗೆ ಉತ್ತಮವಾಗಿದೆ.

೩. **ಉತ್ತಮವಾದ ವಾರ್ಷಿಕ ವರಮಾನದ ಆಶಯ :** ಗಣಿಗಾರಿಕೆ ನಡೆಯುತ್ತಿರುವುದರಿಂದ ಕೆಲವೊಬ್ಬ ರೈತರ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಅದರಲ್ಲಿ ಕೆಲವರು ತಮ್ಮ ಜಮೀನಿನಲ್ಲಿ ದೊರೆಯುವ ಕಬ್ಬಿಣದ ಅದಿರಿನ ಕಲ್ಲನ್ನು ಆರಿಸಿಕೊಂಡು ಹಣ ಗಳಿಸಬಹುದಾಗಿದೆ. ಕೆಲವೊಂದು ರೈತರ ಹೊಲದಲ್ಲಿ ಕಬ್ಬಿಣದ ಅದಿರಿನ ಕಲ್ಲುಗಳು ದೊರೆಯುವುದರಿಂದ ಸ್ವಂತವಾದ ಗಣಿಗಾರಿಕೆಯನ್ನು ನಡೆಸಬಹುದಾಗಿದೆ. ಕೆಲವೊಂದು ರೈತರು ತಮ್ಮ ಜಮೀನುಗಳಲ್ಲಿ ಕಬ್ಬಿಣದ ಕಲ್ಲುಗಳನ್ನು ಆರಿಸುವುದು ಮತ್ತು ಬೇರೆಯವರು ಆರಿಸಿಕೊಳ್ಳುವುದಕ್ಕೆ ಹಣವನ್ನು ಪಡೆಯುತ್ತಿದ್ದಾರೆ. ಕಬ್ಬಿಣದ ಅದಿರಿನ ಕಲ್ಲಿನ ಪ್ರಮಾಣ ಹೆಚ್ಚಾಗಿ ಕಂಡುಬಂದರೆ ಕೆಲವೊಬ್ಬರು ತಾವೇ ಸ್ವತಃ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಕೆಲವೊಂದು ರೈತರು ಗಣಿಗಾರಿಕೆಯಿಂದ ಆರ್ಥಿಕವಾಗಿ ಪ್ರಬಲರಾಗುತ್ತಿದ್ದಾರೆ.

೪. **ನಷ್ಟದ ಭಯವಿಲ್ಲ :** ಕೆಲವೊಂದು ರೈತರು ಕೃಷಿಯಲ್ಲಿ ಲಾಭವಿಲ್ಲವೆಂದು ಗಣಿಗಾರಿಕೆಯ ಮಾಲಿಕರಿಗೆ ಅದಿರಿನ ಕಣಜಕ್ಕಾಗಿ ಭೂಮಿಯನ್ನು ನೀಡಿದ್ದಾರೆ. ಈ ರೀತಿ ಭೂಮಿಯನ್ನು ವರ್ಷಕ್ಕೆ ೨೦,೨೫,೩೦,೩೫ ಸಾವಿರ ರೂ.ಗಳಂತೆ ಪ್ರತಿ ಎಕರೆಗೆ ಪಡೆಯುತ್ತಿದ್ದಾರೆ. ಈ ವ್ಯವಸ್ಥೆಯಿಂದ ರೈತರು ಮಳೆಯನ್ನು ಕಾಯುವ ಪ್ರಮೇಯ ತಪ್ಪಿದಂತಾಗಿದೆ. ಯಾವುದೇ ಬಂಡವಾಳವಿಲ್ಲದೆ ವಾರ್ಷಿಕವಾಗಿ ಹಣವನ್ನು ಪಡೆಯಲಾಗುವುದು. ತಾವು ಬೆಳೆದ ಬೆಳೆ ನಷ್ಟವಾಗುತ್ತದೆಯೋ ಅಥವಾ ಲಾಭ ತರುತ್ತದೆಯೋ ಎನ್ನುವ ಚಿಂತೆಯಿಲ್ಲ. ಏನೂ ಶ್ರಮ ಪಡದೆ ಹಣವನ್ನು ಪಡೆಯಲಾಗುತ್ತದೆ. ಆದ್ದರಿಂದ ನಷ್ಟದ ಭಯ ಇಲ್ಲದಂತಾಗಿದೆ. ಬಂಡವಾಳ ಹೂಡದೆ ಲಾಭವನ್ನು ಪಡೆಯುವ ಉದ್ಯಮವೆನ್ನುವಂತೆ ಕಂಡುಬರುತ್ತದೆ. ರೈತರು ಕೃಷಿ ಮಾಡುವುದನ್ನು ಬಿಟ್ಟು ಈ ರೀತಿ ಗಣಿಗಾರಿಕೆಯನ್ನು ಅವಲಂಬಿಸಿರುವುದು ವಿಪರ್ಯಾಸದ ಸಂಗತಿ ಎಂದು ಹೇಳಬಹುದು.

ಅನಪೇಕ್ಷಿತ ಪರಿಣಾಮಗಳು

೧. **ಬೆಳೆಗಳ ಮೇಲಿನ ದುಷ್ಪರಿಣಾಮಗಳು :** ಗಣಿಗಾರಿಕೆಯಿಂದಾಗುವ ಅನಾನುಕೂಲಗಳಲ್ಲಿ ಇದು ಮುಖ್ಯವಾದುದಾಗಿದೆ. ಗಣಿಗಾರಿಕೆಯ ಧೂಳು ಬೆಳೆಗಳ ಮೇಲೆ ಬಂದು ಕೂಡುವುದರಿಂದ ಅವುಗಳಲ್ಲಿ ದ್ಯುತಿಸಂಶ್ಲೇಷಣೆ ಕ್ರಿಯೆ ಸರಿಯಾಗಿ ನಡೆಯದೆ ಬೆಳೆಗಳ ಬೆಳವಣಿಗೆ ಕುಂಠಿತವಾಗುತ್ತದೆ. ಮರಗಿಡಗಳು ಸಹ ಸರಿಯಾಗಿ ಬೆಳೆಯದೆ ಕಾಯಿಯನ್ನು ಬಿಡದಂತಾಗಿದೆ. ಬೆಳೆಗಳ ಮೇಲೆ ಧೂಳು ಬೀಳುವುದರಿಂದ ಸರಿಯಾದ ಬೆಳವಣಿಗೆಯಾಗದೆ ಫಸಲು ಕುಂಠಿತವಾಗುತ್ತದೆ. ದನಕರುಗಳು ತಿನ್ನುವ ಹುಲ್ಲು ಸಹ ಸರಿಯಗಿ ಬೆಳೆಯುವುದಿಲ್ಲ. ಸಸ್ಯಗಳು ಸರಿಯಾಗಿ ಬೆಳೆಯದಿರುವುದರಿಂದ ದನಕರುಗಳಿಗೆ ಮೇವಿನ ಅಭಾವ ಉಂಟಾಗುತ್ತದೆ.

೨. ಇಳುವರಿ ಕಡಿಮೆಯಾಗುತ್ತದೆ : ರೈತರು ಒಂದು ಬೆಳೆಯನ್ನು ಬೆಳೆಯಲು ಎಷ್ಟೊಂದು ಶ್ರಮ ಪಡಬೇಕಾಗುತ್ತದೆ. ಬೀಜ ಬಿತ್ತಿದಾಗಿನಿಂದ ಒಡಿದು ಕೊಯ್ಲು ಮಾಡುವವರೆಗೆ ಹಲವಾರು ರೀತಿಯಲ್ಲಿ ಶ್ರಮ ಪಡುತ್ತಾನೆ. ಒಂದು ಫಸಲನ್ನು ಪಡೆಯಲು ಅದನ್ನು ಮಗುವಿನ ಲಾಲನೆ ಪಾಲನೆಯಂತೆ ಪೋಷಣೆ ಮಾಡುತ್ತಾನೆ. ಕ್ರಿಮಿಕೀಟಗಳು, ಹೀಗೆ ಹಲವಾರು ರೋಗಗಳನ್ನು ನಿಯಂತ್ರಿಸಿ ಬೆಳೆ ತೆಗೆಯುತ್ತಾನೆ. ಇಷ್ಟೊಂದು ಕಷ್ಟ ಪಡುವುದರ ಜೊತೆಗೆ ಈಗ ಗಣಿಗಾರಿಕೆಯ ಧೂಳಿನಿಂದ ಬೆಳೆಗಳು ಸರಿಯಾಗಿ ಬೆಳೆಯದಿದ್ದರೂ ಅಲ್ಪಸ್ವಲ್ಪ ಬೆಳೆಯನ್ನು ತೆಗೆದುಕೊಳ್ಳುತ್ತಾನೆ. ಗಣಿಗಾರಿಕೆಯ ಧೂಳಿನಿಂದ ಬೆಳೆಗಳು ಸರಿಯಾಗಿ ಬೆಳೆಯದೆ ಇಳುವರಿ ಕಡಿಮೆಯಾಗುತ್ತದೆ. ಆ ಫಸಲಿನ ಕಾಳು ಸಹ ಉತ್ತಮ ದರ್ಜೆಯ ಮೌಲ್ಯವನ್ನು ಕಳೆದುಕೊಳ್ಳುತ್ತದೆ.

ಕೃಷಿ ಇಲಾಖೆಯ ತಜ್ಞರ ಅಭಿಪ್ರಾಯದಂತೆ ಗಣಿಗಾರಿಕೆಯ ಧೂಳು ಬೆಳೆಗಳ ಮೇಲೆ ಬಂದು ಬೀಳುವುದರಿಂದ, ದ್ಯುತಿ ಸಂಶ್ಲೇಷಣೆ ಕ್ರಿಯೆ ಸರಿಯಾಗಿ ನಡೆಯುವುದಿಲ್ಲ. ದ್ಯುತಿಸಂಶ್ಲೇಷಣೆ ಕ್ರಿಯೆಯು ಸಸ್ಯಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸರಿಯಾಗಿ ದ್ಯುತಿಸಂಶ್ಲೇಷಣೆ ನಡೆಸದೇ ಇದ್ದಾಗ ಸಸ್ಯಗಳ ಬೆಳವಣಿಗೆ ಸರಿಯಾಗಿ ಆಗದೆ ಇಳುವರಿ ಕಡಿಮೆಯಾಗುತ್ತದೆ. ಆದ್ದರಿಂದ ಗಣಿಗಾರಿಕೆಯ ಧೂಳು ಇಳುವರಿ ಕಡಿಮೆಯಾಗಲು ಪ್ರಮುಖ ಕಾರಣವೆನ್ನಬಹುದಾಗಿದೆ. ಗಣಿಗಾರಿಕೆಯ ಧೂಳು ಕೃಷಿ ಭೂಮಿಯ ಮೇಲೆ ಬೀಳುವುದರಿಂದ ಭೂಮಿಯು ನೀರನ್ನು ಹೀರಿಕೊಳ್ಳದಾಗುತ್ತದೆ. ಆಗ ಬೆಳೆಯ ಬೆಳವಣಿಗೆ ಕುಂಠಿತವಾಗುತ್ತದೆ. ಗಣಿಗಾರಿಕೆಯ ಧೂಳಿನಿಂದ ಇಳುವರಿ ಕಡಿಮೆಯಾಗುತ್ತದೆ ಎಂದು ತಿಳಿಯುತ್ತದೆ.

ವರ್ಷದಿಂದ ವರ್ಷಕ್ಕೆ ಇಳುವರಿ ಕುಂಠಿತಗೊಳ್ಳುತ್ತಿದೆ. ಈಗ ೫ ವರ್ಷದ ಹಿಂದೆ ಎಕರೆಗೆ ೨೦ ಚೀಲ ಬೆಳೆಯುತ್ತಿದ್ದ ಜೋಳ ಈಗ ೧೨ ರಿಂದ ೧೫ ಚೀಲ ಇಳುವರಿ ದೊರೆಯುತ್ತಿದೆ ಎಂದು ಕ್ಷೇತ್ರಕಾರ್ಯದ ಸಮಯದಲ್ಲಿ ದೊರೆತ ಮಾಹಿತಿಯಾಗಿದೆ. ಅಲ್ಲದೆ ಕೃಷಿ ಇಲಾಖೆಯ ತಜ್ಞರು ಬಳ್ಳಾರಿ ಜಿಲ್ಲೆಯಲ್ಲಿ ಇಳುವರಿ ಕುಂಠಿತಗೊಳ್ಳುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಅಂದಾಜಿಸಲಾದ ಕೃಷಿ ಉತ್ಪಾದನೆಯಲ್ಲಿ ತಮ್ಮ ನಿರೀಕ್ಷೆಗಿಂತ ಕಡಿಮೆ ಪ್ರಮಾಣದಲ್ಲಿ ಲಭ್ಯವಾಗಲಿದೆ ಎನ್ನುವ ಅಭಿಪ್ರಾಯವನ್ನು ಕೃಷಿ ಇಲಾಖೆಯ ಅಧಿಕಾರಿಗಳು ವ್ಯಕ್ತಪಡಿಸುತ್ತಾರೆ.

ಇತ್ತೀಚಿನ ಕೆಲವು ವರ್ಷಗಳಲ್ಲಿ ವ್ಯಾಪಕ ಪ್ರಮಾಣದ ಗಣಿಗಾರಿಕೆ ನಡೆಯುತ್ತಿರುವುದು ಕಂಡುಬರುತ್ತದೆ. ಗಣಿಗಾರಿಕೆಯ ಚಟುವಟಿಕೆ ಹೆಚ್ಚಾದಂತೆಲ್ಲ ಕೃಷಿಯಲ್ಲಿ ಇಳುವರಿ ಕಡಿಮೆ ದೊರೆಯುತ್ತಿರುವುದು ಕಂಡುಬರುತ್ತದೆ. ಕೇವಲ ೫ ವರ್ಷಗಳ ಹಿಂದಿನ ಇಳುವರಿಗೆ ಹೋಲಿಸಿದರೆ ಗಣನೀಯ ಪ್ರಮಾಣದಲ್ಲಿ ಕುಸಿತ ಉಂಟಾಗಿದೆ. ಕೃಷಿಕರು ಕೃಷಿಯನ್ನು ತೊರೆಯುವಂತೆ ಮಾಡುತ್ತಿದೆ. ೫ ವರ್ಷಗಳ ಅವಧಿಯಲ್ಲಿ ಕೃಷಿಯ ಇಳುವರಿ ಏರುಪೇರಾಗಿರುವುದನ್ನು ಈ ಕೆಳಗಿನಂತೆ ನೋಡಬಹುದು.

ಧಾನ್ಯಗಳು	ಬಳ್ಳಾರಿ		ಹೊಸಪೇಟೆ		ಸಂಡೂರು	
	೧೯೯೬-೯೭	೨೦೦೨-೦೩	೧೯೯೬-೯೭	೨೦೦೨-೦೩	೧೯೯೬-೯೭	೨೦೦೨-೦೩
ಸೂರ್ಯಕಾಂತಿ	೭೧೬	೫೮೦	೨೩೦	೫೪೬	೩೫೩	೭೮೦
ಶೇಂಗಾ	೧,೨೦೭	೧೭೯	೧,೧೪೨	೪೬೦	೧,೧೯೧	೫೪೯
ನವಣೆ	೧೦೩	೩೩೭	೪೪೨	೧೫೪	೫೧೦	೨೬೨
ಗೋಧಿ	೪,೧೧೭	೨,೫೬೪	೩,೭೪೩	೪,೨೬೧	೪,೦೩೨	೨,೯೮೮
ಹುರುಳಿ	ದಾಖಲಾಗಿಲ್ಲ	೧೫೬	೬೭೮	೧೯೦	೧,೦೯೩	೧೮೪
ಹೆಸರುಕಾಳು	೨೫೧	೧೩೭	ದಾಖಲಾಗಿಲ್ಲ	೧೩೨	--	--
ಬಾಜಾ	೧,೫೩೭	೮೮೮	೮೦೩	೫೯೬	೧,೨೧೧	೮೯೬
ಭತ್ತ	೨,೭೭೬	೩,೬೪೭	ದಾಖಲಾಗಿಲ್ಲ	೪,೩೪೭	ದಾಖಲಾಗಿಲ್ಲ	೧,೪೪೪"[೨]

ಇಳುವರಿಯನ್ನು ನಿರ್ಧರಿಸುವ ಇತರೆ ಅಂಶಗಳೆಂದರೆ

* ಉತ್ತಮ ಕೃಷಿ ಭೂಮಿ
* ಕೃಷಿ ಭೂಮಿಯ ಸಾವಯವತೆಗೆ ಪೂರಕವಾದ ಪರಿಸರ
* ಪ್ರಮಾಣಬದ್ಧ ಮಳೆ
* ಉತ್ತಮವಾದ ಬೀಜಗಳು
* ಸಕಾಲಕ್ಕೆ ನೀರು ಮತ್ತು ಗೊಬ್ಬರಗಳ ಬಳಕೆ
* ಉತ್ತಮ ಹವಾಮಾನ ಮತ್ತು ಪರಿಸರ
* ಸೀಜನ್‌ಗೆ ತಕ್ಕ ಬೆಳೆ
* ರೋಗಗಳನ್ನು ಹತೋಟಿಗೆ ತರುವ ಕ್ರಮ
* ಬೆಳೆಗಳ ಬಗೆಗೆ ಮುಂದಾಲೋಚನೆ
* ತಜ್ಞರ ಸಲಹೆ ಇತ್ಯಾದಿ.

೩. **ಕೃಷಿಯ ಮೇಲೆ ನಿರಾಸಕ್ತಿ** : ಗಣಿಗಾರಿಕೆಯ ಧೂಳಿನಿಂದ ಬೆಳೆಗಳು ಸರಿಯಾಗಿ ಬೆಳೆಯುತ್ತಿಲ್ಲ. ಇಳುವರಿ ಕಡಿಮೆಯಾಗುತ್ತಿದೆ. ನಷ್ಟದ ಭಯ ಆವರಿಸಿ ರೈತನನ್ನು ತಲ್ಲಣಗೊಳಿಸಿದೆ. ತಾನು ಬೆಳೆದ ಬೆಳೆಯು ತನ್ನ ಕೈ ಸೇರುತ್ತದೆ ಎನ್ನುವ ನಂಬಿಕೆ ಇಲ್ಲದಂತಾಗಿದೆ. ಕೃಷಿಯ ಕೆಲಸಕ್ಕಾಗಿ ಕೂಲಿ ಆಳುಗಳ ಅಭಾವದಿಂದ ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುತ್ತಿವೆ. ಇಂತಹ ಹಲವಾರು ಕಾರಣಗಳಿಗಾಗಿ ಕೃಷಿಯ ಮೇಲೆ ನಿರಾಸಕ್ತಿ ಹುಟ್ಟುತ್ತಿದೆ.

೪. **ಅಂತರ್ಜಲ ಕುಸಿತ** : ಗಣಿಗಾರಿಕೆಯಿಂದ ಅಂತರ್ಜಲ ಮಟ್ಟ ಹಂತ ಹಂತವಾಗಿ ಕುಸಿಯುತ್ತಿದೆ. ಗಣಿಗಾರಿಕೆಯ ಸ್ಫೋಟದಿಂದಾಗಿ ಭೂಮಿಯ ಶಿಲಾಪದರು ಸರಿಯುವಿಕೆಯಿಂದ ಅಂತರ್ಜಲಮಟ್ಟ ತೀವ್ರ

ಕುಸಿಯುತ್ತಿದೆ. "ಜಲಸಂಪನ್ಮೂಲ ಮಾನವನ ಉಳಿವಿಗೆ ಹಾಗೂ ಇತರ ಜೀವಿಗಳಿಗೆ ಒಂದು ವರದಾನ. ಭೂಮಿಯ ಮೇಲ್ಭಾಗದಲ್ಲಿ ಅದರೊಳಗೆ ನೀರು ಇರುತ್ತದೆ."[೩] ಅದನ್ನು ನಮ್ಮ ಅವಿವೇಕತನದಿಂದ ಹಾಳು ಮಾಡುತ್ತಿದ್ದೇವೆ. ಕೆಲವು ವರ್ಷಗಳ ಹಿಂದೆ ಬೋರ್‌ವೆಲ್ ಹಾಕಿಸಿದರೆ ೩೦ ಅಥವಾ ೪೦ ಅಡಿಗೆ ನೀರು ಬರುತ್ತಿತ್ತು. ಆದರೆ ಇಂದಿನ ದಿನದಲ್ಲಿ ೨೦೦ ಅಡಿ ಬೋರ್‌ವೆಲ್ ಕೊರೆಸಿದರು ನೀರು ಬರದಂತಾಗಿದೆ. ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ಕೃಷಿಯು ಹಿಂದುಳಿಯುತ್ತಿದೆ. ಕೆಲವೊಂದು ಬೋರ್‌ವೆಲ್‌ಗಳಲ್ಲಿ ಇಂದು ಅಂತರ್ಜಲ ಮಟ್ಟ ಮಾಯವಾಗಿದೆ. ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ಗುರಿ ಮಾಡುತ್ತಿದೆ. ಗಣಿಗಾರಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ನೀರಿನ ಅಭಾವ ತಲೆದೋರಿದೆ.

ಬೋರ್‌ವೆಲ್‌ಗಳಲ್ಲಿ ನೀರಿನ ಪ್ರಮಾಣ ಕುಸಿದಿರುವುದಕ್ಕೆ ಕಾರಣ ಗಣಿಗಾರಿಕೆಯ ಸುತ್ತಲ ಜಮೀನಿನಲ್ಲಿ ಮತ್ತು ಪರಿಸರದಲ್ಲಿ ಇಂಗುಗುಂಡಿಗಳು ಮುಚ್ಚಿ ಹೋಗಿರುತ್ತವೆ. ಮತ್ತು ಕಬ್ಬಿಣದ ಅದಿರಿನ ಧೂಳು ಮಣ್ಣಿನ ಮೇಲ್ಮೈಯನ್ನು ಆವರಿಸಿಕೊಳ್ಳುವುದರಿಂದ, ಮಣ್ಣಿಗೆ ಇರುವ ನೀರನ್ನು ಹೀರಿಕೊಳ್ಳುವ ಸಹಜ ಗುಣ ಇಲ್ಲವಾಗುತ್ತದೆ. ಜೊತೆಗೆ ಸಿಡಿಮದ್ದುಗಳ ಸ್ಫೋಟದಿಂದ ನೆಲದಾಳದಲ್ಲಿ ಸಂಭವಿಸಬಹುದಾದ ಪದರುಗಳ ಪಲ್ಲಟದಿಂದಾಗಿಯೂ ಅಂತರ್ಜಲ ಕುಸಿಯಬಹುದಾಗಿದೆ. ಸ್ಫೋಟದಿಂದಾಗಿ ಶಿಲಾಪದರುಗಳಲ್ಲಿ ಕೆಲವೊಮ್ಮೆ ತೀವ್ರ ಸ್ಥಾನ ಪಲ್ಲಟದಿಂದಾಗಿ ಅಂತರ್ಜಲ ಕುಸಿಯುತ್ತದೆ. ಜೊತೆಗೆ ಗಣಿಗಾರಿಕೆಯ ಸುತ್ತ ಹುಲ್ಲುಗಾವಲುಗಳು ನಾಶವಾಗುತ್ತವೆ. ಆಗ ಭೂಮಿಯ ಮೇಲ್ಮೈ ಬಂಜರಾಗುತ್ತಲೇ ಹೋಗುತ್ತದೆ ಎನ್ನುವ ತಜ್ಞರ ಅಭಿಪ್ರಾಯದಲ್ಲಿ ವಾಸ್ತವಾಂಶ ತಿಳಿಯುತ್ತದೆ.

ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ತಲೆದೋರುತ್ತದೆ. ಅಂತರ್ಜಲದ ಮಟ್ಟ ಒಮ್ಮಿಂದೊಮ್ಮೆಲೆ ಮಾಯವಾಗಿಬಿಡುತ್ತದೆ. ದನಕರುಗಳಿಗೆ ನೀರಿನ ಅಭಾವವಾಗಿ ಅವುಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಮುಖವಾಗುತ್ತಿದೆ. ಗಣಿಗಾರಿಕೆಯ ಸ್ಫೋಟದಿಂದಾಗಿ ಸುತ್ತಮುತ್ತಲಿನ ಪರಿಸರ ನಾಶವಾಗುವುದರಿಂದ ಕಾಡು ನಾಶವಾಗುತ್ತಿದೆ. ಕಾಡು ನಾಶವಾಗುವುದರಿಂದ ಮಳೆಯ ಪ್ರಮಾಣ ಕಡಿಮೆಯಾಗಿ ಅಂತರ್ಜಲ ಕುಸಿಯಲು ಕಾರಣವಾಗುತ್ತಿದೆ. ಸ್ಫೋಟದಿಂದ ಭಯಂಕರ ಶಬ್ದ ಹೊರಡುವುದರ ಜೊತೆಗೆ ಭೂಮಿಯು ಸಹ ಅಲ್ಪ ಪ್ರಮಾಣದಲ್ಲಿ ಕಂಪಿಸುತ್ತದೆ. ಈ ಸ್ಫೋಟದ ಕಂಪನದಿಂದಾಗಿ ಮನೆಗಳು ಬಿರುಕು ಬಿಟ್ಟಿವೆ. ಹಲವಾರು ಕಟ್ಟಡಗಳು ನಾಶವಾಗುವ ಅಂಚಿನಲ್ಲಿವೆ. ಹೀಗಾಗಿ ಗಣಿಗಾರಿಕೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ದೊಡ್ಡ ಪ್ರಮಾಣದ್ದಾಗಿದೆ.

೫. ಕೃಷಿ ಚಟುವಟಿಕೆಗಳ ಸ್ಥಗಿತತೆ : ದುಡಿಯುವ ವರ್ಗಗಳು ಹೆಚ್ಚಿನ ಕೂಲಿ ದೊರೆಯುವಲ್ಲಿ ಕೆಲಸಕ್ಕೆ ಹೋಗುತ್ತಾರೆ. ಕೃಷಿ ಕ್ಷೇತ್ರದಲ್ಲಿ ದೊರೆಯುವ ಕೂಲಿಗಿಂತ ಗಣಿಗಾರಿಕೆಯ ಕೆಲಸದ ಕೂಲಿಯ ಪ್ರಮಾಣ ಮೂರ್‍ನಾಲ್ಕು ಪಟ್ಟು ಹೆಚ್ಚಾಗಿದೆ. ಈ ರೀತಿಯ ಕೂಲಿಯಿಂದಾಗಿ ದುಡಿಯುವ ವರ್ಗಗಳನ್ನು ತನ್ನೆಡೆ ಸೆಳೆಯುತ್ತಿದೆ. ಹೆಚ್ಚಿನ ಹಣ ಸಿಗುವುದರಿಂದ ಕೂಲಿ ಆಳುಗಳು ಗಣಿಗಾರಿಕೆಯ ಕೆಲಸಕ್ಕೆ ಹೋಗುವುದು ಸಾಮಾನ್ಯ. ಈ ಕಾರಣವು ಸಹ ಕೃಷಿ ಚಟುವಟಿಕೆಗಳ ಕುಂಠಿತಕ್ಕೆ ಕಾರಣವಾಗುತ್ತದೆ. ಕೂಲಿ ಆಳುಗಳು ಗಣಿಗಾರಿಕೆಯ ಕೆಲಸಕ್ಕೆ ಹೊರಡುವುದರಿಂದ ಕೃಷಿಯ ಕೆಲಸಗಳಿಗೆ ಅಡಚಣೆಯುಂಟಾಗುತ್ತಿದೆ.

ನಮ್ಮ ದೇಶದ ಕೃಷಿಯು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳದೆ ಪುರಾತನ ಚಟುವಟಿಕೆಯಲ್ಲಿ ಮುಂದುವರೆದಿದೆ. ಮುಂದುವರೆದ ರಾಷ್ಟ್ರಗಳಲ್ಲಿ ೧೦೦ ಜನ ಕೃಷಿ ಕೂಲಿ ಕಾರ್ಮಿಕರು ಮಾಡುವ ಕೆಲಸವನ್ನು ಒಂದು ಯಂತ್ರ ಮಾಡಿ ಮುಗಿಸುತ್ತದೆ. ಆದರೆ ನಮ್ಮ ದೇಶದಲ್ಲಿ ಯಂತ್ರ ಶಕ್ತಿಗಿಂತ ಮಾನವ ಶಕ್ತಿಯ ಶ್ರಮವನ್ನು ಆಶ್ರಯಿಸಲಾಗಿದೆ. ನಮ್ಮ ಕೃಷಿಯ ಪರಿಸ್ಥಿತಿ ಮಾನವ ಶಕ್ತಿಯಿಲ್ಲದೆ ಕೃಷಿ ಮಾಡಲು ಸಾಧ್ಯವಿಲ್ಲದಂತಾಗಿದೆ. ಹೀಗಾಗಿ ಕೃಷಿಗೆ ಕೂಲಿ ಆಳುಗಳು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಕೂಲಿ ಆಳುಗಳು ದೊರೆಯದೆ ಇರುವುದರಿಂದ ಕೃಷಿಯ ಕಾರ್ಯ ಚಟುವಟಿಕೆಗಳು ಕುಂಠಿತಗೊಳ್ಳುತ್ತಿವೆ.

೬. ಕೃಷಿ ಭೂಮಿಯ ಸಾವಯವತೆಯ ನಾಶ : ಭೂಮಂಡಲದಲ್ಲಿ ಮುಕ್ಕಾಲು ಭಾಗ ನೀರಿನಿಂದ ಆವೃತವಾಗಿದೆ. ಕಾಲು ಭಾಗ ಮಾತ್ರ ಭೂಮಿಯಿದೆ. ಇದರಲ್ಲಿ ವಾಸದಮನೆಗಳು, ಬೆಟ್ಟ ಗುಡ್ಡಗಳು, ಅರಣ್ಯ ಪ್ರದೇಶ, ಬಂಜರು ಭೂಮಿಯನ್ನು ತೆಗೆದಾಗ ಉಳಿಯುವುದು ಅಲ್ಪ ಭಾಗ ಮಾತ್ರ. ಅದರಲ್ಲಿ ಕೃಷಿಯೋಗ್ಯವಾದ ಭೂಮಿ ಕರ್ನಾಟಕದಲ್ಲಿ ೧೨೩ ಲಕ್ಷ ಹೆಕ್ಟೇರ್ ಮಾತ್ರ. ಇಷ್ಟರಲ್ಲಿ ಸರಿಯಾದ ಪ್ರಮಾಣದ ಬೆಳೆಯನ್ನು ತೆಗೆಯಲು ಆಗುತ್ತಿಲ್ಲ. ಪರಿಸರ ಮಾಲಿನ್ಯ, ಜಲಮಾಲಿನ್ಯ, ಬರಗಾಲದಿಂದಾಗಿ ಭೂಮಿಯ ಸ್ವರೂಪ ಹಾಳಾಗುತ್ತಿದೆ.

ಗಣಿಗಾರಿಕೆಯ ಧೂಳು ಹಾರಿ ಬಂದು ಜಮೀನಿನ ಮೇಲೆ ಬೀಳುವುದರಿಂದ ನೆಲದಲ್ಲಿ ಕಬ್ಬಿಣದ ಅಂಶ ಹೆಚ್ಚಾಗುತ್ತದೆ. ಇದರಿಂದ ಸರಿಯಾದ ಬೆಳೆಯನ್ನು ಬೆಳೆಯಲು ಆಗುವುದಿಲ್ಲ. ಭೂಮಿಯು ನೀರನ್ನು ಹೀರಿಕೊಳ್ಳುವ ಪ್ರಮಾಣ ಕಡಿಮೆಯಾಗುತ್ತದೆ. "ಒಂದು ಪ್ರದೇಶದ ಆರ್ಥಿಕಾಭಿವೃದ್ಧಿಯಲ್ಲಿ ಭೂಸಂಪನ್ಮೂಲದ ಪಾತ್ರ ಮಹತ್ವದ್ದಾಗಿರುತ್ತದೆ."[೪] ಅದನ್ನು ಉಳಿಸಿಕೊಳ್ಳಬೇಕು ಇಲ್ಲದಿದ್ದರೆ ಭೂಮಿಯು ಸರಿಯಾಗಿ ನೀರನ್ನು ಹೀರದೆ ಇರುವುದರಿಂದ ತನ್ನ ಮೂಲಸ್ವರೂಪವನ್ನು ಕಳೆದುಕೊಳ್ಳುತ್ತದೆ. ಮಳೆಗಾಲದ ಸಮಯದಲ್ಲಿ ಗಣಿಗಾರಿಕೆಯ ಗುಡ್ಡಗಳಿಂದ ಹರಿದು ಬರುವ ನೀರು ಜಮೀನಿಗೆ ಸೇರುತ್ತದೆ. ಆ ಮಳೆಯ ನೀರು ಕಬ್ಬಿಣದ ಅಂಶವನ್ನು ಹೊತ್ತು ತರುವುದರಿಂದ ಭೂಮಿಯ ಸ್ವರೂಪದಲ್ಲಿ ಬದಲಾವಣೆಯಾಗಿ ಸಾವಯವತೆಯು ನಾಶವಾಗುತ್ತದೆ.

೭. ಅಲ್ಪ ಪ್ರಮಾಣದ ಪರಿಹಾರ : ರೈತರು ಸಾವಿರಾರು ರೂ.ಗಳನ್ನು ಖರ್ಚುಮಾಡಿ ಬೆಳೆ ತೆಗೆಯುತ್ತಾರೆ. ಸರಿಯಾದ ಬೆಳೆ ಬೆಳೆದರೂ ಲಾಭವಾಗುವುದು ದುಸ್ತರವಾಗಿದೆ. ಇಂದಿನ ದಿನದಲ್ಲಿ ಸರಕಾರವು ರೈತರನ್ನು ಕಡೆಗಣಿಸಿದೆ ಎಂದು ಹೇಳಬಹುದು. ಕಾರಣ ರೈತರಿಗೆ ಹಲವಾರು ಸೌಲಭ್ಯಗಳನ್ನು ನೀಡುತ್ತಿದ್ದಾರೆ. ಅದನ್ನು ಉಪಯೋಗಿಸಿಕೊಳ್ಳುವ ಜಾಣ್ಮೆ ನಮ್ಮ ರೈತರಲ್ಲಿ ಕಡಿಮೆಯಿದೆ. ಸರಕಾರವು ರೈತರಿಗೆ ಹಲವಾರು ಸಾಲ ಸೌಲಭ್ಯಗಳನ್ನು ಒದಗಿಸುತ್ತಿರುವುದು ನಿಜ. ಆದರೆ ಹಿಂದಿನಿಂದ ಅದೇ ಸರಕಾರ ಗಣಿಗಾರಿಕೆಗೆ ಅನುಮತಿ ನೀಡುತ್ತಿದೆ. ಈ ರೀತಿ ಕೆಲಸವನ್ನು ಮಾಡುವುದಾದರೆ ರೈತರಿಗೆ ಒದಗಿಸುವ ಸೌಲಭ್ಯಗಳ ಅವಶ್ಯಕತೆಯೇನು. ಗಣಿಗಾರಿಕೆ ನಡೆಯುತ್ತಿರುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೃಷಿ ಜಮೀನುಗಳಿರುತ್ತವೆ. ನದಿ, ಕೆರೆಗಳು, ಜಲಾಶಯಗಳು ಇರುತ್ತವೆ ಎನ್ನುವುದನ್ನು ಮರೆತಂತೆ ಕಾಣುತ್ತದೆ.

ಗಣಿಗಾರಿಕೆಯ ಧೂಳು ಬಂದು ಬೆಳಗಳ ಮೇಲೆ ಕೂಡುವುದರಿಂದ ರೈತರಿಗೆ ನಷ್ಟವಾಗುತ್ತಿದೆ. ಈ ನಷ್ಟಕ್ಕಾಗಿ ರೈತರು ಗಣಿಗಾರಿಕೆಯ ವಿರುದ್ಧ ಪ್ರತಿಭಟಿಸಿದರೆ ದೊರಕಿರುವುದು ಕೇವಲ ೧,೯೫೦ ರೂ.ಗಳಂತೆ ಪ್ರತಿ ಎಕರೆಗೆ ದೊರೆಯುತ್ತದೆ. ಕೆಲವೊಂದು ಕಡೆ ಪ್ರತಿಭಟಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಧೂಳಿನ ಪರಿಹಾರವಾಗಿ ಸರಕಾರದಿಂದ ರೈತರಿಗೆ ಯಾವ ರೀತಿಯ ಸೌಲಭ್ಯವನ್ನು ಒದಗಿಸಿಲ್ಲ. ಒಂದು ಕಡೆಯಿಂದ ಲಾಭಕ್ಕಾಗಿ ಇನ್ನೊಂದೆಡೆ ನಷ್ಟ ಮಾಡಿಕೊಳ್ಳುವುದು ಯಾರಿಗೆ ಬೇಕಾಗಿದೆ. ಇದನ್ನು ನಾವು ನೀವೆಲ್ಲರೂ ಯೋಚಿಸಬೇಕಾದ ವಿಷಯವಾಗಿದೆ.

೮. ಹೂಳಿನಿಂದ ಹಳ್ಳ ಮತ್ತು ಕೆರೆಗಳು ಮುಚ್ಚಿ ಹೋಗುತ್ತವೆ : ಪ್ರಪಂಚದ ಯಾವುದೇ ಭಾಗವಾದರೂ ಖನಿಜ ಸಂಪತ್ತನ್ನು ಹೊಂದಿತ್ತೆಂದರೆ ಅಲ್ಲಿ ನೀರಿನ ಮೂಲ ಇದ್ದೇ ಇರುತ್ತದೆ. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ಹೊಂದಿತ್ತು. ಆದರೆ ಇಂದು ಬಳ್ಳಾರಿ ಜಿಲ್ಲೆಯು ಅತಿ ಕಡಿಮೆ ಮಳೆ ಬೀಳುವ ಪ್ರದೇಶವೆಂದು ಗುರುತಿಸಲಾಗುತ್ತಿದೆ. ಮೊದಲು ನೀರಾವರಿ ಉನ್ನತ ಮಟ್ಟದಲ್ಲಿತ್ತೆಂದರೆ ಯಾವ ಪ್ರಮಾಣದಲ್ಲಿ ಮಳೆಯಾಗುತ್ತಿತ್ತೆಂದು ಕಲ್ಪನೆ ಮಾಡಿಕೊಳ್ಳಬಹುದು. ಆದರೆ ಇಂದು ತುಂಗಭದ್ರಾ ಜಲಾಶಯವನ್ನು ಹೊರತು ಪಡಿಸಿದರೆ ನೀರಾವರಿ ವ್ಯವಸ್ಥೆ ಇಲ್ಲವಾಗುವ ಸ್ಥಿತಿಗೆ ಬರುತ್ತದೆ. ಗಣಿಗಾರಿಕೆಯಿಂದಾಗಿ ಬೆಟ್ಟಗುಡ್ಡಗಳು ಬರಿದಾಗಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ.

ಮಳೆಗಾಲದಲ್ಲಿ ಗಣಿಗಾರಿಕೆಯ ಗುಡ್ಡಗಳಿಂದ ಹರಿದು ಬರುವ ನೀರು ಹಳ್ಳ ಕೆರೆಗಳಿಗೆ ಸೇರುತ್ತವೆ. ಈ ನೀರು ಸೇರುವಾಗ ಜೊತೆಯಲ್ಲಿ ಗಣಿಗಾರಿಕೆಯ ಹೂಳನ್ನು ಹೊತ್ತು ತರುತ್ತದೆ. ಆ ಹೊತ್ತು ತಂದ ಹೂಳಿನಿಂದಾಗಿ ಹಳ್ಳ ಕೆರೆಗಳು ಹೂಳು ತುಂಬಿ ಮುಚ್ಚಿ ಹೋಗುತ್ತವೆ. ಹೊಸಪೇಟೆ ತಾಲ್ಲೂಕಿನ ಕೆಲವೊಂದು ಕೆರೆಗಳು ಹೂಳಿನಿಂದಾಗಿ ಕಣ್ಮರೆಯಾಗಿವೆ. ಅಲ್ಲದೆ ನೀರಿಲ್ಲದೆ ಬತ್ತಿಹೋಗುತ್ತಿವೆ. "೧೮೫೭ರಲ್ಲಿ ಒಬ್ಬ ಅಧ್ಯಯನಕಾರರ ಪ್ರಕಾರ ಮದರಾಸು ಅಧಿಪತ್ಯದ ೧೪ ಜಿಲ್ಲೆಗಳಲ್ಲಿ ಒಟ್ಟು ೫೩ ಸಾವಿರ ಕೆರೆಗಳಿವೆ. ಅವುಗಳಲ್ಲಿ ೧೦ ಸಾವಿರ ಕೆರೆಗಳು ದುಸ್ಥಿತಿಯಲ್ಲಿವೆ."[೫] ಇದು ವಿಪರ್ಯಾಸದ ಸಂಗತಿಯಾಗಿದೆ. ಹಳ್ಳ ಕೆರೆಗಳು ಬರಿದಾಗುವುದರಿಂದ ಕೃಷಿಯು ಕುಂಠಿತವಾಗುತ್ತದೆ. ಗಣಿಗಾರಿಕೆಯಿಂದ ಕೃಷಿಗೆ ತುಂಬಲಾರದ ನಷ್ಟವಾಗುತ್ತಿದೆ. ಜೊತೆಗೆ ನೀರಾವರಿ ವ್ಯವಸ್ಥೆ ಕುಂಠಿತಗೊಳ್ಳುತ್ತದೆ.

೯. ಅರಣ್ಯ ನಾಶ : ಗಣಿಗಾರಿಕೆಯಿಂದಾಗಿ ಅರಣ್ಯ ನಾಶವಾಗುತ್ತಿದೆ. ಒಂದು ನಿಸರ್ಗ ಸಂಪದ್ಭರಿತವಾಗಿದೆ ಎಂದು ಹೇಳಬೇಕಾದರೆ ಅಲ್ಲಿನ ಭೂ ವಿಸ್ತೀರ್ಣದಲ್ಲಿ ಮೂರು ಭಾಗ ಅರಣ್ಯವನ್ನು ಹೊಂದಿರಬೇಕು. ಅರಣ್ಯವು ಪ್ರಾಣಿ ಪಕ್ಷಿಗಳ ವಾಸಸ್ಥಾನವಾಗಿದೆ. ಹಲವಾರು ಔಷಧಿಯ ಗಿಡಮೂಲಿಕೆಗಳು ದೊರೆಯುತ್ತವೆ. ಅರಣ್ಯವು ನಮಗೆ ಇನ್ನು ಹಲವಾರು ಕಾರಣಗಳಿಗಾಗಿ ಬೇಕಾಗಿದೆ. ಅವುಗಳೆಂದರೆ

"ವಸತಿ ನಿರ್ಮಾಣಕ್ಕಾಗಿ

ಔಷಧಿಗಳಿಗಾಗಿ

ಉರುವಲಿಗಾಗಿ

ಮೇವಿಗಾಗಿ

ಮಳೆ ಗೋಡೆಗಳಾಗಿ

ಗಾಳಿ ತಡೆಗಳಾಗಿ

ಭೂಸವಕಳಿ ತಪ್ಪಿಸುವುದಕ್ಕಾಗಿ

ಭೂ ಗರ್ಭದ ಖನಿಜಗಳನ್ನು ಹೀರಿನ ಮೂಲಕ ಮೇಲೆತ್ತುವ ಯಂತ್ರಗಳಾಗಿ

ಆಮ್ಲಜನಕದ ಕಾರ್ಖಾನೆಗಳಾಗಿ

ತೇವಾಂಶ ಹಿಡಿದಿಡುವುದಕ್ಕಾಗಿ

ಉಷ್ಣಾಂಶ ಕಡಿಮೆ ಮಾಡುವುದಕ್ಕಾಗಿ

ವಾತಾವರಣ ಪ್ರಸನ್ನತೆಗಾಗಿ

ಸಂಚಯನಶಕ್ತಿ ಪೆಟ್ರೋಲಿನ ಮೂಲವಾಗಿ”[೬]

ಹೀಗೆ ಹಲವಾರು ಉಪಯೋಗಗಳಿಗಾಗಿ ಅರಣ್ಯ ನಮಗೆ ಮುಖ್ಯವಾಗಿದೆ.

ಅರಣ್ಯ ನಾಶದಲ್ಲಿ ಗಣಿಗಾರಿಕೆಯದೇ ಸಿಂಹಪಾಲು. ಭೂಗರ್ಭದಲ್ಲಿನ ಗಣಿ ಸಂಪತ್ತನ್ನು ಹೊರಗೆ ತೆಗೆಯುವುದಕ್ಕಾಗಿ ಅರಣ್ಯವನ್ನು ನಾಶಮಾಡುತ್ತಿದ್ದಾರೆ. “ಗಣಿಗಾರಿಕೆಯಲ್ಲಿ ಬಳ್ಳಾರಿ ಜಿಲ್ಲೆಯು ಅಗ್ರಸ್ಥಾನವನ್ನು ಪಡೆದುಕೊಂಡಿದ್ದರೂ, ಚಳುವಳಿಯ ದೃಷ್ಟಿಯಿಂದ ಅಷ್ಟೇ ಕೆಳಸ್ಥಾನವನ್ನು ಪಡೆದುಕೊಂಡಿದೆ.”[೭] ಇಲ್ಲಿ ಗಣಿಗಾರಿಕೆ ಎಷ್ಟೋ ವರ್ಷಗಳಿಂದ ನಡೆಯುತ್ತಿದ್ದರೂ ಹೇಳಿಕೊಳ್ಳುವಂತಹ ಚಳುವಳಿಗಳು ನಡೆದಿಲ್ಲ. ಚಳುವಳಿ ನಡೆಯಬೇಕೆನ್ನುವುದು ನನ್ನ ಉದ್ದೇಶವಲ್ಲ. ಆದರೆ ಪ್ರಕೃತಿಯ ಮೇಲಾಗುತ್ತಿರುವ ಪರಿಣಾಮವನ್ನು ಕಂಡು ಜನರು ಸುಮ್ಮನೆ ಕೈ ಕಟ್ಟಿಕೊಂಡು ಯಾಕೆ ಕುಳಿತಿದ್ದಾರೆ? ಪರಿಸರದ ಮೇಲೆ ಇವರಿಗೆ ಪ್ರೇಮವಿಲ್ಲವೆ? ಇದ್ದರೆ ಯಾಕೆ ಪ್ರತಿಭಟಿಸುತ್ತಿಲ್ಲ? ಹೀಗೆ ಹತ್ತು ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ.

ಹೊಸಪೇಟೆ ತಾಲ್ಲೂಕಿನಲ್ಲಿ ಬಳ್ಳಾರಿ, ಸಂಡೂರು ಮತ್ತು ಮರಿಯಮ್ಮನಹಳ್ಳಿ ಮಾರ್ಗದಲ್ಲಿರುವ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗುಡ್ಡಗಾಡುಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಮಾನವ ನಿರ್ಮಿತ ಗುಡ್ಡಗಳಂತೆ ಕಂಡುಬರುತ್ತವೆ. ಖನಿಜ ಸಂಪತ್ತಿನ ಆಸೆಗಾಗಿ ಇಂದು ನಾವು ಗುಡ್ಡಗಾಡುಗಳನ್ನು ಬರಿದು ಮಾಡುತ್ತಿದ್ದೇವೆ. ಭೂಗರ್ಭದಲ್ಲಿನ ಖನಿಜ ಸಂಪತ್ತಿಗಾಗಿ ಪ್ರಾಕೃತಿಕ ಸಿರಿ ಸಂಪತ್ತನ್ನು ಹಾಳು ಮಾಡುತ್ತಿದ್ದೇವೆ. ಹಚ್ಚ ಹಸಿರಿನಿಂದ ಕಂಗೊಳಿಸಬೇಕಾದ ಪ್ರದೇಶ ಬರೀ ಕಬ್ಬಿಣದ ಅದಿರಿನ ಪುಡಿ ಮತ್ತು ಮ್ಯಾಂಗನೀಸ್ ಹುಂಡೆಗಳಂತೆ ಕಾಣುತ್ತಿವೆ.

ಗಣಿಗಾರಿಕೆ ಹೀಗೆ ಕೆಲವು ವರ್ಷಗಳವರೆಗೆ ಮುಂದುವರೆದರೆ ಹೊಸಪೇಟೆ ತಾಲ್ಲೂಕು ಪ್ರದೇಶವು ಮರುಭೂಮಿಯಾಗುವುದರಲ್ಲಿ ಸಂದೇಹವಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಬೇಸಿಗೆ ಮತ್ತು ಅತಿ ಬೇಸಿಗೆಯನ್ನು ಹೆಚ್ಚಾಗಿ ಕಾಣುತ್ತೇವೆ. ಮಳೆಯ ಪ್ರಮಾಣ ಕಡಿಮೆಯಾಗಿದೆ. ಕೃಷಿಯನ್ನವಲಂಬಿಸಿದವರ ಪ್ರಮಾಣ ಕಡಿಮೆಯಾಗುತ್ತಿದೆ. ಮಳೆಯ ಪ್ರಮಾಣ ಕಡಿಮೆಯಾದಂತೆಲ್ಲ ಬೆಳೆಯ ಪ್ರಮಾಣವು ಕಡಿಮೆಯಾಗಿದೆ. ಹೀಗೆ

ಕೃಷಿಯ ಮೇಲೆ ಗಣಿಗಾರಿಕೆಯು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತನ್ನ ಪರಿಣಾಮವನ್ನು ಬೀರಿದೆ. "ತಜ್ಞರ ಅಭಿಪ್ರಾಯದಲ್ಲಿ ಗಿಡಮರಗಳೆಂದರೆ ನೀರು, ನೀರು ಎಂದರೆ ಅನ್ನ, ಅನ್ನವೆಂದರೆ ಪ್ರಾಣ."[೪]

೧೦. **ದನಕರುಗಳ ಸಂಖ್ಯೆಯಲ್ಲಿ ಇಳಿಮುಖ** : ರೈತರು ದನಕರುಗಳೆಂದರೆ ತಮ್ಮ ಕುಟುಂಬದ ಸದಸ್ಯರು ಎನ್ನುವ ಭಾವನೆಯನ್ನು ಹೊಂದಿದ್ದಾರೆ. "ಭಾರತವೆಂದರೆ ಜಗತ್ತಿನ ಭೂವಿಸ್ತಾರದಲ್ಲಿ ೧ / ೪೦ ರಷ್ಟು ವಿಶಾಲ ಪ್ರದೇಶ. ಅದರಲ್ಲಿ ಜಗತ್ತಿನ ಯಾವತ್ತು ಎಮ್ಮೆ, ಕೋಣ, ದನ, ಕರು, ಆಡುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಿಗೆ ಪಶುಗಳು ಜೀವಿಸುತ್ತಿವೆ."[೫] ಆಕಳು ಮತ್ತು ಎತ್ತು ಇವುಗಳಲ್ಲಿ ಪೂಜ್ಯ ಭಾವನೆಯನ್ನು ಹೊಂದಿದ್ದಾರೆ. ಆಕಳು ಕೇಳಿದ್ದನ್ನು ಕೊಡುವ ಕಾಮಧೇನು. ಆಕಳಿನಲ್ಲಿ ಮುಕ್ಕೋಟಿ ದೇವರುಗಳು ನೆಲೆಸಿದ್ದಾರೆ ಎನ್ನುವ ಪ್ರತೀತಿ ಇದೆ. ಹಲವಾರು ಪುರಾಣ ಪುಣ್ಯ ಕತೆಗಳಲ್ಲಿ ಆಕಳಿನ ಮಹತ್ವ ತಿಳಿದು ಬರುತ್ತದೆ. ಕೆಲವೊಂದು ಪ್ರಮುಖ ಪೂಜೆಗಳಲ್ಲಿ ಗೋಮೂತ್ರ, ತುಪ್ಪ, ಹಾಲು, ಮೊಸರು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಎತ್ತನ್ನು ನೇಗಿಲಯೋಗಿ ರೈತನು ದೇವರಂತೆ ಪ್ರೀತಿಸುತ್ತಾನೆ. ಪೂಜ್ಯಭಾವನೆಯನ್ನು ಹೊಂದಿದ್ದಾನೆ. ಕೃಷಿ ಕಾರ್ಯಗಳಿಗೆ ಇವುಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇಂದಿನ ಆಧುನಿಕ ಯುಗದ ಕೃಷಿಯಲ್ಲಿ ಯಂತ್ರಗಳದೇ ಕಾರುಬಾರು. ಆದರೆ ಯಂತ್ರಗಳ ಬಳಕೆಗೆ ಮುಂಚೆ ಎತ್ತುಗಳು ಯಂತ್ರಗಳ ಕೊರತೆಯನ್ನು ತುಂಬುತ್ತಿದ್ದವು. ಇಂದಿಗೂ ಸಹ ಎತ್ತುಗಳು ರೈತರಿಗೆ ಅನಿವಾರ್ಯವಾಗಿ ಬೇಕೇ ಬೇಕು.

ಗಣಿಗಾರಿಕೆಯಿಂದಾಗಿ ದನಕರುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಗಣಿಗಾರಿಕೆಯಿಂದಾಗಿ ಕಾಡುನಾಶವಾಗುತ್ತಿದೆ. ಗೋಮಾಳಗಳು ಬರಡಾಗುತ್ತಿವೆ. ಬೆಳೆಗಳು ಸರಿಯಾಗಿ ಬೆಳೆಯುತ್ತಿಲ್ಲ. ಹೀಗಾಗಿ ದನಕರುಗಳಿಗೆ ಹುಲ್ಲಿನ ಕೊರತೆ ಕಂಡುಬರುತ್ತದೆ. ಸರಿಯಾದ ಪ್ರಮಾಣದಲ್ಲಿ ಮಳೆ ಬೀಳುತ್ತಿಲ್ಲ. ಜನರಿಗೆ ಕುಡಿಯಲು ನೀರು ಸಿಗದಂತಾಗಿ ಪರದಾಡುತ್ತಿರುವಾಗ, ದನಕರುಗಳಿಗೆ ಇನ್ನೆಲ್ಲಿ ನೀರು ಸಿಗುತ್ತದೆ. ಸಿಕ್ಕರೂ ಸಹ ಕೆರೆ, ಹೊಂಡಗಳ ಕಲುಷಿತ ನೀರನ್ನು ಕುಡಿಯಬೇಕು. ಆ ನೀರನ್ನು ಕುಡಿದು ಅವು ಸ್ವಾಸ್ಥ್ಯದಿಂದ ಇರಲು ಸಾಧ್ಯವಿಲ್ಲ. ಕೆಲವು ಸಂಖ್ಯೆಯಲ್ಲಿ ದನಕರುಗಳು ಸಾವನ್ನಪ್ಪಿದರೆ. ಇನ್ನು ಕೆಲವು ಮೇವು ಮತ್ತು ನೀರಿನ ಕೊರತೆಯನ್ನು ನಿಭಾಯಿಸಲು ಸಾಧ್ಯವಾಗದೆ ಮಾರಾಟ ಮಾಡಲಾಗುತ್ತಿದೆ. ಗಣಿಗಾರಿಕೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದನಕರುಗಳ ಸಂಖ್ಯೆ ಕಡಿಮೆಯಾಗಿದೆ ಎಂದು ತಿಳಿದು ಬರುತ್ತದೆ.

ಒಂದು ಕಾಲದಲ್ಲಿ ದೇವರು ಎಂದು ಪೂಜಿಸುತ್ತಿದ್ದ ಗೋವುಗಳು ಇಂದು ಕಸಾಯಿಖಾನೆಗಳನ್ನು ಸೇರುತ್ತಿವೆ. ಹಲವಾರು ಕಡೆ ಬರಗಾಲವನ್ನು ಎದುರಿಸಲಾಗುತ್ತಿದೆ. ರೈತರು ತಮ್ಮ ದನಕರುಗಳನ್ನು ಬಿಟ್ಟಿಬಿಟ್ಟಿರುವುದು ಕಂಡುಬರುತ್ತದೆ. ಒಂದೊಂದು ಸಾರಿ ಕಸಾಯಿಖಾನೆಗೆ ಸೇರುತ್ತಿದ್ದ ದನಕರುಗಳನ್ನು ಪ್ರಾಣಿ ದಯಾ ಸಂಘದವರು ರಕ್ಷಿಸಿರುವುದು ತಿಳಿದು ಬರುತ್ತದೆ. ಹೆಚ್ಚಿನ ಪ್ರಮಾಣದ ದನಕರುಗಳು ಇಂದು ಕಟುಕರ ಕೈ ಸೇರುವಂತ ಸ್ಥಿತಿ ಬಂದೊದಗಿದೆ.

[illegible]

೧೧. ರೋಗ ರುಜಿನೆಗಳು ತೀವ್ರವಾಗಿ ಹರಡುವಿಕೆ : ಇಂದು ತಂತ್ರಜ್ಞಾನದ ವೈದ್ಯಕೀಯ ರಂಗವು ಸಹ ಶರವೇಗದಿಂದ ಮುನ್ನುಗ್ಗುತ್ತಿದೆ. ಆದರೆ ಅಷ್ಟೇ ಪ್ರಮಾಣದಲ್ಲಿ ರೋಗಗಳು ಕಂಡುಬರುತ್ತಿವೆ. ಗಣಿಗಾರಿಕೆಯಿಂದ ಹಲವಾರು ರೋಗಗಳು ಸೃಷ್ಟಿಯಾಗುತ್ತಿವೆ. ನೀರು ಮತ್ತು ಪರಿಸರ ಕಲುಷಿತವೇ ಇದಕ್ಕೆ ಪ್ರಮುಖ ಕಾರಣ. ಗಣಿಗಾರಿಕೆಯ ಧೂಳು ಮನೆ, ಮನುಷ್ಯ, ಗಿಡಮರ, ಊರು ಹೀಗೆ ಎಲ್ಲವೂ ಧೂಳಿನಿಂದ ಆವೃತವಾಗುತ್ತಿದೆ. ಮಳೆಗಾಲದ ಸಮಯದಲ್ಲಿ ಮಳೆಯ ನೀರಿನಿಂದ ಕಲುಷಿತಗೊಂಡ ನೀರನ್ನು ಆ ಪ್ರದೇಶದ ಜನರು ಬಳಸುವುದು ಅನಿವಾರ್ಯವಾಗುತ್ತದೆ.

ಗಣಿಗಾರಿಕೆಯ ವಾಯುಮಾಲಿನ್ಯದಿಂದಾಗಿ ಹಲವಾರು ರೋಗಗಳು ಉದ್ಭವಿಸುತ್ತವೆ. ಅವುಗಳೆಂದರೆ ಶ್ವಾಸಕೋಶ ಸಂಬಂಧಿ, ಅಸ್ತಮಾ, ಮಲೇರಿಯಾ, ಕ್ಯಾನ್ಸರ್ ಮುಂತಾದವುಗಳು ಪ್ರಮುಖವಾಗಿ ಕಂಡುಬರುತ್ತವೆ. "ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯದಿಂದ ಕೈಗಾರಿಕಾ ಕಾರ್ಮಿಕರು ಪ್ರತಿಶತ ೭ರಷ್ಟು, ಗೃಹಿಣಿಯರು ೩೭ರಷ್ಟು ಮತ್ತು ಕಛೇರಿಯ ನೌಕರರು ೪೦ರಷ್ಟು ಉಬ್ಬುಸ ರೋಗಕ್ಕೆ ಅಂದರೆ ಅಸ್ತಮಾ ರೋಗಕ್ಕೆ ತುತ್ತಾಗುವರೆಂದು ಒಂದು ಸಮೀಕ್ಷೆಯಿಂದ ತಿಳಿದುಬಂದಿದೆ."[೧೦] ಹೀಗೆ ಗಣಿಗಾರಿಕೆಯ ವಾಯುಮಾಲಿನ್ಯ, ಜಲಮಾಲಿನ್ಯದಿಂದಾಗಿ ಹಲವಾರು ರೋಗಗಳು ಉದ್ಭವಿಸುತ್ತವೆ. ಹೀಗೆ ಹಲವಾರು ರೀತಿಯ ರೋಗಗಳು ಕಂಡುಬರುತ್ತವೆ. ಅಲ್ಲದೇ ಗಣಿಗಾರಿಕೆಯಿಂದ ಕೃಷಿಯ ಮೇಲೆ ಹಲವಾರು ರೋಗಗಳು ದಾಳಿ ಮಾಡುತ್ತವೆ. ಗಣಿಗಾರಿಕೆಯ ಧೂಳಿನಿಂದಾಗಿ ಬೆಳೆ ಸರಿಯಾಗಿ ಬೆಳೆಯದೆ ಎಲೆಗಳು ಮುದುರಿಕೊಂಡು ರೋಗಗ್ರಸ್ಥವಾಗುತ್ತವೆ. ಸಸ್ಯಗಳ ದ್ಯುತಿಸಂಶ್ಲೇಷಣೆ ಕ್ರಿಯೆ ನಿಷ್ಕ್ರಿಯೆಗೊಂಡು ಹಲವಾರು ಕ್ರಿಮಿಕೀಟಗಳು, ರೋಗಾಣುಗಳು ದಾಳಿ ಮಾಡುತ್ತವೆ. ಒಟ್ಟಿನಲ್ಲಿ ಗಣಿಗಾರಿಕೆಯು ರೋಗ ರುಜಿನಗಳ ತವರು ಎಂದು ಹೇಳಬಹುದಾಗಿದೆ.

ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಯಲ್ಲದೇ ಕಲ್ಲಿನ ಕ್ವಾರೆ, ಸುಣ್ಣದ ತಯಾರಿಕೆ, ಮಣ್ಣಿನ ಇಟ್ಟಿಗೆ ಮತ್ತು ಸಿಮೆಂಟಿನ ಇಟ್ಟಿಗೆಯ ತಯಾರಿಕೆಗಳನ್ನು ಗಣಿಗಾರಿಕೆ ಎನ್ನುವಂತೆ ಪರಿಗಣಿಸಿ ಅಧ್ಯಯನ ಮಾಡಲಾಗಿದೆ. ಈ ಮೇಲೆ ತಿಳಿಸುವ ಪ್ರಕ್ರಿಯೆಗಳು ಕೃಷಿಯ ಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪರಿಣಾಮವನ್ನು ಬೀರುತ್ತವೆ. ಆದ್ದರಿಂದ ಕೆಲವೊಂದು ಮಾಹಿತಿಯನ್ನು ಪಡೆಯಲು ಇವುಗಳ ಬಗೆಗೆ ಅಧ್ಯಯನ ಮಾಡಲಾಗಿದೆ. ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಗಳಂತೆ ಇವುಗಳು ಕೃಷಿಯ ಮೇಲೆ ತೀವ್ರ ಪ್ರಭಾವ ಬೀರುವುದಿಲ್ಲ. ಆದರೆ ಕೆಲವೊಂದು ಪರಿಣಾಮವನ್ನು ಬೀರುತ್ತದೆ ಎಂದು ಮನಗಂಡು ಅಧ್ಯಯನ ಕೈಗೊಳ್ಳಲಾಗಿದೆ. ಕಲ್ಲಿನಕ್ವಾರೆ, ಸುಣ್ಣದ ತಯಾರಿಕೆ, ಮಣ್ಣಿನ ಇಟ್ಟಿಗೆ ತಯಾರಿಕೆ ಮತ್ತು ಸಿಮೆಂಟಿನ ಇಟ್ಟಿಗೆ ತಯಾರಿಕೆಯು ಕೃಷಿಯ ಮೇಲೆ ಪರಿಣಾಮ ಬೀರುವುದನ್ನು ಈ ಕೆಳಗಿನಂತೆ ಒಂದೊಂದಾಗಿ ನೋಡಬಹುದು.

ಕಲ್ಲಿನ ಕ್ವಾರೆ

ಹೊಸಪೇಟೆ ತಾಲೂಕಿನಲ್ಲಿ ಕಲ್ಲಿನ ಕ್ವಾರೆಯ ಕೆಲಸವು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವುದು ಕಂಡುಬರುತ್ತದೆ. ಕಲ್ಲಿನ ಕ್ವಾರೆಯ ಕೆಲಸವು ಯಂತ್ರ ಮತ್ತು ಮಾನವಶಕ್ತಿ ಎರಡರಿಂದಲೂ ನಡೆಯುತ್ತಿರುವುದು ಕಂಡುಬರುತ್ತದೆ. ಕ್ರಶರ್‌ಗಳ ಮೂಲಕ ನಡೆಯುವ ಕ್ವಾರೆ ಕೆಲಸವು ದೊಡ್ಡ ಪ್ರಮಾಣದ್ದಾಗಿರುತ್ತದೆ. ಈ ಕೆಲಸದಲ್ಲಿ ಸಿಡಿಮದ್ದು ಸಿಡಿಸುವುದು ಕಂಡುಬರುತ್ತದೆ. ಹೆಚ್ಚಿನ ಪ್ರಮಾಣದ ಧೂಳು ಉದ್ಭವವಾಗುತ್ತದೆ. ಈ ಪ್ರಕ್ರಿಯೆಯಿಂದ ಉಂಟಾದ ಧೂಳು ಸುತ್ತಮುತ್ತಲಿನ ಬೆಳೆಗಳ ಮೇಲೆ ಬಂದು ಬೀಳುವುದರಿಂದ ಸಸ್ಯಗಳ ದ್ಯುತಿಸಂಶ್ಲೇಷಣೆ ಕ್ರಿಯೆ ನಿಷ್ಕ್ರಿಯೆಗೊಂಡು ಇಳುವರಿ ಕಡಿಮೆಯಾಗುತ್ತದೆ. ಗುಡ್ಡಗಾಡುಗಳ ಮೂಲಕ ಹರಿಯುವ ನೀರಿನ ಝರಿಗಳು ಹಾಳಾಗಿ ಹೋಗುತ್ತವೆ. ಸುಂದರವಾದ ಬೆಟ್ಟಗುಡ್ಡಗಳು ಬರಿದಾಗಿ ಹೋಗುತ್ತವೆ. ಸಣ್ಣ ಪ್ರಮಾಣದ ಕ್ವಾರೆ ಕೆಲಸವು ಸಹ ಒಂದು ರೀತಿಯಲ್ಲಿ ಕೃಷಿಯ ಮೇಲೆ ಪರಿಣಾಮ ಬೀರುತ್ತದೆ. ಕೃಷಿಕಾರ್ಮಿಕರು ಈ ಉದ್ಯಮದಲ್ಲಿ ತೊಡಗುವುದರಿಂದ ಕೃಷಿ ಚಟುವಟಿಕೆಗೆ ಆಳುಗಳ ಅಭಾವ ಕಂಡುಬರುತ್ತದೆ. ಕೃಷಿಯಲ್ಲಿ ವರ್ಷಪೂರ್ತಿ ಕೆಲಸವಿಲ್ಲದಿರುವುದರಿಂದ ಕಲ್ಲಿನ ಕ್ವಾರೆಯ ಕೆಲಸದಲ್ಲಿ ತೊಡಗಿದ್ದಾರೆ. ಅವರು ಕ್ವಾರೆಯಲ್ಲಿ ತೊಡಗಿರುವುದರಿಂದ ಅಲ್ಲಿಯೇ ಮುಂದುವರೆಯಲು ಇಚ್ಛಿಸುತ್ತಾರೆ. ಕಾರಣ ಈ ಕೆಲಸವನ್ನು ತ್ಯಜಿಸಿದರೆ ತಮಗೆ ಮತ್ತೆ ಕೆಲಸಕ್ಕೆ ಹೊಂದಿಕೊಳ್ಳಲು ಸಾಧ್ಯವಾಗುತ್ತದೆಯೋ ಇಲ್ಲವೋ ಎನ್ನುವುದು ಪ್ರಮುಖ ಕಾರಣವಾಗಿದೆ.

ಸುಣ್ಣದ ತಯಾರಿಕೆ

ಸುಣ್ಣದ ತಯಾರಿಕೆಯು ಹೊಸಪೇಟೆ ತಾಲೂಕಿನಲ್ಲಿ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿರುವುದು ಕಂಡುಬರುತ್ತದೆ. ಸುಣ್ಣದ ತಯಾರಿಕೆಯಿಂದ ಕೃಷಿಯ ಮತ್ತು ಪರಿಸರದ ಮೇಲೆ ಕೆಲವೊಂದು ಪರಿಣಾಮ ಬೀರುತ್ತದೆ. ಸುಣ್ಣದ ಶಿಲೆಗಳು ಭೂಮಿಯ ಮೇಲ್ಪದರಿನ ಒಳಭಾಗದಲ್ಲಿ ದೊರೆಯುತ್ತದೆ. ಆ ಸುಣ್ಣದ ಶಿಲೆಗಳನ್ನು ಹೊರತೆಗೆಯಲು ಭೂಮಿಯನ್ನು ಅಗೆಯಲಾಗುತ್ತದೆ. ಆಗ ಭೂಮಿಯ ಫಲವತ್ತತೆಯ ಮೇಲ್ಪದರು ನಾಶವಾಗಿ ಹೋಗುತ್ತದೆ. ಸುಣ್ಣದ ಶಿಲೆಯನ್ನು ಹೊರತೆಗೆಯುವುದಕ್ಕಾಗಿ ನಾವು ಫಲವತ್ತತೆಯ ಮಣ್ಣನ್ನು ಅಗೆಯಬೇಕಾಗುತ್ತದೆ. ಆದ್ದರಿಂದ ಸುಣ್ಣದ ತಯಾರಿಕೆಯು ಸಹ ಕೃಷಿಯ ಮೇಲೆ ಒಂದು ರೀತಿಯ ಪರಿಣಾಮ ಬೀರುತ್ತದೆ ಎಂದು ತಿಳಿದುಬರುತ್ತದೆ. ಸುಣ್ಣವನ್ನು ಸುಟ್ಟು ತಯಾರಿಸುವಾಗ ಅದರಿಂದ ಹೊರಡುವ ಹೊಗೆ ಮತ್ತು ಧೂಳು ಪರಿಸರವನ್ನು ನಾಶಮಾಡುತ್ತದೆ. ಪ್ರಮುಖವಾಗಿ ವಾಯುಮಾಲಿನ್ಯವಾಗುವುದು ತಿಳಿದುಬರುತ್ತದೆ.

ಮಣ್ಣಿನ ಇಟ್ಟಿಗೆ ತಯಾರಿಕೆ

ಮಣ್ಣಿನ ಇಟ್ಟಿಗೆ ತಯಾರಿಕೆಯು ಕೃಷಿಯ ಮೇಲೆ ಪ್ರಮುಖ ಪರಿಣಾಮ ಬೀರುತ್ತಿದೆ ಎಂದು ಹೇಳಬಹುದು. ಇಟ್ಟಿಗೆ ತಯಾರಿಕೆಗೆ ಜಿಗಿ ಮಣ್ಣು ಅತ್ಯುತ್ತಮವಾದುದಾಗಿದೆ. ಇಟ್ಟಿಗೆ ತಯಾರಿಕೆಗೆ ತರುವ

ಮಣ್ಣು ಕೃಷಿ ಭೂಮಿಯ ಮೇಲ್ಪದರಿನದು ಎಂದು ತಿಳಿಯುತ್ತದೆ. ಇಟ್ಟಿಗೆ ತಯಾರಿಕೆಯ ಸಲುವಾಗಿ ಫಲವತ್ತಾದ ಮಣ್ಣನ್ನು ಬಳಸಲಾಗುತ್ತದೆ. ಹೆಚ್ಚಿನ ಇಟ್ಟಿಗೆ ತಯಾರಿಕೆಗೆ ಎತ್ತರ ಪ್ರದೇಶದ ಭೂಮಿಯ ಮಣ್ಣನ್ನು ರೈತರು ಕೊಡುತ್ತಿರುವರಾದರು, ಅದು ಕೃಷಿಯೋಗ್ಯ ಮಣ್ಣು ಎನ್ನುವುದು ಮರೆಯುವಂತಿಲ್ಲ. ಫಲವತ್ತಾದ ಭೂಮಿಯ ಮೇಲ್ಪದರು ಇಟ್ಟಿಗೆಗೆ ಬಳಸುವುದರಿಂದ, ಆ ಭೂಮಿಯಲ್ಲಿ ಬೆಳೆಯುವ ಬೆಳೆಗಳು ಸರಿಯಾಗಿ ಬೆಳೆಯುವುದಿಲ್ಲ. ಇಳುವರಿ ಕಡಿಮೆಯಾಗುತ್ತದೆ. ಅಲ್ಲದೆ ಮಣ್ಣಿನ ಇಟ್ಟಿಗೆಯನ್ನು ಸುಡುವುದರಿಂದ ವಾಯುಮಾಲಿನ್ಯವಾಗುತ್ತದೆ.

ಸಿಮೆಂಟ್ ಇಟ್ಟಿಗೆ ತಯಾರಿಕೆ

ಸಿಮೆಂಟ್ ಇಟ್ಟಿಗೆ ತಯಾರಿಕೆಯು ಹೊಸಪೇಟೆ ತಾಲೂಕಿನ ಕೆಲವೊಂದು ಗ್ರಾಮಗಳಲ್ಲಿ ಕಂಡುಬರುತ್ತದೆ. ಸಿಮೆಂಟ್ ಇಟ್ಟಿಗೆ ತಯಾರಿಕೆಯಲ್ಲಿ ಕ್ವಾರೆ ಕೆಲಸದಲ್ಲಿ ದೊರೆಯುವ ಚಿಪ್ಸ್, ಸಿಮೆಂಟ್ ಮತ್ತು ಮರಳನ್ನು ಬಳಸಲಾಗುತ್ತದೆ. ಮರಳು ನೀರನ್ನು ಹಿಡಿದುಕೊಳ್ಳುವ ಗುಣವನ್ನು ಹೊಂದಿರುತ್ತದೆ. ಮರಳು ಹೀರಿಕೊಂಡ ನೀರು ಭೂಮಿಯ ಆಳಕ್ಕೆ ಹೋಗಿ ಅಂತರ್ಜಲಮಟ್ಟ ಹೆಚ್ಚುತ್ತದೆ. ಮರಳನ್ನು ಯಥೇಚ್ಛವಾಗಿ ಅಗೆದು ಖಾಲಿ ಮಾಡುವುದರಿಂದ ಅಂತರ್ಜಲದ ಮಟ್ಟ ಕುಸಿಯುತ್ತದೆ. ಸಿಮೆಂಟ್ ಇಟ್ಟಿಗೆ ತಯಾರಿಕೆಯು ಪ್ರತ್ಯಕ್ಷ ಇಲ್ಲವೇ ಪರೋಕ್ಷ ಪರಿಣಾಮವನ್ನು ಬೀರುತ್ತಿದೆ ಎಂದು ಹೇಳಬಹುದು.

೪.೨. ಕೃಷಿ ಸಮುದಾಯದ ಪರ್ಯಾಯ ಅವಲಂಬನೆ ಮತ್ತು ಪ್ರತಿಕ್ರಿಯೆಗಳು

ನನ್ನ ಅಧ್ಯಯನದ ವಸ್ತು ವಿಷಯ ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳು. ಕೃಷಿಕರು ಇಲ್ಲಿ ಕೇಂದ್ರಬಿಂದು. ಗಣಿಗಾರಿಕೆಯು ಕೃಷಿಕರ ಆರ್ಥಿಕತೆಯ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತಿದೆ ಎನ್ನುವುದಕ್ಕಾಗಿ ಗಣಿಗಾರಿಕೆಯ ಬಗೆಗೆ ಅಧ್ಯಯನ ಮಾಡಬೇಕಾಗುತ್ತದೆ. ಕೃಷಿ ಮತ್ತು ಗಣಿಗಾರಿಕೆ ಒಂದಕ್ಕೊಂದು ಪೂರಕವಾಗಿದೆ. ಕೃಷಿ ಚಟುವಟಿಕೆಗಳು ವರ್ಷಪೂರ್ತಿ ನಡೆಯುವುದಿಲ್ಲ. ತಮ್ಮ ಜೀವನವನ್ನು ನಿಭಾಯಿಸುವುದಕ್ಕಾಗಿ ಉಪಕಸುಬನ್ನು ಅವಲಂಬಿಸಬೇಕಾಗುತ್ತದೆ. ತಮ್ಮ ಹತ್ತಿರದ ಪ್ರದೇಶದಲ್ಲಿ ದೊರೆಯುವ ಕೆಲಸಕ್ಕೆ ಪ್ರಥಮ ಆದ್ಯತೆ ನೀಡುತ್ತಾರೆ. ಹೊಸಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ರೈತರಿಗೆ ಇದು ವರದಾನವೋ ಅಥವಾ ಶಾಪವೋ ಎಂದು ತಿಳಿಯದಂತಾಗಿದೆ. ಬಂಡವಾಳ ಹೂಡದೆ ಸಾವಿರಾರು ರೂಪಾಯಿ ಲಾಭಗಳಿಸುವ ಉದ್ಯಮವಾಗಿ ಕೆಲವು ರೈತರಿಗೆ ಗಣಿಗಾರಿಕೆಯು ಕಾಣಲ್ಪಡುತ್ತಿದೆ. ದಿನಪೂರ್ತಿ ಕೃಷಿ ಕೆಲಸಕ್ಕೆ ಹೋದರೆ ದೊರೆಯುವ ಕೂಲಿ ಹಣವು ಕೆಲವೇ ತಾಸುಗಳ ಗಣಿಗಾರಿಕೆಯಿಂದ ದೊರೆಯುತ್ತಿದೆ. ಕೃಷಿಯಲ್ಲಿ ಲಾಭ ದೊರೆಯುತ್ತದೆಯೋ ಅಥವಾ ನಷ್ಟ ದೊರೆಯುತ್ತದೆಯೋ ಆದರೆ ಗಣಿಗಾರಿಕೆಗೆ ಜಮೀನನ್ನು ನೀಡಿದರೆ ಕುಳಿತಲ್ಲಿಗೆ ಸಾವಿರಾರು ರೂ.ಗಳು ಬಂದು ಸೇರುತ್ತದೆ. ಹೀಗಾಗಿ ಕೃಷಿ ಮತ್ತು ಗಣಿಗಾರಿಕೆ ಹತ್ತಿರದ ಸಂಬಂಧವನ್ನು ಹೊಂದಿವೆ ಎಂದು ಹೇಳಬಹುದು. ಇಲ್ಲಿ ಕೃಷಿ ಅಥವಾ ಗಣಿಗಾರಿಕೆ ಎರಡರಲ್ಲಿ ಯಾವುದು

ಲಾಭದ ಕೆಲಸ ಯಾವುದು ನಷ್ಟದ ಕೆಲಸ ಎನ್ನುವುದು ಅವಶ್ಯಕತೆಯಿಲ್ಲ. ಆದರೆ ನನ್ನ ವಿಚಾರ ಮಾತ್ರ ಗಣಿಗಾರಿಕೆಯಿಂದ ಕೃಷಿಯ ಮೇಲೆ ಯಾವ ಯಾವ ಪರಿಣಾಮಗಳಾಗುತ್ತವೆ ಎನ್ನುವುದರ ಬಗೆಗೆ ದೃಷ್ಟಿ ಹರಿಸಲು ಪ್ರಯತ್ನಿಸಿದ್ದೇನೆ. ಕೃಷಿಯ ಮೇಲಾಗುತ್ತಿರುವ ಪರಿಣಾಮಗಳಿಗೆ ಮಾತ್ರ ಇಲ್ಲಿ ಮಹತ್ವ ಕೊಡಲಾಗಿದೆ. ಗಣಿಗಾರಿಕೆಯಲ್ಲಿ ದುಡಿಯುವ ಕಾರ್ಮಿಕರು ಮತ್ತು ವಲಸಿಗರು ಕೃಷಿ ಮೂಲದವರೇ ಎನ್ನುವ ಬಗೆಗೆ ಅಧ್ಯಯನ ಮಾಡಲಾಗಿದೆ.

ನಮ್ಮ ದೇಶದಲ್ಲಿ ಅತಿಹೆಚ್ಚು ಸಂಖ್ಯೆಯ ಜನರು ಕೃಷಿಯನ್ನವಲಂಬಿಸಿದ್ದಾರೆ. ಅಂದರೆ ನಮ್ಮದು ಕೃಷಿ ಪ್ರಧಾನವಾದ ದೇಶವಾಗಿದೆ. ನಮ್ಮ ದೇಶವು ಜನಸಂಖ್ಯೆಯಲ್ಲಿ ವಿಶ್ವದಲ್ಲಿ ೨ನೇ ಸ್ಥಾನವನ್ನು ಹೊಂದಿದೆ. ಏರುತ್ತಿರುವ ಜನಸಂಖ್ಯೆಗೆ ಭೂವಿಸ್ತೀರ್ಣ ವಿಸ್ತಾರವಾಗುವುದಿಲ್ಲ. ಇದ್ದುದರಲ್ಲಿ ಎಲ್ಲರೂ ಸೇರಿ ಬದುಕಬೇಕಾಗಿದೆ. ಶೇ.೭೦ ರಷ್ಟು ಜನ ಕೃಷಿಯನ್ನವಲಂಬಿಸಿದ್ದರೂ ಸಹ ನಮಗೆ ಆಹಾರ ಸಮಸ್ಯೆ ತಪ್ಪಿಲ್ಲ. ವಿದೇಶದಲ್ಲಿ ಕೆಲವೇ ಬೆರಳೆಣಿಕೆಯಷ್ಟು ಜನ ಕೃಷಿಯನ್ನವಲಂಬಿಸಿದ್ದರೂ ಅವರು ಬಳಸಿ ಉಳಿದಿದ್ದನ್ನು ಹೊರದೇಶಗಳಿಗೆ ರಫ್ತು ಮಾಡುತ್ತಾರೆ. ಅಂದರೆ ನಮ್ಮ ಕೃಷಿ ಎಷ್ಟು ಹಿಂದುಳಿದಿದೆ ಎಂದು ಅರ್ಥವಾಗುತ್ತದೆ. ಮುಖ್ಯವಾಗಿ ನಮ್ಮ ದೇಶದ ಕೃಷಿಯಲ್ಲಿ ತಾಂತ್ರಿಕತೆಯ ಕೊರತೆ ಇದೆ.

ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಕೇವಲ ನಿಸರ್ಗ ಸಂಪತ್ತು, ವಿದೇಶ ವಿನಿಮಯ ಗಳಿಕೆಯನ್ನು ಹೊಂದಿದ್ದರೆ ಮಾತ್ರ ಸಾಲುವುದಿಲ್ಲ. ಬದಲಿಗೆ ಕೃಷಿಯು ಸಹ ಉನ್ನತ ಮಟ್ಟದಲ್ಲಿರಬೇಕು. ಕೃಷಿಯು ಪೂರ್ಣಮಟ್ಟದ ಅಭಿವೃದ್ಧಿ ಹೊಂದದ ಹೊರತು ದೇಶದ ಅಭಿವೃದ್ಧಿ ಕನಸಿನ ಮಾತು. ಮಹಾತ್ಮ ಗಾಂಧೀಜಿಯವರ ಅಭಿಪ್ರಾಯದಂತೆ ಹಳ್ಳಿಗಳ ಉದ್ಧಾರವಾಗದ ಹೊರತು ದೇಶದ ಉದ್ಧಾರ ಸಾಧ್ಯವಿಲ್ಲ ಎನ್ನುವುದು ಅಕ್ಷರ ಸಹ ಸತ್ಯ. ಹಳ್ಳಿಗಳು ಎಂದರೆ ರೈತರು. ರೈತರು ತಮ್ಮ ಜೀವನ ಮಟ್ಟವನ್ನು ಉತ್ತಮಗೊಳಿಸಿಕೊಳ್ಳಬೇಕು. ಉತ್ತಮವಾದ ಬೆಳೆಯನ್ನು ಬೆಳೆದರೆ ಮಾತ್ರ ಅವರು ಬದುಕಬಹುದಾಗಿದೆ. ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯ ಜನರು ಬಡತನ ರೇಖೆಗಿಂತ ಕೆಳಗಡೆ ಇದ್ದಾರೆ.

ನಮ್ಮ ದೇಶದ ಕೃಷಿಯು ಹೆಚ್ಚಿನ ಪಾಲು ಮಳೆಯ ಮಾರುತಗಳನ್ನು ಅವಲಂಬಿಸಿದೆ. ರೈತರು ಹಲವಾರು ಸಂಕಷ್ಟಗಳನ್ನೆದುರಿಸಿ ಬೆಳೆ ಬೆಳೆಯಬೇಕಾಗಿದೆ. ಎಷ್ಟೆಲ್ಲಾ ಕಷ್ಟಪಟ್ಟು ಬೆಳೆ ಬೆಳೆದರೂ ಸಹ ಅವರ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ದೊರೆಯುತ್ತಿಲ್ಲ. ಒಂದು ಚೀಲ ಧಾನ್ಯ ಮಾರಿದರೆ ಒಂದು ಲೀಟರ್ ಕ್ರಿಮಿನಾಶಕ ಬರುವುದಿಲ್ಲ. ಅಂದರೆ ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳ ಬೆಲೆಗಳಿಗಿಂತ ರೈತನ ಉತ್ಪನ್ನದ ಬೆಲೆ ಕಡಿಮೆಯಿದೆ. ರೈತರ ಆತ್ಮಹತ್ಯೆ ಇಂದು ಸಾಮಾನ್ಯ ಸಂಗತಿಯಂತೆ ಕಂಡುಬರುತ್ತಿದೆ. ರೈತರಿಗೆ ಕೃಷಿ ಬಿಟ್ಟು ಬೇರೇನೂ ಗೊತ್ತಿಲ್ಲ. ಹೆಚ್ಚಿನ ಸಂಖ್ಯೆಯ ರೈತರು ಅನಕ್ಷರಸ್ಥ ರಾಗಿದ್ದಾರೆ. ರೈತರಲ್ಲಿ ಅಕ್ಷರಸ್ಥರ ಸಂಖ್ಯೆ ಕಡಿಮೆಯಿದೆ. ಇವರಲ್ಲಿ ಹೆಚ್ಚಿನವರು ಪ್ರಾಥಮಿಕ ಶಿಕ್ಷಣವನ್ನು ಪಡೆದಿರುವವರಾಗಿದ್ದಾರೆ. ಹಳ್ಳಿಯ ಜನರು ಕೃಷಿಯನ್ನವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಕೃಷಿಯ ಜೊತೆಗೆ ಉಪಕಸುಬಾಗಿ ಪಶುಪಾಲನೆ ಮತ್ತು ಕುರಿ ಸಾಕಣಿಕೆಯನ್ನು ಕೆಲವರು ಅವಲಂಬಿಸಿರುತ್ತಾರೆ. ಕೆಲವು ವರ್ಷಗಳಿಂದ ಬರಗಾಲ ತಲೆದೋರಿ ರೈತರು ಬೀದಿಪಾಲಾಗುವ ಸ್ಥಿತಿ ಬಂದೊದಗುತ್ತಿದೆ.

ಕೃಷಿ ಕಾರ್ಯಗಳು ವರ್ಷಪೂರ್ತಿ ಇರುವುದಿಲ್ಲ. ವರ್ಷದ ಕೆಲವೊಂದು ತಿಂಗಳುಗಳಲ್ಲಿ ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುತ್ತವೆ. ಆ ಸಮಯದಲ್ಲಿ ದುಡಿಮೆ ಇಲ್ಲದಂತಾಗುತ್ತವೆ. ಅಲ್ಲದೆ ರೈತರಿಗೆ ತಮ್ಮ ಬೆಳೆಗಳಿಂದ ಲಾಭ ಬರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಕೆಲವೊಂದು ಬಾರಿ ಲಾಭ ದೊರೆಯುತ್ತದೆ. ಕೆಲವೊಂದು ಸಲ ನಷ್ಟ ಉಂಟಾಗುತ್ತದೆ. ಹೀಗಾಗಿ ಅವರು ಜೀವನವನ್ನು ನಿಭಾಯಿಸಲು ಕಷ್ಟವಾಗುತ್ತದೆ. ಕೆಲವೊಂದು ಸಮಯ ರೈತರ ಸ್ಥಿತಿ ಚಿಂತಾಜನಕವಾಗುತ್ತದೆ.

ಗಣಿಗಾರಿಕೆಯು ಸಾವಿರಾರು ಜನರಿಗೆ ಉದ್ಯೋಗವನ್ನು ನೀಡಿದೆ. ಗಣಿಗಾರಿಕೆಯ ದುಡಿಮೆಯಿಂದ ಅವರು ನಷ್ಟ ಹೊಂದುತ್ತೇವೆ ಎನ್ನುವ ಭಯವಿರುವುದಿಲ್ಲ. ಕೆಲವೇ ತಾಸುಗಳಲ್ಲಿ ನೂರಾರು ರೂ.ಗಳನ್ನು ದುಡಿಯಬಹುದಾಗಿದೆ. ಕೆಲವೊಂದು ರೈತರು ತಮ್ಮ ಜಮೀನಿನಲ್ಲಿ ದೊರೆಯುವ ಕಬ್ಬಿಣದ ಕಲ್ಲುಗಳನ್ನು ಆರಿಸಿ ಮಾರಾಟ ಮಾಡುತ್ತಿದ್ದಾರೆ. ಕೆಲವರು ಕೃಷಿಯಲ್ಲಿ ಲಾಭವಿಲ್ಲವೆಂದು ಸ್ವತಃ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಈ ವೈಯಕ್ತಿಕ ಗಣಿಗಾರಿಕೆಯನ್ನು ತಮ್ಮ ಜಮೀನಿನಲ್ಲಿ ನಡೆಸುತ್ತಾರೆ. ಜೊತೆಗೆ ಬೇರೆಯವರ ಜಮೀನನ್ನು ಕೊಂಡುಕೊಂಡು ಗಣಿಗಾರಿಕೆ ನಡೆಸುತ್ತಿದ್ದಾರೆ. ಕೆಲವೊಂದು ರೈತರು ಇದ್ಯಾವುದರ ಗೊಡವೆ ನಮಗೆ ಬೇಡವೆಂದು ತಮ್ಮ ಜಮೀನನ್ನು ಕಬ್ಬಿಣದ ಅದಿರಿನ ಪುಡಿಯನ್ನು ಹಾಕಲು ವರ್ಷಕ್ಕೆ ಇಂತಿಷ್ಟು ಎಂದು ಗುತ್ತಿಗೆಯ ಆಧಾರದ ಮೇಲೆ ನೀಡಿದ್ದಾರೆ. ಮಳೆ, ಚಳಿ, ಗಾಳಿ, ಬಿಸಿಲು ಲೆಕ್ಕಿಸದೇ ಮೈ ಮುರಿದು ದುಡಿಯಬೇಕಾದ ರೈತ ಇಂದು ಕೃಷಿಯನ್ನು ತೊರೆಯಲು ಇಚ್ಛಿಸುತ್ತಿದ್ದಾನೆ. ಅಂದರೆ ಅವನ ಸ್ಥಿತಿ ಯಾವ ಮಟ್ಟಕ್ಕೆ ತಲುಪಿದೆಯೆಂದು ತಿಳಿಯುತ್ತದೆ.

ಗಣಿಗಾರಿಕೆಯಿಂದಾಗಿ ಜನರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಕೆಲವೊಂದು ರೈತರು ಕೇವಲ ಕೃಷಿಯನ್ನು ಮಾತ್ರ ಅವಲಂಬಿಸಿದ್ದಾರೆ. ಅಂತವರ ಸ್ಥಿತಿ ಮಾತ್ರ ಸ್ವಲ್ಪ ಆರ್ಥಿಕವಾಗಿ ಹಿಂದುಳಿಯುತ್ತದೆ ಎನ್ನಬಹುದು. ಅಂದರೆ ಅವರ ದುಡಿಮೆಯ ವರಮಾನ ಕಡಿಮೆಯಾಗುತ್ತಿದೆ. ಕೇವಲ ಕೃಷಿಯನ್ನು ನೆಚ್ಚಿಕೊಂಡು ಜೀವನ ಸಾಗಿಸುತ್ತಿರುವ ರೈತ ಸಮುದಾಯಗಳು ಸ್ವಲ್ಪ ಪ್ರಮಾಣದ ನಷ್ಟವನ್ನು ಅನುಭವಿಸುತ್ತಿದ್ದಾರೆ. ಗಣಿಗಾರಿಕೆಯ ಸುತ್ತಮುತ್ತಲಿನ ಜಮೀನುಗಳಿಗೆ ಧೂಳಿನ ಪರಿಹಾರವೆಂದು ವಾರ್ಷಿಕವಾಗಿ ಕೆಲವೊಂದಿಷ್ಟು ಹಣವನ್ನು ನೀಡುತ್ತಿದ್ದಾರೆ. ಆದರೆ ರೈತರು ಸಾವಿರಾರು ರೂ.ಗಳನ್ನು ಖರ್ಚುಮಾಡಿ ಬೆಳೆ ತೆಗೆಯಲು ಹೆಣಗಾಡುತ್ತಿರುವಾಗ ಗಣಿಗಾರಿಕೆಯವರು ಕೊಡುವ ಪರಿಹಾರದ ಹಣ ಯಾವ ಲೆಕ್ಕದ್ದು. ಹೀಗಾಗಿ ಕೃಷಿಗಿಂತ ಗಣಿಗಾರಿಕೆಯ ಕೆಲಸ ಲಾಭದಾಯಕವಾಗಿದೆ. ಕಬ್ಬಿಣದ ಅದಿರಿನ ಗಣಿಗಾರಿಕೆಯವರು ಸುತ್ತಲಿನ ಜಮೀನಿಗೆ ಪರಿಹಾರವಾಗಿ ೧,೯೫೦ ರೂ. ಹಣವನ್ನು ನೀಡುತ್ತಾರೆ. ಆದರೆ ಕಲ್ಲಿನ ಕ್ವಾರೆಯವರು ಯಾವುದೇ ಪರಿಹಾರವನ್ನು ನೀಡುತ್ತಿಲ್ಲ. ಇಂತಹ ವಿಷಮ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ.

ಗಣಿಗಾರಿಕೆ ಕೆಲಸದಲ್ಲಿ ನಿರತರಾದವರು ಅಥವಾ ಗಣಿಗಾರಿಕೆಯ ಕೆಲಸವನ್ನು ಅವಲಂಬಿಸಿದವರು ಗಣಿಗಾರಿಕೆ ನಡೆಯುತ್ತಿರುವುದರ ಬಗೆಗೆ ಒಲವು ತೋರಿಸುತ್ತಾರೆ. ಸುತ್ತಮುತ್ತಲಿನ ರೈತ ಸಮುದಾಯಗಳು ಮತ್ತು ಗಣಿಗಾರಿಕೆಯ ಕೆಲಸದಲ್ಲಿ ತೊಡಗದ ರೈತರು ಗಣಿಗಾರಿಕೆಯನ್ನು ವಿರೋಧಿಸುತ್ತಾರೆ. ಗಣಿಗಾರಿಕೆಯನ್ನು

[illegible]

[illegible]

[illegible]

[illegible]

[illegible]

ವಿರೋಧಿಸಲು ಪ್ರಮುಖ ಕಾರಣಗಳೆಂದರೆ ಅಂತರ್ಜಲ ಕುಸಿತ, ಧೂಳಿನಿಂದ ಬೆಳೆಗಳ ಬೆಳವಣಿಗೆಯಲ್ಲಿ ಕುಂಠಿತ ಹೀಗೆ ಹಲವಾರು ರೀತಿಯ ಕಾರಣಗಳಿವೆ. ಕೆಲವು ರೈತರು ಗಣಿಗಾರಿಕೆಯನ್ನು ಪ್ರೋತ್ಸಾಹಿಸುವುದಕ್ಕೆ ಪ್ರಮುಖ ಕಾರಣವೆಂದರೆ ನಿರುದ್ಯೋಗ ಸಮಸ್ಯೆ ನಿವಾರಣೆ, ಬಂಡವಾಳ ಹೂಡದೆ ಹೆಚ್ಚಿನ ಶ್ರಮಪಡದೆ ಹೆಚ್ಚಿನ ಕೂಲಿಯನ್ನು ಪಡೆಯುವುದು. ಗಣಿಗಾರಿಕೆಯ ಕೂಲಿ ಕೆಲಸದಿಂದ ಬಂದ ಹಣದಿಂದಲೇ ಸಂಸಾರವನ್ನು ನಡೆಸಬಹುದಾಗಿದೆ. ಕೃಷಿಯಲ್ಲಿ ನಷ್ಟದ ಭಯವಿರುತ್ತದೆ. ಆದರೆ ಗಣಿಗಾರಿಕೆಯಲ್ಲಿ ಅದಕ್ಕೆ ಅವಕಾಶವಿಲ್ಲ. ತಮ್ಮ ಜಮೀನಿನ ಮೇಲ್ಭಾಗದಲ್ಲಿ ದೊರೆಯುವ ಕಲ್ಲುಗಳನ್ನು ಆಯ್ದು ಮಾರಾಟ ಮಾಡಿದರೆ ಸಾವಿರಾರು ರೂ.ಗಳು ಬೇರೆಯವರಿಂದ ಪಡೆಯಬಹುದಾಗಿದೆ. ಸ್ವತಃ ತಾವೇ ಗಣಿಗಾರಿಕೆಯನ್ನು ಪ್ರಾರಂಭಿಸಿದರೆ ಹೆಚ್ಚಿನ ಲಾಭವನ್ನು ಪಡೆಯಬಹುದು. ಹೀಗೆ ಹಲವಾರು ರೀತಿಯಿಂದ ಗಣಿಗಾರಿಕೆಗೆ ಬೆಂಬಲ ನೀಡುತ್ತಿದ್ದಾರೆ.

೪.೩ ಬದಲಾಗುತ್ತಿರುವ ಆರ್ಥಿಕ ಚಟುವಟಿಕೆಗಳು ಮತ್ತು ಕೃಷಿಕ ಸಮುದಾಯಗಳು

ಇಂದಿನ ದಿನದಲ್ಲಿ ಸಮುದಾಯಗಳ ಆರ್ಥಿಕ ಚಟುವಟಿಕೆಗಳು ಬದಲಾಗುತ್ತಿರುವುದು ಕಂಡುಬರುತ್ತದೆ. ಕೃಷಿಕರು ಕೃಷಿಯನ್ನು ನಂಬಿಕೊಂಡು ಜೀವಿಸುವುದರ ಬದಲು ಬೇರೆ ಬೇರೆ ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸಿವೆ. ಹೊಸಪೇಟೆ ತಾಲೂಕಿನ ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳ ರೈತರು ಗಣಿಗಾರಿಕೆಯನ್ನವಲಂಬಿಸುತ್ತಿದ್ದಾರೆ. ಕೃಷಿಯ ಬದಲು ಗಣಿಗಾರಿಕೆಯು ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ರೂಪುಗೊಳ್ಳುತ್ತಿದೆ. ಕೃಷಿ ಭೂಮಿಯು ಗಣಿಗಾರಿಕೆ ಚಟುವಟಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. "ನಮ್ಮ ರಾಜ್ಯದಲ್ಲಿ ಸುಮಾರು ಶೇ.೫೬ ಭಾಗ ಭೂಪ್ರದೇಶವನ್ನು ವ್ಯವಸಾಯಕ್ಕೆ ಬಳಸಲಾಗುತ್ತಿದ್ದು, ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ವ್ಯವಸಾಯಕ್ಕೆ ಬಳಸುತ್ತಿರುವ ಪ್ರದೇಶಗಳಲ್ಲಿ ಒಂದಾಗಿದೆ. ಶೇ.೮೦ರಿಂದ ೮೫ ರಷ್ಟು ಭೂ ಪ್ರದೇಶ ಮಾನವ ಆಕ್ರಮಿತ ಪ್ರದೇಶವಾಗಿದ್ದು, ಉಳಿದ ಶೇ.೧೫ ರಿಂದ ೨೦ ರಷ್ಟು ಭಾಗ ಮಾತ್ರ ಅರಣ್ಯ ಪ್ರದೇಶವಾಗಿರುತ್ತದೆ."[೧೧]

"ಒಂದು ಅಂದಾಜಿನ ಪ್ರಕಾರ ಏರುತ್ತಿರುವ ಜನಸಂಖ್ಯೆಗೆ ತಲವಾರು ಭೂ ಲಭ್ಯತೆ ಗಣನೀಯ ಪ್ರಮಾಣದಲ್ಲಿ ಕುಸಿಯುತ್ತಿದೆ. ಅದನ್ನು ಈ ಮುಂದಿನ ಕೋಷ್ಟಕದಲ್ಲಿ ಕಾಣಬಹುದು.

ತಲವಾರು ಭೂ ಲಭ್ಯತೆ

ಇಸವಿ	೧೯೯೧	೨೦೦೦	೨೦೦೫	೨೦೧೫	೨೦೨೫
ಭೂ ಲಭ್ಯತೆಯ ಪ್ರಮಾಣ ಹೆಕ್ಟೇರ್‌ಗಳಲ್ಲಿ	೦.೨೩	೦.೧೯	೦.೧೭	೦.೧೪	೦.೧೧"[೧೨]

ಪ್ರಪಂಚದಲ್ಲಿ ಇಂದು ೬ ಬಿಲಿಯನ್‌ಗೂ ಅಧಿಕ ಜನಸಂಖ್ಯೆಯಿದೆ. ಪ್ರತಿಯೊಬ್ಬರಿಗೂ ಹೊಟ್ಟೆ ತುಂಬುವಷ್ಟು ಆಹಾರ ಬೇಕು ಎಂದರೆ ತಲೆಗೆ ಅರ್ಧ ಎಕರೆ ಭೂಮಿ ಬೇಕು. ಆದರೆ ಇಂದು ಪ್ರಪಂಚದ ಜನಸಂಖ್ಯೆಯ ತಲವಾರು ಲೆಕ್ಕ ಹಾಕಿದಾಗ ಕಾಲು ಎಕರೆ ದೊರೆಯುವುದು ಕಷ್ಟವಾಗಿದೆ. ಇಡೀ ವಿಶ್ವದಲ್ಲಿಯೇ ಉನ್ನತ ದರ್ಜೆಯ ಅದಿರನ್ನು ಹೊಂದಿರುವ ಪ್ರದೇಶಗಳಲ್ಲಿ ಬಳ್ಳಾರಿ ಜಿಲ್ಲೆಯು ಒಂದು. ಹೊಸಪೇಟೆ ಮತ್ತು ಸಂಡೂರಿನಲ್ಲಿ ಗಣಿಗಾರಿಕೆ ನಿರಂತರವಾಗಿ ನಡೆದಿದೆ. ಗಣಿಗಾರಿಕೆಯಿಂದ ಕಾಡು ನಾಶವಾಗುತ್ತಿದೆ. ಜೊತೆಗೆ ಕೃಷಿ ಯೋಗ್ಯವಾದ ಭೂಮಿಯನ್ನು ಸಹ ಗಣಿಗಾರಿಕೆಯಲ್ಲಿ ತೊಡಗಿಸಲಾಗಿದೆ. ತಲವಾರು ಭೂಲಭ್ಯತೆಯ ಪ್ರಮಾಣ ಕಡಿಮೆಯಿದೆ. ಇದರಿಂದಾಗಿ ಇನ್ನಷ್ಟು ಪ್ರಮಾಣ ಕಡಿಮೆಯಾಗುತ್ತಿದೆ. ಗಣಿಗಾರಿಕೆಯಿಂದಾಗಿ ಕೃಷಿ ಭೂಮಿಯನ್ನು ಹಣದಾಸೆಗಾಗಿ ಗಣಿಗಾರಿಕೆಗೆ ನೀಡುತ್ತಿದ್ದಾರೆ. ಇದರಿಂದಾಗಿ ಕೃಷಿ ಚಟುವಟಿಕೆ ಕುಂಠಿತವಾಗುತ್ತದೆ. ಗಣಿಗಾರಿಕೆ ನಡೆಸುತ್ತಿರುವುದು ತಪ್ಪು ಎನ್ನುವುದು ತನ್ನ ಅಭಿಪ್ರಾಯವಿರುವುದಿಲ್ಲ. ವಿದೇಶಿ ವಿನಿಮಯ ಗಳಿಸುವುದಷ್ಟೆ ನಮ್ಮ ಕೆಲಸ ಎನ್ನುವ ರೀತಿಯಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಮುಗಿದು ಹೋಗುವ ಸಂಪನ್ಮೂಲಕ್ಕಾಗಿ ನೈಸರ್ಗಿಕ ಸಂಪನ್ಮೂಲ ಮತ್ತು ಕೃಷಿಯನ್ನು ಹಾಳು ಮಾಡುವುದು ಸರಿಯಲ್ಲ.

ಹೊಸಪೇಟೆ ತಾಲ್ಲೂಕಿನಲ್ಲಿ ಕೃಷಿ ಕುಂಠಿತಗೊಂಡಿದೆ. ಇದಕ್ಕೆ ಪ್ರಮುಖ ಕಾರಣ ಗಣಿಗಾರಿಕೆ. ಗಣಿಗಾರಿಕೆ ನಡೆಸುವುದರಿಂದ ಹಣ ದೊರೆಯುತ್ತದೆ. ಆದರೆ ಹಣವನ್ನು ತಿಂದು ಬದುಕಲು ಸಾಧ್ಯವೇ? ಮನುಷ್ಯ ಎಷ್ಟೇ ಹಣ ಗಳಿಸಿದರೂ ಹೊಟ್ಟೆಗೆ ತಿನ್ನಬೇಕಾಗಿರುವುದು ಅನ್ನವನ್ನು ಮಾತ್ರ ಹಣವನ್ನಲ್ಲ. ಗಣಿಗಾರಿಕೆ ನಡೆಸುವುದು ಅನಿವಾರ್ಯವಾದರೂ ಸಹ ಕೃಷಿಯ ಮೇಲಾಗುವ ಪರಿಣಾಮವನ್ನು ನಿವಾರಿಸಬೇಕು. ರೈತರ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರಬೇಕು. ಗಣಿಗಾರಿಕೆಯಿಂದ ರೈತರಿಗೆ ಹಲವಾರು ತೊಂದರೆಗಳಾಗುತ್ತಿದ್ದರೂ ಸಹ ಸರಕಾರದಿಂದ ಅವರಿಗೆ ಯಾವುದೇ ಪರಿಹಾರ ದೊರೆಯುತ್ತಿಲ್ಲ. ರೈತರು ಬೆಳೆಯನ್ನು ಬೆಳೆಯಲು ಮಾಡಿದ ಖರ್ಚನ್ನು ಸರಿದೂಗಿಸಲಾಗುತ್ತಿಲ್ಲ. ಸಾಲಕ್ಕೆ ಹೆದರುವಂತಾಗಿದೆ. ಕೃಷಿಯಿಂದ ಸರಿಯಾದ ಲಾಭ ದೊರೆಯುತ್ತಿಲ್ಲ. ಗಣಿಗಾರಿಕೆಯಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ಅಲ್ಲದೆ ಕ್ವಾರೆ ಕೆಲಸದ ಗಣಿಗಾರಿಕೆಯು ಸಹ ರೈತರನ್ನು ಸಂಕಷ್ಟಕ್ಕೀಡು ಮಾಡುತ್ತಿದೆ. ಕ್ವಾರೆ ಕೆಲಸವು ಸಹ ಹೊಸಪೇಟೆ ತಾಲ್ಲೂಕಿನಲ್ಲಿ ವ್ಯಾಪಕವಾಗಿ ನಡೆದಿದೆ. ಇಲ್ಲಿನ ಜನರಿಗೆ ನಿರುದ್ಯೋಗದ ಭಯ ಕಡಿಮೆ. ರೈತರು ಹೆಚ್ಚಾಗಿ ಕೃಷಿಯನ್ನು ಮರೆತು ಗಣಿ ಕೆಲಸದಲ್ಲಿ ತೊಡಗುತ್ತಿದ್ದಾರೆ. ರೈತರ ಆರ್ಥಿಕ ಚಟುವಟಿಕೆಗಳು ಗಣನೀಯ ಪ್ರಮಾಣದಲ್ಲಿ ಬದಲಾಗುತ್ತಿವೆ.

ರೈತರ ಮುಖ್ಯ ಕಸುಬು ವ್ಯವಸಾಯದಲ್ಲಿ ತೊಡಗುವುದು. ವ್ಯವಸಾಯದಲ್ಲಿ ತೊಡಗಿ ಭೂ ದೇವಿಯ ಮೇಲೆ ಹುತ್ತು ಬಿತ್ತು ಬೆಳೆಯನ್ನು ತೆಗೆಯುತ್ತಾರೆ. ಆದರೆ ಇಂದು ಅವರು ಅಷ್ಟೊಂದು ಕಷ್ಟ ಪಟ್ಟರು ಲಾಭ ದೊರೆಯುವುದಿಲ್ಲವೆಂದು ಗಣಿಗಾರಿಕೆ ಮತ್ತು ಕ್ವಾರೆ ಕೆಲಸಕ್ಕೆ ಹೋಗುತ್ತಿದ್ದಾರೆ. ಕೆಲವೊಬ್ಬರು ತಮ್ಮ ಜಮೀನಿನಲ್ಲಿ ಕಬ್ಬಿಣದ ಕಲ್ಲುಗಳನ್ನು ಆರಿಸಿಕೊಳ್ಳಲು ಬೇರೆಯವರಿಗೆ ಭೂಮಿಯನ್ನು ನೀಡುತ್ತಿದ್ದಾರೆ. ಇಲ್ಲವೇ ತಾವೇ ಆ ಕಲ್ಲುಗಳನ್ನು ಆರಿಸಿ ಮಾರಾಟ ಮಾಡುತ್ತಿದ್ದಾರೆ. ಕೆಲವೊಂದು ರೈತರು ತಮ್ಮ ಜಮೀನಿನಲ್ಲಿ ಕಬ್ಬಿಣದ ಅದಿರು ಹೇರಳವಾಗಿ ದೊರೆಯುತ್ತಿದ್ದರೆ ವರ್ಷಕ್ಕೆ ಇಂತಿಷ್ಟು ಎನ್ನುವ ರೀತಿಯಲ್ಲಿ

ಗುತ್ತಿಗೆಯನ್ನು ನೀಡುತ್ತಿದ್ದಾರೆ. ಕೆಲವೊಬ್ಬರು ತಾವೇ ಸ್ವತಃ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ನಷ್ಟದ ಭಯದಿಂದ ತಮ್ಮ ಭೂಮಿಯನ್ನು ಹಣಕ್ಕಾಗಿ ಅದಿರಿನ ಕಣಜವನ್ನಾಗಿ ನಿರ್ಮಾಣ ಮಾಡುತ್ತಿದ್ದಾರೆ. ಈ ವ್ಯವಸ್ಥೆಯಿಂದ ನಷ್ಟದ ಭಯ ಇಲ್ಲದಂತಾಗುತ್ತದೆ. ಅಲ್ಲದೆ ಶ್ರಮಪಡದೆ ಕುಳಿತಲ್ಲಿಯೇ ಪ್ರತಿ ಎಕರೆಗೆ ವಾರ್ಷಿಕವಾಗಿ ಸಾವಿರಾರು ರೂ.ಗಳನ್ನು ಪಡೆಯಬಹುದಾಗಿದೆ.

ಕೃಷಿಯಲ್ಲಿ ಕೂಲಿ ಕಾರ್ಮಿಕರಿಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ದುಡಿದರೆ ೨೦ ರಿಂದ ೩೦ ರೂ.ಗಳು ಸಂಭಾವನೆ ದೊರೆಯುತ್ತದೆ. ಆದರೆ ಅದೇ ಕೆಲಸಗಾರ ಗಣಿಗಾರಿಕೆಯ ಕೆಲಸದಲ್ಲಿ ತೊಡಗಿದರೆ ಕನಿಷ್ಠ ೧೦೦ ರೂ.ಗಳನ್ನು ಕೆಲವೇ ತಾಸುಗಳ ಅವಧಿಯಲ್ಲಿ ದುಡಿಯಬಹುದಾಗಿದೆ. ಹೀಗಾಗಿ ಕೂಲಿ ಆಳುಗಳು ಕೃಷಿಯನ್ನು ತೊರೆದು ಗಣಿಗಾರಿಕೆಯ ಕೆಲಸಕ್ಕೆ ಸೇರುತ್ತಿದ್ದಾರೆ.

ಒಂದು ಪುಟ್ಟಿ ಧಾನ್ಯಕ್ಕೆ ಇಲ್ಲದ ಬೆಲೆ ಒಂದು ಪುಟ್ಟಿ ಕಬ್ಬಿಣದ ಅದಿರಿನ ಕಲ್ಲಿಗೆ ಬೆಲೆಯಿದೆ. ಕೆಲವೊಂದು ಕಡೆ ಕಬ್ಬಿಣದ ಪುಡಿಗೆ ೧೬ ರಿಂದ ೨೫ ರೂ. ದೊರೆಯುತ್ತದೆ. ಹೀಗೆ ೪೦ ಪುಟ್ಟಿ ಕಬ್ಬಿಣದ ಕಲ್ಲನ್ನು ಆರಿಸಿದರೆ ಒಂದು ಟನ್ ಆಗುತ್ತದೆ. ಆ ಒಂದು ಟನ್ ಕಬ್ಬಿಣಕ್ಕೆ ೨,೦೦೦ ರೂ.ಗಳು ದೊರೆಯುತ್ತದೆ. ಅಲ್ಲದೆ ಬೇರೆಯವರ ಕಬ್ಬಿಣದ ಅದಿರಿನ ಕಲ್ಲನ್ನು ಪುಡಿ ಮಾಡಿ ಕೊಡಲು ಒಂದು ಪುಟ್ಟಿಗೆ ೬ ರೂ.ಗಳು ದೊರೆಯುತ್ತದೆ. ಕೆಲವರು ತಮ್ಮ ಮನೆಯ ಮುಂದೆ ಗುಡಿ ಕೈಗಾರಿಕೆಯಂತೆ ಇಂತಹ ಕಾರ್ಯಗಳಲ್ಲಿ ತೊಡಗಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಈ ರೀತಿಯ ಉತ್ತಮ ಆರ್ಥಿಕ ವ್ಯವಸ್ಥೆ ಇರಬೇಕಾದರೆ ಯಾರು ತಾನೇ ಕೃಷಿ ಮಾಡಲು ಇಚ್ಛಿಸುತ್ತಾರೆ. ಬಹಳಷ್ಟು ಕಡೆ ಪ್ರತಿ ಮನೆಯ ಮುಂದೆ ಕಬ್ಬಿಣದ ಅದಿರನ್ನು ಪುಡಿ ಮಾಡುತ್ತಿರುವುದು ಕಂಡುಬರುತ್ತದೆ. ಸಣ್ಣ ಸಣ್ಣ ಮಕ್ಕಳು ಸಹ ಈ ಕೆಲಸದಲ್ಲಿ ತೊಡಗಿರುವುದು ಕಂಡುಬರುತ್ತದೆ.

ರೈತರು ತಮ್ಮ ಕೃಷಿಯ ಜೊತೆಗೆ ಉಪಕಸುಬಾಗಿ ಪಶುಪಾಲನೆಯಲ್ಲಿ ತೊಡಗಿರುತ್ತಾರೆ. ಆದರೆ ನೀರು ಮತ್ತು ಮೇವಿನ ಅಭಾವದಿಂದಾಗಿ ಪಶುಪಾಲನೆಯನ್ನು ಕೈ ಬಿಡಲಾಗುತ್ತಿದೆ. ಪಶುಪಾಲನೆಯೂ ಸಹ ರೈತರ ಅವಿಭಾಜ್ಯ ಅಂಗವಾಗಿದೆ. ಆದರೆ ಇಂದು ಅವರಿಗೆ ಗಣಿಗಾರಿಕೆ ವರದಾನವೋ ಅಥವಾ ಶಾಪವೋ ಎಂಬುದು ತಿಳಿಯದಂತಾಗಿದೆ.

ಗಣಿಗಾರಿಕೆ ನಡೆಯುತ್ತಿರುವ ಹೆಚ್ಚಿನ ಪ್ರದೇಶವು ಒಣ ಭೂಮಿಯನ್ನು ಹೊಂದಿರುವ ಪ್ರದೇಶವಾಗಿದೆ. ಹೀಗಾಗಿ ಅವರು ಮಳೆಯನ್ನು ಮತ್ತು ಬೋರವೆಲ್‌ನ್ನು ಆಶ್ರಯಿಸುವುದು ಅನಿವಾರ್ಯ. ಮಳೆ ಬಂದರೆ ಬಂತು ಬರದಿದ್ದರೆ ಇಲ್ಲ ಎನ್ನುವ ಸ್ಥಿತಿ ಕಂಡು ಬರುತ್ತಿದೆ. ಸ್ಫೋಟದಿಂದಾಗಿ ಅಂತರ್ಜಲ ಕುಸಿಯುತ್ತಿದೆ. ಬೋರವೆಲ್‌ಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ರೈತರು ಸಹ ಗಣಿಗಾರಿಕೆಯನ್ನು ಅವಲಂಬಿಸಬೇಕಾಗಿದೆ. ಹೆಚ್ಚಿನ ಸಂಖ್ಯೆಯ ರೈತ ಕುಟುಂಬದಲ್ಲಿ ಲಾರಿ ಚಾಲಕರಾಗಿ, ಕಾರ್ಮಿಕರಾಗಿ ಹೀಗೆ ಮುಂತಾದ ಗಣಿಗಾರಿಕೆಯ ಕೆಲಸಗಳಲ್ಲಿ ತೊಡಗಿದ್ದಾರೆ. ಇದರಲ್ಲಿ ಉತ್ತಮವಾದ ಆದಾಯ ಇರುವುದರಿಂದ ಇದೇ ಕೆಲಸದಲ್ಲಿ ಮುಂದುವರೆಯುವ ಇಚ್ಛೆಯನ್ನು ಹೊಂದಿದ್ದಾರೆ.

ಹೊಸದಾಗಿ ಗಣಿಗಾರಿಕೆಯ ಕಾರ್ಖಾನೆಗಳು ಸ್ಥಾಪನೆಯಾಗುತ್ತಿವೆ. ಇವೆಲ್ಲಾ ಯಾರ ಹಿತಕ್ಕಾಗಿ? ರೈತರೆಲ್ಲರೂ ಗಣಿಗಾರಿಕೆಯ ಕೆಲಸವನ್ನು ಅವಲಂಬಿಸಿಲ್ಲ. ಕೆಲವು ರೈತರು ಕೇವಲ ಕೃಷಿಯನ್ನು ನಂಬಿಕೊಂಡು ಜೀವಿಸುತ್ತಿದ್ದಾರೆ. ಇಷ್ಟೆಲ್ಲಾ ಕಷ್ಟವಾದರೆ ಅವರು ಬದುಕುವುದಾದರು ಹೇಗೆ. ಹೀಗಾಗಿ ರೈತರಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಬೇಕೆಂದರೆ ಈ ಗಣಿಗಾರಿಕೆಯನ್ನು ನಿಲ್ಲಿಸುವುದೇ ಉತ್ತಮ. ಗಣಿಗಾರಿಕೆಯಿಂದ ವಿದೇಶಿ ವಿನಿಮಯವನ್ನು ಪ್ರತ್ಯಕ್ಷವಾಗಿ ಪಡೆಯುತ್ತಿರುವುದನ್ನು ಪರೋಕ್ಷವಾಗಿ ಕಳೆದುಕೊಳ್ಳುತ್ತಿದ್ದೇವೆ.

ಕೃಷಿಕ ಸಮುದಾಯಗಳೆಂದರೆ ಕೆಳವರ್ಗದ ಜನತೆ ಇವರಿಗೆ ಕೃಷಿಯನ್ನು ಬಿಟ್ಟು ಬೇರೇನು ಗೊತ್ತಿಲ್ಲ. ಗೊತ್ತಿದ್ದರೂ ಆರ್ಥಿಕವಾಗಿ ಪ್ರಬಲರಿಲ್ಲ. ಕೃಷಿಯಲ್ಲಿ ನಷ್ಟವಾದರೆ, ವ್ಯಾಪಾರ ವಹಿವಾಟನಲ್ಲಿ ಗಳಿಸುತ್ತೇನೆ ಎನ್ನುವ ಸ್ಥಿತಿ ಇಲ್ಲ. ಕೆಲವರು ಅಲ್ಪ ಸ್ವಲ್ಪ ಜ್ಞಾನವಿದ್ದವರು ಗಣಿಗಾರಿಕೆಯಲ್ಲಿ ಮತ್ತು ಇಟ್ಟಿಗೆ ತಯಾರಿಕೆ ಯಲ್ಲಿ ತೊಡಗಿದ್ದಾರೆ.

ಟಿಪ್ಪಣಿಗಳು

೧. ಭಾರತ ಪರಿಸರ ದ್ವಿತೀಯ ಸಮೀಕ್ಷೆ, ಶಿವರಾಮ ಕಾರಂತ, ಪುಟ-೩೧

೨. ಪ್ರಜಾವಾಣಿ ದಿನಪತ್ರಿಕೆ, ಕೃಷಿ ಪುರವಣಿ, ೧೨ನೇ ಅಕ್ಟೋಬರ್, ೨೦೦೫, ಪು.೪

೩. ಪರಿಸರ ಪ್ರಜ್ಞೆ, ಡಾ.ವ್ಹಿ.ಸಿ.ಚವಡಿ, ಪುಟ-೧೨

೪. ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಟಿ.ಆರ್.ಚಂದ್ರಶೇಖರ್, ಪುಟ-೧೮

೫. ಭಾರತ ಪರಿಸರ ದ್ವಿತೀಯ ಸಮೀಕ್ಷೆ, ಶಿವರಾಮ ಕಾರಂತ, ಪುಟ-೫೭

೬. ಕರ್ನಾಟಕದ ಪರಿಸರ, ಕೆ.ಜೆ. ವಾಸುಕಿ, ಪುಟ-೮೯.

೭. ಪರಿಸರ ಚಳುವಳಿಗಳು, ಕೆ.ಮೋಹನ್‌ಕೃಷ್ಣ ರೈ, ಪುಟ-೩೦

೮. ಪರಿಸರ ಪ್ರಜ್ಞೆ, ಡಾ.ವ್ಹಿ.ಸಿ.ಚವಡಿ, ಪುಟ-೪೧

೯. ಭಾರತ ಪರಿಸರ ದ್ವಿತೀಯ ಸಮೀಕ್ಷೆ, ಶಿವರಾಮ ಕಾರಂತ, ಪುಟ-೬

೧೦. ಪರಿಸರ ಪ್ರಜ್ಞೆ, ಡಾ.ವ್ಹಿ.ಸಿ.ಚವಡಿ, ಪುಟ-೫೦

೧೧. ಕರ್ನಾಟಕದ ಪರಿಸರ, ಕೆ.ಜೆ.ವಾಸುಕಿ ಪುಟ-೧

೧೨. ಕೃಷಿ ಇಲಾಖೆ ಮಾಹಿತಿ, ೨೦೦೪

ಅಧ್ಯಾಯ ೫

೫.೧. ಗಣಿಗಾರಿಕೆ ಮತ್ತು ಪರಿಸರ

೫.೨. ಗಣಿಗಾರಿಕೆ: ರೈತರ ಪರ ಮತ್ತು ವಿರೋಧದ ನಿಲುವುಗಳ ವಿಶ್ಲೇಷಣೆ

೫.೩. ಗಣಿಗಾರಿಕೆಯ ಪ್ರದೇಶದ ವಲಸಿಗರ ಮತ್ತು ಗಣಿಕಾರ್ಮಿಕರ ಸ್ಥಿತಿಗತಿಗಳು

ಪೀಠಿಕೆ

ಒಂದು ಪ್ರದೇಶವು ಅಭಿವೃದ್ಧಿ ಹೊಂದಬೇಕಾಗರೆ ಹತ್ತು ಹಲವಾರು ಅಂಶಗಳು ಕಾರಣವಾಗುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕೃಷಿ, ಖನಿಜ ಸಂಪತ್ತು, ನೀರಾವರಿ, ಅರಣ್ಯ ಹೀಗೆ ಹತ್ತಾರು ಅಂಶಗಳು ಪ್ರಮುಖವಾಗಿರುತ್ತವೆ. ಕೃಷಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಗಣಿಯನ್ನು ತ್ಯಜಿಸುವುದು, ಗಣಿಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಕೃಷಿಯನ್ನು ಹಿಂದುಳಿಯುವಂತೆ ಮಾಡುವುದು ಸರಿಯಲ್ಲ. ಪರಿಸರ ಉತ್ತಮವಾಗಿರಬೇಕಾದರೆ ಸುರಕ್ಷಿತ ಕ್ರಮಗಳನ್ನು ಅನುಸರಿಸಬೇಕು. ಗಣಿಗಾರಿಕೆ ಮತ್ತು ಪರಿಸರಕ್ಕೆ ಅವಿನಾಭಾವ ಸಂಬಂಧವಿದೆ. ಗಣಿಗಾರಿಕೆ ಪರಿಸರದ ಒಂದು ಭಾಗ ಮಾತ್ರ. ಆದರೆ ಗಣಿಗಾರಿಕೆಗಾಗಿ ಸಮೃದ್ಧವಾದ ಅರಣ್ಯವನ್ನು ನಾಶ ಮಾಡಿ, ವಾಯುಮಾಲಿನ್ಯ, ಜಲಮಾಲಿನ್ಯ ಹೀಗೆ ಹಲವಾರು ರೀತಿಯಲ್ಲಿ ಪರಿಸರವನ್ನು ಹಾಳು ಮಾಡುತ್ತಿದ್ದೇವೆ. ಒಂದು ಸಲ ನಾವು ಪರಿಸರವನ್ನು ನಾಶ ಮಾಡಿದರೆ ಅದನ್ನು ಪುನಃ ಮೊದಲಿನ ರೂಪಕ್ಕೆ ತರಲು ಆಗುವುದಿಲ್ಲ. ಪರಿಸರ ತಜ್ಞರು ಗಣಿಗಾರಿಕೆಯ ವಿರುದ್ಧ ಪ್ರತಿಭಟಿಸುತ್ತಿರುವುದನ್ನು ನಾವು ಕಾಣುತ್ತೇವೆ. ಗಣಿಗಾರಿಕೆಯಲ್ಲಿ ದುಡಿಯುವುದಕ್ಕಾಗಿ ಬರುವ ವಲಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ.

ಈ ಅಧ್ಯಾಯದಲ್ಲಿ ಗಣಿಗಾರಿಕೆ ಮತ್ತು ಪರಿಸರ, ಗಣಿಗಾರಿಕೆಯ ಪರ ವಿರೋಧದ ನಿಲುವುಗಳ ವಿಶ್ಲೇಷಣೆ ಮತ್ತು ಗಣಿಗಾರಿಕೆ ಪ್ರದೇಶದ ವಲಸಿಗರ ಮತ್ತು ಗಣಿಕಾರ್ಮಿಕರ ಸ್ಥಿತಿಗತಿಗಳ ಕುರಿತು ಚರ್ಚಿಸಲಾಗಿದೆ. ಗಣಿಗಾರಿಕೆಯ ವಿರುದ್ಧ ತುಂಗಾ ಮೂಲ ಉಳಿಸಿ ಹೋರಾಟ ಒಕ್ಕೂಟವು ಪ್ರತಿಭಟಿಸುತ್ತಿರುವುದನ್ನು ನಾವು ಕಾಣುತ್ತೇವೆ. ಹೊಸಪೇಟೆ ತಾಲೂಕಿನಲ್ಲಿ ಗಣಿಗಾರಿಕೆಯು ವ್ಯಾಪಕವಾಗಿ ನಡೆಯುತ್ತಿದ್ದರೂ ಪರಿಸರ ತಜ್ಞರಿಂದ ಅಥವಾ ರೈತರಿಂದ ಹೇಳಿಕೊಳ್ಳುವಂತಹ ಪ್ರತಿಭಟನೆಗಳು ಗಣಿಗಾರಿಕೆಯ ವಿರುದ್ಧ ನಡೆದಿಲ್ಲ. ಪ್ರತಿಭಟನೆಗೆ ವ್ಯಾಪಕ ಬೆಂಬಲ ದೊರೆಯದಿರುವುದೇ ಇದಕ್ಕೆ ಪ್ರಮುಖ ಕಾರಣ.

ಗಣಿಗಾರಿಕೆಯಿಂದ ಕೃಷಿಗೆ ಪೂರಕವಾದ ಪರಿಸರದ ಮೇಲೆ ಯಾವ ಯಾವ ಪರಿಣಾಮಗಳುಂಟಾಗುತ್ತದೆ. ಈ ಬಗೆಯ ಪರಿಣಾಮಗಳ ಕುರಿತು ರೈತರ ನಿಲುವುಗಳು ಯಾವ ಬಗೆಯಲ್ಲಿ ವ್ಯಕ್ತವಾಗಿದೆ ಮತ್ತು ಕೃಷಿಯನ್ನು ತೊರೆದ ರೈತ ಸಮುದಾಯದ ಗಣಿಗಾರಿಕೆಯ ವಿವಿಧ ಚಟುವಟಿಕೆಗಳಲ್ಲಿ ಇಂದು ತೊಡಗಿಸಿಕೊಂಡಿದೆ. ಕೃಷಿಕರು ಗಣಿಕಾರ್ಮಿಕರಾಗಿ ಪರಿವರ್ತಿತರಾಗಿದ್ದಾರೆ. ಜೊತೆಗೆ ವಲಸೆ ಬಂದ ಗಣಿಕಾರ್ಮಿಕರೂ ಸಹ ಕೃಷಿಕರೇ ಆಗಿದ್ದು ಹಲವು ಕಾರಣಗಳಿಗೆ ಈಗ ಗಣಿಗಳ ಕೆಲಸ ಮಾಡುತ್ತಿದ್ದಾರೆ. ಹೀಗೆ ಕೃಷಿಯನ್ನು ತೊರೆದು ಇಲ್ಲಿ ಕಾರ್ಮಿಕರಾಗಿರುವ ವಲಸಿಗರು ಮತ್ತು ಗಣಿಕಾರ್ಮಿಕರ ಅಭಿಪ್ರಾಯಗಳನ್ನು ಪ್ರಸ್ತುತ ಅಧ್ಯಯನದ ಆಶಯಗಳಿಗೆ ಅನುಗುಣವಾಗಿ ಬಳಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಸ್ಥಳೀಯ ಗಣಿಕಾರ್ಮಿಕರ ಮತ್ತು ವಲಸಿಗ ಗಣಿಕಾರ್ಮಿಕರ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ.

[illegible]

೫.೧ ಗಣಿಗಾರಿಕೆ ಮತ್ತು ಪರಿಸರ

ಅ. ಗಣಿಗಾರಿಕೆ : ಬಳ್ಳಾರಿ ಜಿಲ್ಲೆಯು ಗಣಿಗಾರಿಕೆಗೆ ಪ್ರಸಿದ್ಧಿಯಾದುದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ರೀತಿಯ ಗಣಿಗಾರಿಕೆ ನಡೆಯುತ್ತಿರುವುದು ಕಂಡುಬರುತ್ತದೆ. ಅವುಗಳೆಂದರೆ "ಕಬ್ಬಿಣದ ಅದಿರಿನ ೬೨ ಕಂಪನಿಗಳು, ಮ್ಯಾಂಗನೀಸ್ ೦೮, ಕಲ್ಲಿನ ಕ್ವಾರೆಯ ೧೧ ಗಣಿಗಾರಿಕೆಗಳು ನಡೆಯುತ್ತಿವೆ."[೧] "ಬಳ್ಳಾರಿಯಲ್ಲಿ ೮, ಹೊಸಪೇಟೆಯಲ್ಲಿ ೧೩ ಮತ್ತು ಸೊಂಡೂರಿನಲ್ಲಿ ೬೭ ಅಧಿಕೃತ ಗಣಿಗಳು ಕಾರ್ಯನಿರ್ವಹಿಸುತ್ತಿವೆ."[೨] ಹೊಸಪೇಟೆ ತಾಲ್ಲೂಕಿನಲ್ಲಿ ಕೇವಲ ಕಬ್ಬಿಣದ ಅದಿರಿನ ಗಣಿಗಾರಿಕೆಯಲ್ಲದೆ ಮ್ಯಾಂಗನೀಸ್, ಕ್ವಾರೆ ಕೆಲಸ, ಸುಣ್ಣ ತಯಾರಿಕೆ, ಮಣ್ಣಿನ ಮತ್ತು ಸಿಮೆಂಟ್ ಇಟ್ಟಿಗೆಯನ್ನು ತಯಾರಿಸಲಾಗುತ್ತದೆ. ಹೊಸಪೇಟೆ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆಯು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ನಂತರದಲ್ಲಿ ಬಿಳಿಕಲ್ಲಿನ ಕ್ವಾರೆ ಕೆಲಸ ಹೆಚ್ಚಾಗಿ ನಡೆಯುವುದು ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಉತ್ಪಾದಿಸಲ್ಪಟ್ಟ ಕಬ್ಬಿಣದ ಅದಿರಿನ ಪ್ರಮಾಣವನ್ನು ಈ ಮುಂದಿನಂತೆ ನೋಡಬಹುದು.

"ಕ್ರ.ಸಂ.	ಇಸವಿ	ಖನಿಜೋತ್ಪತ್ತಿ (ಮಿಲಿಯ ಟನ್‌ಗಳಲ್ಲಿ)
೧.	೨೦೦೧-೦೨	೧೬
೨.	೨೦೦೨-೦೩	೧೬.೫೬
೩.	೨೦೦೩-೦೪	೨೪.೫೦"[೩]

ಈ ಮೇಲಿನ ಅಂಕಿಸಂಖ್ಯೆಗಳನ್ನು ಗಮನಿಸಿದಾಗ ಗಣಿಗಾರಿಕೆಯು ಯಾವ ಪ್ರಮಾಣದಲ್ಲಿ ನಡೆಯುತ್ತಿದೆ. ಎನ್ನುವುದು ತಿಳಿದುಬರುತ್ತದೆ. ೨೦೦೧-೦೨ರಲ್ಲಿ ೧೬ ಮಿಲಿಯ ಟನ್‌ನಷ್ಟು ಕಬ್ಬಿಣದ ಅದಿರನ್ನು ಹೊರತೆಗೆಯಲಾಗಿತ್ತು. ೨೦೦೨-೦೩ರಲ್ಲಿ ೧೬.೫೬ ಮಿಲಿಯ ಟನ್ ಅದಿರನ್ನು ಉತ್ಪಾದಿಸಲಾಯಿತು. ಅಂದರೆ ೦.೫೬ರಷ್ಟು ವೃದ್ಧಿಯಾಗಿರುವುದು ಕಂಡುಬರುತ್ತದೆ. ೨೦೦೩-೦೪ರಲ್ಲಿ ೨೪.೫೦ರಷ್ಟು ಅದಿರನ್ನು ಉತ್ಪಾದಿಸಲಾಗಿದೆ. ಒಂದೇ ವರ್ಷದ ಅವಧಿಯಲ್ಲಿ ೭.೯೪ರಷ್ಟು ವೃದ್ಧಿಯಾಗಿರುವುದು ಕಂಡುಬರುತ್ತದೆ. ಕಬ್ಬಿಣದ ಅದಿರಿನ ಗಣಿಗಾರಿಕೆಯು ವ್ಯಾಪಕ ಪ್ರಮಾಣದಲ್ಲಿ ನಡೆಯುತ್ತಿದೆಯೆಂಬುದು ತಿಳಿದುಬರುತ್ತದೆ.

"ಪ್ರಪಂಚದ ಕಬ್ಬಿಣದ ಅದಿರಿನ ನಿಕ್ಷೇಪಗಳ ಅಂದಾಜು ಮೊತ್ತಗಳು

ಕ್ರ.ಸಂ.	ರಾಷ್ಟ್ರ	ಅದಿರಿನ ಪ್ರಮಾಣ (ದಶಲಕ್ಷ ಟನ್‌ಗಳಲ್ಲಿ)	ಅದಿರಿನ ಪ್ರಮಾಣ	ಸೂಚನೆ
೧.	ಯು.ಎಸ್‌ಎಸ್.ಆರ್. (ರಷ್ಯಾ)	೯೧.೦೦೦	೪೦-೬೬	೧ನೇ ಸ್ಥಾನ
೨.	ಬ್ರೆಜಿಲ್	೨೮.೦೦೦	೪೦-೬೬	೨ನೇ ಸ್ಥಾನ
೩.	ಭಾರತ	೨೧.೦೦೦	೫೫-೬೦	೩ನೇ ಸ್ಥಾನ
೪.	ಆಸ್ಟ್ರೇಲಿಯಾ	೧೬.೦೦೦	೫೫-೬೮	೪ನೇ ಸ್ಥಾನ

ಆಧಾರ : ಕರ್ನಾಟಕದ ಖನಿಜ ಸಂಪತ್ತು

ವಿಶ್ವದಲ್ಲಿ ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ ಭಾರತ ೩ನೇ ಸ್ಥಾನವನ್ನು ಪಡೆದಿದೆ. ನಮ್ಮ ದೇಶದಲ್ಲಿ ಕರ್ನಾಟಕ ರಾಜ್ಯವು ೪ನೇ ಸ್ಥಾನವನ್ನು ಪಡೆದಿದೆ. ಆದರೆ ಮ್ಯಾಗ್ನಟೈಟ್ ಅದಿರಿನಲ್ಲಿ ಮೊದಲನೆಯ ಸ್ಥಾನವನ್ನು ಹೊಂದಿದೆ. ಜೊತೆಗೆ ಮ್ಯಾಂಗನೀಸ್ ಉತ್ಪಾದನೆಯಲ್ಲಿ ಭಾರತ ೪ನೇ ಸ್ಥಾನವನ್ನು ಹೊಂದಿದೆ."[೪]

ವಿಶ್ವದ ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ ರಷ್ಯಾ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಮ್ಮ ದೇಶದಲ್ಲಿ ೧೯೬೦ರ ದಶಕದಲ್ಲಿಯೇ ಕಬ್ಬಿಣ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತೆಂದು ತಿಳಿದುಬರುತ್ತದೆ. "In 1968 the world production of iron ore was 681 Million tons. out of which 12 countries produced 84 Percent: U.S.S.R. 26 Percent. U.S.A. 13 Percent. France 8 Percent. Canada 7 Percent. China 6 Percent. Swedan 5 Percent. India 4 Percent. Brazil 4 Percent. Australia 4 Percent. Liberia 3 Percent. U.K. 2 Percent. Venezuela 2 Percent"[೫]

"ಕಳೆದ ಅರ್ಧ ಶತಮಾನದಿಂದಲೂ ಈ ಅದಿರುಗಳ ಅಗೆತ ಅವ್ಯಾಹತವಾಗಿ ಸಾಗಿದೆ. ೧೯೨೦ರಲ್ಲಿ ಭದ್ರಾವತಿಯಲ್ಲಿ ಕಾರ್ಯಾರಂಭ ಮಾಡಿದ ಬೀಡುಗಬ್ಬಿಣ ಕುಲುಮೆಗೆ ಬಾಬಾಬುಡನ್ ಗಿರಿ ಶ್ರೇಣಿಯ ಕೆಮ್ಮಣ್ಣು ಗುಂಡಿಯಿಂದ ಅದಿರಿನ ಸರಬರಾಜು ಆಗುತ್ತಿದೆ."[೬] ಕರ್ನಾಟಕದ ಕಬ್ಬಿಣದ ಅದಿರಿನ ಗಣಿಗಾರಿಕೆಯು ೮ ದಶಕಗಳ ಹಿಂದೆಯೇ ಪ್ರಾರಂಭವಾಗಿರುವುದು ತಿಳಿದುಬರುತ್ತದೆ. ಆಗ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಗಣಿಗಾರಿಕೆ ಇಂದು ಬೃಹತ್ ಪ್ರಮಾಣದಲ್ಲಿ ಸಾಗಿದೆ. ರಾಜ್ಯಾದ್ಯಂತ ಪ್ರಮುಖ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ. "ಕುದುರೆಮುಖ ಗಣಿಗಾರಿಕೆಯು ೬೫೦ ಕೋಟಿ ರೂ.ಗಳ ವ್ಯವಹಾರ ನಡೆಸಿ ವಾರ್ಷಿಕ ೧೫೦ ದಶಲಕ್ಷ ಡಾಲರ್ ಆದಾಯವನ್ನು ತಂದು ಕೊಡುತ್ತಿದೆ."[೭]

ಗಣಿಗಾರಿಕೆಯಿಂದ ಸಾವಿರಾರು ಜನರಿಗೆ ಉದ್ಯೋಗ ದೊರಕಿದೆ. ಭೂಗರ್ಭದ ಆಳದಲ್ಲಿರುವ ಖನಿಜ ಸಂಪತ್ತನ್ನು ವಿದೇಶಗಳಿಗೆ ಮಾರಾಟ ಮಾಡಿ ರಾಷ್ಟ್ರೀಯ ಆದಾಯ ಹೆಚ್ಚಿಸಬಹುದಾಗಿದೆ. ಆದರೆ ಈ ಗಣಿಗಾರಿಕೆಯಿಂದ ನಾವು ಎಷ್ಟು ಲಾಭವನ್ನು ಪಡೆಯುತ್ತಿದ್ದೇವೆಯೋ, ಅಷ್ಟೇ ಪ್ರಮಾಣದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಷ್ಟವನ್ನು ಅನುಭವಿಸುತ್ತಿರುವುದು ನಂಬಲೇಬೇಕಾದ ಸಂಗತಿಯಾಗಿದೆ.

ನಮ್ಮ ದೇಶದಲ್ಲಿ ಸಾವಿರಾರು ಕಂಪನಿಗಳು ಗಣಿಗಾರಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಯಾವ ವರ್ಷದಲ್ಲಿ ಎಷ್ಟೆಷ್ಟು ಗಣಿಗಾರಿಕೆಗಳು ನಡೆಯುತ್ತಿವೆ ಎನ್ನುವುದನ್ನು ರಾಜ್ಯವಾರು ವಿಂಗಡಣೆಯಾಗಿ ಈ ರೀತಿ ನೋಡಬಹುದಾಗಿದೆ.

"Number of Mines

Sl.No.	State	1994-95	1995-96	1996-97	1997-98
1.	Andhrapradesh	434	431	415	398
2.	Arunachal Pradesh	1	1	0	0
3.	Assam	9	8	9	9
4.	Bihar	369	371	360	332
5.	Goa	83	81	77	66
6.	Gujarat	524	510	473	450
7.	Hariyana	21	25	19	16
8.	Himachal Pradesh	35	34	36	38
9.	Jammu and Kashmir	6	5	6	6
10.	Karnataka	241	236	238	202
11.	Kerala	43	47	51	54
12.	Madhya Pradesh	569	546	549	483
13.	Maharashtra	146	148	156	149
14.	Manipur	1	1	1	1
15.	Meghalaya	2	2	2	2
16.	Orissa	276	264	256	229
17.	Rajasthan	674	616	575	484
18.	Sikkim	1	1	1	2
19.	Tamilnadu	129	133	126	105
20.	Uttar Pradesh	55	51	50	43
21.	West Bengal	127	124	130	127
	Total	**3746**	**3635**	**3530**	**3196**

ಆಧಾರ : Compendium of environment statistics - 1998

ನಮ್ಮ ದೇಶದಲ್ಲಿ ಸಾವಿರಾರು ಗಣಿಗಾರಿಕೆ ಕಂಪನಿಗಳು ಗಣಿಗಾರಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ, ಆಂಧ್ರಪ್ರದೇಶ, ಬಿಹಾರಗಳು ಕ್ರಮವಾಗಿ ಮೊದಲ ೫ ಸ್ಥಾನಗಳನ್ನು ಪಡೆದಿರುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯ ಭೌಗೋಳಿಕ ಸಮೀಕ್ಷೆಯ ಪ್ರಕಾರ ೧೯೪೭ರಲ್ಲಿ ಸಂಡೂರು ಸಮುಕಟ್ಟು ಅಥವಾ ಬೆಲ್ಟ್‌ನಲ್ಲಿ ೧೨೯ ಮಿಲಿಯ ಟನ್ ಕಬ್ಬಿಣದ ಅದಿರು ದೊರೆಯುತ್ತದೆ ಎಂದು ಅಂದಾಜಿಸಲಾಗಿದೆ. ಸಂಡೂರು ಬೆಲ್ಟ್‌ನಲ್ಲಿ ದೊರೆಯುವ ಕಬ್ಬಿಣದ ಅದಿರಿನ ಪ್ರಮಾಣದ ನಿಕ್ಷೇಪವು ಆಯಾ ಪ್ರದೇಶಗಳಲ್ಲಿ ದೊರೆಯುವ ಪ್ರಮಾಣವನ್ನು ಈ ರೀತಿ ಅಂದಾಜಿಸಲಾಗಿದೆ.

ದೋಣಿಮಲೈ	೨೫.೬
ದೇವಗಿರಿ	೧೫.೦
ಕುಮಾರಸ್ವಾಮಿ	೨೫.೪
ಕಣವೆಹಳ್ಳಿ	೦.೫.
ರಾಮನದುರ್ಗ	೩೦.೩
ತಿಮ್ಮಪ್ಪನಗುಡಿ	೩೨.೦

೧೨೮.೮[೯] ಮಿಲಿಯ ಟನ್ ದೊರೆಯುತ್ತದೆ ಎಂದು ಅದಾಜಿಸಲಾಗಿದೆ.

೧೯೬೯-೭೦ರ ದಶಕದಲ್ಲಿ ಮೈಸೂರು ರಾಜ್ಯದಲ್ಲಿ ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯದೇ ಸಿಂಹಪಾಲು. ೧೯೬೯ ಮತ್ತು ೧೯೭೦ರಲ್ಲಿಯ ಜಿಲ್ಲಾವಾರು ಕಬ್ಬಿಣದ ಅದಿರಿನ ಉತ್ಪಾದನೆಯನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಮೈಸೂರು ರಾಜ್ಯದ ಜಿಲ್ಲಾವಾರು ಕಬ್ಬಿಣದ ಅದಿರಿನ ಉತ್ಪಾದನೆ ಟನ್‌ಗಳಲ್ಲಿ

	೧೯೬೯	೧೯೭೦
ಬಳ್ಳಾರಿ	೨೪,೧೯,೭೮೭	೨೪,೫೭,೬೮೫
ಬಿಜಾಪುರ	೨,೩೦೦	
ಚಿಕ್ಕಮಗಳೂರು	೧,೨೯,೬೯೧	೧,೩೩,೯೭೯
ಚಿತ್ರದುರ್ಗ	೧,೩೨,೭೭೮	೧,೫೭,೧೭೨
ಉತ್ತರ ಕೆನರಾ	೧,೦೦,೪೬೯	೯೧,೮೨೧
ತುಮಕೂರು	೩೦,೪೩೧	೪೭,೪೨೦
ಒಟ್ಟು	೨೮,೧೫,೪೫೬	೨೮,೮೮,೦೭೭[೧೦]

ಆಧಾರ : Iron ores of Mysore state.

ಕಲ್ಲಿನ ಕ್ವಾರೆ, ಸುಣ್ಣದ ತಯಾರಿಕೆ, ಮಣ್ಣಿನ ಇಟ್ಟಿಗೆ ತಯಾರಿಕೆ ಮತ್ತು ಸಿಮೆಂಟಿನ ಇಟ್ಟಿಗೆ ತಯಾರಿಕೆಯನ್ನು ಗಣಿಗಾರಿಕೆಯೆಂದು ಪರಿಗಣಿಸಿ ಅಧ್ಯಯನಕ್ಕೊಳಪಡಿಸಲಾಗಿದೆ. ಕಲ್ಲಿನ ಕ್ವಾರೆ ಕೆಲಸದಲ್ಲಿ ಹಲವಾರು ಬಗೆಯ ಉತ್ಪನ್ನಗಳು ದೊರೆಯುತ್ತವೆ. ಕ್ವಾರೆಯ ಕೆಲಸವು ಹಲವಾರು ಜನರಿಗೆ ಉದ್ಯೋಗಾವಕಾಶ ವನ್ನೊದಗಿಸಿದೆ. ಸುಣ್ಣದ ತಯಾರಿಕೆಯು ಸಹ ಪ್ರಮುಖ ಚಟುವಟಿಕೆಯಾಗಿ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಸುಣ್ಣದ ಶಿಲೆಗಳು ಹೇರಳವಾಗಿ ದೊರೆಯದಿರುವುದರಿಂದ ಅಷ್ಟೊಂದು ಪ್ರಾಮುಖ್ಯತೆ ಪಡೆದಿಲ್ಲ. ಸುಣ್ಣದ ಶಿಲೆಗಳು ಹೆಚ್ಚಾಗಿ ದೊರೆಯುವ ಪ್ರದೇಶದಲ್ಲಿ ಹೆಚ್ಚಾಗಿ ಸಿಮೆಂಟಿನ ಕಾರ್ಖಾನೆಗಳು ಸ್ಥಾಪನೆಗೊಂಡಿರುವುದು ತಿಳಿದುಬರುತ್ತದೆ. ಮಣ್ಣಿನ ಇಟ್ಟಿಗೆ ತಯಾರಿಕೆಯು ಹೊಸಪೇಟೆ ತಾಲ್ಲೂಕಿನ ಕೆಲವೊಂದು ಗ್ರಾಮಗಳಲ್ಲಿ ಬೃಹತ್ ಪ್ರಮಾಣದಲ್ಲಿ ನಡೆದಿದೆ. ಅಲ್ಲದೇ ಕೆಲವೊಂದು ಗ್ರಾಮಗಳಲ್ಲಿ ಸಿಮೆಟ್ ಇಟ್ಟಿಗೆ ತಯಾರಿಕೆಯು ಸಹ ಕಂಡುಬರುತ್ತದೆ.

ಕಲ್ಲಿನ ಕ್ವಾರೆ, ಸುಣ್ಣದ ತಯಾರಿಕೆ, ಮಣ್ಣಿನ ಇಟ್ಟಿಗೆ ಮತ್ತು ಸಿಮೆಂಟಿನ ಇಟ್ಟಿಗೆ ತಯಾರಿಕೆಯು ಕೃಷಿಯ ಮೇಲೆ ಮತ್ತು ಪರಿಸರದ ಮೇಲೆ ಕೆಲವೊಂದು ಪರಿಣಾಮವನ್ನು ಬೀರುತ್ತಿವೆ ಎಂಬುದನ್ನು ತಿಳಿಯಲಾಗಿದೆ. ಈ ಮೇಲೆ ತಿಳಿಸಿದ ಉದ್ಯಮಗಳನ್ನು ಕೆಲವೊಂದು ಮಾಹಿತಿಯನ್ನು ಪಡೆಯಲು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆದರೆ ನನ್ನ ಅಧ್ಯಯನಕ್ಕೆ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಗಣಿಗಾರಿಕೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಕಾರಣ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಗಳು ಕೃಷಿಯ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತಿವೆ.

ಬ. ಪರಿಸರ : ಒಂದು ದೇಶ ಮುಂದುವರಿಯಬೇಕಾದರೆ ಅಲ್ಲಿನ ನಿಸರ್ಗ ಸಂಪತ್ತು ಸಮೃದ್ಧಿಯಿಂದ ಕೂಡಿರಬೇಕಾಗುತ್ತದೆ. "ಸಮೃದ್ಧ ಸಂಪನ್ನ ರಾಷ್ಟ್ರವಾಗಿ ಉಳಿಯಬೇಕಾದರೆ ಅದರ ಭೂಮಿಯ ೩೩ರಷ್ಟು ಅಂದರೆ ೧/೩ ಭಾಗವಾದರೂ ದಟ್ಟವಾದ ಅರಣ್ಯ ಪ್ರದೇಶದಿಂದ ಆವೃತವಾಗಿರಬೇಕು. ನಮ್ಮ ದೇಶದಲ್ಲಿ ಈಗ ಇದ್ದ ಅರಣ್ಯ ಪ್ರದೇಶ ಕೇವಲ ೨೦ ಮಾತ್ರ. ಅದರಲ್ಲಿ ಒಳ್ಳೆಯ ಗುಣಮಟ್ಟದ ಅರಣ್ಯ ಪ್ರದೇಶ ೧೦ ರಿಂದ ೧೨ ಶೇ. ಮಾತ್ರ. ರಷ್ಯಾದಲ್ಲಿ ೬೧ ರಷ್ಟು, ಅಮೇರಿಕಾದಲ್ಲಿ ೩೦ ರಷ್ಟು, ಜಪಾನಿನಲ್ಲಿ ೬೩ ರಷ್ಟು, ಥಾಯ್ಲೆಂಡ್‌ನಲ್ಲಿ ೬೨ ರಷ್ಟು, ಕೆನಡಾದಲ್ಲಿ ೩೫ರಷ್ಟು, ಮಾಯಾನ್ಮಾರ್ (ಬರ್ಮಾ)ದಲ್ಲಿ ೫೦ರಷ್ಟು ಅರಣ್ಯ ಪ್ರದೇಶಗಳಿರುತ್ತವೆ."[೧೧]

ಹೊಸಪೇಟೆ ತಾಲ್ಲೂಕಿನಲ್ಲಿ ೨೦,೧೨೦.೮೮ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಗಣಿಗಾರಿಕೆಯಿಂದಾಗಿ ಬಹಳಷ್ಟು ಪ್ರಮಾಣದ ಅರಣ್ಯ ಪ್ರದೇಶವು ವಿನಾಶದ ಅಂಚಿನಲ್ಲಿದೆ. ನಮ್ಮ ಸುತ್ತಮುತ್ತಲ ಪರಿಸರ ಸಮೃದ್ಧ ವಾಗಿದ್ದರೆ ಆ ಪ್ರದೇಶದ ಪ್ರಾಣಿ ಪಕ್ಷಿ, ಸಸ್ಯ ಸಂಕುಲಗಳು ಹೆಚ್ಚಿನ ಪ್ರಮಾಣದಲ್ಲಿ ವೃದ್ಧಿಯಾಗುತ್ತವೆ. ಗಣಿಗಾರಿಕೆಯಿಂದ ಪರಿಸರ ಹಲವಾರು ಬಗೆಯಲ್ಲಿ ಮಲಿನವಾಗುತ್ತಿದೆ. "ಗಾಳಿ, ನೀರು ಮತ್ತು ನೆಲವೇ ನಮ್ಮ ಪರಿಸರ. ಈ ಮೂರನ್ನು ಕ್ರಮವಾಗಿ ವಾಯುಮಂಡಲ, ಜಲಮಂಡಲ ಮತ್ತು ಭೂಮಂಡಲವೆಂದು

ಶಾಸ್ತ್ರೀಯವಾಗಿ ಹೇಳುತ್ತಾರೆ. ಈ ಎಲ್ಲಾ ಮಂಡಲಗಳು ಸೇರಿ ಜೀವಮಂಡಲ ಎಂದೆನಿಸಿಕೊಳ್ಳುತ್ತದೆ."[೧೦] ಗಣಿಗಾರಿಕೆಯೊಂದಾಗಿ ಈ ಮೇಲಿನ ಮೂರು ಮಂಡಲಗಳು ಮಲೀನವಾಗುತ್ತಿರುವುದು ಕಂಡುಬರುತ್ತದೆ. "ಪರಿಸರವೆಂದರೆ ಬರೀ ಕಾಡು ನೀರು, ಗಾಳಿ, ಮಣ್ಣು ಅಷ್ಟೇ ಅಲ್ಲ ಇವುಗಳನ್ನೆಲ್ಲ ಒಳಗೊಂಡ ಒಂದು ಸಾಮಾಜಿಕ, ಆರ್ಥಿಕ ವ್ಯವಸ್ಥೆ."[೧೧]

ಗಣಿಗಾರಿಕೆಯಿಂದಾಗಿ ಅಂತರ್ಜಲ ಕುಸಿಯುತ್ತಿದೆ. ಕೃಷಿ ಕುಂಠಿತಗೊಂಡಿದೆ. ಹಳ್ಳಕೆರೆಗಳು ಹೂಳು ತುಂಬುತ್ತಿವೆ. ದನಕರುಗಳ ಜೊತೆಗೆ ಮನುಷ್ಯನಿಗೆ ಹಲವಾರು ರೋಗ ರುಜಿನೆಗಳು ಆವರಿಸುತ್ತಿವೆ. ಇನ್ನೂ ಅನೇಕ ರೀತಿಯಲ್ಲಿ ಪರಿಸರಕ್ಕೆ ಹಾನಿಯುಂಟುಮಾಡುತ್ತಿದೆ. ಆದರೆ ಈ ಪ್ರದೇಶದಲ್ಲಿ ಅಂತಹ ಹೇಳಿಕೊಳ್ಳುವಂತಹ ಯಾವುದೇ ಚಳುವಳಿಗಳು ನಡೆದಿಲ್ಲ. "ಗಣಿಗಾರಿಕೆಯಲ್ಲಿ ಬಳ್ಳಾರಿ ಜಿಲ್ಲೆ ಅಗ್ರಸ್ಥಾನವನ್ನು ಪಡೆದುಕೊಂಡಿದ್ದರೂ ಚಳುವಳಿಯ ದೃಷ್ಠಿಯಿಂದ ಅಷ್ಟೇ ಕೆಳಸ್ಥಾನವನ್ನು ಪಡೆದುಕೊಂಡಿದೆ. ಇಲ್ಲಿ ದುಡಿಯುವ ವರ್ಗ ಮತ್ತು ದುಡಿಸುವ ವರ್ಗ ಮಾತ್ರ ಇದ್ದು ಪ್ರಶ್ನಿಸುವ ಮಧ್ಯಮ ವರ್ಗ ಗೈರು ಹಾಜರಾಗಿದೆ."[೧೨] ಬಳ್ಳಾರಿ ಜಿಲ್ಲೆಯಲ್ಲಿ ಚಳುವಳಿಗಳಿಗೆ ವ್ಯಾಪಕ ಬೆಂಬಲ ದೊರೆಯದಿರುವುದರಿಂದ ಫಲಕಾರಿ ಯಾಗುತ್ತಿಲ್ಲ. ಅಲ್ಲದೆ ಚಳುವಳಿ ನಡೆಸುವ ಉದ್ದೇಶ ಯಾರಿಗೂ ಇಲ್ಲವೆನ್ನುವಂತೆ ತೋರುತ್ತದೆ.

ಪರಿಸರದ ಒಂದು ಭಾಗವಾಗಿ ಗಣಿಗಾರಿಕೆ ನಡೆಯುತ್ತಿದೆ. ಗಣಿಗಾರಿಕೆಯಿಂದ ಪರಿಸರ ಹಲವಾರು ಬಗೆಯಲ್ಲಿ ನಾಶವಾಗುತ್ತಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

೧. ಅರಣ್ಯದ ಮೇಲೆ ಪರಿಣಾಮ
೨. ಜನರ ಆರೋಗ್ಯ
೩. ಮಳೆಯ ಪ್ರಮಾಣ
೪. ಕೆರೆ, ಹಳ್ಳ ಮತ್ತು ನದಿಗಳ ಮೇಲಿನ ಪರಿಣಾಮ
೫. ಹುಲ್ಲುಗಾವಲುಗಳ ಮೇಲಿನ ಪರಿಣಾಮ

ಮೇಲೆ ತಿಳಿಸಿದ ಅಂಶಗಳನ್ನು ಈ ಮುಂದೆ ಒಂದೊಂದಾಗಿ ಪರಿಶೀಲಿಸೋಣ

೧. ಅರಣ್ಯದ ಮೇಲೆ ಪರಿಣಾಮ

ಗಣಿಗಾರಿಕೆಯಿಂದ ಪರಿಸರದ ಮೇಲೆ ಬಹಳಷ್ಟು ತೀವ್ರತೆರನಾದ ಹಾನಿಯಾಗುತ್ತಿದೆ. "ನಮ್ಮ ಹಚ್ಚ ಹಸುರಿನ ಅರಣ್ಯಗಳನ್ನು ಅಪಾಯದ ಅಂಚಿಗೆ ತಳ್ಳುತ್ತಿರುವಲ್ಲಿ ಗಣಿಗಾರಿಕೆಯು ಮುಖ್ಯವಾದುದು. ಅದರಲ್ಲೂ ವಿಶೇಷವಾಗಿ ಸಂರಕ್ಷಿತ ಅರಣ್ಯಗಳಲ್ಲಿ ಮತ್ತು ವನ್ಯಧಾಮಗಳಲ್ಲಿ ಗಣಿಗಾರಿಕೆಯಿಂದ ಅಲ್ಲಿನ ಪರಿಸರದ ಮೇಲೆ ಗಂಭೀರ ದುಷ್ಪರಿಣಾಮಗಳಾಗುತ್ತವೆ."[೧೩] ಅರಣ್ಯವು ಹಲವಾರು ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ. ಗಿಡಮೂಲಿಕೆಗಳು, ವನಸ್ಪತಿ, ಉರುವಲು, ಪ್ರಾಣಿ, ಪಕ್ಷಿಗಳ ಸಂತತಿ ಅಭಿವೃದ್ಧಿ, ಮಳೆಯ ಪ್ರಮಾಣ ಹೆಚ್ಚಾಗುತ್ತದೆ. ಭೂಸವಕಳಿ ಕಡಿಮೆ ಮಾಡುತ್ತದೆ. ಹೀಗೆ ಇನ್ನು ಹತ್ತಾರು ಹಲವು

ಪ್ರಯೋಜನಗಳು ಅರಣ್ಯದಿಂದ ದೊರೆಯುತ್ತವೆ. ಹೆಚ್ಚಿನ ಗಣಿಗಾರಿಕೆಗಳು ಅರಣ್ಯ ಪ್ರದೇಶದಲ್ಲಿ ನಡೆಯುತ್ತಿದೆ. ಗಣಿಗಾರಿಕೆಗಾಗಿ ಹೆಚ್ಚಿನ ಪ್ರಮಾಣದ ಕಾಡನ್ನು ಕಡಿದು ನಾಶ ಮಾಡಲಾಗುತ್ತಿದೆ. ಮುಗಿದು ಹೋಗುವ ಖನಿಜ ಸಂಪನ್ಮೂಲದ ಆಸೆಗಾಗಿ ಹಸಿರು ಸಿರಿಯನ್ನು ನಾಶ ಮಾಡುತ್ತಿದ್ದೇವೆ. ಖನಿಜದ ಆಸೆಗಾಗಿ ನಮ್ಮ ಅವನತಿಯ ಹಾದಿಯನ್ನು ನಾವೇ ಸ್ವಾಗತಿಸುತ್ತಿದ್ದೇವೆ.

ಗಣಿಗಾರಿಕೆ ಹೆಚ್ಚಾಗಿ ಅರಣ್ಯ ಪ್ರದೇಶಗಳಲ್ಲಿ ಕಂಡುಬರುತ್ತದೆ. ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವವರು ನಂತರ ಆ ಸ್ಥಳದಲ್ಲಿ ಪರ್ಯಾಯ ಅರಣ್ಯ ನಿರ್ಮಾಣವನ್ನು ಮಾಡಬೇಕಾಗುತ್ತದೆ. ಅದೇ ರೀತಿ ಕ್ರಮಗಳನ್ನು ಕೈಗೊಂಡಿರುವುದನ್ನು ಕಾಣಬಹುದಾಗಿದೆ. ಕಬ್ಬಿಣದ ಅದಿರು, ಮ್ಯಾಂಗನೀಸ್ ಹಾಗೂ ಕಬ್ಬಿಣ ಮತ್ತು ಮ್ಯಾಂಗನೀಸ್ ಕೈಗಾರಿಕಾ ಪ್ರದೇಶದಲ್ಲಿ ೧೯೯೭-೯೮ರ ವರೆಗಿನ ಅರಣ್ಯ ನಿರ್ಮಾಣವನ್ನು ಈ ಕೆಳಗಿನಂತೆ ನೋಡಬಹುದು.

"Status of Afforestation and trees Survived upto 1997-98 in Mining Areas

(Area in hect)

Sl.No.	Minerals	Mines Covered	Area Covered	Trees Planted	Trees Survied	Survival Rate (%)
1.	Iron Ore	122	7139.97	19591312	14013557	72
2.	Manganese	57	1850.10	4816070	3067975	64
3.	Iron and Managanese	31	160.00	487000	371000	76
	Total of all Mining	**780**	**21461.65**	**47495128**	**34145232**	**72%**

ಆಧಾರ : Compendium of Environment Statistics - 1999

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಣಿಗಾರಿಕೆಯ ಕುರಿತು ರೈತರ ಅಭಿಪ್ರಾಯಗಳು ಈ ರೀತಿ ವ್ಯಕ್ತವಾಗಿದೆ. ಗಣಿಗಾರಿಕೆಯಿಂದ ನಿಮ್ಮ ಕಾಡಿನ ಮೇಲೆ ಯಾವ ಪರಿಣಾಮಗಳಾಗಿವೆ ಎನ್ನುವುದಕ್ಕೆ ರೈತರು ತಮ್ಮ ಅಭಿಪ್ರಾಯವನ್ನು ಈ ಕೆಳಗಿನಂತೆ ವ್ಯಕ್ತಪಡಿಸಿದ್ದಾರೆ. ಕಾಡು ನಾಶವಾಗುತ್ತದೆ. ಜೊತೆಗೆ ಸರಿಯಾಗಿ ಬೆಳೆಯುವುದಿಲ್ಲವೆಂದು ೩೧ ಜನ ಅಭಿಪ್ರಾಯ ಪಡುತ್ತಾರೆ. ಮರದ ಎಲೆಗಳು ಉದುರಿ ಕಾಡು ನಾಶವಾಗುತ್ತದೆಯೆಂದು ೧೩ ರೈತರ ಅಭಿಪ್ರಾಯವಾಗಿದೆ. ಒಣಗಿ ಹೋಗಿ ಕಾಡು ನಾಶವಾಗುತ್ತದೆಯೆಂದು ೨೩ ಜನ ರೈತರ ಅನಿಸಿಕೆಯಾಗಿದೆ. ಕಾಡು ನಾಶವಾಗಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆಯೆನ್ನುವುದು. ೨೩ ಜನ ರೈತರ ಅಭಿಪ್ರಾಯವಾಗಿದೆ. ಗಣಿಗಾರಿಕೆಯಿಂದ ಹಲವಾರು ರೀತಿಯ ತೊಂದರೆಗಳಲ್ಲಿ ಅರಣ್ಯ ನಾಶವು ಒಂದಾಗಿ ಕಾಣಿಸುತ್ತದೆ. ಗಣಿಗಾರಿಕೆಯಿಂದ ಪರಿಸರ ಕಲುಷಿತವಾಗುತ್ತಿದೆ. ಅರಣ್ಯ ನಾಶ ಮಾಡುವುದು ಸುಲಭ. ಆದರೆ ಅದರ ಬೆಲೆಯೇನು ಎನ್ನುವುದರ ಬಗೆಗೆ ಅರಿತುಕೊಳ್ಳಬೇಕು.

[illegible]

[illegible]

[illegible]

[illegible]

೨. ಜನರ ಆರೋಗ್ಯದ ಮೇಲೆ ಪರಿಣಾಮ

ಗಣಿಗಾರಿಕೆ ನಡೆಯುತ್ತಿರುವ ಪ್ರದೇಶವನ್ನು ರೋಗ ರುಜಿನೆಗಳ ತವರು ಎಂದು ಕರೆಯಬಹುದಾಗಿದೆ. ಜನ ಪ್ರಾಣಿ ಮತ್ತು ಸಸ್ಯಗಳಿಗೂ ಇದರಿಂದ ರೋಗಗಳು ಬರುತ್ತವೆ. ಧೂಳು ಬಂದು ಬೆಳೆಯ ಮೇಲೆ ಕೂಡುವುದರಿಂದ ಸಸ್ಯಗಳು ದ್ಯುತಿಸಂಶ್ಲೇಷಣೆ ಕ್ರಿಯೆ ನಡೆಸದೆ ನಿಷ್ಕ್ರಿಯಗೊಳ್ಳುತ್ತವೆ. ಆಗ ಸಸ್ಯಗಳಿಗೆ ಗಿಡಮರಗಳಿಗೆ ಹಲವಾರು ರೋಗಗಳು ದಾಳಿ ಮಾಡುತ್ತವೆ. ಅದೇ ರೀತಿಯಾಗಿ ಗಣಿ ಕೆಲಸ ಮಾಡುವವರು ಮತ್ತು ಗಣಿ ಕೆಲಸ ಮಾಡದೇ ಇರುವ ಸುತ್ತಮುತ್ತಲಿನ ಜನರಿಗೆ ಹಲವಾರು ರೋಗ ರುಜಿನಗಳು ಬರುತ್ತವೆ. ಉಸಿರಾಟ ಸಂಬಂಧಿ ಕಾಯಿಲೆಗಳು ಅಸ್ತಮಾ, ಟಿ.ಬಿ. ಹೆಚ್ಚಾಗಿ ಕಂಡುಬರುವ ರೋಗಗಳಾಗಿವೆ.

ಗಣಿಗಾರಿಕೆಯಲ್ಲಿ ಕೆಲಸ ಮಾಡುವವರು ಯಾವುದೇ ರೀತಿಯ ಆರೋಗ್ಯದ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸುತ್ತಿಲ್ಲ. ಸುತ್ತಮುತ್ತಲಿನ ಪರಿಸರದ ಜನರು ಉಸಿರಾಡಿಸುವುದರಿಂದ ವಾಯುಮಾಲಿನ್ಯದಿಂದಗಿ ಹಲವಾರು ರೋಗಗಳಿಗೆ ತುತ್ತಾಗಿರುವುದು ಹೆಚ್ಚಾಗಿ ಕಂಡುಬರುತ್ತದೆ.

ನನ್ನ ಕ್ಷೇತ್ರಕಾರ್ಯದಲ್ಲಿ ಗಣಿಗಾರಿಕೆಯಿಂದಾಗಿ ಉಂಟಾಗುವ ವಾಯುಮಾಲಿನ್ಯದಿಂದ ಮನುಷ್ಯರ ಆರೋಗ್ಯದ ಮೇಲೆ ಏನಾದರೂ ದುಷ್ಪರಿಣಾಮಗಳಾಗಬಹುದೆಂಬ ಪ್ರಶ್ನೆಗೆ ಅದರಲ್ಲಿ ೯೧ ಜನ ಹೌದು ಎಂದು ಹೇಳಿದರೆ, ೦೯ ಜನ ಮಾತ್ರ ಇಲ್ಲ ಎಂದು ತಿಳಿಸಿದರು. ಅದೇ ರೀತಿಯಾಗಿ ಗಣಿಗಾರಿಕೆಯಿಂದಾಗಿ ಗಾಳಿಯಲ್ಲಿ ಹಾರಿ ಬರುವ ಧೂಳನ್ನು ಉಸಿರಾಡುವುದರಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳಾಗಬಹುದೇ ಎಂದು ಕೇಳಿದಾಗ ೯೯ ಜನ ಹೌದು ಎಂದು ತಿಳಿಸಿದ್ದಾರೆ. ಒಬ್ಬರು ಮಾತ್ರ ಇಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಇದರಿಂದ ನಮಗೆ ತಿಳಿದು ಬರುವ ಮುಖ್ಯ ಅಂಶವೇನೆಂದರೆ ಗಣಿಗಾರಿಕೆಯಿಂದ ಜನರ ಆರೋಗ್ಯದ ಮೇಲೆ ತೀವ್ರ ಪರಿಣಾಮವಾಗುತ್ತಿದೆ ಎನ್ನುವುದಾಗಿದೆ.

೩. ಮಳೆಯ ಪ್ರಮಾಣ ಕಡಿಮೆಯಾಗುತ್ತದೆ

ಮಳೆಯ ಪ್ರಮಾಣದ ಕಡಿಮೆಯಾಗಿರುವಿಕೆಯಲ್ಲಿ ಗಣಿಗಾರಿಕೆಯ ಪಾಲು ಹೆಚ್ಚಿದೆ. ಖನಿಜ ಸಂಪನ್ಮೂಲಗಳು ಬೆಟ್ಟ ಗುಡ್ಡಗಳು, ಅರಣ್ಯ ಪ್ರದೇಶದಲ್ಲಿ ದೊರೆಯುತ್ತವೆ. ಆಗ ಗಣಿಗಾರಿಕೆಗಾಗಿ ಕಾಡನ್ನು ನಾಶಪಡಿಸಲಾಗುತ್ತದೆ. ಕಾಡು ನಾಶವಾಗುವುದರಿಂದ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಬಳ್ಳಾರಿ ಜಿಲ್ಲೆಯನ್ನು ಅತಿ ಕಡಿಮೆ ಮಳೆ ಬೀಳುವ ಪ್ರದೇಶವೆಂದು ಗುರುತಿಸಲಾಗುತ್ತದೆ. ಇದಕ್ಕೆ ಗಣಿಗಾರಿಕೆಯು ಪ್ರಮುಖ ಕಾರಣವೆನ್ನಬಹುದು. ಕಾಡುಗಳು ಹೇರಳವಾಗಿದ್ದರೆ ಮಳೆಯ ಪ್ರಮಾಣವು ಅಧಿಕವಾಗಿರುತ್ತದೆ. "ಒಂದು ವೈಜ್ಞಾನಿಕ ವರದಿಯ ಪ್ರಕಾರ ೧೯೫೦ರಲ್ಲಿ ಭೂಮಿ ಒಟ್ಟು ವಿಸ್ತೀರ್ಣದಲ್ಲಿ ಶೇ.೩೦ ಭಾಗ ಮಳೆ ಕಾಡಿನಿಂದ ಆವೃತವಾಗಿತ್ತು. ಕೇವಲ ೨೫ ವರ್ಷದಲ್ಲಿ ಅಂದರೆ ೧೯೭೫ರಲ್ಲಿ ಅದು ಶೇ.೧೨ಕ್ಕೆ ಇಳಿದಿದೆ."[೧೬]

ಗಣಿಗಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವುದರಿಂದ ಹೆಚ್ಚಿನ ಪ್ರಮಾಣದ ಕಾಡುಗಳು ನಾಶವಾಗುತ್ತಿವೆ. ಕಾಡುಗಳ ನಾಶದ ಜೊತೆಗೆ ಹುಲ್ಲುಗಾವಲುಗಳು ನಾಶವಾಗುತ್ತವೆ. ಮಳೆಯ ಪ್ರಮಾಣ

ಕಡಿಮೆಯಾಗುವುದರಿಂದ, ಕೃಷಿಯು ಹಿಂದುಳಿಯುತ್ತದೆ. ಕಾರಣ ನಮ್ಮ ದೇಶದ ಕೃಷಿಯು ಮಳೆಯ ಮಾರುತಗಳನ್ನವಲಂಬಿಸಿದೆ.

೪. ಕೆರೆ, ಹಳ್ಳ ಮತ್ತು ನದಿಗಳ ಮೇಲಿನ ಪರಿಣಾಮ

ಹಳ್ಳ, ಕೆರೆ, ನದಿಗಳು ನೀರಾವರಿಯ ಪ್ರಮುಖ ತಾಣಗಳಾಗಿವೆ. ಮೊದಲಿಗೆ ಹಳ್ಳ, ಕೆರೆ, ನದಿಗಳ ಮೂಲಕ ನೀರಾವರಿಯನ್ನು ಮಾಡಲಾಗುತ್ತಿತ್ತು. ಇಂದಿಗೂ ಸಹ ಇದೇ ರೀತಿಯ ನೀರಾವರಿ ವ್ಯವಸ್ಥೆ ಬಹಳಷ್ಟು ಪ್ರಮಾಣದಲ್ಲಿ ಕಂಡುಬರುತ್ತದೆ. ವಿಜಯನಗರ ಕಾಲದ ಸಮಯದಲ್ಲಿ ಈ ಪ್ರದೇಶವು ನೀರಾವರಿಗೆ ಹೆಸರುವಾಸಿಯಾಗಿತ್ತು. ನೂರಾರು ಕೆರೆಗಳನ್ನು ನಿರ್ಮಾಣ ಮಾಡಲಾಗಿತ್ತು ಅವುಗಳಲ್ಲಿ ಇಂದು ಕೆಲವೊಂದು ಮಾಯವಾಗಿವೆ. ಅಂದರೆ ನಶಿಸಿಹೋಗಿವೆ. ಕೆಲವೊಂದು ನಶಿಸಿ ಹೋಗುವ ಹಂತವನ್ನು ತಲುಪಿವೆ. ಕಾರಣ ಅವುಗಳ ಕಡೆಗೆ ನಿರ್ಲಕ್ಷ್ಯ ಭಾವನೆ ಒಂದಾದರೆ ಗಣಿಗಾರಿಕೆಯು ಮತ್ತೊಂದು ಪ್ರಮುಖ ಕಾರಣವಾಗಿದೆ. ಗಣಿಗಾರಿಕೆಯಿಂದಾಗಿ ಹಳ್ಳ, ಕೆರೆಗಳು ಮುಚ್ಚಿಹೋಗುತ್ತವೆ. ಮಳೆಗಾಲದ ಸಂದರ್ಭದಲ್ಲಿ ಗುಡ್ಡಗಳಿಂದ ಹರಿದು ಬರುವ ನೀರು ಜೊತೆಗೆ ಗಣಿಗಾರಿಕೆಯ ಹೂಳನ್ನು ಹೊತ್ತು ತರುತ್ತವೆ. ಹೂಳು ತುಂಬಿ ಮುಚ್ಚಿ ಹೋಗುವುದರ ಜೊತೆಗೆ ನೀರು ಕಲುಷಿತವಾಗಿ ಬಳಸಲು ಯೋಗ್ಯವಲ್ಲದಂತಾಗುತ್ತದೆ. ಆ ನೀರು ನೇರವಾಗಿ ಜಮೀನಿನ ಮೇಲೆ ಹರಿದರೆ ಸಿಮೆಂಟಿನಂತೆ ತೆಳುಪಿನ ಹೊಂದು ಕುಳಿತು ಭೂಮಿಯು ನೀರನ್ನು ಸರಿಯಾಗಿ ಹೀರದಂತಾಗುತ್ತದೆ.

ಗಣಿಗಾರಿಕೆಯಿಂದಾಗಿ ಗುಡ್ಡಗಳಿಂದ ಹರಿದು ಬರುವ ಹೆಚ್ಚುವರಿ ಮಣ್ಣಿನಿಂದ ನಿಮ್ಮ ಹಳ್ಳ, ಕೆರೆಗಳ ಮೇಲೆ ಯಾವ ಪರಿಣಾಮಗಳಾಗಿವೆ ಎನ್ನುವ ಪ್ರಶ್ನೆಗೆ ರೈತರು ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಹಳ್ಳ ಕೆರೆಗಳಲ್ಲಿ ಹೂಳು ತುಂಬುತ್ತದೆ	೨೪
ನೀರು ಕಲುಷಿತವಾಗುತ್ತದೆ	೫೨
ಬಳಸಲು ಯೋಗ್ಯವಾಗಿರುವುದಿಲ್ಲ	೨೦
ಹೂಳು ತುಂಬಿ ನೀರು ಕಲುಷಿತವಾಗುತ್ತವೆ	೩೬
ಹೂಳು ತುಂಬಿ ಬಳಸಲು ಯೋಗ್ಯವಲ್ಲದಂತಾಗುತ್ತವೆ	೧೭
ಹಳ್ಳಕೆರೆಗಳಲ್ಲಿ ಹೂಳು ತುಂಬಿ ಕಲುಷಿತವಾಗುತ್ತವೆ ಮತ್ತು ಬಳಸಲು ಯೋಗ್ಯವಿಲ್ಲದಂತಾಗುತ್ತದೆ	೦೫

ಹೊಸಪೇಟೆ ಸಂಡೂರು ಮಾರ್ಗದಲ್ಲಿರುವ ಕಲ್ಲಹಳ್ಳಿಯಲ್ಲಿ ಗಣಿಗಾರಿಕೆಯ ಗುಡ್ಡಗಳಿಂದ ಹರಿದು ಬರುವ ನೀರಿನಿಂದಾಗಿ ಹಳ್ಳಗಳು ಮುಚ್ಚಿಹೋಗಿವೆ. ಕಣಿವಿರಾಯನಗುಡಿಯಲ್ಲಿ ಸಹ ಹಳ್ಳಗಳು ಮುಚ್ಚಿಹೋಗಿದ್ದು. ಒಂದು ಕೆರೆಯು ಹೂಳು ತುಂಬಿರುವುದು ಕಂಡುಬರುತ್ತದೆ.

೫. ಹುಲ್ಲುಗಾವಲುಗಳ ಮೇಲೆ ಪರಿಣಾಮ

ಪರಿಸರ ಸಂಪತ್ತುಗಳಲ್ಲಿ ಹುಲ್ಲುಗಾವಲು ಒಂದಾಗಿದೆ. ಹುಲ್ಲುಗಾವಲು ಪ್ರದೇಶಗಳು ಭೂಮಿಯ ಹೃದಯವಿದ್ದಂತೆ. ಮನುಷ್ಯನಿಗೆ ಹೃದಯ ಎಷ್ಟು ಅವಶ್ಯಕವೋ ಭೂಮಿಗೆ ಹುಲ್ಲುಗಾವಲುಗಳು ಅಷ್ಟೇ ಅವಶ್ಯಕ. ಹುಲ್ಲುಗಾವಲುಗಳ ಅತಿ ಮುಖ್ಯ ಅಂಶವೆಂದರೆ ನೀರನ್ನು ಹಿಡಿದುಕೊಳ್ಳುತ್ತದೆ. ನೀರನ್ನು ಹಿಡಿದುಕೊಳ್ಳುವ ಪ್ರಮಾಣ ಹೆಚ್ಚಿದಂತೆ ಅಂತರ್ಜಲ ಮಟ್ಟ ಹೆಚ್ಚುತ್ತದೆ. ಭೂಮಿಯ ಮಣ್ಣಿನ ಸವಕಳಿಯು ತಪ್ಪುತ್ತದೆ. ದನಕರುಗಳಿಗೆ ಮೇವನ್ನು ಒದಗಿಸುತ್ತವೆ. ಹೀಗೆ ಹಲವಾರು ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ.

ಗಣಿಗಾರಿಕೆಯಿಂದಾಗಿ ಹುಲ್ಲುಗಾವಲುಗಳು ನಶಿಸಿಹೋಗುತ್ತವೆ. ಹುಲ್ಲುಗಾವಲುಗಳು ನಶಿಸಿ ಹೋದರೆ ಕಾಡು ಪ್ರಾಣಿಗಳ ಸಂತತಿ ಜೊತೆಗೆ ದನಕರುಗಳ ಸಂತತಿ ಕಡಿಮೆಯಾಗುತ್ತದೆ. ಭೂಮಿಯ ಮೇಲಿನ ಫಲವತ್ತತೆಯ ಮಣ್ಣು ನಾಶವಾಗಿ ಭೂ ಸವಕಳಿ ಉಂಟಾಗುತ್ತದೆ. ಭೂಮಿಯು ಬರಡಾಗುತ್ತದೆ. "೧೯೭೪ರಲ್ಲಿ ಗೋಮಾಳಗಳ ಅಭಿವೃದ್ಧಿಗಾಗಿ ಅಲ್ಲಿನ ೩೧೧ ಗ್ರಾಮ ಪಂಚಾಯಿತಿಗಳಿಗೆ ಸರಕಾರ ನೆರವು ನೀಡಿತು. ಹುಲ್ಲುಗಾವಲಿನ ರಕ್ಷಣೆಗೆ ಪ್ರತಿ ಹೆಕ್ಟೇರಿಗೆ ವರ್ಷಕ್ಕೆ ರೂ.೪೦೦ ವೆಚ್ಚ ತಗಲುತ್ತದಂತೆ." ಅಂದರೆ ಒಂದು ಕಡೆ ರಾಷ್ಟ್ರೀಯ ಆದಾಯ ಹೆಚ್ಚಿಸುವುದಕ್ಕಾಗಿ ಗಣಿಗಾರಿಕೆ ನಡೆಸುತ್ತಿದ್ದರೆ. ಗಣಿಗಾರಿಕೆಯಿಂದ ಗೋಮಾಳಗಳ ಮೇಲಾಗುವ ಪರಿಣಾಮವನ್ನು ತಡೆಯಲು ಹಣ ವಿನಿಯೋಗಿಸುವುದು. ಈ ರೀತಿ ಮಾಡುವುದಾದರೆ ಗಣಿಗಾರಿಕೆ ನಡೆಸುವುದಾದರೂ ಏಕೆ?

ಗಣಿಗಾರಿಕೆಯಿಂದ ಪರಿಸರದ ಮೇಲೆ ಹಲವಾರು ಪರಿಣಾಮಗಳಾಗುತ್ತಿರುವುದು ನಮಗೆ ತಿಳಿದು ಬರುತ್ತದೆ. ಪರಿಸರ ಹಾಳುಗೆಡುವುದರ ಜೊತೆಗೆ ಹಲವಾರು ಕ್ಷೇತ್ರಗಳನ್ನು ಘಾಸಿಗೊಳಿಸುವುದಾದರೆ ಗಣಿಗಾರಿಕೆ ನಮಗೆ ಅವಶ್ಯವೆ? ಪರಿಸರ, ಕೃಷಿ ಪ್ರಾಣಿ, ಪಕ್ಷಿಗಳು ಮುಂತಾದವುಗಳ ಮೇಲೆ ಅಪಾಯವನ್ನು ತಂದೊಡ್ಡುತ್ತಿದೆ. ಈ ಪ್ರದೇಶದಲ್ಲಿ ಗಣಿಗಾರಿಕೆಯಿಂದಾದ ನಷ್ಟಕ್ಕೆ ಸರಕಾರವು ಅಭಿವೃದ್ಧಿ ಕಾರ್ಯವನ್ನು ಮಾಡುತ್ತದೆ. ಆದರೆ ಈ ಅಭಿವೃದ್ಧಿ ಕಾರ್ಯದ ತೆರಿಗೆ ಹೊರೆಯು ಸಾಮಾನ್ಯ ವ್ಯಕ್ತಿಯ ಮೇಲೆ ಬೀಳುತ್ತದೆ ಎನ್ನುವುದು ಮರೆಯುವಂತಿಲ್ಲ.

ನೀರಿನ ಮೂಲವಾದ ಹುಲ್ಲುಗಾವಲುಗಳು ಮತ್ತು ಅರಣ್ಯಗಳು ಗಣಿಗಾರಿಕೆಯಿಂದಾಗಿ ನಾಶವಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿ ಮರಿಯಮ್ಮನಹಳ್ಳಿ ಮಾರ್ಗವಾಗಿ ಹೋಗುವಾಗ ಬರುವ ಗುಂಡಾ ಕಾಯ್ದಿಟ್ಟ ಅರಣ್ಯ ಪ್ರದೇಶವು ನಾಶವಾಗುತ್ತಿದೆ. ಸುಮಾರು ೨ ಸಾವಿರ ಎಕರೆಗೂ ಮೇಲ್ಪಟ್ಟಿರುವ ಈ ಅರಣ್ಯದಲ್ಲಿ ಗಣಿಗಾರಿಕೆಯಿಂದ ಹಲವಾರು ಗಿಡಮರಗಳು ಒಣಗಿ ನಿಂತಿರುವುದು ಕಂಡುಬರುತ್ತದೆ. ಸುತ್ತಮುತ್ತ ಬೆಳೆದಿರುವ ಕುರುಚಲು ಹುಲ್ಲುಗಾವಲು ಸಹ ಬಹುತೇಕ ನಾಶವಾಗಿದೆ.

೫.೨ ಗಣಿಗಾರಿಕೆ :, ರೈತರ ಪರ ಮತ್ತು ವಿರೋಧದ ನಿಲುವುಗಳ ವಿಶ್ಲೇಷಣೆ

೧. ಗಣಿಗಾರಿಕೆ ಕುರಿತು ರೈತರ ನಿಲುವುಗಳ ವಿಶ್ಲೇಷಣೆ

ಗಣಿಗಾರಿಕೆ ನಡೆಯುತ್ತಿರುವುದನ್ನು ಹೆಚ್ಚಿನ ಜನರು ಸಮರ್ಥಿಸುತ್ತಾರೆ. ಕೆಲವೊಂದು ಜನರು ಗಣಿಗಾರಿಕೆ ಬೇಡ ಎನ್ನುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಗಣಿಗಾರಿಕೆ ನಡೆಯುತ್ತಿರುವುದನ್ನು ಸಮರ್ಥಿಸಲು ಪ್ರಮುಖ ಕಾರಣಗಳೆಂದರೆ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಇದು ಅತಿಮುಖ್ಯ ಅಂಶವಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಕೆಲಸವನ್ನು ಜೋಡಿಸುವುದು ಕಷ್ಟದ ಕೆಲಸ. ಇರುವ ಸ್ವಲ್ಪ ಪ್ರಮಾಣದ ಭೂಮಿಯಲ್ಲಿ ಎಲ್ಲರೂ ದುಡಿದು ಜೀವನ ಮಾಡುವುದು ಕಷ್ಟವಾಗುತ್ತದೆ. ಆಗ ಕೆಲವರು ಗಣಿಗಾರಿಕೆಯ ಕೆಲಸದಲ್ಲಿ ಸೇರುವುದರಿಂದ ನಿರುದ್ಯೋಗ ನಿವಾರಣೆಯಾಗುತ್ತದೆ. ಗಣಿಗಾರಿಕೆಯಲ್ಲಿ ಹೆಚ್ಚಿನ ಕೂಲಿ ದೊರೆಯುತ್ತದೆ. ಜಮೀನನ್ನು ಗಣಿಗಾರಿಕೆಗೆ ಕೊಡುವುದರಿಂದ ನಷ್ಟದ ಭಯ ಇರುವುದಿಲ್ಲ. ತಮ್ಮ ಜಮೀನಿನಲ್ಲಿ ಕಬ್ಬಿಣದ ಅದಿರಿನ ಕಲ್ಲುಗಳು ದೊರೆತರೆ ಸಾವಿರಾರು ರೂಪಾಯಿಗಳ ಲಾಭ ಗಳಿಸಬಹುದು ಎನ್ನುವ ಉದ್ದೇಶವನ್ನು ಹೊಂದಿದ್ದಾರೆ.

ಕೆಲವೊಂದು ರೈತರು ಗಣಿಗಾರಿಕೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾರೆ. ಕಾರಣ ನಾವು ರೈತರು, ಭೂಮಿ ತಾಯಿಯ ಮಕ್ಕಳು, ಬಿಸಿಲು ಮಳೆಯನ್ನದೇ ಭೂಮಿ ತಾಯಿಯ ಒಡಲಲ್ಲಿ ದುಡಿಯುವುದು ನಮ್ಮ ಕರ್ತವ್ಯ. ನಾವು ಬೆಳೆದು ಹೊಟ್ಟೆ ತುಂಬಿಸಿಕೊಳ್ಳಬೇಕಾದ ಭೂಮಿಯನ್ನು ಕಬ್ಬಿಣದ ಪುಡಿ ಹಾಕಲು ಕೊಟ್ಟರೆ ಅದು ತನ್ನ ಸ್ವರೂಪವನ್ನು ಕಳೆದುಕೊಳ್ಳುತ್ತದೆ ಎಂಬ ವಾದವನ್ನು ಮುಂದಿಡುತ್ತಾರೆ.

ಕಷ್ಟಪಟ್ಟು ಬೆವರು ಸುರಿಸಿ ದುಡಿದರೂ ಸರಿಯಾದ ಫಲ ಸಿಗುವುದೇ ಕಷ್ಟ. ಇಂತಹವರಲ್ಲಿ ಗಣಿಗಾರಿಕೆಯ ಧೂಳು ಬೇರೆ ಬರುವುದರಿಂದ ಸರಿಯಾಗಿ ಬೆಳೆ ಬರುವುದಿಲ್ಲ ಎನ್ನುವ ಆತಂಕವನ್ನು ಮುಂದಿಡುತ್ತಾರೆ. "ಭಾರತ ದೇಶದ ಸಾಕಷ್ಟು ಪ್ರದೇಶ ಪ್ರತಿ ೪ ರಿಂದ ೫ ವರ್ಷಗಳಿಗೊಮ್ಮೆ ಕ್ಷಾಮಕ್ಕೆ ಗುರಿಯಾಗಿಯೇ ಆಗುತ್ತದೆ."[೧೯] ನಿಸರ್ಗ ಪ್ರಕೋಪಗಳನ್ನು ಎದುರಿಸುವುದಲ್ಲದೇ ಜೊತೆಗೆ ಮಾನವ ನಿರ್ಮಿತ ಪ್ರಕೋಪವನ್ನು (ಗಣಿಗಾರಿಕೆಯನ್ನು) ಎದುರಿಸಿ ಬದುಕಬೇಕಾಗಿದೆ. ಗಣಿಗಾರಿಕೆ ಬಗೆಗೆ ರೈತರ ನಿಲುವುಗಳನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ.

ಗಣಿಗಾರಿಕೆಗೆ ಕೊಟ್ಟ ಜಮೀನು ಮುಂದೆ ಕೃಷಿಗೆ ಬಳಸುವ ಸ್ವರೂಪದಲ್ಲಿ ಉಳಿಯುತ್ತದೆಯೆಂದು ೧೫ ಜನ ಹೇಳಿದರೆ, ಉಳಿಯುವುದಿಲ್ಲವೆಂದು ೭೬ ಜನ ರೈತರು ಅಭಿಪ್ರಾಯ ಪಡುತ್ತಾರೆ. ಇನ್ನು ೦೯ ಜನ ಮೌನ ವಹಿಸುತ್ತಾರೆ. ಅಥವಾ ಗೊತ್ತಿಲ್ಲ ಎನ್ನುವ ಅಂಶವನ್ನು ಮುಂದಿಡುತ್ತಾರೆ. ಗಣಿಗಾರಿಕೆಯಿಂದ ರೈತರ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಂಡಿವೆಯೇ ಎನ್ನುವ ವಿಚಾರಕ್ಕೆ, ಹೌದು ಎಂದು ೨೫ ಜನ ಹೇಳುತ್ತಾರೆ. ಇಲ್ಲ ಎಂದು ೬೩ ಜನ ಅಭಿಪ್ರಾಯ ಪಟ್ಟರೆ, ೦೭ ಜನ ಮಾತ್ರ ಗಣಿಗಾರಿಕೆಯಲ್ಲಿ ದುಡಿಯುವವರಿಗೆ ಉತ್ತಮವಾಗಿದೆ ಎಂದು ತಿಳಿಸುತ್ತಾರೆ. ೦೫ ಜನ ಗೊತ್ತಿಲ್ಲ ಎನ್ನುವ ಅಭಿಪ್ರಾಯವನ್ನು ಮುಂದಿಡುತ್ತಾರೆ.

[illegible]

[illegible]

[illegible]

[illegible]

ಕೃಷಿ ಲಾಭ ತರುತ್ತಿಲ್ಲವೆಂದು ೧೭ ಜನ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ೮೩ ಜನ ಗಣಿಗಾರಿಕೆ ನಡೆಸುತ್ತಿಲ್ಲ. ೧೧ ಜನ ರೈತರು ಹೊಸದಾಗಿ ಜಮೀನನ್ನು ತೆಗೆದುಕೊಂಡಿದ್ದಾರೆ. ಅದು ಕೃಷಿಗಾಗಿ ಮಾತ್ರ. ಆದರೆ ಗಣಿಗಾರಿಕೆಯ ಉದ್ದೇಶಕ್ಕಲ್ಲ ಎನ್ನುವ ಅಂಶ ತಿಳಿದುಬರುತ್ತದೆ. ಕಾರಿಗನೂರು, ಪಾಪಿನಾಯಕನಹಳ್ಳಿ, ಕಲ್ಲಹಳ್ಳಿಯಲ್ಲಿ ರೈತರು ಹೆಚ್ಚಾಗಿ ಗಣಿಗಾರಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಈ ಹಳ್ಳಿಗಳಲ್ಲಿ ಹೆಚ್ಚಿನ ಜನರು ತಮ್ಮ ತಮ್ಮ ಜಮೀನಿನಲ್ಲಿ ದೊರೆಯುವ ಕಬ್ಬಿಣ ಕಲ್ಲಿನ ಅದಿರನ್ನು ತೆಗೆದು ಗಣಿಗಾರಿಕೆ ಮಾಡುತ್ತಿದ್ದಾರೆ. ಕೆಲವರು ಬೇರೆಯವರ ಜಮೀನುಗಳನ್ನು ಪಡೆದುಕೊಂಡು ಅದರಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಕೆಲವರು ತಮ್ಮ ಜಮೀನುಗಳನ್ನು ಅದಿರಿನ ಕಣಜಕ್ಕಾಗಿ ಭೂಮಿಯನ್ನು ಗಣಿಮಾಲಿಕರಿಗೆ ನೀಡಿದ್ದಾರೆ. ಈ ಮೇಲೆ ತಿಳಿಸಿದ ಗ್ರಾಮಗಳಲ್ಲಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಗಣಿಗಾರಿಕೆಯನ್ನ ವಲಂಬಿಸಿದ್ದಾರೆಂದು ತಿಳಿಯುತ್ತದೆ.

೨. ಗಣಿಗಾರಿಕೆಯ ಪರ ಮತ್ತು ವಿರುದ್ಧ ನಡೆದ ಚಳುವಳಿಗಳ ವಿಶ್ಲೇಷಣೆ

ರೈತ ಒಬ್ಬ ದುಡಿದು ಹತ್ತಾರು ಮಂದಿಗೆ ಅನ್ನ ಹಾಕುತ್ತಾನೆ. ಆದರೆ ಇಂದಿನ ದಿನದಲ್ಲಿ ತನ್ನ ಅನ್ನದ ದುಡಿಮೆಗಾಗಿ ಹೋರಾಟ ನಡೆಸಬೇಕಾದ ಸ್ಥಿತಿ ಒದಗಿದೆ. ಗಣಿಗಾರಿಕೆಯ ಧೂಳಿನಿಂದ ಬೆಳೆಗಳು ನಷ್ಟವಾಗಿ ಹೋಗುತ್ತವೆ. ಗಣಿಗಾರಿಕೆಯ ಸುತ್ತ ೩೦೦ ಮೀಟರ್ ಒಳಗಿನ ಭೂಮಿಗೆ ಮಾತ್ರ ಒಂದಿಷ್ಟು ಪರಿಹಾರವನ್ನು ಗಣಿಮಾಲಿಕರು ನೀಡುತ್ತಾರೆ. ಅವರು ನೀಡುವ ಅಲ್ಪ ಹಣಕ್ಕೆ ರೈತನು ತನ್ನ ನಷ್ಟವನ್ನು ಸರಿದೂಗಿಸಿಕೊಳ್ಳಲು ಸಾಧ್ಯವಾದಿತೇ? ಅಲ್ಲದೇ ಇನ್ನುಳಿದ ರೈತರಿಗೆ ಪರಿಹಾರ ಯಾರು ಕೊಡುಬೇಕು? ರೈತರು ತಮಗಾಗುವ ಅನ್ಯಾಯವನ್ನು ಯಾರ ಮುಂದೆ ತೋಡಿಕೊಳ್ಳಬೇಕು? ಪ್ರಾಮಾಣಿಕತೆಗೆ ಇನ್ನೊಂದು ಹೆಸರೆಂದರೆ ನಿಜವಾದ ರೈತ. ಅನ್ಯಾಯವಾಗುತ್ತಿದ್ದರು ಸಹಿಸಿಕೊಂಡು ಹೋಗುತ್ತಿದ್ದಾನೆ.

ಕೆಲವೊಂದು ರೈತರು ಗಣಿಗಾರಿಕೆಯ ಧೂಳಿನ ವಿರುದ್ಧ ಪ್ರತಿಭಟಿಸಿದ್ದಾರೆ. ಅದರಲ್ಲಿ ಕೆಲವೊಂದು ರೈತರಿಗೆ ಅಲ್ಪಮಟ್ಟದ ಪರಿಹಾರ ದೊರೆಯುತ್ತಿದೆ. ಇನ್ನುಳಿದ ಪ್ರತಿಭಟಿಸಿದ ರೈತರಿಗೆ ಆಶ್ವಾಸನೆ ನೀಡಿದ್ದಾರೆ. ಇದನ್ನು ಕೇಳುವವರಾದರು ಯಾರು ಎನ್ನುವ ಅಂಶಕ್ಕೆ ಬಹಳಷ್ಟು ರೈತರು ಪ್ರತಿಭಟಿಸದೆ ಮೌನದಿಂದ ಅನ್ಯಾಯವನ್ನು ಸಹಿಸಿಕೊಂಡು ಹೋಗುತ್ತಿದ್ದಾರೆ. ಗಣಿಗಾರಿಕೆಯ ಧೂಳಿನಿಂದ ತಮ್ಮ ಬೆಳೆಗಳಿಗೆ ಹಾನಿಯಾಗುತ್ತಿದೆ ತಿಯೆಂದು ೨೮ ಜನ ಪ್ರತಿಭಟಿಸಿದ್ದಾರೆ. ೨೭ ಜನ ಮೌನ ವಹಿಸಿದ್ದಾರೆ. ಕಾರಣ ಪ್ರತಿಭಟನೆ ಮಾಡಿದರೆ ಅದನ್ನು ಕೇಳುವವರಾದರು ಯಾರು? ಮೊದಲೇ ತಿಳಿಸಿದಂತೆ ಬಳ್ಳಾರಿ ಜಿಲ್ಲೆಯು ಗಣಿಗಾರಿಕೆಯಲ್ಲಿ ಮುಂದಿದ್ದರೆ, ಚಳುವಳಿ ದೃಷ್ಟಿಯಿಂದ ಅಷ್ಟೇ ಕೆಳಸ್ಥಾನವನ್ನು ಹೊಂದಿದೆ ಎನ್ನುವ ಕೆ.ಮೋಹನ್‌ಕೃಷ್ಣ ರೈ ರವರ ಮಾತು ಅಕ್ಷರ ಸಹ ಸತ್ಯ ಎಂದು ತಿಳಿಯುತ್ತದೆ.

ಹೊಸಪೇಟೆ ಬಳ್ಳಾರಿ ಮಾರ್ಗದ ಹೆಚ್ಚಿನ ಗ್ರಾಮಗಳ ರೈತರು ಗಣಿಗಾರಿಕೆಯಿಂದ ಬೀಳುವ ಧೂಳಿನ ವಿರುದ್ಧ ಪ್ರತಿಭಟಿಸಿದ್ದಾರೆ. ಈ ಪ್ರತಿಭಟನೆಗಳು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಡೆದಿಲ್ಲದಿರುವುದರಿಂದ

[illegible]

ಮಹತ್ವವನ್ನು ಕಳೆದುಕೊಂಡು ಬಿಟ್ಟಿವೆ. ಪ್ರತಿಭಟನೆಯ ಸಮಯದಲ್ಲಿ ಗಣಿಗಾರಿಕೆಯ ಅದಿರಿನ್ನು ತುಂಬಿಕೊಂಡು ಲಾರಿಗಳು ಸಾಗುವ ಮಾರ್ಗದಲ್ಲಿ ರಸ್ತೆ ತಡೆ ನಡೆಸಿ ತಮ್ಮ ಬೇಡಿಕೆಗಳನ್ನು ಗಣಿಮಾಲಿಕರ ಮುಂದಿಟ್ಟಿದ್ದಾರೆ. ಇದರಿಂದ ಕೆಲವರಿಗೆ ಮಾತ್ರ ಸಣ್ಣ ಪ್ರಮಾಣದ ಪರಿಹಾರ ದೊರೆಯುತ್ತಿದೆ. ಉಳಿದವರಿಗೆ ಆಶ್ವಾಸನೆಯೇ ಪರಿಹಾರವಾಗಿದೆ.

ಹೊಸಪೇಟೆಯ ಕೆಲವೊಂದು ರೈತ ಸಂಘಟನೆಗಳು ತುಂಗಾ ಮೂಲ ಉಳಿಸಿ ಹೋರಾಟದಲ್ಲಿ ಭಾಗಿಯಾಗಿವೆ. ಒಂದು ಬಾರಿ ಕಣವಿರಾಯನಗುಡಿಯಲ್ಲಿ ಎಸ್.ಎಫ್.ಐ.ನಿಂದ ಪ್ರತಿಭಟನೆ ಮಾಡಿ ಬೈಪಾಸ್ ರಸ್ತೆಯನ್ನು ನಿರ್ಮಿಸಲಾಗಿದೆ. ಮುಗಿದು ಹೋಗುವ ಖನಿಜ ಸಂಪನ್ಮೂಲದ ಆಸೆಗಾಗಿ ನಮಗೆ ಆಹಾರ ಕೊಡುವ ಕೃಷಿಯನ್ನು ಹಿಂದೆ ತಳ್ಳುತ್ತಿದ್ದೇವೆ. ಒಂದಂತು ನಿಜ ಹಸಿವಾದರೆ ಮನುಷ್ಯ ಅನ್ನ ತಿನ್ನುತ್ತಾನೆ ವಿನಃ ಹಣವನ್ನಲ್ಲ. ಹಣದ ಆಸೆಗಾಗಿ ಹೊಟ್ಟೆ ತುಂಬಿಸುವ ಕೃಷಿಗೆ ದೊಡ್ಡ ಪ್ರಮಾಣದ ಕೊಡಲಿ ಪೆಟ್ಟನ್ನು ಹಾಕುತ್ತಿದ್ದೇವೆ. ಒಂದು ದೇಶ ಶ್ರೀಮಂತ ರಾಷ್ಟ್ರವಾಗಬೇಕಾದರೆ ಅಥವಾ ಮುಂದುವರಿಯಬೇಕಾದರೆ ಕೃಷಿ ಕ್ಷೇತ್ರ ಶ್ರೀಮಂತವಾಗಿರಬೇಕು. ಕೃಷಿ ಕ್ಷೇತ್ರ ಶ್ರೀಮಂತವಾಗಿರಬೇಕು ಎಂದರೆ ಕೃಷಿಯನ್ನವಲಂಬಿಸಿದ ರೈತನ ಸ್ಥಿತಿಗತಿಗಳು ಸುಧಾರಿಸಬೇಕು. ಇಲ್ಲದಿದ್ದರೆ ಶ್ರೀಮಂತ ರಾಷ್ಟ್ರವಾಗಿ ಬೆಳೆಯುವುದು ಕನಸಿನ ಮಾತಾಗುತ್ತದೆ. ಆದ್ದರಿಂದ ಕೃಷಿಯ ಉಳಿವಿಗಾಗಿ ನಾವೂ ನೀವೆಲ್ಲರೂ ಸರ್ವ ತ್ಯಾಗಕ್ಕೂ ಸಿದ್ಧವಾಗಿ ನಿಲ್ಲಬೇಕು. ಆಗ ಮಾತ್ರ ಏಳಿಗೆ ಸಾಧಿಸಲು ಸಾಧ್ಯ.

೫.೨. ಗಣಿಗಾರಿಕೆ ಪ್ರದೇಶದ ವಲಸಿಗರು, ಗಣಿಕಾರ್ಮಿಕರ ಸ್ಥಿತಿಗತಿಗಳು

ವಲಸಿಗರು ಮತ್ತು ಗಣಿಕಾರ್ಮಿಕರು ಮೂಲತಃ ಗಣಿಗಾರಿಕೆಯ ವೃತ್ತಿಯಿಂದ ಬಂದವರಲ್ಲ. ಇವರಲ್ಲಿ ಹೆಚ್ಚಿನವರು ಕೃಷಿಯ ಮೂಲದಿಂದ ಬಂದವರಾಗಿದ್ದಾರೆ. ಗಣಿಕಾರ್ಮಿಕರು ಕೃಷಿಯ ಜೊತೆಗೆ ಗಣಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವಲಸಿಗರು ಕೃಷಿ ಆಳುಗಳಾಗಿ ಮತ್ತು ಸಣ್ಣ ಪ್ರಮಾಣದ ಕೃಷಿಕರಾಗಿರುವುದು ತಿಳಿದುಬರುತ್ತದೆ. ಒಟ್ಟಿನಲ್ಲಿ ವಲಸಿಗರು ಮತ್ತು ಗಣಿಕಾರ್ಮಿಕರು ಮೊದಲು ಕೃಷಿಯನ್ನು ಅವಲಂಬಿಸಿದ್ದರೆಂದು ತಿಳಿದುಬರುತ್ತದೆ. ಅಂದರೆ ಇವರಲ್ಲಿ ಹೆಚ್ಚಿನವರು ಸಣ್ಣ ಹಿಡುವಳಿದಾರರಾಗಿದ್ದಾರೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ದುಡಿಮೆಯನ್ನರಿಸಿ ಹೋಗುವವರನ್ನು ವಲಸಿಗರು ಎಂದು ಕರೆಯುತ್ತೇವೆ. ಇವರಿಗೆ ನಿಶ್ಚಿತವಾದ ದುಡಿಮೆಯಿಲ್ಲವಾಗಿರುತ್ತದೆ ಎಂದು ಹೇಳಬಹುದು. ಅಥವಾ ತಮ್ಮ ಮೂಲ ಸ್ಥಳದಲ್ಲಿ ಜೀವನವನ್ನು ಸಾಗಿಸುವುದು ದುಸ್ತರವಾಗಿ ಕಂಡು ಬಂದಾಗ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ. ಉತ್ತಮ ಕೆಲಸ ಅಥವಾ ತಮ್ಮ ದುಡಿಮೆಗೆ ಹೆಚ್ಚಿನ ಹಣ ಸಿಗುವ ಕಡೆಗೆ ಹೋಗಿ ನೆಲೆಸುತ್ತಾರೆ. ಈ ಗಣಿಗಾರಿಕೆ ಪ್ರದೇಶದಲ್ಲಿ ವಲಸೆ ಬಂದವರಲ್ಲಿ ಮೊದಲಿಗೆ ಹೆಚ್ಚಿನವರು ತಮಿಳು, ಆಂಧ್ರ ಮತ್ತು ಮರಾಠಿಯವರಾಗಿದ್ದಾರೆ. ಅಲ್ಲದೇ ನಮ್ಮ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಜನರು ಸಹ ವಲಸೆ ಬಂದಿರುವುದು ಕಾಣುತ್ತದೆ. ತಮಿಳು, ಆಂಧ್ರ ಮತ್ತು ಮರಾಠಿಯವರು ಇಲ್ಲಿಯೇ ಶಾಶ್ವತವಾಗಿ ನೆಲಸಿದವರಂತೆ ಕಂಡುಬರುತ್ತಾರೆ. ಅಲ್ಪ ಸ್ವಲ್ಪ ಆಸ್ತಿಯನ್ನು ಮಾಡಿಕೊಂಡಿದ್ದಾರೆ. ನಮ್ಮ ರಾಜ್ಯದ

[illegible]

[illegible]

[illegible]

ವಿವಿದೆಡೆಗಳಿಂದ ಬಂದಿರುವರು ದುಡಿಮೆಯನ್ನರಸಿ ಬಂದವರಾಗಿದ್ದಾರೆ. ಸರಿಯಾದ ಮಳೆಗಾಲವಿಲ್ಲದ ಕಾರಣ ಬಂದಿದ್ದಾರೆ ಎನ್ನುವದು ತಿಳಿದುಬರುತ್ತದೆ. ದುಡಿಮೆ ಮುಗಿಸಿಕೊಂಡು ಇಲ್ಲವೇ ತಮ್ಮ ಪ್ರದೇಶಗಳಲ್ಲಿ ಉತ್ತಮ ವಾತಾವರಣ ಸೃಷ್ಟಿಯಾದರೆ ಹೋಗುವ ಇಚ್ಛೆಯನ್ನು ಹೊಂದಿದ್ದಾರೆ. ಅಂದರೆ ತಮ್ಮ ದುಡಿಮೆಗೆ ಪೂರಕವಾದ ವಾತಾವರಣ ನಿರ್ಮಾಣವಾದರೆ ಹೋಗುವ ಇಚ್ಛೆಯನ್ನು ಹೊಂದಿದ್ದಾರೆ.

ಗಣಿಕಾರ್ಮಿಕರು ಈ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಕೆಲವೊಂದು ರೈತರು ಸಹ ಕೃಷಿಯ ಜೊತಗೆ ಗಣಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಗಣಿಗಾರಿಕೆಯಲ್ಲಿರುವ ಕಾರ್ಮಿಕರಿಗೆ ಯಾವುದೇ ಸೌಲಭ್ಯಗಳನ್ನು ಒದಗಿಸಿಲ್ಲ. ಅಲ್ಲದೇ ಅವರು ಕೆಲಸದಲ್ಲಿ ತೊಡಗಿದಾಗ ಬಳಸಲು ರಕ್ಷಾಕವಚಗಳನ್ನು ನೀಡಿಲ್ಲ. ಇಂತಹ ಹೀನಸ್ಥಿತಿ ನಮ್ಮ ಗಣಿಕಾರ್ಮಿಕರಿಗಿದೆ. ತುತ್ತಿನ ಚೀಲವನ್ನು ತುಂಬಿಸಿಕೊಳ್ಳಲು ಮನುಷ್ಯ ಎಂತಹ ಶ್ರಮವನ್ನು ಪಡಬೇಕಾಗುತ್ತದೆ. ಈ ಕೆಲಸದಲ್ಲಿ ಉತ್ತಮ ಕೂಲಿ ಸಿಗುವುದರಿಂದ ಅವರು ಇದೇ ಕೆಲಸದಲ್ಲಿ ಮುದುವರೆಯಲು ಇಚ್ಛಿಸುತ್ತಿದ್ದಾರೆ.

೧. ವಲಸಿಗರು ಎಲ್ಲಿಂದ, ಯಾಕಾಗಿ ಈ ಪ್ರದೇಶಕ್ಕೆ ವಲಸೆ ಬಂದರು?

ಈ ಕೆಳಗಿನ ಉದ್ದೇಶಗಳನ್ನಿಟ್ಟುಕೊಂಡು ವಲಸಿಗರನ್ನು ಅಧ್ಯಯನ ಮಾಡಲಾಗಿದೆ.

- ಗಣಿಗಾರಿಕೆಯಲ್ಲಿ ಕಾರ್ಮಿಕರಾಗಲು ಹೊರಗಿನಿಂದ ಬಂದವರ ಸ್ಥಿತಿಗತಿಗಳ ವಿವರಣೆ
- ಯಾವ ಜನ ವಲಸೆ ಬಂದಿದ್ದಾರೆ. ಅದಕ್ಕೆ ಇರುವ ಕಾರಣಗಳಾವುವು? ಗಣಿಗಾರಿಕೆಯ ಇಡೀ ಪ್ರಕ್ರಿಯೆಯಲ್ಲಿ ವಲಸಿಗರ ಸ್ಥಾನಮಾನಗಳೇನು?
- ವಲಸಿಗರ ಸಾಮಾಜಿಕಾರ್ಥಿಕ ಸ್ಥಿತಿಗಳ ವಿವರಣೆ, ವಲಸಿಗರ ಆರೋಗ್ಯದ ಮೇಲಾಗುತ್ತಿರುವ ಪರಿಣಾಮಗಳಾವುವು?

ಹೆಚ್ಚಿನ ಪ್ರಮಾಣದ ವಲಸಿಗರು ಕೃಷಿ ಮೂಲದವರಾಗಿದ್ದಾರೆ. ಗಣಿಗಾರಿಕೆಗೆ ಬಂದ ವಲಸಿಗರಲ್ಲಿ ಗ್ರಾಮೀಣ ಪ್ರದೇಶದವರದೇ ಸಿಂಹಪಾಲು. ಕೃಷಿಯಲ್ಲಿ ಲಾಭ ದೊರೆಯದೆ, ಮಳೆ ಬೆಳೆ ಸರಿಯಾಗಿ ಆಗದೆ ಇರುವುದರಿಂದ ಇವರು ಗಣಿಗಾರಿಕೆಯನ್ನರಿಸಿ ಬಂದವರಾಗಿದ್ದಾರೆ. ಬಡತನ, ನಿರುದ್ಯೋಗ, ಸಣ್ಣ ಹಿಡುವಳಿ, ಅಲ್ಪ ಕೂಲಿ ವಲಸೆ ಬರುವುದಕ್ಕೆ ಪ್ರಮುಖ ಕಾರಣಗಳಾಗಿವೆ. ವಲಸಿಗರಲ್ಲಿ ಹೆಚ್ಚಿನವರು ಕೃಷಿಕಾರ್ಮಿಕರು ಅಥವಾ ಕೃಷಿ ಕೂಲಿ ಆಳುಗಳಾಗಿದ್ದಾರೆ. ಕೃಷಿಯಲ್ಲಿ ದೊರೆಯುವ ಅಲ್ಪ ಪ್ರಮಾಣದ ಕೂಲಿಯಿಂದ ಜೀವನ ನಡೆಸುವುದು ದುಸ್ತರವಾಗಿ ಉದ್ಯೋಗವನ್ನರಸಿ ಗಣಿಗಾರಿಕೆಯಡೆಗೆ ಬಂದವರಾಗಿದ್ದಾರೆ. ಸಣ್ಣ ಹಿಡುವಳಿದಾರರು ಅಲ್ಪ ಭೂಮಿಯಲ್ಲಿ ಮನೆಯವರೆಲ್ಲ ದುಡಿದು ಬದುಕುವುದು ಕಷ್ಟವಾಗಿ ಗಣಿಗಾರಿಕೆಯನ್ನವಲಂಬಿಸಬೇಕಾಯಿತು.

ಸಂದರ್ಶಿಸಲ್ಪಟ್ಟ ಒಟ್ಟು ೨೫ ಜನ ವಲಸಿಗರಲ್ಲಿ, ೦೫ ಜನ ೧ ರಿಂದ ೩ ಎಕರೆ ಭೂಮಿಯನ್ನು ಮತ್ತು ೩ ಜನ ೩ ರಿಂದ ೬ ಎಕರೆ ಕೃಷಿ ಭೂಮಿಯನ್ನು ಹೊಂದಿದವರಾಗಿದ್ದಾರೆ. ೦೫ ಜನ ಸಣ್ಣ ಮತ್ತು ೦೩ ಜನ ಮಧ್ಯಮ ಹಿಡುವಳಿದಾರರಾಗಿದ್ದಾರೆ. ಒಟ್ಟು ವಲಸೆ ಬಂದವರಲ್ಲಿ ೦೮ ಜನ ಕೃಷಿಕರಾಗಿರುವುದು ಗಮನಾರ್ಹ

ಸಂಗತಿಯಾಗಿದೆ. ಅಲ್ಲದೆ ಕೃಷಿ ಮೂಲದಿಂದ ೧೭ ಜನ ವಲಸೆ ಬಂದವರಾಗಿದ್ದಾರೆ. ೦೮ ಜನ ಕೃಷಿಕರಾದರೆ ೦೯ ಜನ ಕೃಷಿಕಾರ್ಮಿಕರಾಗಿದ್ದಾರೆ. ಕೃಷಿಕಾರ್ಮಿಕರು ಮತ್ತು ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದಿರುವುದು ಕಂಡುಬರುತ್ತದೆ. ಸರಿಯಾಗಿ ಮಳೆ, ಬೆಳೆ, ಕೂಲಿ ದೊರೆಯದೆ ಇರುವುದು ವಲಸೆ ಬರಲು ಪ್ರಮುಖ ಕಾರಣ ಎನ್ನುವ ಅಂಶ ತಿಳಿದುಬರುತ್ತದೆ.

ಜೀವನ ನೌಕೆಯನ್ನು ಸಾಗಿಸಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವುದು ಅನಿವಾರ್ಯ ಜೀವನಕ್ಕಾಗಿ ದುಡಿಮೆಯನ್ನರಸಿ ಹೋಗುವಾಗ ಇಲ್ಲಿಯೇ ಹೋಗಬೇಕು. ಇಲ್ಲಿಯೇ ಇರಬೇಕು ಎನ್ನುವ ನಿಶ್ಚಿತ ನೆಲೆ ಇರುವುದಿಲ್ಲ. ಉತ್ತಮ ಗಳಿಕೆಯಿರುವ ಉದ್ಯೋಗ ಎಲ್ಲಿ ಸಿಗುತ್ತದೆಯೋ ಅಲ್ಲಿಗೆ ಹೋಗಿ ನೆಲೆಸುವುದು ಅನಿವಾರ್ಯ. ಒಂದು ಪ್ರದೇಶಕ್ಕೆ ವಲಸಿಗರ ಸಂಖ್ಯೆ ಜಾಸ್ತಿಯಾದಂತೆ ಅಲ್ಲಿನ ಪರಿಸರ ಸಹ ಏರು ಪೇರಾಗುವ ಸಂಭವವಿರುತ್ತದೆ. ವಲಸಿಗರು ಹಲವಾರು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಮುಖ್ಯವಾಗಿ ಪರಿಸರಕ್ಕೆ ಹೊಂದಿಕೊಳ್ಳುವುದು, ಮೂಲಭೂತ ಸಾಮಗ್ರಿಗಳ ಕೊರತೆ, ನಿವೇಶನದ ಅಭಾವ, ಪರಿಚಯವಿಲ್ಲದ ಜನ ಹೀಗೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಹೀರಾಪುರದಿಂದ ೭ ಮತ್ತು ಅದೇ ಜಿಲ್ಲೆಯ ಕುಕನೂರಿನಿಂದ ೨ ಹೊಸಪೇಟೆ ತಾಲ್ಲೂಕಿನ ಹುಲಿಗಿ ಹತ್ತಿರದ ಮಹಮ್ಮದ್ ನಗರದಿಂದ ೬, ಬಂಡಿಹರ್ಲಾಪುರದಿಂದ ೩, ಕವಳಿಯಿಂದ ೧, ಬಳ್ಳಾರಿ ಕಪ್ಪಗಲ್ ೩, ಗದಗದಿಂದ ೧, ಗಂಗಾವತಿ ತಾಲೂಕಿನ ಬೆಣಕಲ್ ೧, ಹಗರಿಬೊಮ್ಮನಹಳ್ಳಿಯ ಹತ್ತಿರದ ಆನೇಕಲ್ ತಾಂಡದಿಂದ ೧, ಆಂಧ್ರದಿಂದ ೨ ಕುಟುಂಬಗಳು ವಲಸೆ ಬಂದವುಗಳಾಗಿವೆ. ಇವರಲ್ಲಿ ೧೭ ಕುಟುಂಬಗಳು ಹೊಟ್ಟೆಪಾಡಿಗಾಗಿ ಬಂದವರಾಗಿದ್ದಾರೆ. ೮ ಕುಟುಂಬಗಳು ಕೃಷಿ ಕೂಲಿ ಸಿಗದೆ, ಸಣ್ಣ ಹಿಡುವಳಿದಾರರಾಗಿರುವುದರಿಂದ ಮಳೆ ಬೆಳೆ ಸರಿಯಾಗಿ ಆಗದೆ ವಲಸೆ ಬಂದವರಾಗಿದ್ದಾರೆ. ದಿನನಿತ್ಯದ ಹೊಟ್ಟೆಪಾಡು ಇವರ ತಕ್ಷಣದ ಅಗತ್ಯವಾಗಿದೆ. ಇಲ್ಲಿಗೆ ಬಂದು ನೆಲೆಸಿರುವ ಎಲ್ಲ ವಲಸಿಗರಿಗೆ ಇಲ್ಲೇ ನೆಲೆ ನಿಲ್ಲುವ ಇಚ್ಚೆ ಇದೆ.

೨. ವಲಸಿಗರ ಸಾಮಾಜಿಕಾರ್ಥಿಕ ಸ್ಥಿತಿಗತಿಗಳು

ವಲಸೆ ಬಂದ ಗಣಿಕಾರ್ಮಿಕರು ಹೊಸ ಪ್ರದೇಶದಲ್ಲಿ ಜೀವನ ನಡೆಸುವುದು ಮೊದಲಿಗೆ ದುಸ್ತರವಾಗಿ ಕಾಣುತ್ತದೆ. ತಮ್ಮ ಸಂಬಂಧಿಗಳನ್ನು, ಅಲ್ಪ ಸ್ವಲ್ಪ ಆಸ್ತಿಯನ್ನು, ಮುಖ್ಯವಾಗಿ ತಮ್ಮ ಒಡನಾಡಿಯಾದ ಪ್ರದೇಶವನ್ನ ಬಿಟ್ಟು ಬಂದು ಬೇರೆಡೆ ಜೀವನ ಸಾಗಿಸುವುದು ಸುಲಭದ ಮಾತಲ್ಲ. ವಲಸೆ ಬಂದ ಕುಟಂಬಕ್ಕೆ ಭದ್ರತೆಯಿಲ್ಲದಂತಾಗುತ್ತದೆ. ಹಬ್ಬ ಹರಿದಿನ ಮುತಾದ ಮಹತ್ವದ ಕಾರ್ಯಗಳಲ್ಲಿ ಉತ್ಸಾಹವಿಲ್ಲದಂತಾಗುತ್ತದೆ. ಸ್ಥಳೀಯರು ಅವರನ್ನು ಚೆನ್ನಾಗಿ ನೋಡಿಕೊಂಡರು ಸಹ ಪರಕೀಯ ಭಾವನೆ ಅವರಲ್ಲಿ ಕಾಡುತ್ತಿರುತ್ತದೆ. ಕೂಲಿಯನ್ನು ನಂಬಿಕೊಂಡು ಜೀವನ ಸಾಗಿಸಬೇಕಾಗಿರುವುದರಿಂದ ಇವರಿಗೆ ಆರ್ಥಿಕ ಸಮಸ್ಯೆಯು ಕಂಡುಬರುತ್ತದೆ. ವಲಸಿಗರಲ್ಲಿ ಚಿಕ್ಕಮಕ್ಕಳು ಅಥವಾ ಶಾಲೆ ಕಲಿಯುವ ವಯಸ್ಸಿನ ಮಕ್ಕಳು ಶಾಲೆಯಿಂದ ದೂರ ಉಳಿಯುತ್ತವೆ. ಅವರ ಜೀವನ ಕೂಲಿಯಿಂದಲೇ ನಡೆಯಬೇಕಾಗಿರುವುದರಿಂದ ಮಗುವಿನ ತಂದೆ-

[illegible]

[illegible]

[illegible]

[illegible]

ತಾಯಿ ಇಬ್ಬರು ಕೆಲಸಕ್ಕೆ ಹೋಗುತ್ತಾರೆ. ದೊಡ್ಡ ಮಗು ಚಿಕ್ಕ ಮಕ್ಕಳನ್ನು ಆಟವಾಡಿಸಲು ಮತ್ತು ಮನೆಯ ಹತ್ತಿರ ಇರಲು ಬಿಟ್ಟುಹೋಗುತ್ತಾರೆ. ಹೀಗೆ ಸಾಮಾಜಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ.

ವಲಸೆ ಬರುವವರು ಆರ್ಥಿಕ ಭದ್ರತೆಯನ್ನು ಹೊಂದಿರುವುದಿಲ್ಲ. ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ದಿನದ ಕೂಲಿ ಅಥವಾ ದುಡಿಮೆಯೇ ಇವರ ಜೀವನಕ್ಕೆ ಆಧಾರ. ಇವರು ಕೂಲಿಯನ್ನು ನಂಬಿಕೊಂಡು ಬದುಕುತ್ತಾರೆ. ಎಲ್ಲಿ ಹೆಚ್ಚಿನ ಕೂಲಿ ದೊರೆಯುತ್ತದೆಯೋ ಅಲ್ಲಿ ಹೋಗಿ ನೆಲೆಸುವ ಇಚ್ಛೆಯನ್ನು ಹೊಂದಿರುತ್ತಾರೆ. ಉತ್ತಮವಾದ ಜೀವನ ನಡೆಸುವುದು ಕಷ್ಟಮಯವಾಗಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಲು ಸಹ ಹಿಂಜರಿಯುತ್ತಾರೆ. ಕಾರಣ ಮಗು ಮನೆಯ ಹತ್ತಿರ ಇರಲಿ ಎನ್ನುವ ಉದ್ದೇಶವನ್ನು ಕೆಲವರು ಹೊಂದಿದ್ದರೆ, ಆ ಮಗು ಕೈಲಾದಷ್ಟು ದುಡಿದರೆ ನಾಲ್ಕಾರು ಕಾಸು ಸಂಪಾದಿಸಬಹುದು ಎನ್ನುವ ಆಲೋಚನೆಯು ಒಂದಾಗಿದೆ. ಮೂಲಭೂತ ಸಾಮಗ್ರಿಗಳನ್ನು ಜೋಡಿಸಿಕೊಳ್ಳುವುದು ಕಷ್ಟವಾಗುತ್ತದೆ.

ವಲಸಿಗರು ಸಾಮಾಜಿಕಾರ್ಥಿಕವಾಗಿ ಹಿಂದುಳಿದಿರುವುದು ಕಂಡುಬರುತ್ತದೆ. ಕ್ಷೇತ್ರಕಾರ್ಯದಲ್ಲಿ ೨೫ ಜನರನ್ನು ಸಂದರ್ಶಿಸಲಾಗಿದೆ, ೨೦ ರಿಂದ ೩೦ ವಯೋಮಾನದವರು ೦೪ ಜನ, ೩೦ ರಿಂದ ೪೦ ವಯೋಮಾನದವರು ೦೭ ಜನ, ೪೦ ೫೦ ವಯೋಮಾನದವರು ೧೪ ಜನ, ೫೦ ರಿಂದ ೬೦ ವಯೋಮಾನದವರು ೦೪ ಜನ, ೬೦ ರಿಂದ ೭೦ ವಯೋಮಾನದವರು ೦೬ ಜನ ಗಣಿಗಾರಿಕೆಯ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ವಲಸೆ ಬಂದವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚಾಗಿ ಕಂಡುಬರುತ್ತಾರೆ.

ಕ್ರ.ಸಂ.	**ವಲಸೆ ಬಂದವರ ಜಾತಿ**	**ಸಂಖ್ಯೆಗಳಲ್ಲಿ**
೧.	ಹರಿಜನ	೧೧
೨.	ಲಂಬಾಣಿ	೦೭
೩.	ಬೋವಿ	೦೨
೪.	ನಾಯಕ	೦೨
೫.	ಅಗಸ	೦೧
೬.	ಕುರುಬ	೦೧
೭.	ಮುಸ್ಲಿಂ	೦೧

ಪರಿಶಿಷ್ಟ ಜಾತಿಯಿಂದ ೨೦ ಜನ, ಪರಿಶಿಷ್ಟ ಪಂಗಡ ಅಂದರೆ ನಾಯಕ ಸಮುದಾಯದ ೦೨ ಜನ, ಒಟ್ಟು ೨೨ ಕುಟುಂಬಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಂದ ಕಂಡುಬರುತ್ತಾರೆ. ಉಳಿದಂತೆ ಅಗಸ ೦೧, ಕುರುಬ ೦೧ ಮುಸ್ಲಿಂ ೦೧ ಕುಟುಂಬಗಳು ಕಂಡುಬರುತ್ತವೆ. ಹೆಚ್ಚಾಗಿ ಕೆಳವರ್ಗದ ಸಮುದಾಯಗಳು ವಲಸೆ ಬರುತ್ತಿರುವುದು ಕಂಡುಬರುತ್ತದೆ.

ವಲಸಿಗರಲ್ಲಿ ೧ ರಿಂದ ೩ ಎಕರೆ ಒಣ ಭೂಮಿಯನ್ನು ಹೊಂದಿದ ೦೫ ಕುಟುಂಬಗಳು ಕಂಡುಬರುತ್ತದೆ. ೩ ರಿಂದ ೬ ಎಕರೆ ಒಣಭೂಮಿಯನ್ನು ಹೊಂದಿದ ೦೩ ಕುಟುಂಬಗಳು ಕಂಡುಬರುತ್ತವೆ. ಉಳಿದಂತೆ ಭೂ ರಹಿತ ಕುಟಂಬಗಳಾಗಿವೆ. ಅಲ್ಪ ಪ್ರಮಾಣದ ಒಣ ಭೂಮಿಯಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುವುದು ಕಷ್ಟದ ಕೆಲಸವಾಗಿದೆ. ಇವರಿಗೆ ಉತ್ತಮವಾದ ಆರ್ಥಿಕ ಹಿನ್ನೆಲೆ ಇಲ್ಲದಿರುವುದರಿಂದ ವಲಸೆ ಒಂದು ಜೀವನ ಸಾಗಿಸುವುದು ಅನಿವಾರ್ಯ. ಗಣಿಗಾರಿಕೆಯ ಕೆಲಸ ಅಪಾಯವಿದೆಯೆಂದು ತಿಳಿದರು ಸಹ ಹೊಟ್ಟೆ ಪಾಡಿಗಾಗಿ ದುಡಿಯಬೇಕಾದ ಅನಿವಾರ್ಯವನ್ನು ೧೭ ಜನ, ಜೀವನ ಸಾಗಿಸುವುದಕ್ಕಾಗಿ ೫ ಜನ, ಬಡತನದಿಂದಾಗಿ ೩ ಕುಟುಂಬಗಳು ಗಣಿಗಾರಿಕೆಯನ್ನು ಅವಲಂಬಿಸಿವೆ.

ವಲಸೆ ಬಂದು ನೆಲೆಸುವುದು ಸಾಮಾನ್ಯ ವಿಷಯವಲ್ಲ. ಹೊಸ ಪರಿಸರಕ್ಕೆ ಹೊಂದಿಕೊಳ್ಳುವುದು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಬೇಕು. ಆದ್ದರಿಂದ ಸ್ವಲ್ಪ ಕಠಿಣಮಯ ಸ್ಥಿತಿ ಎಂದು ತಿಳಿಯುತ್ತದೆ. ಇವರಿಗೆ ಇಲ್ಲಿ ತಮ್ಮದೇಯಾದ ಸಂಘಟನೆಯಿಲ್ಲ. ಗಣಿಗಾರಿಕೆಯ ಕೆಲಸ ಕಷ್ಟದಾಯಕವಾದುದಾದರೂ ಎಲ್ಲ ಜನ ಈ ಕೆಲಸದಲ್ಲಿ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಗಣಿಗಾರಿಕೆಯ ಪ್ರದೇಶವು ರೋಗ ರುಜಿನೆಗಳ ತವರಾಗಿರುತ್ತದೆ. ಹೆಚ್ಚಿನ ಜನರು ವೈದ್ಯರ ಬಳಿ ಚಿಕಿತ್ಸೆ ಪಡೆದಿದ್ದಾರೆ. ಇಂತಹ ಸಂದರ್ಭದಲ್ಲಿ ಇವರಿಗೆ ವಿಶ್ರಾಂತಿ ಅವಶ್ಯಕವಾಗಿರುತ್ತದೆ. ಸ್ವಚ್ಛತೆಯ ಅಭಾವ ಮುಂಜಾಗ್ರತೆಯಿಲ್ಲದಿರುವುದು, ಪೌಷ್ಟಿಕ ಆಹಾರ ಸೇವನೆ ಮಾಡದಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಗಣಿಗಾರಿಕೆಯ ಕೆಲಸದಲ್ಲಿ ತೊಡಗಿದಾಗ ಯಾವುದಾದರೂ ಅನಾರೋಗ್ಯ ಸಂಭವಿಸಿದರೆ ಗಣಿ ಮಾಲಿಕರು ಚಿಕಿತ್ಸೆ ಕೊಡಿಸುತ್ತಾರೆ. ಉಳಿದ ಸಮಯದಲ್ಲಿ ನಾವೇ ತೋರಿಸಿಕೊಳ್ಳಬೇಕು ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಗಣಿಗಾರಿಕೆಯ ಧೂಳು ಪರಿಸರದ ಜೊತೆಗೆ ಮನುಷ್ಯನ ಆರೋಗ್ಯವನ್ನು ಹಾಳು ಮಾಡುತ್ತದೆಯೆಂದು ಎಲ್ಲಾ ವಲಸಿಗರಿಗೆ ತಿಳಿದಿದ್ದರೂ ಸಹ ಅದೇ ಕೆಲಸದಲ್ಲಿ ತೊಡಗಿದ್ದಾರೆ.

ಸಾಮಾಜಿಕವಾಗಿ ಇವರು ಹಿಂದುಳಿದಿರುವುದು ಕಂಡಬರುತ್ತದೆ. ಇನ್ನು ಆರ್ಥಿಕವಾಗಿ ಇವರ ಸ್ಥಿತಿಗತಿಗಳನ್ನು ಈ ಮುಂದೆ ಪರಿಶೀಲಿಸೋಣ. ೦೫ ಜನ ಪ್ರಾಥಮಿಕ ಶಿಕ್ಷಣವನ್ನು, ೦೨ ಜನ ಪ್ರೌಢ ಶಿಕ್ಷಣವನ್ನು ಪಡೆದರೆ ೧೮ ಜನ ಅನಕ್ಷರಸ್ಥರಾಗಿದ್ದಾರೆ, ೨೫ ಕುಟುಂಬಗಳಿಂದ ೧೧೪ ಜನಸಂಖ್ಯೆಯನ್ನು ಹೊಂದಿದ್ದಾರೆ. ಇದರಲ್ಲಿ ೫೪ ಜನ ಗಂಡಸರು, ೬೦ ಜನ ಹೆಂಗಸರು ಇದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಮಕ್ಕಳು ಮತ್ತು ವಯಸ್ಸಾದವರನ್ನು ಸೇರಿಸಿ ೫೨ ಜನ ಅವಲಂಬಿತರಾಗಿದ್ದಾರೆ. ೨೦ ಜನ ಗುಡಿಸಲುಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ೦೪ ಜನ ಸ್ವಂತ ಮನೆಗಳನ್ನು ಹೊಂದಿದ್ದಾರೆ. ೦೧ ಕುಟುಂಬ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದೆ. ಇವರಲ್ಲಿ ಎಲ್ಲರೂ ಗಣಿಗಾರಿಕೆಯ ಕಾರ್ಮಿಕರಾಗಿದ್ದಾರೆ.

೧೦೦೦ ರಿಂದ ೧೫೦೦ ರೂ.ಮಾಸಿಕ ವೇತನವನ್ನು ೧೬ ಜನ ಪಡೆಯುತ್ತಿದ್ದಾರೆ. ೧೫೦೦ ರಿಂದ ೨೦೦೦ ರೂ.ಗಳನ್ನು ೦೭ ಜನ, ೨೫೦೦ ರಿಂದ ೩೦೦೦ ವರೆಗೆ ಒಬ್ಬರು, ೩ ಸಾವಿರ ಮೇಲ್ಪಟ್ಟು ಒಬ್ಬರು ಪಡೆಯುತ್ತಿದ್ದಾರೆ. ಇವರ ಆರ್ಥಿಕ ಮಟ್ಟ ತುಂಬಾ ಕೆಳಮಟ್ಟದಲ್ಲಿರುವುದು ಇದರಿಂದ ತಿಳಿದುಬರುತ್ತದೆ.

ವಲಸಿಗರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಾಗಿ ಕಂಡುಬರುತ್ತಾರೆ. ಅವರ ಜೀವನ ಕೆಳಮಟ್ಟದಲ್ಲಿರುವುದು ತಿಳಿದುಬರುತ್ತದೆ.

೩. ಗಣಿಕಾರ್ಮಿಕರ ಆರ್ಥಿಕ ಹಿನ್ನೆಲೆ ಮತ್ತು ಸ್ಥಿತಿಗತಿಗಳು

ಕೃಷಿ ಕಾರ್ಮಿಕರು ಮತ್ತು ಕೃಷಿ ಸಮುದಾಯಗಳು ಒಂದೇ ನಾಣ್ಯದ ಎರಡು ಮುಖಗಳು. ಕೃಷಿಯಿಲ್ಲದೆ ಕೃಷಿಕರಲ್ಲ. ಕೃಷಿಕರಿಲ್ಲದೆ ಕೃಷಿಯಿಲ್ಲ. ಕೃಷಿಯಲ್ಲಿ ತೊಡಗಿರುವವನೆ ಕೃಷಿಕ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನವರು ರೈತರಾಗಿದ್ದಾರೆ. ಭೂಮಿ ತಾಯಿಯ ಮೇಲೆ ಉತ್ತು, ಬಿತ್ತು ಬೆಳೆ ತೆಗೆಯುವವನನ್ನು ಸಾಮಾನ್ಯ ಅರ್ಥದಲ್ಲಿ ಕೃಷಿಕ ಅಥವಾ ರೈತ ಎಂದು ಕರೆಯುತ್ತೇವೆ. ಕೇವಲ ಒಬ್ಬ ಕೃಷಿಕ ಅಥವಾ ರೈತನನ್ನು ಕೃಷಿ ಸಮುದಾಯವೆಂದು ಕರೆಯಲಾಗದು. ಸಮುದಾಯವೆಂದರೆ ನಾವು, ನಮ್ಮವರು ಎನ್ನುವ ಭಾವನೆಯೊಂದಿಗೆ ನಿರ್ದಿಷ್ಟ ಭೂಪ್ರದೇಶದಲ್ಲಿ ವಾಸ ಮಾಡುವ ಸಮೂಹವನ್ನು ಸಮುದಾಯವೆಂದು ಕರೆಯಲಾಗುವುದು. ಅದರಂತೆ ಹಲವಾರು ಜನ ಕೃಷಿಕರನ್ನೊಳಗೊಂಡ ಸಮೂಹವನ್ನು ಕೃಷಿ ಸಮುದಾಯ ಎಂದು ಕರೆಯುತ್ತೇವೆ.

ನಮ್ಮ ದೇಶದ ಹೆಚ್ಚಿನ ಪಾಲು ಕೃಷಿ ವ್ಯವಸ್ಥೆಯು ಮಾನವನ ಶ್ರಮವನ್ನವಲಂಬಿಸಿದೆ. ಕೃಷಿಕರಂತೆ ಕೃಷಿಕಾರ್ಮಿಕರು ಸಹ ಕೃಷಿಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಾರೆ. ಕೃಷಿಕಾರ್ಮಿಕರು ಮತ್ತು ಕೃಷಿ ಸಮುದಾಯಗಳು ಒಂದಕ್ಕೊಂದು ಪೂರಕವಾಗಿವೆ. ಕೃಷಿಕಾರ್ಮಿಕರಲ್ಲಿ ಹೆಚ್ಚಾಗಿ ಭೂರಹಿತರು, ಅಂಚಿನಲ್ಲಿರುವ ಕೃಷಿಕರು ಮತ್ತು ಸಣ್ಣ ಹಿಡುವಳಿ ಕೃಷಿಕರಾಗಿರುತ್ತಾರೆ. ಅಂಚಿನಲ್ಲಿರುವ ಮತ್ತು ಸಣ್ಣ ಹಿಡುವಳಿದಾರರು ತಮ್ಮ ಕೃಷಿ ಕಾರ್ಯಗಳ ಜೊತೆಗೆ ಕೃಷಿ ಕಾರ್ಮಿಕರಾಗಿ ದುಡಿಯುವ ಅನಿವಾರ್ಯತೆಯನ್ನು ಎದುರಿಸುತ್ತಿರುತ್ತಾರೆ. ಅಂದರೆ ಇವರು ಆರ್ಥಿಕವಾಗಿ ಹಿಂದುಳಿದವರಾಗಿರುವುದರಿಂದ ಕೃಷಿ ಕಾರ್ಮಿಕರಾಗಿ ತೊಡಗಿರುವುದು ಕಂಡುಬರುತ್ತದೆ. ಭೂರಹಿತ ಕುಟುಂಬಗಳು ಜೀವನಕ್ಕಾಗಿ ಕೃಷಿಕಾರ್ಮಿಕರಾಗಿದ್ದಾರೆ. ಹೊಸಪೇಟೆ ತಾಲೂಕಿನ ಗಣಿಗಾರಿಕೆಯ ವ್ಯಾಪ್ತಿಯೊಳಗಿನ ಗಣಿಕಾರ್ಮಿಕರಲ್ಲಿ ಹೆಚ್ಚಿನವರು ಕೃಷಿಕರಾಗಿರುವುದು ಕಂಡುಬರುತ್ತದೆ.

ಗಣಿಗಾರಿಕೆಯಲ್ಲಿ ತೊಡಗಿಕೊಂಡಿರುವ ಗಣಿಕಾರ್ಮಿಕರಲ್ಲಿ ೧೨ ಜನ ೧ ರಿಂದ ೩ ಎಕರೆ ಕೃಷಿ ಭೂಮಿಯನ್ನು ಹೊಂದಿದ್ದಾರೆ. ಒಬ್ಬರು ಮಾತ್ರ ೫ ಎಕರೆ ಕೃಷಿ ಭೂಮಿಯನ್ನು ಹೊಂದಿದ್ದಾರೆ. ಅಂದರೆ ೧೨ ಜನ ಸಣ್ಣ ಹಿಡುವಳಿ ಕೃಷಿಕರು ಮತ್ತು ಒಬ್ಬರು ಮಧ್ಯಮ ಹಿಡುವಳಿ ಕೃಷಿಕರಾಗಿದ್ದಾರೆ. ಸಣ್ಣ ಹಿಡುವಳಿ ಕೃಷಿಯಿಂದ ಇಡೀ ಕುಟುಂಬ ಜೀವನ ಮಾಡಲು ಸಾಧ್ಯವಿಲ್ಲವೆಂದು ಗಣಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ೦೮ ಜನ ಗಣಿಕಾರ್ಮಿಕರು ಕೃಷಿ ಕಾರ್ಮಿಕರಾಗಿ ದುಡಿಯುವುದರಲ್ಲಿ ಹೆಚ್ಚಿನ ಸಂಭಾವನೆ ದೊರೆಯುವುದಿಲ್ಲ ಎನ್ನುವ ಅಂಶವನ್ನು ವ್ಯಕ್ತಪಡಿಸುತ್ತಾರೆ. ಕೃಷಿ ಚಟುವಟಿಕೆಯ ಕೂಲಿ ಆಳುಗಳಾಗಿ ಒಂದು ದಿನಪೂರ್ತಿ ದುಡಿದಷ್ಟು ಹಣವನ್ನು, ಗಣಿಕಾರ್ಮಿಕರಾಗಿ ಕೆಲವೇ ತಾಸುಗಳಲ್ಲಿ ಹೆಚ್ಚಿನ ಪ್ರಮಾಣದ ಕೂಲಿ ಪಡೆಯುತ್ತೇವೆ ಎನ್ನುತ್ತಾರೆ. ಕೆಲವೊಂದು ಸಲ ಮಳೆ ಸರಿಯಾಗಿ ಬರದೆ ಬೆಳೆ ಹಾಳಾಗಿ ಹೋದಾಗ ಅವರು ನಷ್ಟವನ್ನು ಅನುಭವಿಸಿ ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಅಲ್ಪಪ್ರಮಾಣದ ಭೂಮಿಯಲ್ಲಿ ಮನೆಯವರೆಲ್ಲ ದುಡಿಯುವುದು ಬೇಕಾಗಿಲ್ಲ. ಆಗ ಕುಟುಂಬದ ಉಳಿದ ಸದಸ್ಯರು ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಅಲ್ಲದೆ ಕೃಷಿಕರು ಗಣಿಕಾರ್ಮಿಕರಾಗಿರುವುದಕ್ಕೆ ಈ ಕೆಳಗಿನ ಕಾರಣಗಳು ಸಹ ಪ್ರಮುಖವಾಗಿವೆ.

[illegible]

- ಚಿಕ್ಕ ಹಿಡುವಳಿ
- ನಿರುದ್ಯೋಗ
- ಅತಿವೃಷ್ಟಿ / ಅನಾವೃಷ್ಟಿ
- ಬಡತನ
- ಅಜ್ಞಾನ
- ದೊಡ್ಡ ಕುಟುಂಬ ಇತ್ಯಾದಿ.

ಒಟ್ಟು ಸಂದರ್ಶಿಸಲ್ಪಟ್ಟ ೨೫ ಜನ ಗಣಿಕಾರ್ಮಿಕರಲ್ಲಿ ೧೬ ಜನ ಬಡತನದಿಂದಾಗಿ ಕೆಲಸಕ್ಕೆ ಸೇರಿದ್ದಾರೆ, ನಿರುದ್ಯೋಗದಿಂದ ೧೪ ಜನ, ಅನಿವಾರ್ಯತೆಯಿಂದ ೭ ಜನ ಮತ್ತು ಉತ್ತಮ ಕೂಲಿ ದೊರೆಯುತ್ತದೆ ಎಂದು ೧೮ ಜನ ಗಣಿಕಾರ್ಮಿಕರಾಗಿ ಸೇರಿದ್ದಾರೆ.

ಈ ಕೆಳಗಿನ ಮುಖ್ಯ ಉದ್ದೇಶಗಳನ್ನಿಟ್ಟುಕೊಂಡು ಗಣಿಕಾರ್ಮಿಕರನ್ನು ಅಧ್ಯಯನ ಮಾಡಲಾಗಿದೆ. ಅವುಗಳೆಂದರೆ

- ಗಣಿಕಾರ್ಮಿಕರಾಗಿ ರೂಪಾಂತರಗೊಂಡ ಸಣ್ಣ ರೈತರ ವರ್ತಮಾನದ ಅನಿವಾರ್ಯತೆಗಳನ್ನು ತಿಳಿದುಕೊಳ್ಳುವುದು. ಯಾವ ಯಾವ ಬಗೆಯ ರೈತರು ಗಣಿಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದು. ಅಂಚಿನಲ್ಲಿರುವ ಮತ್ತು ಸಣ್ಣ ಹಿಡುವಳಿದಾರರು ವಲಸೆ ಬಂದಿರುವುದಕ್ಕೆ ಕಾರಣಗಳೇನು? ಇವರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಇವರ ಜೀವನ ನಿರ್ವಹಣೆಯನ್ನು ಮನಗಾಣುವುದು.
- ಈ ಬಗೆಯ ರೈತರ ಕೃಷಿ ಜಮೀನು ಯಾವ ಬಗೆಯಲ್ಲಿ ಬಳಸಲ್ಪಡುತ್ತಿದೆ ಎಂದು ಪರಿಶೀಲಿಸುವುದು. ಗಣಿಕಾರ್ಮಿಕರಾದ ಮೇಲೆ ಈ ಸಮುದಾಯ ಯಾವ ಬಗೆಯ ಆರ್ಥಿಕ ಸ್ಥಿತಿಗತಿಯಲ್ಲಿ ಬದುಕುತ್ತಿದೆ ಎಂದು ವಿವರಿಸಿಕೊಳ್ಳುವುದು.
- ಗಣಿಕಾರ್ಮಿಕರ ಆರೋಗ್ಯದ ಮೇಲಾಗುತ್ತಿರುವ ಪರಿಣಾಮಗಳು. ಗಣಿಗಾರಿಕೆಯನ್ನು ಈ ವ್ಯಕ್ತಿಗಳು ಆಯ್ಕೆ ಮಾಡಿಕೊಂಡಿರುವುದಕ್ಕೆ ಇರುವ ಕಾರಣಗಳು. ಗಣಿಕಾರ್ಮಿಕರ ಸಾಮಾಜಿಕಾರ್ಥಿಕ ಸ್ಥಿತಿಗಳನ್ನು ತಿಳಿದುಕೊಳ್ಳುವುದು. ಗಣಿಗಾರಿಕೆಯಲ್ಲಿರುವ ಉತ್ಪಾದನಾ ಸಂಬಂಧಗಳ ವಿವರಣೆ. ವಲಸಿಗರ ಆರೋಗ್ಯ, ಈ ಸ್ಥಳಕ್ಕೆ ಬಂದು ಆಶ್ರಯಿಸಿರುವುದರ ಬಗೆಗೆ ತಿಳಿಯುವುದು. ಜೊತೆಗೆ ಇವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವಲ್ಲಿ ಪ್ರಯತ್ನಿಸುವುದು.
- ಗಣಿಕಾರ್ಮಿಕರ ಆರೋಗ್ಯದ ಸಮಸ್ಯೆಗಳು. ಅವರು ತೆಗೆದುಕೊಳ್ಳುವ ಮುನ್ನೆಚ್ಚರಿಕೆ, ಆರೋಗ್ಯದ ಸಮಸ್ಯೆಯಾದಾಗ ಯಾವುದಾದರೂ ಪರಿಹಾರಗಳು ದೊರೆಯುತ್ತವೆಯೇ ಎನ್ನುವುದನ್ನು ಅಧ್ಯಯನಿಸುವುದು.
- ಗಣಿಗಾರಿಕೆಯನ್ನು ಕುರಿತು ಅವರ ತಿಳುವಳಿಕೆಯನ್ನು ವಿವರಿಸಿಕೊಳ್ಳುವುದು.

[illegible]

ಗಣಿಕಾರ್ಮಿಕರಲ್ಲಿ, ಹೆಚ್ಚಿನವರು ಹಿಂದುಳಿದ ವರ್ಗದವರಾಗಿದ್ದಾರೆ. ಇವರಲ್ಲಿ ಶೇ.೮೦ರಷ್ಟು, ಅಂದರೆ ೨೦ ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದಾರೆ. ಇನ್ನು ೦೫ ಕುಟುಂಬಗಳು ಇತರೆ ಹಿಂದುಳಿದ ವರ್ಗಗಳಿಂದ ಕೂಡಿವೆ. ೦೭ ಜನ ಪ್ರಾಥಮಿಕ ಶಿಕ್ಷಣವನ್ನು ೦೨ ಜನ ಪ್ರೌಢ ಶಿಕ್ಷಣವನ್ನು ಪಡೆದವರನ್ನು ಹೊತರು ಪಡಿಸಿದರೆ ೧೬ ಜನ ಅನಕ್ಷರಸ್ಥರಾಗಿದ್ದಾರೆ.

ಗಣಿಗಾರಿಕೆಯ ಕಾರ್ಮಿಕರಲ್ಲಿ ಹೆಚ್ಚಿನವರು ಕೃಷಿಯಿಂದ ಬಂದವರಾಗಿದ್ದಾರೆ. ಕೆಲವರು ಕೃಷಿಯ ಜೊತೆಗೆ ಬದಲಿ ವೃತ್ತಿಯಾಗಿ ಗಣಿಗಾರಿಕೆಯನ್ನು ೧೩ ಜನ ಅನುಸರಿಸುತ್ತಿದ್ದಾರೆ. ಇನ್ನುಳಿದ ೧೨ ಜನ ಭೂರಹಿತರಾಗಿದ್ದಾರೆ. ಈ ಭೂರಹಿತ ಕುಟುಂಬಗಳಲ್ಲಿ ವಲಸೆ ಬಂದವರು ಸಹ ಕಂಡುಬರುತ್ತಾರೆ. ಭೂಮಿ ಹೊಂದಿದ ಕುಟುಂಬಗಳು ಚಿಕ್ಕ ಹಿಡುವಳಿದಾರರಾಗಿ ಕಂಡುಬರುತ್ತಾರೆ. ಅಂದರೆ ೦೧ ರಿಂದ ೦೩ ಎಕರೆ ಒಣ ಭೂಮಿಯನ್ನು ಹೊಂದಿದವರಾಗಿದ್ದಾರೆ. ಕೃಷಿಯಿಂದ ಬರುವ ಆದಾಯ ಅತ್ಯಂತ ಕಡಿಮೆಯಿರುವುದರಿಂದ ಇವರು ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ.

ಗಣಿ ಕಾರ್ಮಿಕರಲ್ಲಿ ೨೧ ಜನ ತಾತ್ಕಾಲಿಕ ಹುದ್ದೆಯ ಆಧಾರದ ಮೇಲೆ ಕೂಲಿ ಆಳುಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ೧೦೦೦ ದಿಂದ ೨೦೦೦ ರೂ. ಗಳವರೆಗೆ ಮಾಸಿಕ ವೇತನವನ್ನು ನಿಗದಿಗೊಳಿಸಲಾಗಿದೆ. ೦೨ ಜನ ಲಾರಿ ಚಾಲಕರಾಗಿ, ೦೧ ಕಾವಲುಗಾರ, ೦೧ ಸೂಪರ್‌ವೈಸರ್ ಆಗಿ ಕಾರ್ಯನಿರ್ವಹಿಸುತ್ತಾರೆ. ಇವರಿಗೆ ೨೦೦೦ ದೀದ ೩೦೦೦ ರೂ.ಗಳವರೆಗೆ ಮಾಸಿಕ ವೇತನ ನಿಗದಿಗೊಳಿಸಲಾಗಿದೆ. ತಾತ್ಕಾಲಿಕ ಕಾರ್ಮಿಕರಿಗೆ ಹೋಲಿಸಿದರೆ, ದಿನಗೂಲಿಗಳಿಗೆ ಅತ್ಯಂತ ಕಡಿಮೆ ಕೂಲಿ ಸಿಗುತ್ತದೆ. ಗಣಿಕಾರ್ಮಿಕರಲ್ಲಿ ೧೨ ಜನ ಬೇರೆ ಕಡೆ ಕೆಲಸ ಸಿಗದ ಕಾರಣ ಇದರಲ್ಲಿ ಸೇರ್ಪಡೆಯಾದರು. ೦೬ ಕುಟುಂಬಗಳು ಭೂಮಿ ಹೊಂದಿಲ್ಲದವುಗಳಾಗಿವೆ. ೦೮ ಜನರು ಕೃಷಿ ಕೂಲಿಗಿಂತ ಗಣಿಗಾರಿಕೆಯಲ್ಲಿ ಉತ್ತಮ ಕೂಲಿ ದೊರೆಯುತ್ತದೆ ಎನ್ನುವ ಆಶಯವನ್ನು ವ್ಯಕ್ತಪಡಿಸಿದರು.

೨೫ ಜನ ಗಣಿ ಕಾರ್ಮಿಕರಲ್ಲಿ ೦೯ ಜನ ಗಣಿಗಾರಿಕೆಯ ಕೆಲಸ ಬಿಟ್ಟು ಬೇರೆ ಕೆಲಸವನ್ನು ಮಾಡಲು ಇಚ್ಛಿಸಿದರೆ, ೦೯ ಜನರು ಗಣಿಗಾರಿಕೆಯ ಕೆಲಸ ಬಿಡಲು ಇಚ್ಛಿಸುವುದಿಲ್ಲ, ೦೭ ಜನ ಈ ಪ್ರಶ್ನೆಗೆ ಉತ್ತರಿಸದೆ ಮೌನ ವಹಿಸಿದ್ದಾರೆ. ಗಣಿಕಾರ್ಮಿಕರಿಗೆ ಮಾಲಿಕರು ಒದಗಿಸಿರುವ ಸೌಲಭ್ಯಗಳ ಕುರಿತು ಅತ್ಯಂತ ನೀರಸ ಪ್ರತಿಕ್ರಿಯೆಗಳು ದಾಖಲಾಗಿವೆ. ೦೨ ಕುಟುಂಬಗಳಿಗೆ ಮಾತ್ರ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ ಜನರಿಗೆ ಯಾವುದೇ ಸೌಲಭ್ಯ ಲಭ್ಯವಾಗಿಲ್ಲ.

ಗಣಿಗಾರಿಕೆಯ ಧೂಳಿನಿಂದ ಬರುವ ಕಾಯಿಲೆಗಳಿಂದ ೧೯ ಜನ ನರಳುತ್ತಿದ್ದಾರೆ. ಇದರಲ್ಲಿ ೧೬ ಜನರು ಗಣಿಗಾರಿಕೆಯ ಧೂಳನ್ನು ಉಸಿರಾಡಿಸುವುದರಿಂದ ಟಿ.ಬಿ. ಮುಂತಾದ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಬರುತ್ತದೆ ಎನ್ನುವ ತಿಳುವಳಿಕೆಯನ್ನು ಹೊಂದಿದ್ದಾರೆ. ಯಾವುದೇ ತೊಂದರೆ ಒದಗಿದರೂ ಗಣಿಗಾರಿಕೆಯವರು ವೈದ್ಯಕೀಯ ನೆರವನ್ನು ನೀಡುವುದಿಲ್ಲವೆಂದು ೨೦ ಜನ ತಿಳಿಸಿದರೆ, ೦೫ ಜನ ವೈದ್ಯಕೀಯ ನೆರವಿನ ಸೌಲಭ್ಯವಿದೆ ಎಂದು ತಿಳಿಸುತ್ತಾರೆ. ಇವರಿಗೆ ತಮ್ಮದೇ ಆದ ಗಣಿ ಕಾರ್ಮಿಕರ ಸಂಘಟನೆಯಿಲ್ಲ.

ಗಣಿಗಾರಿಕೆಯ ಕಾರ್ಮಿಕರಲ್ಲಿ ಕೆಲವರು ಅಲ್ಪ ಹಿಡುವಳಿದಾರರಾಗಿದ್ದಾರೆ. ಕೃಷಿಗಿಂತ ಗಣಿಗಾರಿಕೆಯ ಮೇಲೆ ಅವಲಂಬನೆಯಾಗಿದ್ದಾರೆ. ಸರಿಯಾದ ಮಳೆಯಿಲ್ಲದೆ ಬೆಳೆದ ಬೆಳೆ ತಮ್ಮ ಕೈ ಸೇರುತ್ತದೆ ಎನ್ನುವ ನಂಬಿಕೆ ಅವರಲ್ಲಿ ಇಲ್ಲವಾಗಿದೆ. ಗಣಿಕಾರ್ಮಿಕರು ದುಡಿಯಬೇಕು ತಿನ್ನಬೇಕು ಎನ್ನುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಗಣಿಮಾಲಿಕರಿಂದ ಇವರಿಗೆ ಯಾವುದೇ ಮೂಲಭೂತ ಸೌಕರ್ಯಗಳಾಗಲಿ, ಪಿಂಚಣಿ ಸೌಲಭ್ಯವನ್ನಾಗಲಿ, ಜೀವವಿಮೆ ಮುಂತಾದ ಸೌಲಭ್ಯಗಳನ್ನು ಒದಗಿಸಿಲ್ಲ.

ಕೆಳವರ್ಗದ ಸಮುದಾಯಗಳು ಎಂದರೆ ಶ್ರಮಜೀವಿ ವರ್ಗಗಳೆಂದು ತಿಳಿಯುತ್ತದೆ. ದುಡಿಮೆಯೇ ಈ ಜನರ ಆಸ್ತಿ. ಆದ್ದರಿಂದ ಗಣಿಕಾರ್ಮಿಕರ ಸ್ಥಿತಿಗತಿಗಳು ಹೀನಾಯವಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ.

ಗಣಿಗಾರಿಕೆಯು ಪರಿಸರದ ಒಂದು ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ. ಗಣಿಗಾರಿಕೆ ನಡೆಸುವುದು ಅನಿವಾರ್ಯವಾಗಿದೆ. ಗಣಿಗಾರಿಕೆಯು ಹಲವಾರು ಜನರಿಗೆ ಉದ್ಯೋಗವನ್ನು ಕಲ್ಪಿಸಿದೆ. ರಾಷ್ಟ್ರದ ಆದಾಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಗಣಿಗಾರಿಕೆಯಿಂದ ರಾಷ್ಟ್ರವು ಪ್ರಗತಿ ಪಥದತ್ತ ಸಾಗಬಹುದಾಗಿದೆ. ಆದರೆ ಪರಿಸರಕ್ಕೆ ಧಕ್ಕೆಯಾಗದಂತೆ ಮುಂಜಾಗ್ರತೆಯ ಕ್ರಮಗಳನ್ನು ಅನುಸರಿಸಿ ಪರಿಸರ ನಾಶ ಮತ್ತು ಮಾಲಿನ್ಯತೆಯನ್ನು ತಾಂತ್ರಿಕತೆಯ ಮೂಲಕ ನಿವಾರಿಸಬೇಕು. ಗಣಿಗಾರಿಕೆ ಪ್ರದೇಶದ ಆರ್ಥಿಕ ಚಟುವಟಿಕೆಯು ಪ್ರಮುಖ ಪಾತ್ರ ವಹಿಸುತ್ತದೆ. ಗಣಿಗಾರಿಕೆಯಿಂದ ಲಾಭವಿದೆ. ಆದರೆ ರೈತರ ಕೃಷಿ ಜಮೀನುಗಳು ಮತ್ತು ಬೆಳೆಗಳು ತಮ್ಮ ಗುಣಮಟ್ಟವನ್ನು ಕಳೆದುಕೊಳ್ಳುತ್ತಿವೆ. ಕೆಲವೊಂದು ರೈತರು ಕೃಷಿಗಿಂತ ಗಣಿಗಾರಿಕೆ ಲಾಭದಾಯಕವೆಂದು ತಮ್ಮ ಜಮೀನನ್ನು ಗಣಿಗಾರಿಕೆಗೆ ನೀಡಿದ್ದಾರೆ ಮತ್ತು ನೀಡುತ್ತಿದ್ದಾರೆ. ಆದರೆ ಗಣಿಗಾರಿಕೆಯನ್ನು ಅವಲಂಬಿಸದ ರೈತರಿಗೆ ಇದು ಕಷ್ಟದಾಯಕವಾದುದಾಗಿ ಪರಿಣಮಿಸುತ್ತದೆ. ಗಣಿಗಾರಿಕೆಯ ಪ್ರದೇಶದೆಡೆಗೆ ಹಲವಾರು ಬಗೆಯ ವಲಸಿಗರು ಉದ್ಯೋಗವನ್ನರಸಿ ಬರುತ್ತಿದ್ದಾರೆ. ವಲಸೆ ಬಂದವರಲ್ಲಿ ಹೆಚ್ಚಿನವರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಅಂಚಿನಲ್ಲಿರುವ ಮತ್ತು ಸಣ್ಣ ಹಿಡುವಳಿದಾರರಿಗೆ ಗಣಿಗಾರಿಕೆಯು ಪ್ರಮುಖ ಕ್ಷೇತ್ರವಾಗಿ ಪರಿಣಮಿಸಿದೆ. ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಂದರೆ ಅವರಿಗೆ ಉದ್ಯೋಗವನ್ನು ನೀಡಿದೆ.

ಟಿಪ್ಪಣಿಗಳು

೧. ಭೂ ವಿಜ್ಞಾನ ಮತ್ತು ಗಣಿ ಇಲಾಖೆ ಮಾಹಿತಿ

೨. ಪ್ರಜಾವಾಣಿ, ದಿನಪತ್ರಿಕೆ, ೧೦.೮.೦೫, ಪು.೧

೩. ಭೂವಿಜ್ಞಾನ ಮತ್ತು ಗಣಿ ಇಲಾಖೆ ಮಾಹಿತಿ

೪. ಕರ್ನಾಟಕದ ಖನಿಜ ಸಂಪತ್ತು, ಕೆ. ಗವಿಶೆಟ್ಟಿ, ಪು.೪೯, ೫೦

೫. Distribution of the World's Mineral Wealth, K. Rajagopalaswamy, P:11

೬. ಕರ್ನಾಟಕದ ಪರಿಸರ ಪರಿಸ್ಥಿತಿ ವರದಿ ೧೯೮೫-೮೬, ಸೆಸಿಲ್ ಜೆ ಸಾಲ್ಡಾನ್ಹಾ, ಪು.೧೦೮

[illegible]

೭. ಕುದುರೆಮುಖ, ಪ್ರೊ. ಶಿವರಾಮಯ್ಯ, ಪು.೩

೮. Compendium of Environment Statistics. 1998. P:129

೯. Iron Ores of Mysore State. B.P. Radhakrishna. P:28

೧೦. ಅದೇ......ಪು.೬೨

೧೧. ಪರಿಸರ ಪ್ರಜ್ಞೆ, ಡಾ. ವ್ಹಿ.ಸಿ. ಚವಡಿ, ಪು.೪೫

೧೨. ಗಾಳಿಗೆ ವಿಷ ನೀರಿಗೆ ವಿಷ, ಎನ್. ಮಣಿವಾಸಕಮ್, ಪು.೧

೧೩. ಕುದುರೆಮುಖ, ಪ್ರೊ. ಶಿವರಾಮಯ್ಯ, ಪು.೪

೧೪. ಪರಿಸರ ಚಳುವಳಿಗಳು, ಕೆ. ಮೋಹನ್‌ಕೃಷ್ಣ ರೈ, ಪು.೩೦

೧೫. ಗಾಳಿಗೆ ವಿಷ ನೀರಿಗೆ ವಿಷ, ಎನ್. ಮಣಿವಾಸಕಮ್, ಪು.೪

೧೬. Compendium of Environment Statistics. 1999. P:145

೧೭. ಮತ್ತೊಂದು ಮೌನ ಕಣಿವೆ, ಸತೀಶ್ ಚಪ್ಪರಿಕೆ, ಅ.ನ. ಯಲ್ಲಪ್ಪರೆಡ್ಡಿ, ಪು.೭೬

೧೮. ಭಾರತ ಪರಿಸರ ದ್ವಿತೀಯ ಸಮೀಕ್ಷೆ, ಶಿವರಾಮ ಕಾರಂತ, ಪು.೨೩

೧೯. ಅದೇ... ಪು.೧೯

ಅಧ್ಯಾಯ ೬

೬.೧. ಕ್ಷೇತ್ರಕಾರ್ಯದ ದತ್ತಾಂಶಗಳ ವಿಶ್ಲೇಷಣೆ

೬.೨. ಅಧ್ಯಯನದ ಫಲಿತಗಳು

೬.೩. ಕೋಷ್ಟಕಗಳು

ಪೀಠಿಕೆ

ಈ ಅಧ್ಯಾಯದಲ್ಲಿ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಈ ಮಾಹಿತಿಯ ವಿಶ್ಲೇಷಣೆಯಲ್ಲಿ ರೈತರು ಮತ್ತು ಕೃಷಿಯ ವಿಷಯಕ್ಕೆ ಹೆಚ್ಚಿನ ಮಹತ್ವ ಕೊಡಲಾಗಿದೆ. ವಲಸಿಗರು ಮತ್ತು ಗಣಿಕಾರ್ಮಿಕರ ದತ್ತಾಂಶಗಳ ವಿಶ್ಲೇಷಣೆಯನ್ನು ಈ ಹಿಂದಿನ ಅಧ್ಯಯನದಲ್ಲಿ ತಿಳಿಸಲಾಗಿದೆ. ದತ್ತಾಂಶ ವಿಶ್ಲೇಷಣೆಗೆ ಕೃಷಿ ಮತ್ತು ರೈತ ಈ ಎರಡು ವಿಷಯಕ್ಕೆ ಮಹತ್ವ ನೀಡಲಾಗಿದೆ. ಕಾರಣ ಕೃಷಿ ಮತ್ತು ರೈತ ಒಂದೇ ನಾಣ್ಯದ ಎರಡು ಮುಖಗಳು. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯ ವಿಶ್ಲೇಷಣೆಯ ಜೊತೆಗೆ ಅಧ್ಯಯನದ ಫಲಿತಗಳು ಮತ್ತು ಕೋಷ್ಟಕಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ರೈತರು

ಗಣಿಗಾರಿಕೆಯಿಂದ ಅನೇಕ ಪರಿಣಾಮಗಳನ್ನು ಎದುರಿಸುತ್ತಿರುವ ಮತ್ತು ಗಣಿಗಾರಿಕೆಯ ಪ್ರದೇಶಕ್ಕೆ ತೀರಾ ಸಮೀಪವಿರುವ ರೈತರನ್ನು ಸಂದರ್ಶನಕ್ಕೆ ಮತ್ತು ಮಾಹಿತಿ ಸಂಗ್ರಹಣೆಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ನಾವು ಸಂದರ್ಶಿಸಿದ ರೈತರು ಗಣಿಗಾರಿಕೆಯಿಂದ ನೇರ ಮತ್ತು ಪರೋಕ್ಷ ಪರಿಣಾಮಗಳನ್ನು ಎದುರಿಸುತ್ತಿರುವವರೇ ಆಗಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ಪ್ರದೇಶದ ೧೦೦ ರೈತರನ್ನು ಮುಖ್ಯವಾಗಿ ಇಲ್ಲಿ ಮಾಹಿತಿ ಪಡೆಯಲು ಮತ್ತು ಸಂದರ್ಶಿಸಲು ಆಯ್ಕೆ ಮಾಡಿಕೊಳ್ಳಲಾಗಿತ್ತು. ನನ್ನ ಅಧ್ಯಯನದ ಮುಖ್ಯವಾದ ಉದ್ದೇಶ ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುತ್ತಿರುವ ಪರಿಣಾಮಗಳನ್ನು ತಿಳಿಯುವುದಾಗಿದೆ. ಜೊತೆಗೆ ಕಲ್ಲಿನ ಕ್ವಾರೆ, ಸುಣ್ಣ ತಯಾರಿಕೆ, ಮಣ್ಣಿನ ಇಟ್ಟಿಗೆ ಮತ್ತು ಸಿಮೆಂಟಿನ ಇಟ್ಟಿಗೆಯ ಉದ್ಯಮಗಳನ್ನು ಒಳಗೊಂಡಿದೆ.

ಹೆಚ್ಚಿನ ರೈತರನ್ನು ಕಬ್ಬಿಣದ ಅದಿರಿನ ಗಣಿಗಾರಿಕೆಯ ಬಗ್ಗೆ ಮಾಹಿತಿ ಪಡೆಯಲು ಸಂದರ್ಶಿಸಿದ್ದೇನೆ. ಉಳಿದವುಗಳಿಗೆ ಸಣ್ಣ ಪ್ರಮಾಣದ ಆದ್ಯತೆಯನ್ನು ನೀಡಲಾಗಿದೆ. ಕಾರಣ ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ಕೃಷಿ ಕ್ಷೇತ್ರಕ್ಕೆ ಮತ್ತು ಪರಿಸರಕ್ಕೆ ದೊಡ್ಡ ಪೆಟ್ಟು ಬೀಳುತ್ತಿದೆ. ಅದರಂತೆ ಸುಣ್ಣ ತಯಾರಿಕೆಯು ಹೊಗೆ ಮತ್ತು ಧೂಳಿನಿಂದ ಕೂಡಿರುತ್ತದೆ. ಕಲ್ಲಿನ ಕ್ವಾರೆಯ ಧೂಳಿನ ಜೊತೆಗೆ ಸುಂದರವಾದ ಗುಡ್ಡಗಾಡುಗಳನ್ನು ಬೋಳು ಮಾಡುತ್ತಿದೆ. ಮಣ್ಣಿನ ಇಟ್ಟಿಗೆ ತಯಾರಿಕೆಯು ಸಹ ಕೃಷಿ ಕ್ಷೇತ್ರಕ್ಕೆ ದೊಡ್ಡ ಪ್ರಮಾಣದ ಪೆಟ್ಟನ್ನು ನೀಡುತ್ತಿದೆ. ಅಂದರೆ ಮಣ್ಣಿನ ಇಟ್ಟಿಗೆ ತಯಾರಿಸಲು ಫಲವತ್ತಾದ ಕೃಷಿ ಭೂಮಿಯ

ಮಣ್ಣನ್ನು ಬಳಸುತ್ತಾರೆ. ಕೇವಲ ಇಟ್ಟಿಗೆ ತಯಾರಿಕೆಗಾಗಿ ಫಲವತ್ತಾದ ಮಣ್ಣನ್ನು ಈ ರೀತಿ ದುರುಪಯೋಗ ಮಾಡಲಾಗುತ್ತಿದೆ. ಫಲವತ್ತಾದ ಮಣ್ಣಿಗಿಂತ ಇಟ್ಟಿಗೆ ತಯಾರಿಕೆ ಅಷ್ಟೊಂದು ಅವಶ್ಯಕವೇ? ಕೇವಲ ೩೦ರಿಂದ ೫೦ರೂ.ಗಳಿಗಾಗಿ ಒಂದು ಟ್ರ್ಯಾಕ್ಟರ್ ಮಣ್ಣನ್ನು ರೈತರ ಜಮೀನಿನಿಂದ ತರುತ್ತಾರೆ. ಮಣ್ಣಿನ ಇಟ್ಟಿಗೆ ತಯಾರಿಕೆಯು ಸಹ ಕೃಷಿಯ ಮೇಲೆ ತನ್ನ ಪರಿಣಾಮವನ್ನು ಬೀರಿದೆ ಎಂದು ಹೇಳಿದರೆ ತಪ್ಪಾಗಲಾರದು.

ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳು ಎನ್ನುವ ಅಧ್ಯಯನಕ್ಕಾಗಿ ರೂಪಿಸಲ್ಪಟ್ಟ ೬೪ ಪ್ರಶ್ನೆಗಳಿರುವ ಪ್ರಶ್ನಾವಳಿಯಲ್ಲಿ ಸ್ವಲ್ಪಮಟ್ಟಿಗೆ ಸಾಮಾಜಿಕಾರ್ಥಿಕ ಹಿನ್ನೆಲೆಗೆ ಒತ್ತು ಕೊಡಲಾಗಿದೆ. ಇಲ್ಲಿ ನಾವು ಕ್ಷೇತ್ರಕಾರ್ಯ ಮಾಡಿದ ರೈತರಲ್ಲಿ ಕೆಲವರು ಬೇರೆಯವರಿಂದ ಭೂಮಿಯನ್ನು ಗುತ್ತಿಗೆಗೆ ಪಡೆದು ಜೀವನ ನಡೆಸುತ್ತಿದ್ದಾರೆ. ಬಹಳಷ್ಟು ಕೃಷಿ ಭೂಮಿಯನ್ನು ಗಣಿಗಾರಿಕೆಯ ಮಾಲಿಕರು ರೈತರಿಗೆ ಹಣದ ಆಸೆ ತೋರಿಸಿ ಅವುಗಳಿಗೆ ಬೆಲೆ ಕಟ್ಟಿ ಕೊಂಡುಕೊಂಡಿದ್ದಾರೆ. ಹೊಸಪೇಟೆ ಬಳ್ಳಾರಿ ಮಾರ್ಗದಲ್ಲಿರುವ ಫಾರಂಗಳು ಗಣಿಗಾರಿಕೆಯ ಮಾಲಿಕರಿಗೆ ಮತ್ತು ನಗರದ ಶ್ರೀಮಂತ ವ್ಯಕ್ತಿಗಳಿಗೆ ಸೇರಿದವುಗಳಾಗಿವೆ. ಕೃಷಿಯೋಗ್ಯ ಭೂಮಿಗಳು ರೈತರ ಕೈ ಸೇರುವುದು ಬಿಟ್ಟು ಶ್ರೀಮಂತರ ಫಾರಂ ಮತ್ತು ಎಸ್ಟೇಟ್‌ಗಳಾಗಿ ರೂಪುಗೊಳ್ಳುತ್ತಿವೆ. ಅಲ್ಪ ಹಣದ ಆಸೆಗಾಗಿ ಭೂಮಿಯನ್ನು ಕಳೆದುಕೊಂಡ ರೈತ ಇಂದು ತನ್ನ ಜಮೀನಿಗಾಗಿ ಪರಿತಪಿಸುವಂತಾಗಿದೆ.

೧೦೦ ಜನ ಸಂದರ್ಶಿಸಲ್ಪಟ್ಟವರಲ್ಲಿ ೨೦ರಿಂದ ೩೦ ವಯೋಮಾನದವರು ೩೫, ೩೦ ರಿಂದ ೪೦ ವರ್ಷ ವಯೋಮಾನದವರು ೨೫ ಜನ, ೪೦ ರಿಂದ ೫೦ ವರ್ಷ ವಯೋಮಾನದವರು ೨೦ ಜನ, ೫೦ ರಿಂದ ೬೦ ವರ್ಷ ವಯೋಮಾನದವರು ೯ ಜನ, ೬೦ ರಿಂದ ೭೦ ವರ್ಷ ವಯೋಮಾನದವರು ೧೧ ಜನರಾಗಿದ್ದಾರೆ. ಇಲ್ಲಿ ೨೦ ರಿಂದ ೩೦ ವಯಾಮಾನದವರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿರುವುದು ಕಂಡುಬರುತ್ತದೆ. ನಂತರದಲ್ಲಿ ೩೦ ರಿಂದ ೪೦ ವರ್ಷದವರು ಕಂಡುಬರುತ್ತಾರೆ. ಕೃಷಿ ಕ್ಷೇತ್ರದಲ್ಲಿ ಚಿಕ್ಕ ವಯೋಮಾನದಿಂದ ವೃದ್ಧರವರೆಗೂ ತೊಡಗಿರುವುದು ತಿಳಿಯುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನೊಳಗೊಂಡ ಸಮುದಾಯಗಳೆಂದರೆ ಹರಿಜನ, ಬೋವಿ, ಲಂಬಾಣಿ, ನಾಯಕ, ಮೇದರು, ಗಂಗಾಮತ ಸಮುದಾಯಗಳಿಂದ ೩೬ ಜನ ರೈತರನ್ನು ಸಂದರ್ಶಿಸಲಾಗಿದೆ. ಉಳಿದ ೬೪ ಜನ ಹಿಂದುಳಿದ ಜಾತಿಗೆ ಸೇರಿದವರಾಗಿದ್ದಾರೆ. ಇದರಲ್ಲಿ ಹೆಚ್ಚಾಗಿ ಕುರುಬ ಸಮುದಾಯ ಕಂಡುಬರುತ್ತದೆ. ಉಳಿದಂತೆ ಲಿಂಗಾಯತ, ದಾಸರು, ಅಗಸ, ಹಡಪದ, ಈಡಿಗ, ಕುಂಬಾರ, ಉಪ್ಪಾರ, ಶೆಟ್ಟಿಬಣಜಿಗ, ಬ್ರಾಹ್ಮಣ ಸಮುದಾಯಗಳನ್ನು ಒಳಗೊಂಡಿದೆ. ಅಲ್ಲದೆ ಇದರಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಂ ಮತ್ತು ರಜಪೂತರನ್ನು ಸಹ ಸಂದರ್ಶಿಸಲಾಗಿದೆ.

ನಮ್ಮ ಕ್ಷೇತ್ರಕಾರ್ಯದ ಸಂದರ್ಶನ ನೀಡಿದ ರೈತರಲ್ಲಿ ೫೦%ಕ್ಕೂ ಅಧಿಕ ಅನಕ್ಷರಸ್ಥರಿದ್ದಾರೆ. ಇವರಲ್ಲಿ ೨೬ ಜನ ಪ್ರಾಥಮಿಕ ಶಿಕ್ಷಣ, ೧೫ ಜನ ಪ್ರೌಢ ಶಿಕ್ಷಣ, ೫ ಜನ ಪಿ.ಯು.ಸಿ. ಮತ್ತು ಐ.ಟಿ.ಐ. ಹಾಗೂ ಟಿ.ಸಿ.ಹೆಚ್., ಡಿಪ್ಲೋಮಗಳ ಪೈಕಿ ೧, ೩ ಜನ ಪದವಿ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಕೃಷಿ ಕ್ಷೇತ್ರ ಹಿಂದುಳಿಯಲು ಅನಕ್ಷರತೆಯು ಸಹ ಒಂದಾಗಿದೆ.

[illegible]

ಹೆಚ್ಚಿನ ರೈತರು ಕೃಷಿಯನ್ನು ಬಿಟ್ಟು ಬೇರೆ ಯಾವ ಉಪಕಸುಬನ್ನು ಅವಲಂಬಿಸಿಲ್ಲ. ಕೆಲವೊಂದು ರೈತರು ಕೃಷಿಯ ಜೊತೆಗೆ ಉಪಕಸುಬುಗಳನ್ನು ಅವಲಂಬಿಸಿದ್ದಾರೆ. ಗಣಿಕಾರ್ಮಿಕರಾಗಿ ೦೫ ಜನ, ಲಾರಿ ಚಾಲಕರಾಗಿ ೦೨ ಜನ, ಮೇದ ಸಮುದಾಯದ ಎರಡು ಕುಟುಂಬಗಳು ತಮ್ಮ ಕುಲಕಸುಬನ್ನು ಮಾಡುತ್ತಿದ್ದಾರೆ. ಕುರಿಸಾಕಣೆ, ಕಬ್ಬಿಣದ ಅದಿರಿನ ಗಣಿಗಾರಿಕೆ, ಕ್ವಾರೆ, ಇಟ್ಟಿಗೆ, ಸುಣ್ಣ ಸುಡುವುದಕ್ಕಾಗಿ ೧೬ ಜನರು, ಇತರೆ ವ್ಯಾಪಾರ ವಹಿವಾಟುಗಳನ್ನು ೦೪ ಜನರು ಉಪಕಸುಬು ಅಥವಾ ಇತರೆ ಕೆಲಸಗಳಿಗಾಗಿ ಅವಲಂಬಿಸಿದ್ದಾರೆ.

ಶಿವರಾಮಸಿಂಗ್‌ರವರು ಹಂಪೆ ಪ್ರದೇಶದವರಾಗಿದ್ದು, ಪಾಪಿನಾಯಕನಹಳ್ಳಿಯಲ್ಲಿ ಜಮೀನನ್ನು ಹೊಂದಿದ್ದಾರೆ. ಇವರು ೪ ವರ್ಷದಿಂದ ಬಂದು ಹೋಗುವ ಕೆಲಸವನ್ನು ಮಾಡುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ಸಣ್ಣ ಪ್ರಮಾಣದಲ್ಲಿ ವೈಯಕ್ತಿಕ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಇವರಿಗೆ ಪಾಪಿನಾಯಕನಹಳ್ಳಿಯಲ್ಲಿ ನೆಲೆ ನಿಲ್ಲುವ ಇಚ್ಛೆಯಿದೆ.

೧೦೦ ಕುಟುಂಬಗಳಿಂದ ೭೮೨ ಜನ ಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ೪೩೨ ಗಂಡಸರು ಮತ್ತು ೩೫೦ ಹೆಂಗಸರನ್ನು ಹೊಂದಿದೆ. ಒಟ್ಟು ಜನಸಂಖ್ಯೆಯಲ್ಲಿ ಮಕ್ಕಳು, ಕೈಲಾಗದವರು, ವೃದ್ಧರು, ಗೃಹಿಣಿಯರನ್ನು ಸೇರಿಸಿ ೩೮೯ ಜನ ಅವಲಂಬಿತರಾಗಿದ್ದಾರೆ. ಇದರಲ್ಲಿ ೬೨ ಜನ ರೈತರು ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಾಗಿದ್ದಾರೆ. ಅಂದರೆ ೧ ರಿಂದ ೬ ಎಕರೆ ಭೂಮಿಯನ್ನು ಹೊಂದಿದ್ದಾರೆ. ೨೧ ಜನ ಮಧ್ಯಮ ಹಿಡುವಳಿದಾರರಾಗಿದ್ದಾರೆ. ಅಂದರೆ ೬ ರಿಂದ ೧೨ ಎಕರೆ ಭೂಮಿಯನ್ನು ಹೊಂದಿದ್ದಾರೆ. ಉಳಿದಂತೆ ೨೦ ಎಕರೆಯ ಒಳಗಿನ ಭೂಮಿಯನ್ನು ಹೊಂದಿದ್ದಾರೆ. ಆದರೆ ಬಲ್ಡೋಟ ಮೈನ್ಸ್‌ನವರು ಪಾಪಿನಾಯಕನಹಳ್ಳಿ ಹತ್ತಿರ ೬೦ ಎಕರೆ ಭೂಮಿಯನ್ನು ಹೊಂದಿದ್ದಾರೆ. ಬಲ್ಡೋಟ ಮೈನ್ಸ್‌ನವರ ೬೦ ಎಕರೆ ಭೂಮಿಯು ವಡ್ಡರಹಳ್ಳಿ ಮತ್ತು ಪಾಪಿನಾಯಕನಹಳ್ಳಿ ಮಾರ್ಗ ಮಧ್ಯದಲ್ಲಿದೆ. ಇದಕ್ಕೆ ವಸಂತ ಫಾರಂ ಎಂದು ಗುರುತಿಸಲಾಗುತ್ತದೆ. ಜಮೀನಿನಲ್ಲಿ ವ್ಯವಸಾಯದ ಬದಲಿಗೆ ಮನರಂಜನೆಗಾಗಿ ವೈಯಕ್ತಿಕ ಉಧ್ಯಾನವನ್ನು ನಿರ್ಮಿಸಲಾಗುತ್ತಿದೆ.

ವ್ಯಾಸನಕೆರೆ, ಗಾಳೆಮ್ಮನಗುಡಿಯ ಹತ್ತಿರ ಜನರಿಗೆ ವ್ಯವಸಾಯ ಮಾಡಲು ಭೂಮಿ ಇಲ್ಲದ ಕಾರಣ ತುಂಗಭದ್ರಾ ಜಲಾಶಯದ ಹಿನ್ನೀರು ಕಡಿಮೆಯಾದಂತೆಲ್ಲ ಅಲ್ಲಿ ಲಘು ಬೇಸಾಯವನ್ನು ಮಾಡುತ್ತಿದ್ದಾರೆ. ಮರಿಯಮ್ಮನಹಳ್ಳಿಯಿಂದಲೂ ಸಹ ಬಂದು ವ್ಯವಸಾಯವನ್ನು ಮಾಡುತ್ತಿದ್ದಾರೆ. ಆದರೆ ಇವರಿಗೆ ಇಲ್ಲೇ ನೆಲೆ ನಿಲ್ಲುವ ಇಚ್ಛೆ ಇಲ್ಲ. ಕಾರಣ ಮಳೆಗಾಲದಲ್ಲಿ ಜಲಾಶಯ ತುಂಬಿದಂತೆಲ್ಲ ಈ ಭೂಮಿ ನೀರಿನಲ್ಲಿ ಮುಳುಗಿ ಹೋಗುತ್ತದೆ ಎನ್ನುವುದು ಗಮನಿಸಬೇಕಾದ ಸಂಗತಿ.

ಒಟ್ಟು ಜಮೀನಿನಲ್ಲಿ ೬೫ ಜನರು ಸಣ್ಣ ಹಿಡುವಳಿಯ ನೀರಾವರಿ ಹೊಂದಿರುವುದಾಗಿ ತಿಳಿಸಿರುತ್ತಾರೆ. ಉಳಿದದ್ದು ಮಧ್ಯಮ ಹಿಡುವಳಿಯ ನೀರಾವರಿ, ಕೃಷಿ ಭೂಮಿಯಾಗಿದೆ. ೧ ರಿಂದ ೬ ಎಕರೆಯ ಸಣ್ಣ ಮತ್ತು ಮಧ್ಯಮ ಹಿಡುವಳಿಯಲ್ಲಿ ೪೩ ಜನ ಒಣ ಭೂಮಿಯನ್ನು ಹೊಂದಿದ್ದಾರೆ. ಉಳಿದಂತೆ ಅರೆ ಮಧ್ಯಮ

ಹಿಡುವಳಿದಾರರು ಒಣಭೂಮಿಯನ್ನು ಹೊಂದಿದ್ದಾರೆ. ನೀರಾವರಿಗಾಗಿ ೬೬% ಜನ ಬೋರ್‌ವೆಲ್ ಅವಲಂಬಿಸಿದ್ದಾರೆ, ೦೮ ಜನ ಕಾಲುವೆಯನ್ನು, ತಲಾ ಒಬ್ಬರಂತೆ ಕೆರೆ ಮತ್ತು ಬಾವಿಯನ್ನು ಅವಲಂಬಿಸಿದ್ದಾರೆ. ಗಣಿಗಾರಿಕೆಯ ಸ್ಫೋಟದಿಂದಾಗಿ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಬೋರ್‌ವೆಲ್‌ನಲ್ಲಿ ನೀರಿಲ್ಲದಂತಾಗಿ ಮಳೆಯನ್ನವಲಂಬಿಸುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

೧ ರಿಂದ ೧೦ ವರ್ಷ ಕೃಷಿಯಲ್ಲಿ ತೊಡಗಿರುವುದು ೨೯ ಜನ, ಅದೇ ರೀತಿ ೧೦ ರಿಂದ ೨೦ ವರ್ಷದಿಂದ ಕೃಷಿಯನ್ನವಂಲಬಿಸಿದವರು ೧೫ ಜನ, ಹಿಂದಿನಿಂದಲೂ ಎಂದು ಹೇಳಿದವರು ೩೦ ಜನ ಇವರಲ್ಲಿ ೦೬ ಜನರಿಗೆ ಭೂಮಿಯಿಲ್ಲ, ಭೂರಹಿತ ಕುಟುಂಬಗಳಾಗಿ ಗಣಿಗಾರಿಕೆ ಕೆಲಸದಲ್ಲಿ ತೊಡಗಿದೆ.

೧೨ ಕುಟುಂಬಗಳು ವಲಸೆ ಬಂದು ಕೃಷಿಯನ್ನವಲಂಬಿಸಿದ್ದಾರೆ. ಇವರು ವಲಸೆ ಬರಲು ಪ್ರಮುಖ ಕಾರಣ ಮಳೆಯಿಲ್ಲದ್ದರಿಂದ ಬೇಸಾಯ ಮಾಡುವುದಕ್ಕೆ ಕಷ್ಟವಾಯಿತು. ಅಲ್ಲದೆ ದುಡಿಯಲು ಬೇರೆ ದುಡಿಮೆಯೇ ಇಲ್ಲದ ಕಾರಣ ವಲಸೆ ಬಂದಿದ್ದಾರೆ. ಸ್ಥಳೀಯರೊಂದಿಗೆ ಉತ್ತಮತೆಯಿಂದ ಕೂಡಿಕೊಂಡು ಸಾಗುತ್ತಿದ್ದಾರೆ. ವಲಸೆ ಬಂದವರಲ್ಲಿ ಎಲ್ಲರೂ ಇಲ್ಲೇ ನೆಲೆ ನಿಲ್ಲುವ ಇಚ್ಛೆಯನ್ನು ಹೊಂದಿದ್ದಾರೆ.

೦೪ ಜನ ತಮ್ಮ ಜಮೀನನ್ನು ಗಣಿಗಾರಿಕೆಗೆ ನೀಡಿದ್ದಾರೆ. ೬೬ ಜನ ಇಲ್ಲವೆಂದಿದ್ದರೆ ಉಳಿದವರು ಮೌನವಹಿಸಿ ಉತ್ತರ ನೀಡಲಿಲ್ಲ. ೦೨ ಜನ ೧ ರಿಂದ ೬ ತಿಂಗಳಿಗೆ ಇಂತಿಷ್ಟು ಎಂದು ನೀಡಿದರೆ, ೦೨ ಜನ ಪ್ರತಿ ಎಕರೆಗೆ ೨೦ ಸಾವಿರ ರೂ.ಗಳಿಗೆ ನೀಡಿದ್ದಾರೆ. ಎರಡು ಕುಟುಂಬಗಳಿಗೆ ವಾರ್ಷಿಕವಾಗಿ ಗಣಿಗಾರಿಕೆಗೆ ಕೊಟ್ಟ ಜಮೀನಿನಿಂದ ೬೦ ರಿಂದ ೮೦ ಸಾವಿರ ರೂ.ಗಳ ಆದಾಯವಿದೆ. ೦೩ ಜನ ಮಾತ್ರ ತಾವಾಗಿಯೇ ಗಣಿಗಾರಿಕೆಗೆ ನೀಡಿದ್ದಾರೆ. ಒಬ್ಬರು ಮಾತ್ರ ಗಣಿಗಾರಿಕೆಯವರ ಒತ್ತಡದಿಂದ ನೀಡಲಾಗಿದೆ ಎಂದು ತಿಳಿದುಬರುತ್ತದೆ.

ತಮ್ಮ ಜಮೀನಿನ ಮೇಲುಭಾಗದಲ್ಲಿ ದೊರೆಯುವ ಕಲ್ಲನ್ನು ಆರಿಸಿ ವೈಯಕ್ತಿಕ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಮೇಲುಭಾಗದಲ್ಲಿ ದೊರೆಯುವ ಕಲ್ಲನ್ನು ಆಯ್ದುಕೊಳ್ಳಲು ಗುತ್ತಿಗೆಯನ್ನು ನೀಡುತ್ತಿದ್ದಾರೆ. ಗಣಿಗಾರಿಕೆಗೆ ಕೊಟ್ಟ ಜಮೀನು ಮುಂದೆ ಕೃಷಿಗೆ ಬಳಸುವ ಸ್ವರೂಪದಲ್ಲಿ ಉಳಿಯುತ್ತದೆಯೆಂದು ಕೇಳಿದರೆ ೧೯ ಜನ ಗೊತ್ತಿಲ್ಲವೆಂದು ತಿಳಿಸುತ್ತಾರೆ. ಗಣಿಗಾರಿಕೆ ಹೆಚ್ಚಾದಂತೆ ಬೆಳೆವ ಫಸಲು ಕಡಿಮೆಯಾಗಿದೆಯೆಂದು ೯೧% ಜನ ಅಭಿಪ್ರಾಯ ಪಟ್ಟರೆ, ೦೪% ಜನ ಹೆಚ್ಚಾಗಿದೆಯೆಂದು, ೦೫% ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ೧೦೦ಕ್ಕೆ ೧೦೦ರಷ್ಟು ಜನ ತಾವು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ತೃಪ್ತಿದಾಯಕ ಬೆಲೆ ಸಿಗುತ್ತಿಲ್ಲವೆಂದು ಚಿಂತಿಸುತ್ತಿದ್ದಾರೆ. ಸಾಲದ ಕಾರಣಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ೦೬ ಜನರ ಅಭಿಪ್ರಾಯವಾಗಿದೆ.

ಜಗದೀಶರವರ ಹೊಲಕ್ಕೆ ನಾವು ಭೇಟಿ ಕೊಟ್ಟಾಗ ಇವರ ಹೊಲದಲ್ಲಿ ಮಡಕೆ ಅಥವಾ ರಂಟೆ ಹೊಡೆಯಲಾಗಿತ್ತು. ಅಲ್ಲಿನ ಹೊಲದ ಮೇಲೆ ಕಣ್ಣಾಡಿಸಿದಾಗ ಹೊಲದಲ್ಲಿ ಅಲ್ಲಲ್ಲಿ ಕಬ್ಬಿಣದ ಅದಿರಿನ

ಕಲ್ಲುಗಳು ಯಥೇಚ್ಛವಾಗಿ ಬಿದ್ದಿರುವುದು ಕಂಡು ಬಂತು. ಆಗ ಅವರನ್ನು ಅಷ್ಟೊಂದು ಕಲ್ಲುಗಳು ದೊರೆಯುತ್ತವೆ ನೀವೇಕೆ ಗಣಿಗಾರಿಕೆ ನಡೆಸಬಾರದು ಎಂದು ಕೇಳಿದೆವು. ಆಗ ಅವರು 'ನಾವು ರೈತರು ವ್ಯವಸಾಯ ಮಾಡುವವರು, ನಾವು ವ್ಯವಸಾಯದಿಂದಲೇ ಬದುಕುತ್ತೇವೆ. ನಮಗೆ ಈ ಗಣಿಗಾರಿಕೆ ಬೇಡವೇ ಬೇಡ. ದುಡ್ಡಿನ ಆಸೆಗಾಗಿ ಅನ್ನದ ಚೀಲವನ್ನು ಕಳೆದುಕೊಳ್ಳಲು ಆಗುತ್ತದೆಯೇ' ಎಂದು ತಿಳಿಸಿದರು. ಗಣಿಗಾರಿಕೆಯಿಂದ ರೈತರ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಂಡಿಲ್ಲವೆಂದು ೬೩%, ಉತ್ತಮಗೊಂಡಿದೆಯೆಂದು ೨೫% ಮತ್ತು ಗಣಿಗಾರಿಕೆಯಲ್ಲಿ ದುಡಿಯುವ ರೈತರಿಗೆ ಉತ್ತಮವಾಗಿದೆ ಎಂದು ೧೨% ತಿಳಿದುಬರುತ್ತದೆ.

ಗಣಿಗಾರಿಕೆಯಿಂದ ಹಾರಿ ಬರುವ ಧೂಳಿನ ವಿರುದ್ಧ ೬೮ ಜನ ರೈತರು ಚಳುವಳಿ ನಡೆಸಿದ್ದಾರೆ. ೨೮ ಜನ ರೈತರು ಯಾವುದೇ ಚಳುವಳಿಯನ್ನು ಮಾಡಿಲ್ಲ. ೧೨ ಜನ ವೈಯಕ್ತಿಕವಾಗಿ, ೦೬ ಜನ ಊರಿನವರ ಮೂಲಕ, ಒಬ್ಬರು ಸಂಘದ ಮೂಲಕ ಚಳುವಳಿ ನಡೆಸಿದ್ದಾರೆ. ಈ ಚಳುವಳಿಯಿಂದ ಹೇಳಿಕೊಳ್ಳುವಂತಹ ಯಾವುದೇ ಲಾಭ ದೊರೆತಿಲ್ಲ. ಇದರಲ್ಲಿ ೧೨ ಜನಕ್ಕೆ ಪರಿಹಾರ ದೊರೆತರೆ, ೦೮ ಜನರಿಗೆ ಆಶ್ವಾಸನೆ ದೊರೆತಿದೆ. ಈ ಪರಿಹಾರವನ್ನು ಗಣಿ ಮಾಲಿಕರು ಹಣದ ರೂಪದಲ್ಲಿ ನೀಡುತ್ತಾರೆ. ಈ ಪರಿಹಾರದ ಸೂಚನೆಯಲ್ಲಿ ಗಣಮಾಲಿಕರದೇ ಅಂತಿಮ ನಿರ್ಧಾರ. ಕೃಷಿ ಲಾಭ ತರುತ್ತಿಲ್ಲವೆಂದು ೧೭ ಜನ ವೈಯಕ್ತಿಕ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಈ ಗಣಿಗಾರಿಕೆಯಲ್ಲಿ ಇಟ್ಟಿಗೆ, ಕ್ವಾರೆ, ಸುಣ್ಣದ ಜೊತೆಗೆ ಕಬ್ಬಿಣದ ಅದಿರಿನ ಗಣಿಗಾರಿಕೆಯು ಸೇರಿದೆ ತಮ್ಮ ಜಮೀನಿನಲ್ಲೇ ೦೫ ಜನ ಮತ್ತು ಬೇರೆಯವರ ಜಮೀನಿನಲ್ಲಿ ೧೨ ಜನ ಗಣಿಗಾರಿಕೆ ನಡೆಸುತ್ತಿದ್ದಾರೆ.

೬೯ ಜನ ಬೋರ್‌ವೆಲ್ ತೆಗೆಸಿದ್ದಾರೆ. ೧೫ ಜನ ಬೋರವೆಲ್ ತೆಗೆಸಿಲ್ಲ. ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಲ್ಲಿ ಹೆಚ್ಚಿನವರಿಗೆ ನೀರಾವರಿಗೆ ನೀರು ದೊರೆತಿದ್ದರೆ, ೫೦ ಅಡಿ ಒಳಗೆ ೦೩ ಜನರ ಬೋರ್‌ವೆಲ್‌ನಲ್ಲಿ ನೀರು ದೊರೆತಿದೆ. ೧೦೦ ರಿಂದ ೧೫೦ ಅಡಿಯವರೆಗೆ ೧೮ ಬೋರ್‌ವೆಲ್‌ನಲ್ಲಿ ನೀರು ದೊರೆತಿದೆ. ೧೫೦ ರಿಂದ ೨೦೦ ಅಡಿಗೆ ೦೩ ಬೋರ್‌ವೆಲ್‌ನಲ್ಲಿ ನೀರು ದೊರೆತಿದೆ. ಅಂದರೆ ೫೦ ರಿಂದ ೧೦೦ ಅಡಿಗೆ ನೀರು ಬಂದ ಬೋರ್‌ವೆಲ್‌ಗಳನ್ನು ಮೊದಲಿಗೆ ಹಾಕಿಸಲಾಗಿದೆ. ಇತ್ತೀಚೆಗೆ ಅಂದರೆ ಗಣಿಗಾರಿಕೆ ಪ್ರಾರಂಭವಾದ ಮೇಲೆ ಅಂತರ್ಜಲದ ಮಟ್ಟ ಕುಸಿದಿದ್ದು, ಮೊದಲು ಸರಾಸರಿ ೬೦ ರಿಂದ ೭೦ ಅಡಿಗೆ ನೀರು ದೊರೆತಿದೆ. ಆದರೆ ಇಂದು ೨೦೦ ರಿಂದ ೨೫೦ ಅಡಿ ಬೋರ್‌ವೆಲ್ ಕೊರೆಯಿಸಿದರು ನೀರು ಇಲ್ಲದಂತಾಗಿದೆ ಎಂದು ತಿಳಿದುಬರುತ್ತದೆ. ಈ ಬೋರ್‌ವೆಲ್‌ನಿಂದ ಸಣ್ಣ ಪ್ರಮಾಣದ ಕೃಷಿ ನೀರಾವರಿ ಮಾಡಬಹುದು ಎಂದು ೨೫ ಜನರ ಅಭಿಮತವಾದರೆ, ೩೭ ಜನರು ಕೃಷಿ ಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ೧೨ ಜನ ೬ ತಿಂಗಳು ಮಾತ್ರ ನೀರನ್ನು ಒದಗಿಸಿದರೆ ಬೇಸಿಗೆಯಲ್ಲಿ ನೀರು ಇರದ ಕಾರಣ ೭ ತಿಂಗಳು ಕೃಷಿ ಮಾಡಲು ಸಾಧ್ಯವಿಲ್ಲವೆನ್ನುತ್ತಾರೆ.

ಗಣಿಗಾರಿಕೆಯಿಂದಾಗಿ ಗುಡ್ಡಗಳಿಂದ ಹರಿದುಬರುವ ಹೆಚ್ಚುವರಿ ಮಣ್ಣಿನಿಂದ ಹಳ್ಳಕೆರೆಗಳು ಹೂಳುತುಂಬಿ ಮುಚ್ಚಿಹೋಗುತ್ತವೆ. ಅಲ್ಲದೆ ಬಳಸಲು ಯೋಗ್ಯವಾಗಿರುವುದಿಲ್ಲವೆಂದು ೯೫% ಜನರ ಅಭಿಪ್ರಾಯವಾಗಿದೆ.

ಈ ಮಲಿನ ನೀರನ್ನು ದನಕರುಗಳು ಕುಡಿಯುವುದರಿಂದ ರೋಗಗಳು ಬರುತ್ತವೆ ಎಂದು ೩೪ ಜನ ಅಭಿಪ್ರಾಯ ಪಟ್ಟಿದ್ದಾರೆ. ಕರಳು ಬೇನೆ ಬರುತ್ತದೆಯೆಂದು ೧೫ ಜನ, ಗಂಟಲು ಬೇನೆ ಬರುತ್ತದೆಯೆಂದು ೧೯ ಜನ, ಬಾಯಿಬೇನೆ, ಧನುರ್ವಾಯು, ನೀರಿನ ರೂಪದ ಮಲವನ್ನು ಹಾಕುತ್ತವೆ ಎಂದು ೧೦ ಜನ ಅಭಿಪ್ರಾಯ ಪಟ್ಟಿದ್ದಾರೆ. ಈ ವಾತಾವರಣಕ್ಕೆ ದನಕರುಗಳು ಹೊಂದಿಕೊಂಡಿರುವುದರಿಂದ ಏನೂ ಆಗುವುದಿಲ್ಲವೆಂದು ೨೧ ಜನ ಅಭಿಪ್ರಾಯಪಟ್ಟಿದ್ದಾರೆ. ಒಟ್ಟು ಕುಟುಂಬಗಳಲ್ಲಿ ೬೬ ಕುಟುಂಬಗಳು ದನಕರುಗಳು ಮತ್ತು ಕುರಿಯನ್ನು ಹೊಂದಿದೆ. ಈ ೬೬ ಕುಟುಂಬಗಳಲ್ಲಿ ಎತ್ತುಗಳ ಸಂಖ್ಯೆ. ೧೪೧, ೯೬ ಆಕಳು, ೯೯ ಎಮ್ಮೆ ಮತ್ತು ೪೬೬ ಆಡು ಕುರಿಯನ್ನು ಹೊಂದಿದ್ದಾರೆ. ಈ ಹಿಂದೆ ೦೧ ರಿಂದ ೧೦ ರವರೆಗೆ ದನಕರುಗಳನ್ನು ೨೫ ಕುಟುಂಬಗಳು ಹೊಂದಿದ್ದವು ೧೦ ರಿಂದ ೨೦ ರವರೆಗೆ ೩೨ ಜನರು ದನಕರುಗಳನ್ನು ಹೊಂದಿದ್ದರು. ೨೦ ರಿಂದ ೩೦ ರವರೆಗೆ ದನಕರುಗಳನ್ನು ೦೫ ಜನರು, ೩೦ ರಿಂದ ೪೦ ರವರೆಗೆ ದನಕರುಗಳನ್ನು ೦೩ ಜನ ಹೊಂದಿದ್ದರು. ಅಲ್ಲದೆ ೦೫ ಕುಟುಂಬಗಳು ಹಿಂದೆ ನೂರಾರು ಆಡುಕುರಿಗಳನ್ನು ಹೊಂದಿದ್ದವು. ಇಂದು ಅವುಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ರೈತರ ಪಶು ಸಂಪತ್ತು ವರ್ಷದಿಂದ ವರ್ಷಕ್ಕೆ ಕಡಿಮೆ ಆಗಿದೆ. ರೈತರ ಮನೆಯಲ್ಲಿ ಈಗಲೂ ದನಕರುಗಳಿದ್ದರು ಅವುಗಳ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಕುಸಿದಿದೆ. ಹಿಂದೆ ಇದ್ದ ದನಕರುಗಳ ಸಂಖ್ಯೆಗೆ ಹೋಲಿಸಿದಲ್ಲಿ ಬಹಳ ಕಡಿಮೆಯಾಗಿದೆಯೆಂದು ೬೮ ಜನರು ಉತ್ತರಿಸಿದರೆ, ೦೧ ಜನ ಮಾತ್ರ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ. ಅಷ್ಟೇ ಪ್ರಮಾಣದಲ್ಲಿವೆಯೆಂದು ೦೨ ಜನ ತಿಳಿಸುತ್ತಾರೆ. ಕಳೆದ ನಾಲ್ಕೈದು ವರ್ಷಗಳಿಂದ ಶೇ.೫೫% ಪ್ರಮಾಣದಲ್ಲಿ ಜಾನುವಾರಗಳ ಸಂಖ್ಯೆ ಇಳಿಮುಖವಾಗಿದೆ. ಮುಖ್ಯವಾಗಿ ಕುಡಿವ ನೀರು ಮತ್ತು ಹುಲ್ಲುಗಾವಲುಗಳ ನಾಶವೇ ಇದಕ್ಕೆ ಕಾರಣ ಎನ್ನಲಾಗುತ್ತದೆ.

ಒಟ್ಟು ಸಂದರ್ಶಿಸಲ್ಪಟ್ಟವರಲ್ಲಿ ೧೧ ಜನ ಮಾತ್ರ ಹೊಸದಾಗಿ ಭೂಮಿಯನ್ನು ಕೊಂಡುಕೊಂಡಿದ್ದಾರೆ. ಜಮೀನನ್ನು ಕೊಂಡುಕೊಂಡವರಲ್ಲಿ ಎಲ್ಲರು ಕೃಷಿಯ ಉದ್ದೇಶಕ್ಕಾಗಿ ಕೊಂಡುಕೊಂಡಿದ್ದಾರೆ. ಇದರ ಮೇಲೆ ಅವರ ಆರ್ಥಿಕ ಸ್ಥಿತಿಗತಿಗಳನ್ನು ನಾವು ಸುಲಭವಾಗಿ ತಿಳಿಯಬಹುದಾಗಿದೆ. ಒಟ್ಟು ಕುಟುಂಬಗಳಿಂದ ೨೦ ಮನೆಯವರು ಗಣಿಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಒಟ್ಟು ೨೩ ಜನ ಗಣಿಗಾರಿಕೆ ಕೆಲಸಕ್ಕೆ ಹೋಗುತ್ತಿದ್ದಾರೆ. ಅವರಲ್ಲಿ ಸಾಮಾನ್ಯ ಕಾರ್ಮಿಕರಾಗಿ ೧೭ ಜನ, ಗಣಿಗಾರಿಕೆಯ ಲಾರಿಚಾಲಕರಾಗಿ ೦೫ ಜನ ಮತ್ತು ಒಬ್ಬರು ಸೂಪರ್‌ವೈಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಾವು ಸಂದರ್ಶಿಸಲ್ಪಟ್ಟ ಒಟ್ಟು ರೈತರಲ್ಲಿ ಗಣಿಗಾರಿಕೆಯಿಂದಾಗಿ ಉಂಟಾಗುವ ವಾಯುಮಾಲಿನ್ಯದಿಂದ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತದೆಯೆಂದು ೯೧ ಜನ ಸಾಮಾನ್ಯ ತಿಳುವಳಿಕೆಯನ್ನು ಹೊಂದಿದವರೇ ಆಗಿದ್ದಾರೆ. ಗಣಿಗಾರಿಕೆಯಿಂದಾಗಿ ಹಾರಿ ಬರುವ ಧೂಳನ್ನು ಉಸಿರಾಡಿಸುವುದರಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಮವಾಗುತ್ತದೆಯೆಂದು ೯೯ ಜನ ತಿಳುವಳಿಕೆ ಹೊಂದಿದ್ದಾರೆ. ೮೧ ಜನ ವೈದ್ಯರ ಸಲಹೆಯನ್ನು ಪಾಲಿಸಿದರೆ ೦೪ ಜನ ವೈದ್ಯರ ಸಲಹೆಯನ್ನು ನಿರ್ಲಕ್ಷಿಸುತ್ತಾರೆಂಬುದು ತಿಳಿದು ಬರುತ್ತದೆ. ಒಟ್ಟು ರೈತರಲ್ಲಿ ೫೦ಕ್ಕೂ ಅಧಿಕ ಜನರು ಗಣಿಗಾರಿಕೆಯ ಧೂಳಿನಿಂದ ಟಿ.ಬಿ.ಬರುತ್ತದೆ ಎನ್ನುವ

ತಿಳುವಳಿಕೆಯನ್ನು ಹೊಂದಿದ್ದಾರೆ. ಇದರಿಂದ ಇನ್ನು ಹಲವಾರು ರೀತಿಯ ಅಂದರೆ ಭೂಮಿ, ಪರಿಸರ ಮತ್ತು ಮನುಷ್ಯನ ಆರೋಗ್ಯದ ಮೇಲೆ ಹಲವಾರು ಪರಿಣಾಮಗಳುಂಟಾಗುತ್ತದೆ ಎನ್ನುವುದನ್ನು ಈ ರೈತರು ಮನಗಂಡಿದ್ದಾರೆ.

ಗಣಿಕಾರ್ಮಿಕರು

ಒಟ್ಟು ೨೫ ಜನ ಗಣಿಕಾರ್ಮಿಕರಲ್ಲಿ ೧೩ ಜನ ಕೃಷಿಯ ಜೊತೆಗೆ ಬದಲಿ ಕೆಲಸವನ್ನಾಗಿ ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ೧೨ ಜನ ಭೂರಹಿತರಾಗಿದ್ದಾರೆ. ೧೩ ಗಣಿಕಾರ್ಮಿಕರು ಸಣ್ಣ ಹಿಡುವಳಿದಾರರೆಂದು ತಿಳಿಯುತ್ತದೆ. ಇವರಲ್ಲಿ ಹೆಚ್ಚಿನವರು ಸಣ್ಣ ಪ್ರಮಾಣದ ಭೂಮಿಯಿಂದ ಜೀವನ ನಡೆಸುವುದು ದುಸ್ತರವಾಗಿದೆ. ಬೇರೆ ಕೆಲಸವನ್ನಲಂಬಿಸುವ ಪರಿಸ್ಥಿತಿಯಿಂದ ಇಲ್ಲಿ ಸೇರಿರುವುದಾಗಿ ತಿಳಿಯುತ್ತದೆ. ರೈತನು ಸಹ ಗಣಿಕಾರ್ಮಿಕನಾಗಿ ದುಡಿಯುತ್ತಿರುವುದರಿಂದ ಗಣಿಗಾರಿಕೆಯಿಂದ ಕೃಷಿಯು ಇನ್ನಷ್ಟು ಶಕ್ತಿಹೀನವಾಗುತ್ತಿದೆ. ಇಲ್ಲಿ ೨೫ ಜನ ಗಣಿಕಾರ್ಮಿಕರನ್ನು ಪ್ರಶ್ನಾವಳಿಯ ಮೂಲಕ ಸಂದರ್ಶಿಸಲಾಗಿದೆ. ಶೇ.೮೦ರಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ. ಉಳಿದ ಶೇ.೨೦ ಜನ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ.

ಗಣಿಗಾರಿಕೆಯ ಅಪಾಯದ ಸನ್ನಿವೇಶಗಳಲ್ಲಿ ಕೆಲಸ ಮಾಡುವಾಗ ಅತ್ಯಂತ `ಸಾಮಾನ್ಯ ಮುನ್ನೆಚ್ಚರಿಕೆಯ` ಕ್ರಮಗಳನ್ನು ತೆಗೆದುಕೊಳ್ಳದಿರುವುದರಿಂದ ಅಪಾಯಗಳು ಸಂಭವಿಸುವುದು ಸರ್ವೇ ಸಾಮಾನ್ಯ ಸಂಗತಿಯೆಂದು ಶೇ.೮೨ರಷ್ಟು ಜನ ಉತ್ತರಿಸಿದ್ದಾರೆ. ಇಂತಹ ಅಪಾಯಗಳು ವರ್ಷಕ್ಕೆ ೧೫ ರಿಂದ ೨೦ ಸಲ ಸಂಭವಿಸುತ್ತದೆ ಎಂದು ಶೇ.೭೨ರಷ್ಟು ಜನ ಅಭಿಪ್ರಾಯ ಪಟ್ಟಿದ್ದಾರೆ. ಇಂತಹ ಅಪಾಯಗಳ ಕುರಿತು ಗಣಿಮಾಲಿಕರು ಯಾವ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡಿಲ್ಲವೆಂದು ತಿಳಿಸಿದ್ದಾರೆ.

ಈ ಗಣಿಕಾರ್ಮಿಕರಲ್ಲಿ ಶೇ.೭೭ರಷ್ಟು ಜನ ಕಾಯಿಲೆಗಳಿಂದ ನರಳುತ್ತಿದ್ದಾರೆ. ಇದರಲ್ಲಿ ಶೇ.೬೫ರಷ್ಟು ಜನರಿಗೆ ಗಣಿಗಾರಿಕೆಯ ಧೂಳನ್ನು ಉಸಿರಾಡುವುದರಿಂದ ಟಿ.ಬಿ. ಮುಂತಾದ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಬರುತ್ತದೆ ಎಂಬ ತಿಳುವಳಿಕೆಯಿದೆ. ಶೇ.೧೨ರಷ್ಟು ಜನಕ್ಕೆ ಈ ತಿಳುವಳಿಕೆ ಇರುವುದಿಲ್ಲ. ಜೊತೆಗೆ ಶೇ.೯೯ರಷ್ಟು ಜನ ವೈದ್ಯರ ಸಲಹೆಯನ್ನು ಪಾಲಿಸುತ್ತೇವೆ ಎಂದಿದ್ದಾರೆ. ಆದರೆ ಗಣಿಮಾಲಿಕರು ಯಾವುದೇ ಬಗೆಯ ವೈದ್ಯಕೀಯ ನೆರವನ್ನು ನೀಡುವುದಿಲ್ಲ ಎಂದು ಶೇ.೮೦ ಜನ ಉತ್ತರಿಸಿದ್ದಾರೆ. ಇನ್ನು ಶೇ.೨೦ರಷ್ಟು ಜನಕ್ಕೆ ಗಣಿಮಾಲಿಕರಿಂದ ವೈದ್ಯಕೀಯ ನೆರವು ಸಿಕ್ಕಿದೆ ಎಂದು ಉತ್ತರಿಸಿದ್ದಾರೆ. ವಲಸಿಗರ ಬಗ್ಗೆ ಮೊದಲೇ ತಿಳಿದಿರುವುದರಿಂದ ಅವರ ಕುರಿತ ವಿಶ್ಲೇಷಣೆ ಅವಶ್ಯವಿಲ್ಲವೆನಿಸುತ್ತದೆ.

ವೈದ್ಯರು

ಗಣಿಗಾರಿಕೆಯಿಂದ ಮನುಷ್ಯರ ಆರೋಗ್ಯದ ಮೇಲಾಗುವ ಪರಿಣಾಮಗಳ ಕುರಿತು ಚರ್ಚಿಸಲು ಗಣಿಗಾರಿಕೆಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಮತ್ತು ನಗರ ಪ್ರದೇಶದ ತಜ್ಞ ವೈದ್ಯರನ್ನು

[illegible]

ಸಂದರ್ಶಿಸಲಾಗಿದೆ. ಇದರಲ್ಲಿ ಶೇ.೭೨ರಷ್ಟು ಖಾಸಗಿ ಕ್ಲೀನಿಕ್‌ಗಳನ್ನು ಮತ್ತು ಶೇ.೨೫ ಗಣಿ ಮತ್ತು ಇತರೆ ಖಾಸಗಿ ಕಂಪನಿಗಳು ನಡೆಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ವೈದ್ಯರನ್ನು ನಿಶ್ಚಿತ ಪ್ರಶ್ನಾವಳಿಯ ಮೂಲಕ ಸಂದರ್ಶಿಸಲಾಗಿದೆ.

ಮೇಲಿನ ತಜ್ಞ ವೈದ್ಯರ ಪ್ರಕಾರ ಗಣಿಗಾರಿಕೆಯ ಪ್ರದೇಶದಲ್ಲಿರುವ ಶೇ.೯೨ರಷ್ಟು ಜನ ಅಸ್ತಮ, ಅಲರ್ಜಿ, ಆಯಾಸ ಮತ್ತು ಶ್ವಾಸಕೋಶದ ತೊಂದರೆಗಳಿಂದ ನರಳುತ್ತಿರುವುದು ಕಂಡುಬಂದಿದೆ. ವೈದ್ಯರು ಇದಕ್ಕೆ ಕೊಡುವ ಕಾರಣವೆಂದರೆ ಶೇ.೯೯ ಭಾಗ ಕಲುಷಿತ ಗಾಳಿ ಮತ್ತು ನೀರು ಇವುಗಳಿಂದಾಗಿ ಇಲ್ಲಿನ ಆರೋಗ್ಯದ ಸಮಸ್ಯೆ ಉಲ್ಬಣಗೊಂಡಿದೆ ಎಂದು ಉತ್ತರಿಸಿದ್ದಾರೆ. ಕೇವಲ ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗಷ್ಟೇ ಅಲ್ಲದೆ ಗಣಿಗಾರಿಕೆಯ ಪ್ರದೇಶದ ಸುತ್ತಮುತ್ತಲ ಹಳ್ಳಿಗಳ ಜನಕ್ಕೆ ಇದೇ ಬಗೆಯ ಆರೋಗ್ಯದ ತೊಂದರೆಗಳು ಕಾಣಿಸಿಕೊಳ್ಳುತ್ತಿವೆ.

ಪರಿಸರದ ಮೇಲೆ ಗಣಿಗಾರಿಕೆಯಿಂದ ತೀವ್ರ ಪರಿಣಾಮಗಳಾಗುತ್ತಿವೆ. ತಮ್ಮಲ್ಲಿಗೆ ಚಿಕಿತ್ಸೆಗೆಂದು ಬರುವ ರೋಗಿಗಳಿಗೆ ರೋಗಕ್ಕೆ ತಕ್ಕುದಾದ ಚಿಕಿತ್ಸೆ ಕೊಡುತ್ತೇವೆ. ಅಲ್ಲದೆ ಚಿಕಿತ್ಸೆಯ ಜೊತೆಗೆ ರೋಗಕ್ಕೆ ಸಂಬಂಧಿಸಿದ ಕುರಿತು ಪ್ರಾಥಮಿಕ ತಿಳುವಳಿಕೆಯನ್ನು ರೋಗಿಗಳಿಗೆ ನೀಡುತ್ತೇವೆ ಎಂದು ಶೇ.೯೫ರಷ್ಟು ಜನ ಉತ್ತರಿಸಿದ್ದಾರೆ. ಆದರೆ ಗಣಿಗಾರಿಕೆಯಿಂದ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳ ಕುರಿತು ಎಚ್ಚರಿಸಲು ಆರೋಗ್ಯ ಶಿಬಿರಗಳನ್ನು ಏರ್ಪಡಿಸಲಾಗಿಲ್ಲ ಎಂದು ಶೇ.೯೨ರಷ್ಟು ವೈದ್ಯರು ಮತ್ತು ಶೇ.೮ರಷ್ಟು ವೈದ್ಯರು ಶಿಬಿರಗಳನ್ನು ಏರ್ಪಡಿಸಿರುವ ಕುರಿತು ಉತ್ತರಿಸಿದ್ದಾರೆ. ಆದರೆ ಈ ರೋಗಿಗಳಿಗೆ ಸರಕಾರ ಇಲ್ಲವೇ ಗಣಿಮಾಲಿಕರ ನೆರವು ಇಲ್ಲದಿರುವುದನ್ನು ವೈದ್ಯರು ತಿಳಿಸಿದ್ದಾರೆ.

ವೈದ್ಯರು ನೀಡುವ ಸಲಹೆಯನ್ನು ರೋಗಿಗಳು ಗಂಭೀರವಾಗಿ ತೆಗೆದಕೊಳ್ಳದೇ ಇರುವುದಕ್ಕೆ ಬಡತನವೇ ಕಾರಣ ಎಂಬ ತೀರ್ಮಾನಕ್ಕೆ ವೈದ್ಯರು ಬಂದಿದ್ದಾರೆ. ಹೀಗೆ ಚಿಕಿತ್ಸೆ ಪಡೆಯಲು ಬರುವವರು ಮತ್ತು ಗಂಭೀರ ಆರೋಗ್ಯದ ಸಮಸ್ಯೆಗೆ ಈಡಾಗುವವರು ಶೇ.೬೪ ಹೆಂಗಸರು ಮತ್ತು ಮಕ್ಕಳು. ಉಳಿದಂತೆ ಪುರುಷರು ಮತ್ತು ವೃದ್ಧರು ಈ ಪರಿಣಾಮಗಳನ್ನು ಎದುರಿಸುತ್ತಾರೆ. ಇದರಲ್ಲಿ ಶೇ.೨೪ರಷ್ಟು ವೃದ್ಧರು ಮತ್ತು ಶೇ.೧೨ರಷ್ಟು ಪುರುಷರಾಗಿದ್ದಾರೆ. ಮರಣ ಪ್ರಮಾಣ ಅಥವಾ ಸರಾಸರಿ ಆಯುಷ್ಯ ೫೦ ರಿಂದ ೬೦ ವರ್ಷ.

ಗಣಿಗಾರಿಕೆಯಿಂದಾಗುವ ಪರಿಣಾಮಗಳನ್ನು ತಡೆಯಲು ಗಣಿಗಾರಿಕೆ ನಿಲ್ಲಬೇಕು. ಅದನ್ನು ಕಾನೂನುಗಳ ಮೂಲಕವೇ ನಿಯಂತ್ರಿಸಬೇಕು. ಇಲ್ಲವೆಂದರೆ ಪರಿಸರಕ್ಕೆ ಮತ್ತು ಸುತ್ತ ಜೀವ ವೈವಿಧ್ಯ, ಮನುಷ್ಯನ ಆರೋಗ್ಯದ ಮೇಲೆ ತೀವ್ರ ಸ್ವರೂಪದ ಅಪಾಯಗಳು ಸಂಭವಿಸುತ್ತವೆ ಎಂದು ವೈದ್ಯರು ವಿವರಿಸಿದ್ದಾರೆ.

೬.೨ ಅಧ್ಯಯನದ ಫಲಿತಗಳು

೬.೨.೧ ಕೃಷಿ ಸಮುದಾಯಗಳು : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಂದ ೩೬ ಜನರನ್ನು ಸಂದರ್ಶಿಸಲಾಗಿದೆ. ಉಳಿದ ೬೪ ಜನ ರೈತರು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ

ಸೇರಿದವರಾಗಿದ್ದಾರೆ. ಇವುಗಳನ್ನು ಪ್ರತ್ಯೇಕವಾಗಿ ನೋಡವುದಾದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರು ಹೆಚ್ಚಿನ ಭೂಮಿಯನ್ನು ಹೊಂದಿಲ್ಲ. ಹರಿಜನ ೪, ಬೋವಿ ೧೨, ಲಂಬಾಣಿ ೭ ಜನ, ನಾಯಕ ೧೦, ಮೇದರು ೨ ಮತ್ತು ಗಂಗಾಮತ ೧, ಒಟ್ಟು ೧೩ ಜನ ಪರಿಶಿಷ್ಟ ಪಂಗಡದ ರೈತರನ್ನು ಸಂದರ್ಶಿಸಲಾಗಿದೆ.

ಒಟ್ಟು ೩೫ ಕುರುಬ ಸಮುದಾಯದಿಂದ ಮಾಹಿತಿ ಪಡೆಯಲಾಗಿದೆ. ಉಳಿದಂತೆ ಲಿಂಗಾಯತ ೧೧, ದಾಸರು ೦೩, ಅಗಸ ೦೨, ಕುಂಬಾರ ೦೨, ಹಡಪದ ೦೧, ಈಡಿಗ ೦೧, ಉಪ್ಪಾರ ೦೧, ಶೆಟ್ಟಿಬಣಜಿಗ ೦೧, ಬ್ರಾಹ್ಮಣ ೦೧ ಜನ ರೈತರನ್ನು ಸಂದರ್ಶಿಸಲಾಗಿದೆ. ಅಲ್ಲದೆ ಅಲ್ಪ ಸಂಖ್ಯಾತ ಸಮುದಾಯಗಳಾದ ಮುಸ್ಲಿಂ ೦೫ ಮತ್ತು ರಜಪೂತ ೦೧ ಜನ ರೈತರನ್ನು ಸಂದರ್ಶನಕ್ಕೆ ತೆಗೆದುಕೊಳ್ಳಲಾಗಿದೆ.

೬.೨.೨ ಕೃಷಿಕರ ಆರ್ಥಿಕತೆ : ಒಟ್ಟು ರೈತರಲ್ಲಿ ಆರ್ಥಿಕತೆಯ ಬಗೆಗೆ ಅಂದರೆ ಕೃಷಿಯಿಂದ ಬರುವ ವಾರ್ಷಿಕ ಆದಾಯದ ಬಗ್ಗೆ ೯೪ ಜನ ಮಾಹಿತಿ ನೀಡಿದ್ದಾರೆ. ೨೬ ಜನ ರೈತರು ಕೃಷಿಯಲ್ಲಿ ಏನೂ ಉಳಿಯುವುದಿಲ್ಲ ನಮಗೆ ನಷ್ಟವಾಗುವ ಸಂಭವವಿದೆ ಎಂದು ತಿಳಿಸುತ್ತಾರೆ. ಬೇರೆ ಕೆಲಸವಿಲ್ಲದೇ ಅನಿವಾರ್ಯವಾಗಿ ಮಾಡುತ್ತಿದ್ದೇವೆ ಎನ್ನುವ ಅಭಿಪ್ರಾಯ ಹೊಂದಿದ್ದಾರೆ. ೨೭ ಜನ ರೈತರು ನಾವು ಕಷ್ಟಪಟ್ಟು ದುಡಿದಲ್ಲಿಗೆ ಮತ್ತು ಬೆಳೆ ಬಂದಲ್ಲಿಗೆ ಸರಿಯಾಗುತ್ತದೆ ಎಂದು ತಿಳಿಸಿದ್ದಾರೆ. ೧೦ ಜನ ರೈತರು ಒಂದು ವರ್ಷ ಲಾಭವಾಗುತ್ತದೆ, ಒಂದು ವರ್ಷ ನಷ್ಟವಾಗುತ್ತದೆ ಎಂದಿದ್ದಾರೆ. ಅಂದರೆ ೬೩ ಜನ ರೈತರಿಗೆ ಕೃಷಿ ಲಾಭ ತರುತ್ತಿಲ್ಲವೆಂದು ತಿಳಿಯುತ್ತದೆ. ೧ ರಿಂದ ೧೦ ಸಾವಿರದವರೆಗೆ ಲಾಭ ದೊರೆಯುತ್ತದೆಯೆಂಬುದು ೧೭ ಜನ ರೈತರ ಅಭಿಪ್ರಾಯವಾಗಿದೆ. ೧೦ ರಿಂದ ೨೦ ಸಾವಿರ ಮತ್ತು ೨೦ ರಿಂದ ೩೦ ಸಾವಿರ ಲಾಭ ದೊರೆಯುತ್ತದೆಯೆಂದು ತಲಾ ೦೬ ಜನ ರೈತರ ಅಭಿಪ್ರಾಯವಾಗಿದೆ.

ಅನಾವೃಷ್ಟಿ ಮತ್ತು ಗಣಿಗಾರಿಕೆಯಿಂದ ಹಾರಿ ಬರುವ ಧೂಳಿನಿಂದ ಕೃಷಿ ಭೂಮಿಯು ಫಲವತ್ತತೆಯನ್ನು ಮತ್ತು ಸಾವಯವ ಗುಣವನ್ನು ಕಳೆದುಕೊಂಡಿದ್ದು, ಈ ಕಾರಣಕ್ಕಾಗಿ ಕೃಷಿಯನ್ನೆ ಅವಲಂಬಿಸಿ ಬದುಕುವುದು ಕಷ್ಟವಾಗುತ್ತಿದೆ ಎಂದು ಉತ್ತರಿಸಿದ್ದಾರೆ.

೬.೨.೩ ಬೆಳೆಗಳ ಮೇಲಾಗುತ್ತಿರುವ ಪರಿಣಾಮಗಳು : ಗಣಿಗಾರಿಕೆಯ ಧೂಳಿನಿಂದ ಬೆಳೆ ಸರಿಯಾಗಿ ಬೆಳೆಯುವುದಿಲ್ಲವೆಂದು ೬೬ ಜನರ ಅಭಿಪ್ರಾಯವಾಗಿದೆ. ಇಳುವರಿ ಕಡಿಮೆಯಾಗುತ್ತದೆಯೆಂದು ೪೭ ಜನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೂಲಿ ಆಳುಗಳ ಅಭಾವವಾಗುತ್ತದೆಯೆಂದು ೨೧ ಜನ ಉತ್ತರಿಸಿದರೆ, ಅಂತರ್ಜಲ ಕುಸಿತವಾಗುತ್ತದೆಯೆಂದು ೨೦ ಜನ ತಿಳಿಸಿದ್ದಾರೆ. ಗಣಿಗಾರಿಕೆಗೆ ಇದಕ್ಕೆ ಸಂಬಂಧವಿಲ್ಲವೆಂದು ೪ ಜನ ಪ್ರತಿಕ್ರಿಯಿಸಿದ್ದಾರೆ. ಇದು ವ್ಯವಸಾಯದ ಮೇಲಾಗುವ ಪರಿಣಾಮಗಳಾಗಿವೆ.

ಗಣಿಗಾರಿಕೆಯಿಂದ ಹಾರಿಬರುವ ಧೂಳಿನಿಂದ ನಿಮ್ಮ ಬೆಳೆಗಳ ಮೇಲೆ ಯಾವ ಪರಿಣಾಮವಾಗುತ್ತದೆ ಎನ್ನುವ ಪ್ರಶ್ನೆಗೆ ಬೆಳೆಗಳ ಮೇಲೆ ಧೂಳು ಕೂಡುವುದರಿಂದ ಬೆಳೆಗಳ ಬೆಳವಣಿಗೆ ಕುಂಠಿತವಾಗುತ್ತದೆಯೆಂದು

೭೮ ಜನರು ಉತ್ತರಿಸಿದ್ದಾರೆ. ಇಳುವರಿ ಕಡಿಮೆಯಾಗುತ್ತದೆಯೆಂದು ೬೩ ಜನ ತಿಳಿಸಿದ್ದಾರೆ. ಗಣಿಗಾರಿಕೆಯು ಬಹಳ ವರ್ಷಗಳ ಕಾಲ ನಡೆದರೆ ಜಮೀನಿನ ಫಲವತ್ತತೆ ಕಡಿಮೆಯಾಗುತ್ತದೆಯೆಂದು ೨೮ ಜನರ ಅನಿಸಿಕೆಯಾಗಿದೆ. ಅಂದರೆ ಗಣಿಗಾರಿಕೆಯಿಂದ ವ್ಯವಸಾಯದ ಮೇಲೆ ದೊಡ್ಡ ಪ್ರಮಾಣದ ಪೆಟ್ಟು ಬೀಳುತ್ತಿರುವುದು ಕಂಡುಬರುತ್ತದೆ.

೬.೨.೪ ಪರಿಸರದ ಮೇಲಾಗುತ್ತಿರುವ ಪರಿಣಾಮಗಳು : ಬಹಳ ವರ್ಷಗಳ ಕಾಲ ಈ ಗಣಿಗಾರಿಕೆ ಮುಂದುವರೆದರೆ ನಿಮ್ಮ ಜಮೀನು ಮತ್ತು ಪರಿಸರದ ಮೇಲೆ ಯಾವ ಯಾವ ಪರಿಣಾಮಗಳಾಗಬಹುದು ಎನ್ನುವುದಕ್ಕೆ ಅಂತರ್ಜಲ ಮಟ್ಟ ಕುಸಿಯುತ್ತದೆಯೆಂದು ೧೭ ಜನ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ ಬೆಳೆ ಸರಿಯಾಗಿ ಬೆಳೆಯದೆ ಇಳುವರಿ ಕಡಿಮೆಯಾಗುತ್ತದೆಯೆಂದು ೧೦ ಜನರ ವಾದವಾಗಿದೆ. ೦೫ ಜನ ಭೂಮಿ ಬರಡಾಗುತ್ತದೆಯೆಂದು ತಿಳಿಸಿದ್ದಾರೆ. ೩೦ ಜನ ಪರಿಸರ ನಾಶವಾಗುತ್ತದೆಯೆಂದು, ೬ ಜನ ಮಳೆಯ ಪ್ರಮಾಣ ಕಡಿಮೆಯಾಗುತ್ತದೆಯೆಂದು, ೨೩ ಜನ ಅರಣ್ಯ ನಾಶವಾಗುತ್ತದೆಯೆಂದು ತಿಳಿಸಿದ್ದಾರೆ. ಅಲ್ಲದೇ ೬ ಜನ ಆರೋಗ್ಯ ಹಾಳಾಗುತ್ತದೆಯೆಂದು, ೪ ಜನ ಭೂಮಿಯು ನೀರನ್ನು ಹೀರುವ ಪ್ರಮಾಣ ಕಡಿಮೆಯಾಗುತ್ತದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗಣಿಗಾರಿಕೆಯ ಧೂಳಿನಿಂದ ಕಾಡಿನ ಮೇಲಾಗುತ್ತಿರುವ ಪರಿಣಾಮಗಳಲ್ಲಿ ಕಾಡು ನಾಶವಾಗುತ್ತದೆ ಎನ್ನುವ ಅಂಶ ಮುಖ್ಯವಾಗಿ ಕೇಳಿಬರುತ್ತಿದೆ. ಅಂದರೆ ಇದರ ಬಗ್ಗೆ ೭೮ ಜನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸರಿಯಾಗಿ ಬೆಳೆಯದೇ ಒಣಗಿ ಹೋಗುತ್ತದೆ ಎನ್ನುವ ಅಭಿಪ್ರಾಯವನ್ನು ೫೨ ಜನ ವ್ಯಕ್ತಪಡಿಸಿದ್ದಾರೆ. ೧೨ ಜನ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ ಎಂದು ತಿಳಿಸಿದ್ದಾರೆ.

ಒಟ್ಟಾರೆಯಾಗಿ ಗಣಿಗಾರಿಕೆಯಿಂದ ನಿಮ್ಮ ಸುತ್ತಲ ಪರಿಸರಕ್ಕೆ ಯಾವ ಬಗೆಯ ಪರಿಣಾಮಗಳಾಗಿವೆ ಎನ್ನುವುದರ ಕುರಿತು ಹಲವಾರು ಚಿಂತನೆಗಳು ರೈತರಿಂದ ಹೊರಬಂದಿವೆ. ೫೩ ಜನ ಪರಿಸರ ನಾಶವಾಗುತ್ತದೆಯೆಂದು ೧೬ ಜನ ಮನೆಗಳು ಬಿರುಕು ಬಿಟ್ಟಿವೆಯೆಂದು, ೧೫ ಜನ ಗ್ರಾಮದಲ್ಲೆಲ್ಲಾ ಧೂಳು ತುಂಬುತ್ತದೆಯೆಂದು, ೧೮ ಜನ ಅಂತರ್ಜಲ ಕುಸಿಯುತ್ತದೆಯೆಂದು, ೧೫ ಜನ ಪ್ರಾಣಿ ಪಕ್ಷಿಗಳ ಸಂತತಿ ನಶಿಸುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಅದರಂತೆ ೪೮ ಜನ ಅರಣ್ಯನಾಶದ ಬಗ್ಗೆ, ವಾಯುಮಾಲಿನ್ಯದಿಂದ ಹಲವಾರು ರೋಗಗಳು ಬರುತ್ತದೆಯೆಂದು ೨೭ ಜನ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ೧೪ ಜನ ನಿರುದ್ಯೋಗ ನಿವಾರಣೆಯು ಗಣಿಗಾರಿಕೆಯಿಂದಾಗಿದೆ ಎನ್ನುವ ಅಂಶವನ್ನು ಸೂಚಿಸಿದರು.

ಒಟ್ಟಾರೆಯಾಗಿ ಅಧ್ಯಯನದ ಫಲಿತಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ

ಮೇಲಿನ ಎಲ್ಲಾ ಸಂದರ್ಶನಗಳ ಮತ್ತು ಅಲ್ಲಿ ಪಡೆದ ಅಂಕಿ ಸಂಖ್ಯೆಗಳನ್ನು ವಿಶ್ಲೇಷಿಸಿದಾಗ ಈ ಕೆಳಗಿನ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

೧. ಕೃಷಿ ಭೂಮಿಯ ಸಾವಯವತೆಯು ಕಡಿಮೆಯಾಗುತ್ತಿದೆ. ಅಂತರ್ಜಲದ ಮಟ್ಟದಲ್ಲಿ ಕುಸಿತ ಮತ್ತು ಕೆರೆಗಳಲ್ಲಿ ಹೇರಳವಾಗಿ ಹೂಳು ತುಂಬಿದೆ ಮತ್ತು ಜಾನುವಾರಗಳ ಸಂಖ್ಯೆ ತೀವ್ರವಾಗಿ ಕುಸಿದಿದೆ.

೨. ಗಣಿಗಾರಿಕೆಯ ಧೂಳಿನಿಂದ ರೈತನ ಬೆಳೆಗಳ ಮೇಲೆ ಆಗುತ್ತಿರುವ ದುಷ್ಪರಿಣಾಮಕ್ಕೆ ಪರಿಹಾರವಾಗಿ ನೀಡುವ ಹಣ ರೈತರಿಗೆ ಸಾಲುತ್ತಿಲ್ಲ. ಬದಲಾಗಿ ಅವರ ಕೃಷಿ ಭೂಮಿ ಶಾಶ್ವತವಾಗಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ.

೩. ಈ ಮೇಲಿನ ಕಾರಣದಿಂದಾಗಿ ಕೃಷಿಕರು ತಮ್ಮ ಕೃಷಿ ಜಮೀನುಗಳನ್ನು ಗಣಿಗಾರಿಕೆಗೆ ವಾರ್ಷಿಕ ಗುತ್ತಿಗೆಯ ಆಧಾರದ ಮೇಲೆ ಕೊಡಲಾರಂಭಿಸಿದ್ದಾರೆ. ಹೀಗಾಗಿ ಮುಂದೊಂದು ದಿನ ಗಣಿಗಾರಿಕೆಯ ಸುತ್ತಲ ಜಮೀನು ಶಾಶ್ವತವಾಗಿ ತನ್ನ ಸಾವಯವ ಗುಣವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.

೪. ಕೃಷಿ ಕಾರ್ಯಗಳು ಕುಂಠಿತಗೊಳ್ಳುತ್ತಿವೆ.

೫. ಕೃಷಿಯ ಮೇಲೆ ಗಣಿಗಾರಿಕೆಯ ಪ್ರಭಾವ ಹೆಚ್ಚಾಗಿದೆ.

೬. ಮಾರುಕಟ್ಟೆಯಲ್ಲಿ ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ದೊರೆಯುತ್ತಿಲ್ಲ.

೭. ಗಣಿಗಾರಿಕೆಯು ತನ್ನೆಲ್ಲಾ ಭೀಕರ ಪರಿಣಾಮಗಳ ಜೊತೆ ಸ್ಥಳೀಯ ಕೃಷಿಕರ ಆರ್ಥಿಕ ಬದುಕಿನ ಮೇಲೂ ಇನ್ನಿಲ್ಲದ ಪರಿಣಾಮ ಬೀರಿದೆ.

೮. ಗಣಿಯಲ್ಲಿ ಕೆಲಸ ಮಾಡುವ ಬಹುತೇಕ ಕಾರ್ಮಿಕರು ತಾತ್ಕಾಲಿಕ ಸ್ಥಾನಮಾನದಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೌಕರಿಯ ಗ್ಯಾರಂಟಿಯಾಗಲಿ, ಪಿಂಚಣಿ, ಇಲ್ಲವೇ ವಿಮಾ ಸೌಲಭ್ಯವಾಗಲಿ ಇರುವುದಿಲ್ಲ. ಅಲ್ಲದೆ ಗಣಿಗಾರಿಕೆಯ ಅಪಾಯದ ಸಂದರ್ಭಗಳಲ್ಲಿ ತೆಗೆದುಕೊಳ್ಳಬೇಕಾದ ಯಾವ ಮುನ್ನೆಚ್ಚರಿಕೆಯನ್ನು ಗಣಿಯ ಮಾಲಿಕರಾಗಲಿ, ಸರಕಾರವಾಗಲಿ ತೆಗೆದುಕೊಂಡಿಲ್ಲ.

೯. ಗಣಿಗಳಲ್ಲಿ ಕೆಲಸ ಮಾಡಲು ಬಂದ ವಲಸಿಗ ಕಾರ್ಮಿಕರಿಗೆ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೆ ಬಯಲಲ್ಲಿ, ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಹೆಚ್ಚಿನ ಸಂಖ್ಯೆಯವರು ಶೋಷಿತ ಸಮುದಾಯದಿಂದ ಬಂದ ಕೃಷಿಕರೇ ಆಗಿದ್ದಾರೆ.

೧೦. ಇಲ್ಲಿಯ ಜನ ಪ್ರತಿಭಟನೆಗಳನ್ನು ಮಾಡದೆ, ಗಣಿಗಾರಿಕೆಗೆ ಒಗ್ಗಿ ಹೋಗಿದ್ದಾರೆ. ಇಲ್ಲಿ ಯಾವ ಪರಿಸರ ಚಳುವಳಿಗಳಾಗಲಿ, ಕಾರ್ಮಿಕರ ಹಿತರಕ್ಷಣಾ ಸಂಘಟನೆಗಳಾಗಲಿ ಇರುವುದಿಲ್ಲ.

೧೧. ಅರಣ್ಯ ನಾಶವಾಗುತ್ತಿದೆ.

೧೨. ಮಳೆಯ ಪ್ರಮಾಣ ಕಡಿಮೆಯಾಗಿದೆ.

೧೩. ದನಕರುಗಳ ಸಂಖ್ಯೆಯಲ್ಲಿ ತೀವ್ರ ಇಳಿಮುಖವಾಗಿದೆ.

೧೪. ಗಣಿಗಾರಿಕೆ ನಡೆಯುವ ಸುತ್ತಲ ಪ್ರದೇಶದಲ್ಲಿ ಶೇ.೯೦ರಷ್ಟು ಜನ ಶ್ವಾಸಕೋಶ ಸಂಬಂಧಿ ಕಾಯಿಲೆಗಳಿಂದ ನರಳುತ್ತಿದ್ದಾರೆ. ಹೀಗಾಗಿ ಮರಣ ಪ್ರಮಾಣವೂ ಹೆಚ್ಚಾಗಿದೆ. ಅಸ್ತಮಾದಂತಹ ಕಾಯಿಲೆ ಇಲ್ಲಿ ಸರ್ವೇಸಾಮಾನ್ಯವಾಗಿದೆ. ಇದನ್ನು ತಡೆಗಟ್ಟುವುದೆಂದರೆ ಗಣಿಗಾರಿಕೆಯನ್ನು ನಿಲ್ಲಿಸುವುದೊಂದೇ ಪರಿಹಾರ ಎಂದು ತಜ್ಞ ವೈದ್ಯರು ಸೂಚಿಸಿದ್ದಾರೆ.

೧೫. ಗಣಿಗಾರಿಕೆಯಿಂದ ಕೆಲವರಿಗೆ ಮಾತ್ರ ಲಾಭವಿದೆ. ಬಂಡವಾಳ ಹೂಡುವ ಮತ್ತು ಅದನ್ನು ನಿರಂತರವಾಗಿ ದ್ವಿಗುಣಗೊಳಿಸಲು ಹಾತೊರೆಯುವ ಬಂಡವಾಳಿಗರು ಮಾತ್ರ ಗಣಿಗಾರಿಕೆಯಿಂದ ಲಾಭ ಪಡೆದು, ತಾವು ಎಲ್ಲ ಬಗೆಯ ದುಷ್ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದಾರೆ.

೧೬. ಗಣಿಗಾರಿಕೆಯನ್ನು ಮಾಡುವಾಗ ಗಣಿಮಾಲಿಕರು ತೆಗೆದುಕೊಳ್ಳಬೇಕಾದ ಪ್ರಾಥಮಿಕ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಆಸ್ಪತ್ರೆ, ನೀರು, ಕಾರ್ಮಿಕರ ಸುರಕ್ಷತೆ, ಕಾರ್ಮಿಕರ ಮೂಲಭೂತ ಸೌಲಭ್ಯಗಳು ಮತ್ತು ಪರಿಸರ ರಕ್ಷಣೆ ಮುಂತಾದ ವಿಷಯಗಳನ್ನು ಉಗ್ರವಾಗಿ ನಿರ್ಲಕ್ಷಿಸಲಾಗಿದೆ.

೧೭. ಒಟ್ಟಿನಲ್ಲಿ ಗಣಿಗಾರಿಕೆಯು ಈ ಪ್ರದೇಶಗಳಲ್ಲಿ ಒಂದು ಅನಿವಾರ್ಯದ ಮತ್ತು ಎಲ್ಲರೂ ಸದ್ಯಕ್ಕೆ ಒಪ್ಪಿಕೊಳ್ಳಬೇಕಾದ ಆರ್ಥಿಕ ವಾತಾವರಣವೊಂದನ್ನು ಸೃಷ್ಟಿಸಿದೆ. ಈ ಅನಿವಾರ್ಯತೆಯು ಹಲವು ದುಷ್ಪರಿಣಾಮಗಳಿಗೆ ಕಾರಣವಾಗಿದೆ.

೧೮. ಸರಕಾರ ಎಲ್ಲಾ ಕಡೆ ತನ್ನ ದಿವ್ಯ ನಿರ್ಲಕ್ಷತೆಯನ್ನು ಪ್ರದರ್ಶಿಸುತ್ತಾ ಕಣ್ಮುಚ್ಚಿ ಕುಳಿತಿದೆ.

೧೯. ಮಣ್ಣಿನ ಇಟ್ಟಿಗೆ ತಯಾರಿಕೆಗೆ ಬಳಸುವ ಮಣ್ಣು ಕೃಷಿ ಭೂಮಿಯ ಮೇಲ್ಪದರಾಗಿದೆ.

೨೦. ಸುಣ್ಣದ ಶಿಲೆಗಾಗಿ ಭೂಮಿಯ ಮೇಲ್ಪದರವನ್ನು ಅಗೆಯಲಾಗುತ್ತದೆ.

೨೧. ಬೃಹತ್ ಪ್ರಮಾಣದ ಕ್ವಾರೆ ಕೆಲಸಗಳಿಂದ ಪರಿಸರದ ಜೊತೆಗೆ ಕೃಷಿಯ ಮೇಲೆ ಪರಿಣಾಮ ಬೀರುತ್ತದೆ.

೨೨. ಸಿಮೆಂಟ್ ಇಟ್ಟಿಗೆಗೆ ಬಳಸುವ ಮರಳು ನೀರನ್ನು ಹಿಡಿದಿಡುವ ಅಂಶವನ್ನು ಹೊಂದಿರುತ್ತದೆ. ಆದರೆ ಅದನ್ನು ಯಥೇಚ್ಛವಾಗಿ ಬಳಸಿದರೆ ಅಂತರ್ಜಲಮಟ್ಟ ಕುಸಿಯುತ್ತದೆ.

೬.೩ ಕೋಷ್ಟಕಗಳು

ರೈತರು ಬೆಳೆಯುವ ಬೆಳೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ವಾಣಿಜ್ಯ ಬೆಳೆಗಳು ಮತ್ತು ಆಹಾರದ ಬೆಳೆಗಳು.

ವಾಣಿಜ್ಯ ಬೆಳೆಗಳಲ್ಲಿ ಹತ್ತಿ, ಮೆಕ್ಕೆಜೋಳ, ಶೇಂಗಾ, ಕಬ್ಬು, ಬಾಳೆ, ತೆಂಗು, ತೇಗದ ಗಿಡಗಳು, ಹಣ್ಣಿನ ಗಿಡಗಳು.

ಆಹಾರ ಬೆಳೆಗಳಲ್ಲಿ ಜೋಳ, ತೊಗರಿ, ಸೂರ್ಯಕಾಂತಿ, ಈರುಳ್ಳಿ, ಮೆಣಸಿನಕಾಯಿ, ತರಕಾರಿ, ಸಜ್ಜೆ, ರಾಗಿ, ಭತ್ತ ಎಂದು ಗುರುತಿಸಲಾಗಿದೆ. ಈ ಬೆಳೆಗಳನ್ನು ಬೆಳೆಯುವ ರೈತರ ಬಗ್ಗೆ ಈ ಕೆಳಗಿನ ಮಾಹಿತಿಯ ಮೂಲಕ ತಿಳಿಯಬಹುದು.

ವಾಣಿಜ್ಯ ಬೆಳೆ ಮಾತ್ರ ಬೆಳೆಯುವವರು	೦೫ ಜನ
ಆಹಾರದ ಬೆಳೆ ಮಾತ್ರ ಬೆಳೆಯುವವರು	೦೯ ಜನ
ವಾಣಿಜ್ಯ ಮತ್ತು ಆಹಾರ ಬೆಳೆಗಳನ್ನು ಬೆಳೆಯುವವರು	೮೧ ಜನ

ಹೊಸಪೇಟೆ ತಾಲೂಕಿನ ಗಣಿಗಾರಿಕೆಯ ವ್ಯಾಪ್ತಿಯೊಳಗಿನ ಸಂದರ್ಶನಕ್ಕೆ ೧೦೦ ಜನ ರೈತರನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಸಂದರ್ಶಿಸಲ್ಪಟ್ಟ ರೈತರಲ್ಲಿ ಬೆಳೆಯುವ ಬೆಳೆಗಳನ್ನು ಈ ಮೇಲೆ ನೋಡಲಾಗಿದೆ. ರೈತರು ಬೆಳೆಯುವ ಬೆಳೆಗಳನ್ನು ಇಲ್ಲಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ವಾಣಿಜ್ಯ ಬೆಳೆ ಮತ್ತು ಆಹಾರದ ಬೆಳೆಯಾಗಿದೆ. ೦೫ ಜನ ಮಾತ್ರ ಕೇವಲ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ೦೯ ಜನ ಕೇವಲ ಆಹಾರದ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ವಾಣಿಜ್ಯ ಮತ್ತು ಆಹಾರದ ಬೆಳೆಗಳನ್ನು ೮೧ ಜನ ರೈತರು ಬೆಳೆಯುತ್ತಿದ್ದಾರೆ. ಹೆಚ್ಚಿನ ಪ್ರಮಾಣದ ಕೃಷಿಕರು ವಾಣಿಜ್ಯ ಮತ್ತು ಆಹಾರದ ಬೆಳೆಗಳನ್ನು ಒಟ್ಟಾರೆಯಾಗಿ ಬೆಳೆಯುತ್ತಿರುವುದು ತಿಳಿದುಬರುತ್ತದೆ.

ಕೃಷಿ ಬಿಟ್ಟು ರೈತರ ಕುಟುಂಬದವರು ಬೇರೆ ಯಾವ ಯಾವ ಕಸುಬುಗಳನ್ನು ಅವಲಂಬಿಸಿದ್ದಾರೆಂದು. ಈ ಕೋಷ್ಟಕದ ಮೂಲಕ ನೋಡಬಹುದು.

ಕ್ರ.ಸಂ.	ಅವಲಂಬಿಸಿರುವ ಕಸುಬುಗಳು	ಸಂಖ್ಯೆಯಲ್ಲಿ
೧.	ಗಣಿಗಾರಿಕೆಯ ಲಾರಿಚಾಲಕ	೦೫
೨.	ಗಣಿಕಾರ್ಮಿಕ	೧೭
೩.	ಕುಲಕಸುಬು	೦೬
೪.	ಕುರಿ ಸಾಕಣಿಕೆ	೧೦
೫.	ವ್ಯಾಪಾರ	೦೩
೬.	ಸರಕಾರಿ ನೌಕರರು	೦೩
೭.	ಗಣಿಗಾರಿಕೆ (ಸ್ವಂತವಾಗಿ)	೦೮
೮.	ಇತರೆ	೦೨

ಒಟ್ಟು ಸಂದರ್ಶಿಸಲ್ಪಟ್ಟ ರೈತರಲ್ಲಿ ಕೃಷಿಯನ್ನು ಬಿಟ್ಟು ಅವರ ಕುಟುಂಬದವರು ಬೇರೆ ಬೇರೆ ಕಸುಬುಗಳನ್ನು ಅವಲಂಬಿಸಿರುವುದು ಕಂಡುಬರುತ್ತಿದೆ. ೧೭ ಜನ ರೈತರ ಕುಟುಂಬದವರು ಗಣಿಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ೦೫ ಜನ ಗಣಿಗಾರಿಕೆಯ ಲಾರಿ ಚಾಲಕರಾಗಿ ಗಣಿಗಾರಿಕೆಯ ಕೆಲಸದಲ್ಲಿ

ತೊಡಗಿದ್ದಾರೆ. ಅಂಚಿನಲ್ಲಿರುವ, ಸಣ್ಣ ಹಿಡುವಳಿದಾರರು ಮತ್ತು ಕೆಲವು ಮಧ್ಯಮ ಹಿಡುವಳಿ ಕುಟುಂಬದವರು ಗಣಿಗಾರಿಕೆಯಲ್ಲಿ ತೊಡಗಿದ್ದಾರೆ. ೦೬ ಜನ ರೈತರು ಕೃಷಿಯ ಜೊತೆಗೆ ತಮ್ಮ ಕುಲಕಸುಬನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ೧೦ ಜನ ರೈತರು ಉಪಕಸುಬಾಗಿ ಕುರಿಸಾಕಣೆಯನ್ನವಲಂಬಿಸಿದ್ದಾರೆ. ವ್ಯಾಪಾರಸ್ಥರಾಗಿ ಮತ್ತು ಸರಕಾರಿ ನೌಕರರಾಗಿ ತಲಾ ೦೩ ಜನರು ಕೆಲಸ ನಿರ್ವಹಿಸುತ್ತಿದ್ದಾರೆ. ೦೮ ಜನ ಸ್ವಂತವಾಗಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಇತರೆ ಕೆಲಸದಲ್ಲಿ ೦೨ ಜನ ತೊಡಗಿಕೊಂಡಿದ್ದಾರೆ.

ಸಾಮಾನ್ಯವಾಗಿ ನಿಮ್ಮ ಗ್ರಾಮದವರು ಯಾವ ಯಾವ ಆರೋಗ್ಯದ ಸಮಸ್ಯೆಗಳಿಗಾಗಿ ಆಸ್ಪತ್ರೆಗೆ ಹೋಗುತ್ತಾರೆ ಎನ್ನುವ ಪ್ರಶ್ನೆಗೆ ರೋಗಗಳು ಮತ್ತು ಆ ರೋಗಗಳ ಬಗ್ಗೆ ಎಷ್ಟು ಜನ ತಿಳಿಸಿದ್ದಾರೆಂದು ಸಂಖ್ಯೆಯಲ್ಲಿ ತಿಳಿಯಬಹುದಾಗಿದೆ.

ಕ್ರ.ಸಂ.	ಆರೋಗ್ಯದ ಸಮಸ್ಯೆಗಳು	ಮಾಹಿತಿ ನೀಡಿರುವರು (ಸಂಖ್ಯೆಗಳಲ್ಲಿ)
೧.	ಜ್ವರ	೫೮
೨.	ತಲೆನೋವು	೨೨
೩.	ನೆಗಡಿ, ಕೆಮ್ಮು-ದಮ್ಮು	೪೧
೪.	ಮಲೇರಿಯಾ	೦೬
೫.	ಹೊಟ್ಟೆನೋವು	೨೪
೬.	ಉಸಿರಾಟ ತೊಂದರೆ	೦೧
೭.	ಏಡ್ಸ್	೦೪
೮.	ಟಿ.ಬಿ.	೦೬
೯.	ಮೈಕೈ ನೋವು	೦೩

ಗಣಿಗಾರಿಕೆಯ ಪ್ರದೇಶದಲ್ಲಿ ಹೆಚ್ಚಾಗಿ ರೋಗರುಜಿನೆಗಳು ಆವರಿಸಿಕೊಳ್ಳುತ್ತವೆ. ಗ್ರಾಮಗಳಲ್ಲಿ ಹೆಚ್ಚಿನ ಜನರು ವೈದ್ಯರ ಹತ್ತಿರ ಯಾವ ರೋಗಗಳಿಗೆ ಚಿಕಿತ್ಸೆ ಪಡೆಯಲು ಹೋಗುತ್ತಾರೆನ್ನುವುದನ್ನು ಈ ಮುಂದಿನಂತೆ ತಿಳಿಯಲಾಗುವುದು. ೫೮ ಜನ ಜ್ವರ, ೨೨ ಜನ ತಲೆನೋವು ಮತ್ತು ನೆಗಡಿ, ಕೆಮ್ಮು-ದಮ್ಮಿನಿಂದ ೪೧ ಜನರು ಈ ರೋಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರ ಬಳಿಗೆ ಹೋಗುತ್ತಾರೆ ಎಂದು ತಿಳಿದುಬರುತ್ತದೆ. ಅಲ್ಲದೆ, ೦೬ ಜನ ಮಲೇರಿಯಾ, ೨೪ ಜನ ಹೊಟ್ಟೆನೋವು, ೦೧ ಉಸಿರಾಟದ ತೊಂದರೆ, ೦೪ ಜನ ಏಡ್ಸ್, ೦೬ ಜನ ಟಿ.ಬಿ. ಮತ್ತು ೦೩ ಜನ ಮೈಕೈನೋವಿನಿಂದಾಗಿ ನಮ್ಮ ಗ್ರಾಮದಲ್ಲಿ ವೈದ್ಯರ ಹತ್ತಿರ ಚಿಕಿತ್ಸೆಗೆ ಹೋಗುತ್ತಾರೆಂದು ತಿಳಿಸುತ್ತಾರೆ.

ಗಣಿಗಾರಿಕೆಯಿಂದ ಮನುಷ್ಯನ ಮೇಲೆ ಯಾವ ಪರಿಣಾಮಗಳಾಗುತ್ತವೆ ಎಂಬುದಕ್ಕೆ ಯಾವ ರೋಗಕ್ಕೆ ಎಷ್ಟು ಜನ ಉತ್ತರಿಸಿದ್ದಾರೆ ಎನ್ನುವುದನ್ನು ಈ ಕೆಳಗಿನ ಕೋಷ್ಟಕದಲ್ಲಿ ನೋಡಬಹುದು.

ಕ್ರ.ಸಂ.	ಪರಿಣಾಮಗಳು ಅಥವಾ ಹರಡುವ ರೋಗಗಳು	ಉತ್ತರಿಸಿದವರು (ಸಂಖ್ಯೆಗಳಲ್ಲಿ)
೧.	ಹೊಟ್ಟೆನೋವು	೪೨
೨.	ಅಸ್ತಮಾ	೩೨
೩.	ಟಿ.ಬಿ.	೧೮
೪.	ವಾಂತಿಬೇಧಿ	೦೨
೫.	ಜ್ವರ	೪೦
೬.	ಮಲೇರಿಯಾ	೦೩
೭.	ತಲೆನೋವು	೧೨
೮.	ಕೆಮ್ಮುದಮ್ಮು	೧೫
೯.	ಉಸಿರಾಟ ಸಮಸ್ಯೆ	೧೦
೧೦.	ಚರ್ಮರೋಗ	೦೩
೧೧.	ಕಣ್ಣುನೋವು	೦೧
೧೨.	ಮೈ ಕೈ ನೋವು	೦೧

ಗಣಿಗಾರಿಕೆಯಿಂದ ಮನುಷ್ಯನ ಮೇಲೆ ಹಲವಾರು ರೀತಿಯ ಪರಿಣಾಮಗಳಾಗುತ್ತವೆ. ವಾಯುಮಾಲಿನ್ಯ, ಜಲಮಾಲಿನ್ಯದಿಂದಾಗಿ ಹಲವಾರು ರೋಗಗಳು ಹರಡುತ್ತಿವೆ. ಈ ಬಗೆಗೆ ರೈತರು ಹಲವಾರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ೪೨ ಜನ ರೈತರು ಹೊಟ್ಟೆನೋವು ಬರುತ್ತದೆ ಎನ್ನುವ ಅಭಿಪ್ರಾಯವನ್ನು ಹೊಂದಿದ್ದಾರೆ. ೩೨ ಜನ ಅಸ್ತಮ, ೧೮ ಜನ ರೈತರು ಟಿ.ಬಿ., ೦೨ ಜನ ವಾಂತಿಬೇಧಿ, ೪೦ ಜನ ರೈತರು ಜ್ವರ ಬರುತ್ತದೆಯೆಂದು ಮನಗಂಡಿದ್ದಾರೆ. ಅಲ್ಲದೇ ಗಣಿಗಾರಿಕೆಯಿಂದ ನೀರು ಕಲುಷಿತವಾಗಿ ಮಲೇರಿಯಾ ಬರುತ್ತದೆಯೆಂಬುದು ೦೩ ಜನ ರೈತರ ಅಭಿಪ್ರಾಯವಾಗಿದೆ. ೧೨ ಜನ ರೈತರು ತಲೆನೋವು ಬರುತ್ತದೆಯೆನ್ನುವ ತಿಳುವಳಿಕೆಯನ್ನು ಹೊಂದಿದ್ದಾರೆ. ೧೫ ಜನ ರೈತರು ಕೆಮ್ಮು ದಮ್ಮು, ೧೦ ಜನ ರೈತರು ಉಸಿರಾಟದ ಸಮಸ್ಯೆಯಾಗುತ್ತಿದೆ ಎಂದು ತಿಳಿಸುತ್ತಾರೆ. ೦೩ ಜನ ಚರ್ಮರೋಗ, ತಲಾ ಒಬ್ಬರಂತೆ ಕಣ್ಣುನೋವು ಮತ್ತು ಮೈಕೈನೋವು ಬರುತ್ತದೆಯೆಂದು ತಿಳಿಸಿದ್ದಾರೆ.

ಒಟ್ಟಿನಲ್ಲಿ ಗಣಿಗಾರಿಕೆಯಿಂದಾಗಿ ನಿಮ್ಮ ಸುತ್ತಲ ಪರಿಸರಕ್ಕೆ ಯಾವ ಬಗೆಯ ಪರಿಣಾಮಗಳಾಗಿವೆ ಎನ್ನುವ ಪ್ರಶ್ನೆಗೆ ಹಲವಾರು ಉತ್ತರಗಳು ದೊರೆತಿವೆ. ಯಾವ ಅಂಶವನ್ನು ಎಷ್ಟು ಜನ ವ್ಯಕ್ತಪಡಿಸಿದ್ದಾರೆಂದು ಈ ಮುಂದಿನ ಕೋಷ್ಟಕದಲ್ಲಿ ನೋಡೋಣ.

ಕ್ರ.ಸಂ.	ಪರಿಸರದ ಮೇಲಿನ ಪರಿಣಾಮಗಳು	ಮಾಹಿತಿ ನೀಡಿದವರು (ಸಂಖ್ಯೆಗಳಲ್ಲಿ)
೧.	ಪರಿಸರ ನಾಶವಾಗುತ್ತದೆ	೫೩
೨.	ಮನೆಗಳು ಬಿರುಕು ಬಿಡುತ್ತವೆ	೧೬
೩.	ಗ್ರಾಮದಲ್ಲೆಲ್ಲಾ ಧೂಳು ತುಂಬುತ್ತಿದೆ	೧೫
೪.	ಅಂತರ್ಜಲ ಕುಸಿಯುತ್ತದೆ	೧೮
೫.	ಮಳೆಯ ಪ್ರಮಾಣ ಕಡಿಮೆಯಾಗುತ್ತದೆ	೧೫
೬.	ಪ್ರಾಣಿ ಪಕ್ಷಿಗಳ ಸಂತತಿ ನಶಿಸಿಹೋಗುತ್ತದೆ	೧೧
೭.	ಅರಣ್ಯ ನಾಶವಾಗುತ್ತದೆ	೪೮
೮.	ವಾಯುಮಾಲಿನ್ಯವಾಗುತ್ತದೆ	೦೬
೯.	ಹಲವಾರು ರೋಗ ರುಜಿನೆಗಳು ಬರುತ್ತವೆ	೨೧
೧೦.	ನಿರುದ್ಯೋಗ ನಿವಾರಣೆಯಾಗುತ್ತದೆ	೧೪
೧೧.	ಇಳುವರಿ ಕಡಿಮೆಯಾಗುತ್ತದೆ	೨೦

ಗಣಿಗಾರಿಕೆಯಿಂದ ಪರಿಸರದ ಮೇಲೆ ಹಲವು ಬಗೆಯ ಪರಿಣಾಮಗಳಾಗುತ್ತಿವೆ. ಈ ಪರಿಣಾಮಗಳನ್ನು ರೈತರು ಮನಗಂಡಿದ್ದಾರೆ. ಹಲವಾರು ಬಗೆಯ ಪರಿಣಾಮಗಳ ಬಗೆಗೆ ರೈತರ ಅಭಿಪ್ರಾಯಗಳನ್ನು ಈ ಮುಂದಿನಂತೆ ನೋಡಬಹುದು. ೫೩ ಜನ ರೈತರು ಪರಿಸರ ನಾಶವಾಗುತ್ತದೆಯೆಂದು, ೧೬ ಜನ ಮನೆಗಳು ಬಿರುಕು ಬಿಡುತ್ತವೆಯೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ೧೫ ಜನ ಗ್ರಾಮದಲ್ಲೆಲ್ಲಾ ಧೂಳು ತುಂಬುತ್ತಿದೆಯೆಂದು, ೧೮ ಜನ ಅಂತರ್ಜಲ ಕುಸಿಯುತ್ತದೆ ಎನ್ನುವ ಅಭಿಪ್ರಾಯವನ್ನು ಹೊಂದಿದ್ದಾರೆ. ೧೫ ಜನ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ೧೧ ಜನ ಪ್ರಾಣಿ ಪಕ್ಷಿಗಳ ಸಂತತಿ ನಶಿಸಿಹೋಗುತ್ತವೆ ಎನ್ನುವ ತಿಳುವಳಿಕೆಯನ್ನು ಹೊಂದಿದ್ದಾರೆ. ೪೮ ಜನರು ಅರಣ್ಯನಾಶವಾಗುತ್ತದೆ. ೦೬ ಜನ ವಾಯುಮಾಲಿನ್ಯವಾಗುತ್ತದೆಯೆಂದು, ೨೧ ಜನ ರೈತರು ಹಲವಾರು ರೋಗ ರುಜಿನೆಗಳು ಬರುತ್ತದೆ ಎನ್ನುವ ಅಭಿಪ್ರಾಯವನ್ನು ಹೊಂದಿದ್ದಾರೆ. ೧೪ ಜನ ನಿರುದ್ಯೋಗ ನಿವಾರಣೆಯಾಗುತ್ತದೆಯೆಂದು, ೨೦ ಜನ ರೈತರು ಇಳುವರಿ ಕಡಿಮೆಯಾಗುತ್ತಿದೆಯೆಂದು ತಿಳಿದುಕೊಂಡಿದ್ದಾರೆ. ಪರಿಸರ ಮತ್ತು ಅರಣ್ಯ ನಾಶದ ಬಗೆಗೆ ಹೆಚ್ಚಿನ ರೈತರು ತಿಳುವಳಿಕೆಯನ್ನು ಹೊಂದಿದ್ದಾರೆ.

ಈ ಅಧ್ಯಾಯದಲ್ಲಿ ಕ್ಷೇತ್ರಕಾರ್ಯದ ದತ್ತಾಂಶಗಳ ವಿಶ್ಲೇಷಣೆ, ಅಧ್ಯಯನದ ಫಲಿತಗಳು ಮತ್ತು ಕೋಷ್ಟಕಗಳ ಬಗೆಗೆ ವಿವರಿಸಲಾಗಿದೆ. ಗಣಿಗಾರಿಕೆಯಿಂದ ಪರಿಸರದ ಮೇಲೆ ಹಲವಾರು ರೀತಿಯ ಪರಿಣಾಮಗಳಾಗುತ್ತಿವೆ. ಒಂದು ಸಲ ಪರಿಸರ ನಾಶವಾದರೆ ಅದನ್ನು ಸರಿಪಡಿಸುವುದು ಅಷ್ಟು ಸುಲಭದ ಕೆಲಸವಲ್ಲ. ಯಾವುದೇ ಚಟುವಟಿಕೆಯನ್ನು ಆರಂಭಿಸಬೇಕಾದರೆ ಅದರ ಸಾಧಕ-ಬಾಧಕಗಳ ಕುರಿತು

ತಿಳಿದುಕೊಳ್ಳಬೇಕು. ಗಣಿಗಾರಿಕೆಯ ವ್ಯಾಪ್ತಿಯೊಳಗಿರುವ ಗ್ರಾಮಗಳ ಮುಖ್ಯ ಆರ್ಥಿಕ ಚಟುವಟಿಕೆ ಗಣಿಗಾರಿಕೆಯಾಗಿ ರೂಪುಗೊಂಡಿದೆ. ಗಣಿಗಾರಿಕೆಯನ್ನು ನಡೆಸುವುದು ತಪ್ಪಲ್ಲ. ಆದರೆ ಬೇರೆ ಕ್ಷೇತ್ರಗಳಿಗೆ ಹಾನಿಯಾಗದಂತೆ ಜಾಗರೂಕತೆ ವಹಿಸಬೇಕು. ಗಣಿಗಾರಿಕೆ ಪ್ರದೇಶದ ಗ್ರಾಮಗಳ ಹೆಚ್ಚಿನ ಜನರು ಗಣಿಗಾರಿಕೆಯನ್ನವಲಂಬಿಸಿದ್ದಾರೆ. ಅದರಲ್ಲೂ ಸಣ್ಣ ಮತ್ತು ರೂಪಾಂತರಗೊಳ್ಳುತ್ತಿರುವ ಕೃಷಿಕರು ಪ್ರಮುಖವಾಗಿ ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಆದರೆ ಪರಿಸರ ನಾಶ ಮತ್ತು ಇಳುವರಿ ಕಡಿಮೆಯಾಗುತ್ತದೆ ಎನ್ನುವ ಅಂಶ ಪ್ರಮುಖವಾಗಿ ಕೇಳಿಬರುತ್ತಿದೆ.

ಅಧ್ಯಾಯ ೭

ಸಮಾರೋಪ

ಪ್ರಸ್ತುತ ಅಧ್ಯಯನದಲ್ಲಿ ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಕೃಷಿ ಈ ದೇಶದ ಮೂಲಭೂತ ಆರ್ಥಿಕ ಚಟುವಟಿಕೆಯಾಗಿದೆ. ಕೃಷಿಯಿಂದಲೇ ದೇಶವು ಪ್ರಗತಿ ಪಥದತ್ತ ಸಾಗುತ್ತಾ ಇರುತ್ತದೆ. ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಹತ್ತು ಹಲವಾರು ಅಂಶಗಳು ಕಾರಣವಾಗುತ್ತವೆ. ಅವುಗಳಲ್ಲಿ ಖನಿಜ ಸಂಪತ್ತು ಒಂದು. ಆಧುನಿಕ ಬದುಕಿಗೆ ಮಾರು ಹೋಗುತ್ತಿರುವ ಇಂದಿನ ಸಮಾಜ ಮುಂದಾಗುವ ಅನಾಹುತದ ಬಗ್ಗೆ ಮೈಮರೆತು ಮುಂದುವರೆಯುತ್ತಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಮುನ್ನುಗ್ಗುತ್ತಿರುವ ಮಾನವ ತನ್ನ ಅಂತ್ಯ ತಾನೇ ತಂದುಕೊಳ್ಳುತ್ತಿದ್ದಾನೆ. ಭೂಮಿಯು ತನ್ನ ಗರ್ಭದಲ್ಲಿ ಲಕ್ಷಾಂತರ ವರ್ಷಗಳಿಂದ ಕೂಡಿಟ್ಟ ಖನಿಜ ಸಂಪತ್ತನ್ನು ಯಥೇಚ್ಛವಾಗಿ ಬಳಸಿ ಬರಿದು ಮಾಡುತ್ತಿದ್ದಾನೆ. ಅದು ಮುಗಿದು ಹೋಗುವ ಸಂಪನ್ಮೂಲವೆಂದು ತಿಳಿದಿದ್ದರು ಪ್ರಸ್ತುತ ಅನುಕೂಲಕ್ಕಾಗಿ ಬೇಕಾಬಿಟ್ಟಿಯಾಗಿ ಬಳಸಿಕೊಳ್ಳುತ್ತಿದ್ದಾನೆ. ಗಣಿಗಾರಿಕೆಯಿಂದ ಪರಿಸರದ ಮೇಲಾಗುವ ಅನಾಹುತವನ್ನು ತಿಳಿದೂ ವಿಪರೀತ ಗಣಿಗಾರಿಕೆಯಲ್ಲಿ ತೊಡಗಿದ್ದೇವೆ. ಅವುಗಳಲ್ಲಿ ಮುಖ್ಯವಾಗಿ ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮವೂ ಒಂದಾಗಿದೆ. ಪ್ರಸ್ತುತ ಅಧ್ಯಯನವು ಗಣಿಗಾರಿಕೆಯಿಂದ ಕೃಷಿ ಸಮುದಾಯದ ಮೇಲಾಗುವ ಪರಿಣಾಮಗಳನ್ನು ಕಂಡುಕೊಳ್ಳುವ ಪ್ರಯತ್ನವಾಗಿದೆ.

ಕೃಷಿ ಗ್ರಾಮೀಣ ಜನತೆಯ ಪ್ರಮುಖ ಉದ್ಯೋಗವಾಗಿದೆ. ಗಣಿಗಾರಿಕಯ ವ್ಯಾಪ್ತಿಯೊಳಗಿರುವ ಪ್ರದೇಶಗಳ ರೈತರು ಕೃಷಿಗಿಂತ ಗಣಿಗಾರಿಕೆಗೆ ಹೆಚ್ಚಿನ ಒಲವು ನೀಡುತ್ತಿರುವುದು ಕಂಡುಬರುತ್ತದೆ. ನೈಸರ್ಗಿಕ ವಿಕೋಪ, ರೋಗರುಜಿನೆಗಳು, ಗಣಿಗಾರಿಕೆಯ ಧೂಳಿನಿಂದಾಗಿ ಸರಿಯಾದ ಬೆಳೆ ಬರದಿರುವುದೇ ಇದಕ್ಕೆ ಮುಖ್ಯ ಕಾರಣ. ಕೃಷಿಯಿಂದ ಲಾಭ ದೊರೆಯುತ್ತದೆಯೋ, ಅಥವಾ ನಷ್ಟ ಸಂಭವಿಸುತ್ತದೆಯೋ ಎಂಬ ಅರಿವು ರೈತರಿಗಿದ್ದರೂ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಕೆಲವೊಂದು ರೈತರು ಗಣಿಗಾರಿಕೆಯಲ್ಲಿ ತೊಡಗಿದ್ದಾರೆ. ಕೃಷಿ ಮಾಡಬೇಕಾದ ರೈತ ಇಂದು ಗಣಿಗಾರಿಕೆಯ ಕೆಲಸವನ್ನವಲಂಬಿಸಿದ್ದಾನೆ. ಗಣಿಗಾರಿಕೆಯ ವ್ಯಾಪ್ತಿಯಲ್ಲಿರುವ ಹೆಚ್ಚಿನ ಗ್ರಾಮಗಳು ಗಣಿಗಾರಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಅವುಗಳೆಂದರೆ ಕಾರಿಗನೂರು, ವಾಲ್ಮೀಕಿನಗರ, ಶಂಕರನಗರ, ವ್ಯಾಸನಕೆರೆ, ಗಾಳೆಮ್ಮನಗುಡಿ, ಹನುಮನಹಳ್ಳಿ, ಮತ್ತು ಕಲ್ಲಹಳ್ಳಿ. ಈ ಮೇಲೆ ತಿಳಿಸಿರುವ ಗ್ರಾಮಗಳು ಮುಖ್ಯವಾಗಿ ಗಣಿಗಾರಿಕೆಯನ್ನವಲಂಬಿಸಿವೆ. ಕಾರಿಗನೂರಿನಲ್ಲಿ ಪ್ರತಿಯೊಬ್ಬ ರೈತನು ಗಣಿಗಾರಿಕೆಯಲ್ಲಿ ತೊಡಗಿಕೊಂಡಿದ್ದಾನೆ. ಇಲ್ಲಿ ಹೆಚ್ಚಿನ ಜನರು ಭೂರಹಿತರಾಗಿದ್ದಾರೆ. ಉಳಿದ ಸ್ವಲ್ಪ ಜನರು ಭೂಮಿಯನ್ನು ಹೊಂದಿದ್ದರೂ ಕೃಷಿ ಲಾಭದಾಯಕವಲ್ಲವೆಂದು ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಕೃಷಿಗಿಂತ ಗಣಿಗಾರಿಕೆಯು ಲಾಭದಾಯಕ ಉದ್ಯಮವಾಗಿ ಪರಿವರ್ತನೆಗೊಂಡಿದೆ.

[illegible]

ಗಣಿಗಾರಿಕೆಯು ಇನ್ನು ಕೆಲವು ವರ್ಷಗಳ ಕಾಲ ಮುಂದುವರೆದರೆ ಕೃಷಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಮುಂದೊದಗುವ ಅನಾಹುತವನ್ನು ತಡೆಯಲು ಈಗಿನಿಂದಲೇ ಪ್ರಯತ್ನಿಸಬೇಕಾಗಿದೆ.

ಗಣಿಗಾರಿಕೆಯ ಧೂಳಿನಿಂದಾಗಿ ಬೆಳೆ ಸರಿಯಾಗಿ ಬೆಳೆಯದೆ ಇಳುವರಿ ಕಡಿಮೆಯಾಗುತ್ತದೆ ಎನ್ನುವ ಅಭಿಪ್ರಾಯವನ್ನು ೯೫ ಜನ ತಿಳಿಸಿದ್ದಾರೆ. ರೈತರಿಗೆ ಸರಕಾರದಿಂದ ಅಥವಾ ಗಣಿಮಾಲಿಕರಿಂದ ಯಾವುದೇ ಪರಿಹಾರ ದೊರೆಯುತ್ತಿಲ್ಲ. ಗಣಿಮಾಲಿಕರಿಂದ ಕೆಲವು ರೈತರಿಗೆ ಮಾತ್ರ ಪರಿಹಾರ ದೊರೆಯುತ್ತಿದೆಯಾದರೂ ಅದು ಯಾವುದಕ್ಕೂ ಸಾಲದಾಗಿದೆ. ಇದರಿಂದಾಗಿ ರೈತರು ಕೃಷಿಯ ಮೇಲೆ ನಿರಾಸಕ್ತಿ ಬೆಳೆಸಿಕೊಂಡಿದ್ದಾರೆ. ಹೆಚ್ಚಿನ ಕೂಲಿ ಗಣಿಗಾರಿಕೆಯಲ್ಲಿ ದೊರೆಯುತ್ತಿರುವುದರಿಂದ ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುತ್ತಿವೆ. ನಷ್ಟದ ಭಯದಿಂದಾಗಿ ರೈತರು ಕೃಷಿಯೋಗ್ಯ ಭೂಮಿಯನ್ನು ಅದಿರಿನ ಕಣಜವನ್ನಾಗಿ ಗಣಿಮಾಲಿಕರಿಗೆ ನೀಡುತ್ತಿದ್ದಾರೆ. ರೈತರು ಬದುಕುವ ಹಾಗೆಯೂ ಇಲ್ಲ, ಸಾಯುವ ಹಾಗೆಯೂ ಇಲ್ಲ ಎನ್ನುವ ವಾತಾವರಣ ಸೃಷ್ಟಿಯಾಗುತ್ತಿದೆ.

ಗಣಿಗಾರಿಕೆಯಿಂದ ಅಂತರ್ಜಲದ ಮೇಲೆ ದೊಡ್ಡ ಪ್ರಮಾಣದ ಪೆಟ್ಟು ಬೀಳುತ್ತದೆ. "ಅಂತರ್ಜಲ ನಮ್ಮ ದೊಡ್ಡ ಆಸ್ತಿಯಾಗಿದೆ. ಆದರೆ ಈ ಆಸ್ತಿ ನಮಗೆ ಪಿತ್ರಾರ್ಜಿತವಾಗಿ ಬಂದಿದ್ದು."[೧] ಇದನ್ನು ಉಳಿಸಿಕೊಂಡು ಹೋಗುವುದು ನಮ್ಮ ಕರ್ತವ್ಯ. ಆದರೆ ಇಂದು ಅದನ್ನು ಉಳಿಸುವ ಬದಲು ವಿನಾಶದ ಅಂಚಿಗೆ ತಳ್ಳುತ್ತಿದ್ದೇವೆ. ಗಣಿಗಾರಿಕೆಯ ಪ್ರಾರಂಭದ ಮೊದಲು ೩೦ ರಿಂದ ೪೦ ಅಡಿಗಳಿಗೆ ನೀರು ಬರುತ್ತಿತ್ತು. ಆದರೆ ಇಂದು ೨೦೦ ರಿಂದ ೨೫೦ ಅಡಿ ಬೋರ್‌ವೆಲ್ ಹಾಕಿಸಿದರೂ ನೀರು ಸಿಗುತ್ತಿಲ್ಲ. ಅಂತರ್ಜಲದ ಮಟ್ಟ ಕುಸಿಯುವಿಕೆಗೆ ಗಣಿಗಾರಿಕೆ ಪ್ರಮುಖವಾಗಿದೆ.

ಗಣಿಗಾರಿಕೆಯು ದಿನದಿಂದ ದಿನಕ್ಕೆ ವ್ಯಾಪಕವಾಗಿ ನಡೆಯುತ್ತಿದೆ. ಅಂದರೆ ಗಣಿಗಾರಿಕೆಯು ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದೆ. "೧೯೫೨ರಲ್ಲಿ ೫೦,೦೦೦ ಟನ್ ರಫ್ತಾಗುತ್ತಿದ್ದರೆ, ೧೯೭೮ರಲ್ಲಿ ೩೦ ಲಕ್ಷ ಟನ್‌ಗೆ ಮುಟ್ಟಿತ್ತು."[೨] ಭಾರಿ ಪ್ರಮಾಣದ ಗಣಿಗಾರಿಕೆಗಾಗಿ ಸಾವಿರಾರು ಲಾರಿಗಳು, ಟ್ರಕ್‌ಗಳು ಚಲಿಸುವುದರಿಂದ ಮುಖ್ಯ ಹೆದ್ದಾರಿಗಳನ್ನೊಳಗೊಂಡು ರಸ್ತೆಗಳೆಲ್ಲಾ ಹಾಳಾಗಿ ಹೋಗುತ್ತವೆ. ವಾಯುಮಾಲಿನ್ಯವಾಗುತ್ತದೆ. ಮನೆ ಮತ್ತು ಊರುಗಳು ಧೂಳಿನಿಂದ ಕಲುಷಿತವಾಗುತ್ತವೆ.

ನಾನು ಕ್ಷೇತ್ರಕಾರ್ಯ ಮಾಡಿದ ಗ್ರಾಮಗಳಲ್ಲಿ ಗಣಿಗಾರಿಕೆಯಿಂದ ರೋಗ ರುಜಿನೆಗಳು ತೀವ್ರವಾಗಿ ಹರಡಿರುವುದು ಕಂಡುಬಂದಿದೆ. ಶೇ.೯೨ರಷ್ಟು ಜನ ಅಸ್ತಮಾ, ಅಲರ್ಜಿ, ಆಯಾಸ ಮತ್ತು ಶ್ವಾಸಕೋಶ ಸಂಬಂಧಿ ರೋಗಗಳಿಂದ ಬಳಲುತ್ತಿರುವುದು ಕಂಡುಬರುತ್ತದೆ. ಕಲುಷಿತ ನೀರು ಮತ್ತು ಹುಲ್ಲನ್ನು ತಿನ್ನುವುದರಿಂದ ದನಕರುಗಳ ಸಂಖ್ಯೆಯಲ್ಲಿ ತೀವ್ರ ಪ್ರಮಾಣದ ಇಳಿಕೆಯಾಗಿದೆ.

ಗಣಿಗಾರಿಕೆಯಿಂದ ಅರಣ್ಯ ನಾಶವಾಗುತ್ತದೆ. ಅರಣ್ಯ ಅಭಿವೃದ್ಧಿಗಾಗಿ ಸರಕಾರ ನೂರಾರು, ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತದೆ. ಜನಸಾಮಾನ್ಯರಿಗೆ ಅರಣ್ಯವನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುವಂತೆ ಸೂಚಿಸುತ್ತದೆ. ಇಷ್ಟೆಲ್ಲಾ ಕಷ್ಟಪಟ್ಟು ಅರಣ್ಯ ಬೆಳೆಸಿದರೂ ಅದು ಉಳ್ಳವರ

[illegible]

[illegible]

[illegible]

[illegible]

ಅಥವಾ ಶ್ರೀಮಂತರ ಪಾಲಾಗುತ್ತದೆ. ``ಬಡಜನರ ಸಲುವಾಗಿ ಸರಕಾರ ಕೈಗೊಂಡ ಹಲವಾರು ಕಾರ್ಯಕ್ರಮಗಳನ್ನು ನಾನು ನೋಡಿದ್ದೇನೆ. ಅವು ಕಟ್ಟ ಕೊನೆಗೆ ಮೇಲ್ತರಗತಿಯ ಜನಗಳ ಲಾಭಕ್ಕಾಗಿ ಸಂದುದನ್ನು ಕಂಡಿದ್ದೇನೆ. ಅಂಥ ಕಾರ್ಯಕ್ರಮಗಳಲ್ಲಿ ಮೂಲ ಉದ್ದೇಶಕ್ಕೆ ವ್ಯತಿರಿಕ್ತವಾಗಿ ಸಾಗುತ್ತಿರುವ ಧೋರಣೆಯೇ ಸಾಮಾಜಿಕ ಅರಣ್ಯ ನಿರ್ಮಾಣ. ಹೀಗೆಂದು ಯೋಜನಾ ಆಯೋಗದ ಕಾರ್ಯಕ್ರಮದ ಜಂಟಿ ಕಾರ್ಯದರ್ಶಿ ಟಿ.ಎಲ್.ಶಂಕರ್‌ರವರು ಹೇಳುತ್ತಾರೆ.''[೩]

ಗಣಿಗಾರಿಕೆಯ ಧೂಳಿನಿಂದ ವಾಯುಮಾಲಿನ್ಯ ಜೊತೆಗೆ ಜಲಮಾಲಿನ್ಯ ಉಂಟಾಗುತ್ತದೆ. ಮಳೆಗಾಲದಲ್ಲಿ ಗಣಿಗಾರಿಕೆಯ ಗುಡ್ಡಗಳಿಂದ ಹರಿದು ಬರುವ ನೀರು ಜೊತೆಯಲ್ಲಿ ಹೂಳನ್ನು ಹೊತ್ತು ತರುವುದರಿಂದ ಹಳ್ಳಕೆರೆಗಳು ಮುಚ್ಚಿ ಹೋಗುತ್ತವೆ. ನೀರು ಕಲುಷಿತವಾಗುತ್ತವೆ. ಬಳಸಲು ಯೋಗ್ಯವಲ್ಲದಂತಾಗುತ್ತದೆ. ``ಗಣಿ ಪ್ರದೇಶದಲ್ಲಿನ ಸೂಕ್ಷ್ಮ ಧೂಳಿನಿಂದಾಗಿ ವಾತಾವರಣ ಮಾಲಿನ್ಯಕ್ಕೆ ಒಳಗಾಗುತ್ತದೆ. ಇದರಿಂದ ಜಲಮಾಲಿನ್ಯವು ಕೂಡಾ ಉಂಟಾಗುತ್ತದೆ.''[೪] ಖನಿಜ ಮುಗಿದು ಹೋಗುವ ಸಂಪನ್ಮೂಲವೆಂಬ ಅರಿವಿದ್ದರೂ ಸಹ ನಾವು ಹೆಚ್ಚು ಹೆಚ್ಚು ಗಣಿಗಾರಿಕೆಯಲ್ಲಿ ತೊಡಗಿ ಪರಿಸರವನ್ನು ಮಲೀನ ಮಾಡುತ್ತಿದ್ದೇವೆ. ಪರಿಸರವನ್ನು ಸ್ವಚ್ಛವಾಗಿಡಬೇಕು. ``ಪರಿಸರವೇ ಸಕಲ ಜೀವ ಪ್ರಪಂಚದ ಸಂಜೀವಿನಿ ಎಂದೇ ಹೇಳಬೇಕು.''[೫] ಪರಿಸರ ಸಕಲ ಜೀವ ಸಂಕುಲಗಳಿಗೆ ಸಂಜೀವಿನಿ ಎನ್ನುವುದು ಅಕ್ಷರ ಸಹ ಸತ್ಯವಾದುದಾಗಿದೆ.

ಗಣಿಗಾರಿಕೆಯಿಂದ ನಿರುದ್ಯೋಗ ನಿವಾರಣೆಯಾಗಿದೆ. ಸಾವಿರಾರು ಜನರಿಗೆ ಆಶ್ರಯ ನೀಡಿದೆ. ಆದರೆ ಮಾನವ ಶಕ್ತಿಗಿಂತ ಇಲ್ಲಿ ಯಂತ್ರ ಶಕ್ತಿಯು ಪ್ರಮುಖ ಪಾತ್ರವಹಿಸುತ್ತದೆ. ಪೂರ್ತಿಯಾಗಿ ಯಂತ್ರಶಕ್ತಿಯನ್ನು ಬಳಸುವ ತಂತ್ರಜ್ಞಾನ ದೊರೆಯಿತೆಂದರೆ ಆಗ ಮಾನವ ಶಕ್ತಿಗೆ ಅಲ್ಲಿ ಕೆಲಸವಿಲ್ಲದಂತಾಗುತ್ತದೆ. ಅಷ್ಟರಲ್ಲಿ ಕೃಷಿಯೋಗ್ಯ ಭೂಮಿಯನ್ನು ಸಹ ಹಾಳು ಮಾಡಿಕೊಂಡಿರುತ್ತೇವೆ. ಅಂದರೆ ಕೃಷಿ ಭೂಮಿಯು ಗಣಿಗಾರಿಕೆಗೆ ಬಳಸಲ್ಪಟ್ಟು ತನ್ನ ಸಾವಯವತೆಯನ್ನು ಕಳೆದುಕೊಳ್ಳುತ್ತದೆ. ಭೂಮಿಯು ನೀರನ್ನು ಹೀರಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುವ ಹುಲ್ಲುಗಾವಲು ಸಹ ನಾಶವಾಗುತ್ತದೆ. ಗಣಿಗಾರಿಕೆಯಿಂದ ದೇಶಕ್ಕೆ ವಿದೇಶಿ ವಿನಿಮಯ ದೊರೆಯಬಹುದು. ಆದರೆ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿವಲಯ ಹೆಚ್ಚು ನಷ್ಟವನ್ನು ಅನುಭವಿಸುತ್ತದೆ.

ಗಣಿಕಾರ್ಮಿಕರಲ್ಲಿ ಹೆಚ್ಚಿನರು ಸಣ್ಣ ಹಿಡುವಳಿದಾರರಾಗಿದ್ದಾರೆ. ಕೃಷಿಯಲ್ಲಿ ಲಾಭವಿಲ್ಲವೆಂದು ಗಣಿಗಾರಿಕೆಯಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರಿಗೆ ಕೂಲಿಯೇ ಜೀವನಕ್ಕೆ ಆಧಾರವಾಗಿದೆ. ಗಣಿಗಾರಿಕೆಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಆದರೆ ಇವರಿಗೆ ಕೂಲಿಯ ಹೊರತಾಗಿ ಬೇರೆ ಯಾವುದೇ ಸೌಲಭ್ಯಗಳನ್ನು ಸರಕಾರವಾಗಲಿ, ಗಣಿಮಾಲಿಕರಾಗಲಿ ನೀಡುತ್ತಿಲ್ಲ. ಕಾರ್ಮಿಕರಿಗೆ ದೊರೆಯಬೇಕಾದ ವಸತಿ, ವಿದ್ಯುತ್, ವೈದ್ಯಕೀಯ ತಪಾಸಣೆ, ಜೀವವಿಮೆ, ಬೋನಸ್ ಮುಂತಾದವುಗಳ ಸೌಲಭ್ಯ ಇಲ್ಲವಾಗಿದೆ. ಕೇವಲ ಕೂಲಿಯೊಂದೇ ಇವರ ಬದುಕಿಗೆ ಆಧಾರ. ಇವರಿಗೆ ಸ್ವಂತವಾದ ಸಂಘಟನೆಯಿಲ್ಲ. ಅಪಾಯದ ಕೆಲಸವೆಂದು ತಿಳಿದಿದ್ದರೂ ಸಹ ಮುಂಜಾಗ್ರತಾ ಕ್ರಮಗಳನ್ನು ಮತ್ತು ಕೆಲಸದ ಸಮಯದಲ್ಲಿ ಧರಿಸುವ ಉಡುಪು ಮತ್ತು

ಸುರಕ್ಷತೆಯ ಸಾಮಗ್ರಿಗಳನ್ನು ನೀಡಲಾಗಿಲ್ಲ. ಬಡತನವೇ ಒಂದು ಶಾಪವೆನ್ನುವಂತೆ ಕೂಲಿಯನ್ನು ಮಾತ್ರ ಅವಲಂಬಿಸಿದ್ದಾರೆ.

ಉದ್ಯೋಗವನ್ನರಸಿ ಬೇರೆಡೆಯಿಂದ ಬಂದ ವಲಸಿಗರಿಗೂ ಸಹ ಯಾವುದೇ ರೀತಿಯ ಸೌಲಭ್ಯಗಳು ದೊರೆಯುತ್ತಿಲ್ಲ. ವಲಸಿಗರಿಗೆ ಪ್ರಮುಖವಾಗಿ ಎದುರಾಗುವ ದೊಡ್ಡ ಸಮಸ್ಯೆಯೆಂದರೆ ವಸತಿ. ಬೇರೆಡೆ ಬಾಡಿಗೆ ಮನೆ ಪಡೆಯಲು ಯೋಗ್ಯವಿಲ್ಲದವರು ಬಯಲಲ್ಲಿ ಬಿಡಾರ ಹೂಡಿಕೊಂಡು ಜೀವನ ನಡೆಸುತ್ತಿದ್ದಾರೆ. ಆ ಚಿಕ್ಕ ಬಿಡಾರದಲ್ಲಿ ಮಕ್ಕಳು, ವೃದ್ಧರನ್ನು ಸೇರಿ ಕುಟುಂಬದವರೆಲ್ಲ ಸೇರಿ ಜೀವಿಸುವುದು ದುಸ್ತರವಾಗುತ್ತದೆ. ಹೀಗೆ ಪ್ರತಿಯೊಂದರಲ್ಲಿ ಸಮಸ್ಯೆಗಳನ್ನೆದುರಿಸುತ್ತಿದ್ದಾರೆ. ಗಣಿಗಾರಿಕೆಯಲ್ಲಿ ದೊರೆಯುವ ಕೂಲಿಯೇ ಇವರ ಜೀವನಾಧಾರ. ಗಣಿಗಾರಿಕೆಯಿಂದಾಗುವ ಪರಿಣಾಮಗಳನ್ನು ತಡೆಯಬೇಕೆಂದರೆ ಗಣಿಗಾರಿಕೆಯನ್ನು ನಿಲ್ಲಿಸಬೇಕು. ಇಲ್ಲವೇ ಕಾನೂನಿನ ಮೂಲಕ ನಿಯಂತ್ರಿಸಿ, ಸುತ್ತ ಮುತ್ತಲಿನ ಪರಿಸರ ಮತ್ತು ಜೀವವೈವಿಧ್ಯವನ್ನು ರಕ್ಷಿಸಬೇಕಾಗಿದೆ.

ಗಣಿಗಾರಿಕೆಯಿಂದ ದೊರೆಯುವ ಅಲ್ಪ ಲಾಭಕ್ಕಾಗಿ ನಮ್ಮ ಅಂತ್ಯವನ್ನು ನಾವೇ ತಂದುಕೊಳ್ಳುತ್ತಿದ್ದೇವೆ. ಈ ಪ್ರದೇಶದ ಜೀವನಾಡಿಯಾದ ತುಂಗಭದ್ರೆಯು ಹೂಳಿನಿಂದ ತುಂಬಿ ಹೋಗುತ್ತಿದೆ. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು "ಕುದುರೆಮುಖ ಗಣಿಗಾರಿಕೆಯಿಂದ ಭದ್ರಾನದಿಗೆ ಈಗಾಗಲೇ ತುಂಬಲಾರದ ಹಾನಿಯಾಗಿದೆ. ಈಗ ಮತ್ತೆ ತುಂಗಭದ್ರ ನದಿ ಸಂಪೂರ್ಣ ನಾಶವಾಗಲಿದೆ. ಇದನ್ನು ಜನ ಒಗ್ಗಟ್ಟಾಗಿ ವಿರೋಧಿಸಬೇಕಿದೆ. ಈಗಾಗಲೇ ಭದ್ರಾನದಿಗೆ ಆಗಿರುವ ಹಾನಿಯನ್ನು ಇನ್ನೂ ಒಂದು ಶತಮಾನವಾದರೂ ಸರಿಪಡಿಸಲು ಸಾಧ್ಯವಿಲ್ಲ"[೬] ಎಂಬ ಅಭಿಪ್ರಾಯವನ್ನು ಪರಿಸರ ತಜ್ಞರು ವ್ಯಕ್ತಪಡಿಸುತ್ತಾರೆ. ಇಷ್ಟೊಂದು ಅನಾಹುತಗಳಿಗೆ ಕಾರಣವಾಗುತ್ತಿರುವ ಗಣಿಗಾರಿಕೆಯನ್ನು ನಿಲ್ಲಿಸುವ ಬದಲು ಸರಕಾರ ಇನ್ನು ಹಲವಾರು ಕಡೆ ಗಣಿಗಾರಿಕೆಗೆ ಅನುಮತಿ ನೀಡುತ್ತಿದೆ. ಈ ಕ್ರಮ ಯಾರ ಹಿತಕ್ಕಾಗಿ ಎಂದು ತಿಳಿಯದಂತಾಗಿದೆ.

ಟಿಪ್ಪಣಿಗಳು

೧. ನಮ್ಮ ಜಲಸಂಪನ್ಮೂಲಗಳು, ರಾಮು, ಪುಟ.೨೯

೨. ಕರ್ನಾಟಕ ರಾಜ್ಯ ಗ್ಯಾಸೇಟಿಯರ್ ಭಾಗ ೨, ಸೂರ್ಯನಾಥ ಯು.ಕಾಮತ್, ಪುಟ.೭

೩. ಭಾರತ ಪರಿಸರ ದ್ವಿತೀಯ ಸಮೀಕ್ಷೆ, ಶಿವರಾಮ ಕಾರಂತ, ಪುಟ.೭೫

೪. ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಟಿ.ಆರ್.ಚಂದ್ರಶೇಖರ, ಪುಟ.೨೬

೫. ಪರಿಸರ ಪ್ರಜ್ಞೆ, ಡಾ.ವ್ಹಿ.ಸಿ.ಚವಡಿ, ಪುಟ.೬೧

೬. ಕುದುರೆಮುಖ ಗಣಿಗಾರಿಕೆ ಪಂಚ ಮಹಾಸುಳ್ಳುಗಳು, ತುಂಗಮೂಲ ಉಳಿಸಿ ಹೋರಾಟ ಒಕ್ಕೂಟ, ಪು.೨೧

ಅನುಬಂಧ

ಗ್ರಂಥಋಣ

ವಕ್ತೃಗಳ ವಿವರ

ಪ್ರಶ್ನಾವಳಿಯ ಮಾದರಿ

ನಕಾಶೆಗಳು

ಛಾಯಚಿತ್ರಗಳು

ಗ್ರಂಥಋಣ

ಅನಿಲ್ ಅಗರವಾಲ್, ಸುನೀತಾ ನಾರಾಯಣ (ಅನು-ಸಾಮಾಜಿಕ ಮತ್ತು ವೆಂಕಟರಮಣ ಐತಾಳ) - ೧೯೯೨, ಹಸಿರು ಹಳ್ಳಿಗಳು, ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್‌ವಿರಾನ್‌ಮೆಂಟ್ ನವದೆಹಲಿ ಮತ್ತು ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

ಒಡೆಯರ್ ಡಿ. ಹೆಗ್ಗಡೆ - ೨೦೦೩, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಭಾರತ, ಗಜಾನನ ಪಬ್ಲಿಕೇಷನ್ಸ್, ಕುವೆಂಪುನಗರ, ಮೈಸೂರು.

ಕೃಷ್ಣಪ್ಪಶೆಟ್ಟಿ ಪಿ., ನಟರಾಜ್ ಡಿ.ಆರ್. - ೧೯೯೭, ಪರಿಸರ ಮುಂದೇನು, ಪರಿಸರ ವಿಜ್ಞಾನ ಪರಿಷತ್ತು ಮತ್ತು ಜವಾಹರ್‌ಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು.

ಕುದುರೆಮುಖ ಗಣಿಗಾರಿಕೆ ಪಂಚಮಹಾ ಸುಳ್ಳುಗಳು, ತುಂಗಾಮೂಲ ಉಳಿಸಿ ಹೋರಾಟ ಒಕ್ಕೂಟ, ೨೦೦೨

ಗವಿಶೆಟ್ಟಿ ಕೆ. - ೧೯೯೫, ಕರ್ನಾಟಕದ ಖನಿಜ ಸಂಪತ್ತು, ದಿವ್ಯಜ್ಯೋತಿ ಪ್ರಕಾಶನ ಬೆಂಗಳೂರು.

ಗೋವಿಂದಯ್ಯ ಟಿ. - ೧೯೯೫, 'ಆತಂಕದ ಹಂತದಲ್ಲಿ ಕರ್ನಾಟಕ ಅಂತರ್ಜಲ ಮತ್ತು ಗ್ರಾಮೀಣ ಅಭಿವೃದ್ಧಿ, ಸಮಾಜ ವಿಜ್ಞಾನ ಸಂಶೋಧನಾ ಸಂಸ್ಥೆ, ಬೆಂಗಳೂರು.

ಚವಡಿ ವ್ಹಿ.ಸಿ. - ೧೯೯೭, ಪರಿಸರ ಪ್ರಜ್ಞೆ, ಧಾರವಾಡ ಜಿಲ್ಲಾ ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿ.

ಚಂದ್ರಪೂಜಾರಿ ಎಂ. - ೧೯೯೮, ಪರಿಸರ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ್ ಟಿ.ಆರ್. - ೧೯೯೪, ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಶ್ರೀ ಸಿದ್ಧಾವೀರ ಶಿವಾಚಾರ್ಯ ಜ್ಞಾನ ಪ್ರಕಾಶನ, ಪುರ (ಹೂವಿನ ಹಡಗಲಿ ತಾ.).

ಚಂದ್ರಶೇಖರ ನಂಗಲಿ ವಿ. - ೨೦೦೦, ಕಾಡು ಮತ್ತು ತೋಪು, ಲೋಹಿಯಾ ಪ್ರಕಾಶನ, ಬಳ್ಳಾರಿ.

ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜೆ.ಆರ್., ಮೋಹನ್ ಎಸ್.ಕೆ. (ಅನು- ನೀಲತ್ತಹಳ್ಳಿ ಕಸ್ತೂರಿ) - ೨೦೦೦, ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವೇಂದ್ರ ಕುಮಾರ ಹಕಾರಿ, ಸಂಧ್ಯಾರೆಡ್ಡಿ ಕೆ. - ೨೦೦೦, ಗ್ರಾಮೀಣ ಪಶುಸಾಕಣೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ನರೇಂದ್ರ ರೈ ದೇರ್ಲ - ೧೯೯೯, ಕಾಂಕ್ರೀಟ್ ಕಾಡಿನ ಪುಟ್ಟ ಕಿಟಿಕಿ, ಸ್ನೇಹ ಪ್ರಕಾಶನ ದೇರ್ಲ, ಮಾಡಾವು (ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ).

ಬೈರಪ್ಪ ಕೆ. - ೨೦೦೪, ಸುಂದರ ಪರಿಸರ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

ಝೈರಪ್ಪ ಕೆ.- ೨೦೦೫, ಪರಿಸರ ಅಧ್ಯಯನ, ಸಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು.

ಮಣಿವಾಸಕಮ್ ಎನ್. - ೨೦೦೦, (ಅನು-ನಾಗೇಶ ಹೆಗಡೆ), ಗಾಳಿಗೆ ವಿಷ ನೀರಿಗೆ ವಿಷ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ.

ಮಹದೇವ ಸಿ., ಸುಬ್ಬಣ್ಣ ರೈ ಎ., ಮಾಧವ ಪೆರಾಜೆ - ೨೦೦.೨, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾಧವ ಗಾಡಗೀಳ್, ರಾಮಚಂದ್ರ ಗುಹಾ (ಅನು-ಶಾರದಾ ಗೋಪಾಲ) - ೨೦೦೩, ಪರಿಸರ ನ್ಯಾಯದ ತಕ್ಕಡಿಯಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮೋಹನ್‌ಕೃಷ್ಣ ರೈ ಕೆ. - ೧೯೯೯, ಪರಿಸರ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ರಾಮು, (ಅನು-ಅನಂತರಾಮು ಟಿ.ಆರ್.,) - ೧೯೯೫, ನಮ್ಮ ಜಲಸಂಪನ್ಮೂಲಗಳು, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ.

ಲಯೀಖ್ ಫತೇ ಅಲಿ - ೧೯೯೩, ನಮ್ಮ ಪರಿಸರ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

ವಾಸುಕಿ ಕೆ.ಜೆ. - ೧೯೯೫, ಕರ್ನಾಟಕದ ಪರಿಸರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟರಾವ್ ಆರ್., 'ಒಕ್ಕಲಿಗನ ಕೂಗು', ಗಾಂಧಿ ದುನಿಯಾ ಮುಖರಂಜಾಹೀ ರೋಡ್, ಹೈದ್ರಾಬಾದ್.

ಶರ್ಮಾ ಕೆ.ಎಸ್. - ೧೯೮೪, ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದ. ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

ಶಿವರಾಮ ಕಾರಂತ - ೧೯೮೬, ಭಾರತ ಪರಿಸರ ದ್ವಿತೀಯ ಸಮೀಕ್ಷೆ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

ಶಿವರಾಮಯ್ಯ - ೨೦೦೩, ಕುದುರೆಮುಖ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

'ಶ್ರೀ' ಪಡ್ರೆ - ೨೦೦೧, ಬಾನಿಗೊಂದು ಆಲಿಕೆ, ಮಾರ್ಗದರ್ಶಿ ಪ್ರಕಾಶನ, ಬಿಜೈ, ಮಂಗಳೂರು.

'ಶ್ರೀ' ಪಡ್ರೆ - ೨೦೦೧, ಹನಿಗೂಡಿಸುವ ಹಾದಿಯಲ್ಲಿ, ಮಾರ್ಗದರ್ಶಿ ಪ್ರಕಾಶನ, ಬಿಜೈ, ಮಂಗಳೂರು.

ಶ್ರೀಮತಿ ಭಾರತಿ ಭಟ್ - ೧೯೯೫, ಬೇಡ್ತಿ ಚಳುವಳಿ ಸಾಗಿ ಬಂದ ದಾರಿ, ಉತ್ತರ ಕನ್ನಡ ಜಿಲ್ಲಾ ವಿದ್ಯುತ್ ಯೋಜನಾ ವಿರೋಧಿ ಸಮಿತಿ, ಶಿರಸಿ.

ಶ್ರೀಮತಿ ಮೆಹರ್.ಡಿ.ಎನ್.ವಾಡಿಯಾ - ೧೯೯೬, ಭಾರತದ ಖನಿಜಗಳು, ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ, ನವದೆಹಲಿ.

ಸತೀಶ ಚಪ್ಪರಿಕೆ - ೧೯೯೭, ಯಲ್ಲಪ್ಪರೆಡ್ಡಿ ಆತ್ಮಕಥೆ ಹಸಿರುಹಾದಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

ಸತೀಶ ಚಪ್ಪರಿಕೆ, ಯಲ್ಲಪ್ಪರೆಡ್ಡಿ ಅ.ನ. - ೧೯೯೭, ಮತ್ತೊಂದು ಮೌನ ಕಣಿವೆ - ಪರಿಸರ ಸಂಬಂಧಿ ಬರಹಗಳು, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

ಸೂರ್ಯನಾಥ.ಯು.ಕಾಮತ್ - ೧೯೮೫, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೨, ಲೋಟಸ್ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು.

ಸೆಸಿಲ್.ಜೆ.ಸಾಲ್ಡಾನ್ಹಾ (ಅನು-ನಾಗೇಶ ಹೆಗಡೆ) - ೧೯೮೮, ಕರ್ನಾಟಕ ಪರಿಸರ ಪರಿಸ್ಥಿತಿ ವರದಿ-೧೯೮೫-೮೬, ಜೀವ ವರ್ಗೀಕರಣ ವಿಜ್ಞಾನ ಕೇಂದ್ರ, ಬೆಂಗಳೂರು.

[illegible]

Compendium of environment statistics - 1998, Central Statistical Organisation Department of Statistics. Ministry of Planning and Programme implementation Government of India, NewDelhi, - 1998.

Compendium of environment statistics - 1999, Central Statistical Organisation Department of Statistics. Ministry of Planning and Programme implementation Government of India, NewDelhi, - 1999

Diwan A.P., Arora D.K. - 1995, Ecology of environmental Cycles. Anmol Publications Pvt. ltd., NewDelhi.

Mathew Areeparmpil - 2002, Tribels of Jharkhand: victims of development. Indian social Institute, NewDelhi.

Radhakrishna B.P. - 1973, Iron ores of mysore state, Prasaranga, University of Mysore, Mysore.

Rajagopalswamy K. - 1971, Distribution of the world's Mineral Wealth. Prasaranga. University of Mysore.

Statistical Profiles of Minerals - 2000-2001, Controller General. Indian Bureau of Mines, Nagpur, - 2001

Timy Katyal, prof.M.Satake- 1992., Environmental Pollution, Anmol Publications, NewDelhi.

Trivedi R.N.- 1993., A Text Book of Environmental Sciences. Anmol Publicatons, NewDelhi.

Trivedi R.P., and Gurudeepraj - 1992, Environmental problems impact assessment, Akashdeep Publishing House, NewDelhi.

ಪತ್ರಿಕೆಗಳು

ಮಾನಸ, ಮಾಸಪತ್ರಿಕೆ, ಮೇ, ೧೯೯೮

ಕೃಷಿ ಜಗತ್ತು, ಮಾಸಪತ್ರಿಕೆ

ಪ್ರಜಾವಾಣಿ, ದಿನಪತ್ರಿಕೆ

ವಿಜಯ ಕರ್ನಾಟಕ

ಕನ್ನಡಪ್ರಭ

ಸಂಯುಕ್ತ ಕರ್ನಾಟಕ

ಉಷಾಕಿರಣ

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ವಿಳಾಸ
೦೧.	ಜಗದೀಶ	೨೬	ಕೃಷಿಕ	ಕಾರಿಗನೂರು, ಹೊಸಪೇಟೆ.ತಾ.
೦೨.	ಶಾರದ	೨೪	ಕೃಷಿಕ	ಕಾರಿಗನೂರು, ಹೊಸಪೇಟೆ.ತಾ.
೦೩.	ಶೇಖರಪ್ಪ	೫೮	ಕೃಷಿಕ	ಕಾರಿಗನೂರು, ಹೊಸಪೇಟೆ.ತಾ.
೦೪.	ನಳಿನಾ	೪೦	ಶಿಕ್ಷಕಿ	ಸ.ಕಿ.ಪ್ರಾ, ಶಾಲೆ, ಶಂಕರನಗರ, ಹೊಸಪೇಟೆ.ತಾ.
೦೫.	ರಿಯಾಜ್ ಭಾಷಾ	೩೦	ಶಿಕ್ಷಕ	ಸ.ಮಾ.ಹಿ.ಪ್ರಾ.ಶಾಲೆ ಕಾರಿಗನೂರು, ಹೊಸಪೇಟೆ.ತಾ.
೦೬.	ನಟರಾಜಪ್ಪ	೩೧	ಕೃಷಿಕ	ಇಂಗಳಗಿ ಹೊಸಪೇಟೆ.ತಾ.
೦೭.	ರಾಘುವೇಂದ್ರ	೪೩	ಮ್ಯಾನೇಜರ್ ವಸಂತ ಫಾರಂ	ವಡ್ಡರಹಳ್ಳಿ, ಹೊಸಪೇಟೆ.ತಾ.
೦೮.	ನವೀನ್ ಕುಮಾರ	೨೧	ವಿದ್ಯಾರ್ಥಿ	ವಡ್ಡರಹಳ್ಳಿ, ಹೊಸಪೇಟೆ.ತಾ.
೦೯.	ರಂಗಪ್ಪ	೫೩	ಕೃಷಿಕ	ವಡ್ಡರಹಳ್ಳಿ, ಹೊಸಪೇಟೆ.ತಾ.
೧೦.	ರಾಘುವೇಂದ್ರ	೨೦	ಕೃಷಿಕ	ಪಾಪಿನಾಯಕನಹಳ್ಳಿ, ಹೊಸಪೇಟೆ.ತಾ.
೧೧.	ಶ್ರೀನಿವಾಸ	೪೦	ಕೃಷಿಕ	ಪಾಪಿನಾಯಕನಹಳ್ಳಿ, ಹೊಸಪೇಟೆ.ತಾ.
೧೨.	ಪಾರ್ವತೆಮ್ಮ	೪೦	ಕೃಷಿಕ	ಪಾಪಿನಾಯಕನಹಳ್ಳಿ, ಹೊಸಪೇಟೆ.ತಾ.
೧೩.	ಸೋಮವ್ವ	೩೪	ದೈಹಿಕ ಶಿಕ್ಷಕಿ	ಸ.ಪ್ರಾ.ಶಾಲೆ, ಪಾಪಿನಾಯಕನಹಳ್ಳಿ, ಹೊಸಪೇಟೆ.ತಾ.
೧೪.	ಕರಿಬಸಪ್ಪ	೩೫	ಕೃಷಿಕ	ಬೈಲುವದ್ದಿಗೇರಿ, ಹೊಸಪೇಟೆ.ತಾ.

೧೫.	ಹೆಚ್.ಶಂಕರ್	೩೨	ಶಿಕ್ಷಕ	ಸ.ಕಿ.ಪ್ರಾ.ಶಾ. ಜೈಲುವದ್ದಿಗೇರಿ, ಹೊಸಪೇಟೆ.ತಾ.
೧೬.	ಭರ್ಮಪ್ಪ	೬೦	ಕೃಷಿಕ	ಕಣವಿರಾಯನಗುಡಿ, ಹೊಸಪೇಟೆ.ತಾ.
೧೭.	ಕೆ.ಹನುಮಂತಪ್ಪ	೬೫	ಕೃಷಿಕ	ಕಣವಿರಾಯನಗುಡಿ, ಹೊಸಪೇಟೆ.ತಾ.
೧೮.	ತಾರಾಮತಿ	೪೫	ಶಿಕ್ಷಕಿ	ಸ.ಕಿ.ಪ್ರಾ.ಶಾ. ಕಣವಿರಾಯನಗುಡಿ, ಹೊಸಪೇಟೆ.ತಾ.
೧೯.	ಪೂಜಾರಿ ಕಣಿವೆಪ್ಪ	೬೦	ಕೃಷಿಕ	ರಾಜಾಪುರ, ಹೊಸಪೇಟೆ.ತಾ.
೨೦.	ಓಮಪ್ಪ	೩೮	ಮುಖ್ಯ ಶಿಕ್ಷಕ	ಸ.ಕಿ.ಪ್ರಾ.ಶಾಲೆ, ರಾಜಾಪುರ, ಹೊಸಪೇಟೆ.ತಾ.
೨೧.	ಸೋನಾಬಾಯಿ	೫೫	ಕೃಷಿಕ	ಕಲ್ಲಹಳ್ಳಿ, ಹೊಸಪೇಟೆ.ತಾ.
೨೨.	ರೂಪ	೩೫	ಶಿಕ್ಷಕಿ	ಸ.ಕಿ.ಪ್ರಾ.ಶಾಲೆ, ಕಲ್ಲಹಳ್ಳಿ, ಹೊಸಪೇಟೆ.ತಾ.
೨೩.	ಮೈಲೆಮ್ಮ	೪೮	ಕೃಷಿಕ	ಮರಿಯಮ್ಮನಹಳ್ಳಿ, ಹೊಸಪೇಟೆ.ತಾ.
೨೪.	ಸುಗುಣಾ ಕಂದಕುಮಾರ	೪೫	ಕೃಷಿಕ	ಗಾಳೆಮ್ಮನಗುಡಿ, ಹೊಸಪೇಟೆ.ತಾ.
೨೫.	ಜ್ಯೋತೆಮ್ಮ	೩೩	ಅಂಗನವಾಡಿ ಶಿಕ್ಷಕಿ	ಗಾಳೆಮ್ಮನಗುಡಿ, ಹೊಸಪೇಟೆ.ತಾ.
೨೬.	ಕರೆ ಹನುಮಂತಪ್ಪ	೬೦	ಕೃಷಿಕ	ಹನುಮನಹಳ್ಳಿ, ಹೊಸಪೇಟೆ.ತಾ.
೨೭.	ಎಲ್.ಸೋಮಣ್ಣ	೬೫	ಕೃಷಿಕ	ಡಣಾಪುರ, ಹೊಸಪೇಟೆ.ತಾ.
೨೮.	ತಿಪ್ಪಣ್ಣ	೫೦	ಕೃಷಿಕ	ಡಣಾಪುರ, ಹೊಸಪೇಟೆ.ತಾ.
೨೯.	ಟಿ.ಕೆ.ವೀರಣ್ಣ	೩೫	ಗ್ರಾಮ ಪಂಚಾಯಿತಿ ನೌಕರ	ಗ್ರಾಮ ಪಂಚಾಯಿತಿ ಡಣಾಪುರ, ಹೊಸಪೇಟೆ.ತಾ.
೩೦.	ಹನುಮಕ್ಕ	೩೫	ಕೂಲಿ	ಮರಿಯಮ್ಮನಹಳ್ಳಿತಾಂಡ, ಹೊಸಪೇಟೆ.ತಾ.

೩೧.	ನಾಗರಾಜ	೨೫	ಇಟ್ಟಿಗೆ ತಯಾರಿಕೆ	ಕಮಲಾಪುರ, ಹೊಸಪೇಟೆ.ತಾ.
೩೨.	ಬಿ.ಹೆಚ್. ವೆಂಕೋಜಿ	೨೪	ವಿದ್ಯಾರ್ಥಿ	ಕಮಲಾಪುರ, ಹೊಸಪೇಟೆ.ತಾ.
೩೩.	ಟಿ.ಶ್ರೀಧರ	೩೬	ಶಿಕ್ಷಕ	ಸ.ಕಿ.ಪ್ರಾ.ಶಾಲೆ. ರಾಮನಗರ, ಹೊಸಪೇಟೆ.ತಾ.
೩೪.	ರಾಮಾಂಜನೇಯ	೩೨	ಸಣ್ಣ ಪ್ರಮಾಣದ ಕ್ವಾರೆ ಕೆಲಸಗಾರ	ವೆಂಕಟಾಪುರ ಕ್ಯಾಂಪ್, ಹೊಸಪೇಟೆ.ತಾ.
೩೫.	ಎಸ್.ಎಸ್. ಹಿರೇಮಠ	೪೫	ಉಪನಿರ್ದೇಶಕರು	ಭೂ ವಿಜ್ಞಾನ ಮತ್ತು ಗಣಿ ಇಲಾಖೆ ಹೊಸಪೇಟೆ
೩೬.	ವಾಸುದೇವ್.ಕೆ.	೩೮	ಕೃಷಿ ಅಧಿಕಾರಿ	ಜಲಾನಯನ ಅಭಿವೃದ್ಧಿ ಇಲಾಖೆ ಹೊಸಪೇಟೆ
೩೭.	ಟಿ.ಹನುಮಂತಪ್ಪ	೪೮	ಸಹಾಯಕ ಕೃಷಿ ನಿರ್ದೇಶಕರು	ಕೃಷಿ ಇಲಾಖೆ, ಹೊಸಪೇಟೆ
೩೮.	ನಾಗಿರೆಡ್ಡಿ	೫೦	ವಿಭಾಗೀಯ ಅರಣ್ಯಾಧಿಕಾರಿ	ಅರಣ್ಯ ಇಲಾಖೆ, ಹೊಸಪೇಟೆ.ತಾ.
೩೯.	ಡಿ.ನವೀನ್	೩೦	ವೈದ್ಯರು	ಪಾಪಿನಾಕನಹಳ್ಳಿ, ಹೊಸಪೇಟೆ.ತಾ.
೪೦.	ಡಾ.ವಿ.ಜಿ.ಶ್ಯಾಮ್ ಸುಂದರ್	೩೮	ವೈದ್ಯರು	ಸಂತೋಷ ಕ್ಲೀನಿಕ್, ಬಳ್ಳಾರಿ ರಸ್ತೆ ಹೊಸಪೇಟೆ.
೪೧.	ಡಾ.ಚಂದ್ರಶೇಖರ	೩೫	ವೈದ್ಯರು	ಶ್ರೀ ವೆಂಕಟೇಶ್ವರ ಕ್ಲೀನಿಕ್, ಹೊಸಪೇಟೆ.
೪೨.	ಜಂಭಯ್ಯ	೫೩	ಗಣಿಕಾರ್ಮಿಕ	ಕಾರಿಗನೂರು, ಹೊಸಪೇಟೆ.ತಾ.
೪೩.	ವೆಂಕಟರಮಣ	೧೬	ಗಣಿಕಾರ್ಮಿಕ	ಪಾಪಿನಾಯಕನಹಳ್ಳಿ, ಹೊಸಪೇಟೆ.ತಾ.
೪೪.	ದಾನಮ್ಮ	೭೦	ವಲಸಿಗರು	ಕಾರಿಗನೂರು, ಹೊಸಪೇಟೆ.ತಾ.
೪೫.	ಗೋಪಾಲ	೨೮	ವಲಸಿಗರು	ಶಂಕರನಗರ, ಹೊಸಪೇಟೆ.ತಾ.

ಪ್ರಶ್ನಾವಳಿಯ ಮಾದರಿ

೧. ರೈತರಿಗೆ

೧. ಹೆಸರು :

೨. ಊರು :

೩. ಅಂಚೆ :

೪. ತಾಲ್ಲೂಕು :

೫. ವಯಸ್ಸು :

೬. ಜಾತಿ :

೭. ವಿದ್ಯಾರ್ಹತೆ :

೮. ಇತರೆ ಕಸುಬುಗಳು :

೯. ಕುಟುಂಬದ ಸದಸ್ಯರು :

೧೦. ಗಂಡು :

೧೧. ಹೆಣ್ಣು :

೧೨. ಅವಲಂಬಿತರು :

೧೩. ಕೃಷಿ ಜಮೀನು ಎಕರೆಗಳಲ್ಲಿ :

೧೪. ನೀರಾವರಿ :

೧೫. ಒಣಭೂಮಿ :

೧೬. ನೀರಾವರಿಯ ಸ್ವರೂಪ :

೧೭. ಬೆಳೆವ ಬೆಳೆಗಳು :

೧೮. ಎಷ್ಟು ವರ್ಷದಿಂದ ಕೃಷಿಯನ್ನು ಅವಲಂಬಿಸಿದ್ದೀರಿ?

೧೯. ಕೃಷಿ ಬಿಟ್ಟು ನಿಮ್ಮ ಕುಟುಂಬದವರು ಬೇರೆ ಯಾವ ಯಾವ ಕಸುಬುಗಳನ್ನು ಅವಲಂಬಿಸಿದ್ದಾರೆ?

೨೦. ತಾವು ವಲಸೆ ಬಂದವರೆ? ಈ ಸ್ಥಳಕ್ಕೆ ವಲಸೆ ಬಂದು ಎಷ್ಟು ವರ್ಷಗಳಾಯ್ತು? ಎಲ್ಲಿಂದ ವಲಸೆ ಬಂದಿರಿ?

೨೧. ಯಾಕಾಗಿ ವಲಸೆ ಬಂದಿರಿ? ನಿಮ್ಮ ಮೂಲ ಕಸುಬು ಯಾವುದು? ಯಾಕಾಗಿ ಅದನ್ನು ಬಿಟ್ಟು ಬಂದಿರಿ?

೨೨. ಸ್ಥಳೀಯರು ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ?

೨೩. ಇಲ್ಲೇ ನೆಲೆನಿಲ್ಲುವ ಇಚ್ಛೆ ಇದೆಯೇ? ಹೌದು/ಇಲ್ಲ.

೨೪. ನಿಮ್ಮ ಜಮೀನನ್ನು ಗಣಿಗಾರಿಕೆಗೆ ಕೊಡಲಾಗಿದೆಯೇ? ಹೌದು/ಇಲ್ಲ.

೨೫. ಗಣಿಗಾರಿಕೆಗೆ ನಿಮ್ಮ ಜಮೀನನ್ನು ಯಾವ ರೀತಿಯಲ್ಲಿ ಕೊಡಲಾಗಿದೆ?

೨೬. ಹೀಗೆ ಗಣಿಗಾರಿಕೆಗೆ ಕೊಟ್ಟ ಜಮೀನಿನಿಂದ ಬರುವ ವಾರ್ಷಿಕ ಆದಾಯವೆಷ್ಟು?

೨೭. ಗಣಿಗಾರಿಕೆಗೆ ಜಮೀನನ್ನು ನೀವಾಗಿಯೇ ಕೊಟ್ಟಿದ್ದೋ ಅಥವಾ ಗುತ್ತಿಗೆದಾರರ ಒತ್ತಡದಿಂದ ಕೊಡಲಾಯ್ತೋ?

೨೮. ಗಣಿಗಾರಿಕೆಗೆ ಕೊಟ್ಟ ಜಮೀನು ಮುಂದೆ ಕೃಷಿಗೆ ಬಳಸುವ ಸ್ವರೂಪದಲ್ಲಿ ಉಳಿಯಬಹುದೇ?

೨೯. ಗಣಿಗಾರಿಕೆಯಿಂದ ವ್ಯವಸಾಯದ ಮೇಲೆ ಯಾವ್ಯಾವ ಪರಿಣಾಮಗಳಾಗಿವೆ?

೩೦. ಗಣಿಗಾರಿಕೆಯು ಹೆಚ್ಚಾದಂತೆ ಬೆಳೆವ ಫಸಲು ಹೆಚ್ಚಾಗಿದೆಯೇ, ಕಡಿಮೆ ಆಗಿದೆಯೋ?

೩೧. ಕೃಷಿಯಿಂದ ಬರುವ ವಾರ್ಷಿಕ ಆದಾಯವೆಷ್ಟು?

೩೨. ನೀವು ಬೆಳೆವ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ತೃಪ್ತಿದಾಯಕ ಬೆಲೆ ಸಿಕ್ಕುವುದೆ? ಹೌದು/ಇಲ್ಲ.

೩೩. ಸಾಲದ ಕಾರಣಕ್ಕಾಗಿ ನಿಮ್ಮ ಗ್ರಾಮದಲ್ಲಿ ಯಾರಾದರು ರೈತರು ಆತ್ಮಹತ್ಯೆ ಮಾಡಿಕೊಂಡಿರುವರೇ? ಹೌದು/ಇಲ್ಲ.

೩೪. ಗಣಿಗಾರಿಕೆಯಿಂದ ರೈತರ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಂಡಿವೆಯೇ? ಹೌದು/ಇಲ್ಲ.

೩೫. ಗಣಿಗಾರಿಕೆಯಿಂದ ಹಾರಿಬರುವ ಧೂಳಿನಿಂದ ನಿಮ್ಮ ಬೆಳೆಗಳ ಮೇಲೆ ಯಾವ ಪರಿಣಾಮಗಳಾಗುತ್ತಿವೆ?

೩೬. ಗಣಿಗಾರಿಕೆಯಿಂದ ಹಾರಿಬರುವ ಧೂಳಿನಿಂದ ನಿಮ್ಮ ಕಾಡಿನ ಮೇಲೆ ಯಾವ ಪರಿಣಾಮಗಳಾಗಿವೆ?

೩೭. ಹಾರಿ ಬರುವ ಈ ಧೂಳು ನಿಮ್ಮ ಬೆಳೆಗಳಿಗೆ ಹಾನಿ ಮಾಡುತ್ತದೆಯೆಂದು ನೀವು ಪ್ರತಿಭಟಿಸಿದ್ದೀರಾ? ಹೌದು/ಇಲ್ಲ.

೩೮. ಯಾವ ಯಾವ ಸಂಘಟನೆಗಳು ನಿಮ್ಮ ಪ್ರತಿಭಟನೆಗಳನ್ನು ಪ್ರಧಾನವಾಗಿಟ್ಟುಕೊಂಡು ಚಳುವಳಿ ಮಾಡಿವೆ?

೩೯. ಈ ಚಳುವಳಿಗಳಿಂದ ಆದ ಪ್ರಯೋಜನವೇನು?

೪೦. ಕೃಷಿಯ ಮೇಲೆ ಗಣಿಗಾರಿಕೆಯಿಂದಾಗುವ ನಷ್ಟವನ್ನು ತುಂಬಿಕೊಡಲು, ಗಣಿ ನಡೆಸುವವರು ಅಥವಾ ಸರಕಾರದವರು ಯಾವ ರೀತಿಯ ಪರಿಹಾರಗಳನ್ನು ನೀಡುತ್ತಿದ್ದಾರೆ.

೪೧. ಈ ಪರಿಹಾರಗಳನ್ನು ನೀವೇ ಸೂಚಿಸಿದ್ದಿರೋ ಅಥವಾ ಗಣಿಗಾರಿಕೆಯ ಮಾಲಿಕರೇ ಈ ಪರಿಹಾರಗಳನ್ನು ನಿರ್ಧರಿಸಿದರೋ?

೪೨. ನಿಮ್ಮ ಮತ್ತು ಗಣಿಗಾರಿಕೆಗೆ ಸಂಬಂಧಿಸಿದ ವ್ಯಕ್ತಿಗಳ ಜೊತೆ ಯಾವ ಬಗೆಯ ಸಂಬಂಧಗಳಿವೆ?

೪೩. ಕೃಷಿ ಲಾಭ ತರುತ್ತಿಲ್ಲವೆಂದು ನೀವೇನಾದರು ಗಣಿಗಾರಿಕೆ ಮಾಡುತ್ತಿದ್ದೀರಾ ?

೪೪. ನಿಮ್ಮ ಜಮೀನಿನಲ್ಲೋ? ಹೌದು / ಇಲ್ಲ, ಅಥವಾ ಬೇರೆಯವರ ಜಮೀನಿನಲ್ಲೋ? ಹೌದು/ಇಲ್ಲ.

೪೫. ಬಹಳ ವರ್ಷಗಳ ಕಾಲ ಈ ಗಣಿಗಾರಿಕೆ ಮುಂದುವರೆದರೆ ನಿಮ್ಮ ಜಮೀನು ಮತ್ತು ಸುತ್ತಲ ಪರಿಸರದ ಮೇಲೆ ಯಾವ ಯಾವ ಪರಿಣಾಮಗಳಾಗಬಹುದು?

೪೬. ಈಚೆಗೆ ನಿಮ್ಮ ಜಮೀನಿನಲ್ಲಿ ಬೋರ್‌ವೆಲ್ ತೆಗೆಸಿದ್ದೀರಾ? ಹೌದು/ಇಲ್ಲ.

೪೭. ಬೋರ್‌ವೆಲ್‌ನಲ್ಲಿ ಎಷ್ಟು ಅಡಿಗಳಿಗೆ ನೀರು ಬಂತು?

೪೮. ಈಗ ನೀವು ತೆಗೆಸಿದ ಬೋರ್‌ವೆಲ್ ನೀರಿನಿಂದ ನೀರಾವರಿ ಕೃಷಿ ಮಾಡಬಹುದೇ? ಹೌದು/ಇಲ್ಲ.

೪೯. ಗಣಿಗಾರಿಕೆಯಿಂದಾಗಿ ಗುಡ್ಡಗಳಿಂದ ಹರಿದು ಬರುವ ಹೆಚ್ಚುವರಿ ಮಣ್ಣಿನಿಂದ ನಿಮ್ಮ ಹಳ್ಳಗಳು ಕೆರೆಗಳ ಮೇಲೆ ಯಾವ ಪರಿಣಾಮಗಳಾಗಿವೆ.

೫೦. ಹಳ್ಳ ಕೆರೆಗಳಲ್ಲಿ ಕಬ್ಬಿಣದ ಅದಿರನ ಧೂಳಿನಿಂದ ಕಲುಷಿತವಾಗುವ ನೀರನ್ನು ಕುಡಿಯುವುದರಿಂದ ನಿಮ್ಮ ದನಕರುಗಳ ಮೇಲೆ ಯಾವ ಯಾವ ಪರಿಣಾಮಗಳಾಗಿವೆ.

೫೧. ನಿಮ್ಮ ಮನೆಯಲ್ಲಿ ದನಕರುಗಳ ಸಂಖ್ಯೆ? ಎತ್ತು: ಆಕಳು: ಎಮ್ಮೆ:

ಕುರಿ: ಆಡು:

೫೨. ಈ ಹಿಂದೆ ನಿಮ್ಮ ಮನೆಯಲ್ಲಿ ಎಷ್ಟು ದನಕರುಗಳಿದ್ದವು?

೫೩. ಈಗ ಅವುಗಳ ಸಂಖ್ಯೆ ಹೆಚ್ಚಾಗಿದೆಯೋ ಕಡಿಮೆ ಆಗಿದೆಯೋ?

೫೪. ನೀವೇನಾದರೂ ಹೊಸದಾಗಿ ಜಮೀನು ಕೊಂಡಿದ್ದೀರಾ? ಹೌದು/ಇಲ್ಲ.

೫೫. ಯಾಕಾಗಿ ಜಮೀನು ಕೊಂಡಿದ್ದೀರಿ ಕೃಷಿಗೋ, ಗಣಿಗಾರಿಕೆಗೋ?

೫೬. ನಿಮ್ಮ ಮನೆಯವರ್‍ಯಾರಾದರೂ ಗಣಿಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರಾ? ಹೌದು/ಇಲ್ಲ.

೫೭. ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ? ಯಾವ ಬಗೆಯ ಕೆಲಸ?

೫೮. ಗಣಿಗಾರಿಕೆಯಿಂದ ಉಂಟಾಗುವ ವಾಯುಮಾಲಿನ್ಯದಿಂದ ಮನುಷ್ಯರ ಆರೋಗ್ಯದ ಮೇಲೆ ಏನಾದರೂ ದುಷ್ಪರಿಣಾಮಗಳಾಗಬಹುದೆಂದು ತಿಳಿದಿದ್ದೀರಾ?

೫೯. ಗಣಿಗಾರಿಕೆಯಿಂದ ಗಾಳಿಯಲ್ಲಿ ಹಾರಿ ಬರುವ ಧೂಳನ್ನು ಉಸಿರಾಡುವುದರಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳಾಗಬಹುದೇ? ಹೌದು/ಇಲ್ಲ.

೬೦. ಯಾವ ಬಗೆಯ ಪರಿಣಾಮಗಳಾಗುತ್ತವೆ?

೬೧. ಸಾಮಾನ್ಯವಾಗಿ ನಿಮ್ಮ ಗ್ರಾಮದವರು ಯಾವ ಯಾವ ಆರೋಗ್ಯದ ಸಮಸ್ಯೆಗಳಿಗಾಗಿ ಆಸ್ಪತ್ರೆಗೆ ಹೋಗುತ್ತಾರೆ?

೬೨. ವೈದ್ಯರು ನೀಡಿದ ಸಲಹೆಗಳನ್ನು ತಪ್ಪದೆ ಪಾಲಿಸಲು ಪ್ರಯತ್ನಿಸುವಿರಾ? ಹೌದು/ಇಲ್ಲ.

೬೩. ಟಿ.ಬಿ. ಮುಂತಾದ ಕಾಯಿಲೆಗಳಿಗೆ ಗಣಿಗಾರಿಕೆಯಿಂದ ಹರಡುವ ಧೂಳೇ ಕಾರಣ ಎಂದೆನ್ನಿಸುವುದಿಲ್ಲವೇ? ಹೌದು/ಇಲ್ಲ.

೬೪. ಒಟ್ಟಿನಲ್ಲಿ ಗಣಿಗಾರಿಕೆಯಿಂದಾಗಿ ನಿಮ್ಮ ಸುತ್ತಲ ಪರಿಸರಕ್ಕೆ ಯಾವ ಬಗೆಯ ಪರಿಣಾಮಗಳಾಗಿವೆ?

ದಿನಾಂಕ

ಸಮೀಕ್ಷೆ ಮಾಡಿದವರು

೨. ವಲಸಿಗರು

೧. ಹೆಸರು :

೨. ಊರು :

೩. ಅಂಚೆ :

೪. ತಾಲ್ಲೂಕು :

೫. ವಯಸ್ಸು :

೬. ಜಾತಿ :

೭. ವಿದ್ಯಾರ್ಹತೆ :

೮. ಇತರೆ ಕಸುಬುಗಳು :

೯. ಕುಟುಂಬದ ಸದಸ್ಯರು :

೧೦. ಗಂಡು :

೧೧. ಹೆಣ್ಣು :

೧೨. ಅವಲಂಬಿತರು :

೧೩. ಕೃಷಿ ಜಮೀನು ಎಕರೆಗಳಲ್ಲಿ :

೧೪. ನೀರಾವರಿ :

೧೫. ಒಣಭೂಮಿ :

೧೬. ನೀರಾವರಿಯ ಸ್ವರೂಪ :

೧೭. ಮನೆ : ಸ್ವಂತ / ಬಾಡಿಗೆ / ಗುಡಿಸಲು

೧೮. ಗಣಿಯಲ್ಲಿ ನಿರ್ವಹಿಸುವ ಹುದ್ದೆ :

೧೯. ಪಡೆಯುವ ಸಂಬಳ ಮಾಸಿಕ :

೨೦. ಈ ಸ್ಥಳಕ್ಕೆ ವಲಸೆ ಬಂದು ಎಷ್ಟು ವರ್ಷಗಳಾಯ್ತು? ಎಲ್ಲಿಂದ ತಾವು ವಲಸೆ ಬಂದಿರಿ?

೨೧. ಯಾಕಾಗಿ ವಲಸೆ ಬಂದಿರಿ? ನಿಮ್ಮ ಮೂಲ ಕಸುಬು ಯಾವುದು? ಯಾಕಾಗಿ ಅದನ್ನು ಬಿಟ್ಟು ಬಂದಿರಿ?

೨೨. ಗಣಿಗಾರಿಕೆಯಲ್ಲಿ ಕೆಲಸ ಮಾಡುವುದು ಅಪಾಯವೆಂದು ಗೊತ್ತಿದ್ದರೂ, ಯಾಕಾಗಿ ಇಲ್ಲಿ ಕೆಲಸಕ್ಕೆ ಸೇರಿದಿರಿ?

೨೩. ಸ್ಥಳೀಯರು ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ?

೨೪. ಇಲ್ಲೇ ನೆಲೆನಿಲ್ಲುವ ಇಚ್ಛೆ ಇದೆಯೇ?

೨೫. ನಿಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಡಲು ನಿಮ್ಮ ಗಣಿಮಾಲಿಕರನ್ನು ಬೇಟಿ ಮಾಡಿದ್ದೀರಾ?

೨೬. ನಿಮ್ಮದೇ ಆದ ಸಂಘಟನೆ ಇದೆಯೇ?

೨೭. ಯಾವ ಯಾವ ಕಾರಣಗಳಿಗೆ ಚಳುವಳಿ ನಡೆಸಿದ್ದೀರಿ?

೨೮. ಬೇಡಿಕೆಗಳು ಈ ಚಳುವಳಿಗಳಿಂದ ಈಡೇರಿವೆಯೇ?

೨೯. ಗಣಿಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ನಿಮಗೆ ಈ ಕೆಲಸ ತೃಪ್ತಿ ನೀಡಿದೆಯೇ? ಹೌದು/ಇಲ್ಲ.

೩೦. ಈ ಕೆಲಸ ಬಿಟ್ಟು ಬಿಡಬೇಕೆಂದು ತೀರ್ಮಾನಿಸಿದ್ದೀರಾ? ಹೌದು/ಇಲ್ಲ.

೩೧. ಈಚೆಗೆ ಯಾವುದಾದರೂ ಆರೋಗ್ಯ ಸಮಸ್ಯೆಯಿಂದಾಗಿ ವೈದ್ಯರನ್ನು ಬೇಟಿಯಾಗಿದ್ದೀರಾ? ಹೌದು/ಇಲ್ಲ.

೩೨. ವೈದ್ಯರು ಯಾವ ಸಲಹೆಗಳನ್ನು ನೀಡಿದರು?

೩೩. ಎಷ್ಟು ದಿನಕ್ಕೊಮ್ಮೆ ಆಸ್ಪತ್ರೆಗೆ ಹೋಗುವಿರಿ?

೩೪. ತಮ್ಮ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯಲು ತಮ್ಮಿಂದಾಗುವುದೇ ಅಥವಾ ಗಣಿಮಾಲಿಕರು ನಿಮಗೆ ವೈದ್ಯಕೀಯ ನೆರವು ನೀಡುತ್ತಿರುವರೇ ?

೩೫. ಗಣಿಗಾರಿಕೆಯಿಂದಾಗಿ ಹರಡುವ ಧೂಳು ಸುತ್ತಲ ಪರಿಸರವನ್ನು, ಮನುಷ್ಯನ ಆರೋಗ್ಯವನ್ನು ಹಾಳು ಮಾಡುವುದೆಂದು ಅನ್ನಿಸುತ್ತಿದೆಯೇ? ಹೌದು/ಇಲ್ಲ.

೩೬. ಗಣಿಗಾರಿಕೆಯಲ್ಲಿಯೇ ಖಾಯಂ ಆಗಿ ಕೆಲಸ ಮಾಡಿಕೊಂಡು ಹೋಗುಬಹುದು ಎಂದುಕೊಂಡಿದ್ದೀರಾ? ಹೌದು/ಇಲ್ಲ.

೩೭. ಇಲ್ಲಿ ನೀವು ಯಾವ ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಿ?

ದಿನಾಂಕ

ಸಮೀಕ್ಷೆ ಮಾಡಿದವರು

೩. ಗಣಿಕಾರ್ಮಿಕರು

೧. ಹೆಸರು :

೨. ಊರು :

೩. ಅಂಚೆ :

೪. ತಾಲ್ಲೂಕು :

೫. ವಯಸ್ಸು :

೬. ಜಾತಿ :

೭. ವಿದ್ಯಾರ್ಹತೆ :

೮. ಇತರೆ ಕಸುಬುಗಳು :

೯. ಕುಟುಂಬದ ಸದಸ್ಯರು :

೧೦. ಗಂಡು :

೧೧. ಹೆಣ್ಣು :

೧೨. ಅವಲಂಬಿತರು :

೧೩. ಕೃಷಿ ಜಮೀನು ಎಕರೆಗಳಲ್ಲಿ :

೧೪. ನೀರಾವರಿ :

೧೫. ಒಣಭೂಮಿ :

೧೬. ನೀರಾವರಿಯ ಸ್ವರೂಪ :

೧೭. ಮನೆ : ಸ್ವಂತ / ಬಾಡಿಗೆ / ಗುಡಿಸಲು

೧೮. ಗಣಿಯಲ್ಲಿ ನಿರ್ವಹಿಸುವ ಹುದ್ದೆ :

೧೯. ಪಡೆಯುವ ಸಂಬಳ ಮಾಸಿಕ :

೨೦. ಕೆಲಸಕ್ಕೆ ಸೇರಿ ಎಷ್ಟು ವರ್ಷಗಳಾಯ್ತು?

೨೧. ಗಣಿಗಾರಿಕೆಯ ಕೆಲಸಕ್ಕೆ ಯಾಕಾಗಿ ಸೇರಲಾಯ್ತು?

೨೨. ಈಗ ತಾವು ನಿರ್ವಹಿಸುತ್ತಿರುವ ಕೆಲಸದ ಕುರಿತು ತೃಪ್ತಿ ಇದೆಯೇ? ಹೌದು/ಇಲ್ಲ.

೨೩. ಗಣಿಗಾರಿಕೆಯ ಕೆಲಸಬಿಟ್ಟು ಬೇರೆ ಕೆಲಸಕ್ಕೆ ಹೋಗುವ ಇಚ್ಛೆ ಇದೆಯೇ?

೨೪. ಕೆಲಸದಿಂದ ನಿವೃತ್ತಿ ಹೊಂದಿದ ನಂತರ ಪಿಂಚಣಿ ಸೌಲಭ್ಯ ಇದೆಯೇ?

೨೫. ನಿಮ್ಮ ಕುಟುಂಬದ ಭವಿಷ್ಯಕ್ಕೆ ಜೀವ ವಿಮೆ ಅಥವಾ ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

೨೬. ಗಣಿಯ ಮಾಲಿಕರು ತಮಗೆ ಯಾವ್ಯಾವ ಅನುಕೂಲಗಳನ್ನು ಕಲ್ಪಿಸಿದ್ದಾರೆ?

೨೭. ನಿಮಗೇನಾದರೂ ಆರೋಗ್ಯದ ಸಮಸ್ಯೆ ಆಗಿದೆಯೇ?

೨೮. ಈ ಹಿಂದೆ ವೈದ್ಯರಿಂದ ಯಾವುದಾದರೂ ಆರೋಗ್ಯದ ಸಮಸ್ಯೆಗೆ ಚಿಕಿತ್ಸೆ ಪಡೆದಿದ್ದೀರಾ? ಹೌದು/ಇಲ್ಲ.

೨೯. ಗಣಿಗಾರಿಕೆಯಿಂದಾಗಿ ಉಂಟಾಗುವ ವಾಯುಮಾಲಿನ್ಯದಿಂದ ಮನುಷ್ಯರ ಆರೋಗ್ಯದ ಮೇಲೆ ಏನಾದರೂ ದುಷ್ಪರಿಣಾಮಗಳಾಗಬಹುದೆಂದು ತಿಳಿದಿದ್ದೀರಾ?

೩೦. ಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯದ ಹಿತ ದೃಷ್ಟಿಯಿಂದ, ಗಣಿಯ ಮಾಲಿಕರು ಯಾವುದಾದರೂ ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಂಡಿರುವರೇ?

೩೧. ಧೂಳು, ಸಿಡಿಮದ್ದಿನ ಸ್ಫೋಟ ಮತ್ತು ಅಪಾಯಕಾರಿ ಸನ್ನಿವೇಶಗಳಲ್ಲಿ ನೀವು ಕೆಲಸ ಮಾಡಬೇಕಾಗುತ್ತದೆ, ಇಂತಹ ಸಂದರ್ಭಗಳಲ್ಲಿ ತಾವು ಯಾವ ಯಾವ ಎಚ್ಚರಿಕೆಗಳನ್ನು ಕೈಗೊಳ್ಳುತ್ತೀರಿ?

೩೨. ಇಂತಹ ಸನ್ನಿವೇಶಗಳಲ್ಲಿ ಅಪಾಯಗಳು ಸಂಭವಿಸುವ ಸಾಧ್ಯತೆಗಳಿರುತ್ತವೆಯೇ? ಹೌದು/ಇಲ್ಲ.

೩೩. ಯಾವ ಬಗೆಯ ಅಪಾಯಗಳು ಸಂಭವಿಸುತ್ತವೆ ಮತ್ತು ವರ್ಷದಲ್ಲಿ ಇಂತಹ ಅಪಾಯಗಳು ಎಷ್ಟು ಬಾರಿ ಸಂಭವಿಸುತ್ತವೆ?

೩೪. ಇಂತಹ ಅಪಾಯಗಳು ಸಂಭವಿಸದಂತೆ ತಡೆಯಲು ಗಣಿಮಾಲಿಕರು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ?

೩೫. ಸಾಮಾನ್ಯವಾಗಿ ಗಣಿಯಲ್ಲಿ ಕೆಲಸಮಾಡುವ ನಿಮ್ಮ ಸಹೋದ್ಯೋಗಿಗಳು ಯಾವ ಯಾವ ಆರೋಗ್ಯದ ಸಮಸ್ಯೆಗಳಿಗಾಗಿ ಆಸ್ಪತ್ರೆಗೆ ಹೋಗುತ್ತಾರೆ?

೩೬. ವೈದ್ಯರು ನೀಡಿದ ಸಲಹೆಗಳನ್ನು ತಪ್ಪದೆ ಪಾಲಿಸಲು ಪ್ರಯತ್ನಿಸುವಿರಾ? ಹೌದು/ಇಲ್ಲ.

೩೭. ಟಿ.ಬಿ. ಮುಂತಾದ ಕಾಯಿಲೆಗಳಿಗೆ ಗಣಿಗಾರಿಕೆಯಿಂದ ಹರಡುವ ಧೂಳೇ ಕಾರಣ ಎಂದೆನ್ನಿಸುವುದಿಲ್ಲವೇ?

೩೮. ಗಣಿಮಾಲಿಕರು ವೈದ್ಯಕೀಯ ನೆರವನ್ನು ನೀಡುತ್ತಾರೆಯೇ? ಹೌದು/ಇಲ್ಲ.

೩೯. ನಿಮ್ಮಲ್ಲಿ ಸಂಘಟನೆ ಏನಾದರೂ ಇದೆಯೇ? ಹೌದು/ಇಲ್ಲ.

೪೦. ಯಾವ ಯಾವ ಬೇಡಿಕೆಗಳಿಗಾಗಿ ನೀವು ಚಳುವಳಿ ನಡೆಸಿದ್ದೀರಿ?


೪೧. ಚಳುವಳಿ ಮಾಡಿದ್ದರಿಂದಾಗಿ ನಿಮ್ಮ ಬೇಡಿಕೆಗಳು ಈಡೇರಿವೆಯೇ? ಹೌದು/ಇಲ್ಲ.

೪೨. ಗಣಿಗಾರಿಕೆಯಿಂದ ಸುತ್ತಲ ಪರಿಸರ, ಜೀವ ವೈವಿಧ್ಯ ಮತ್ತು ಮನುಷ್ಯರ ಆರೋಗ್ಯ ಹಾಳಾಗುತ್ತದೆ ಎಂದೆನ್ನಿಸುವುದಿಲ್ಲವೆ?


ದಿನಾಂಕ

ಸಮೀಕ್ಷೆ ಮಾಡಿದವರು

ಹೊಸಪೇಟೆ ತಾಲೂಕ



ಸಂಖ್ಯೆ	ವಿಷಯ ಸೂಚಿ ಪಂಚಾಯತಿಯ ಹೆಸರು
1.	ಮರಿಯಮ್ಮನಹಳ್ಳಿ
2.	ಡಣಾಪುರ
3.	ಚಿಲಕನಹಟ್ಟಿ
4.	ಡಣಾಯಕನಕೆರೆ
5.	ನಾಗಲಾಪುರ
6.	ಅನಂತಶಯನಗುಡಿ
7.	ಮಲಪನಗುಡಿ
8.	ಕಾರಿಗನೂರು
9.	ಪಾಪಿನಾಯಕನಹಳ್ಳಿ
10.	ಬೈಲುವದ್ದಿಗೇರಿ
11.	ಗಾದಿಗನೂರು
12.	ಹಂಪಿ
13.	ನಾಗೇನಹಳ್ಳಿ
14.	ಕಲ್ಲಹಳ್ಳಿ
15.	ನಾಣಾಪುರ
16.	ಉಪನಾಯಕನಹಳ್ಳಿ
17.	[illegible]
18.	[illegible]
19.	ಬುಕ್ಕಸಾಗರ
20.	ರಾಮಸಾಗರ
21.	[illegible]
22.	ದೇವಲಾಪುರ
23.	ಸುಗ್ಗೇನಹಳ್ಳಿ
24.	ಹೊಸಪೇಟೆ — ನಗರಸಭೆ
25.	[illegible] — ಪುರಸಭೆ
26.	ಕಮಲಾಪುರ — ಪುರಸಭೆ
27.	[illegible] — ಪುರಸಭೆ



DISTRIBUTION OF IRON ORE BANDS IN THE BELLARY HOSPET REGION



ಗಣಿಯಾಗಿ ರೂಪಾಂತರಗೊಂಡ ಕೃಷಿ ಜಮೀನು



ಕಬ್ಬಿಣದ ಅದಿರನ್ನು ಸಂಗ್ರಹಿಸುವ ಕಣಜವಾಗಿ ಕೃಷಿ ಜಮೀನು



Stock Yard ಆಗಿ ರೂಪಾಂತರಗೊಂಡ ಕೃಷಿ ಜಮೀನು



Stock Yard ಆಗಿ ರೂಪಾಂತರಗೊಂಡ ಕೃಷಿ ಜಮೀನು



ಗಣಿಗಾರಿಕೆಯಿಂದ ಉತ್ಪನ್ನವಾದ ಹೂಳು ಕಣಿವೆಗೆ ಜಾರುತ್ತಿರುವ ದೃಶ್ಯ



ಗಣಿಮಾಲಿಕರಿಂದ ಕಾಡು ಬೆಳೆಸುವ ವಿಫಲ ಯತ್ನ



ಅದಿರಿನ ಧೂಳಿನಿಂದ ಆವೃತವಾಗಿರುವ ಕೃಷಿ ಜಮೀನು



ಫಲವತ್ತಾದ ಕಣಿವೆಗೆ ಜಾರಿರುವ ಅದಿರಿನ ಹೂಳು



ಅದಿರನ್ನು ಸಾಗಿಸುತ್ತಿರುವ ಲಾರಿ



ಎನ್.ಎಮ್.ಡಿ.ಸಿ ಕಾರ್ಖಾನೆ ದೋಣಿಮಲೈ



ಗಣಿಗಾರಿಕೆಯಲ್ಲಿ ದುಡಿಯುತ್ತಿರುವ ವಲಸಿಗರು



ಗಣಿಗಾರಿಕೆಯಿಂದ ನಾಶವಾಗುತ್ತಿರುವ ಅರಣ್ಯ



ಗಣಿ ಧೂಳಿನಿಂದ ಹಾಳಾಗಿರುವ ತೊಗರಿ ಬೆಳೆ



ಗಣಿ ಧೂಳಿನಿಂದ ಹಾಳಾಗುತ್ತಿರುವ ಬಾಳೆತೋಟ



ಅದಿರಿನ ಧೂಳಿನಿಂದ ಆವೃತವಾಗಿರುವ ಬೆಳೆ



ಎಲ್ಲೇ ಅಗೆದರು ಅದಿರು



ಅದಿರಿನ ಧೂಳಿಗೆ ಕಮರಿದ ಬೆಳೆ



ಇಳುವರಿ ಕಾಣದ ಬೆಳೆ



ಧೂಳಿನಿಂದಾಗಿ ಕೆಂಪಾಗಿರುವ ಬೆಳೆ



ಗಣಿ ಧೂಳಿನಿಂದ ನಶಿಸುತ್ತಿರುವ ಬಾಳೆತೋಟ



ನಶಿಸಿ ಹೋಗುವ ಹಂತದಲ್ಲಿ ಅರಣ್ಯ



ವಿನಾಶದ ಅಂಚಿನಲ್ಲಿರುವ ಕಾಡು



ವ್ಯಾಗನ್ ಲೋಡ್‌ಗಾಗಿ ನಿರ್ಮಿಸಲಾದ ರಸ್ತೆ



ಅದಿರಿನ ರಾಶಿ